ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಹೆಜ್ಜೆಗುರುತು

ಡಾ. ದೊಡ್ಡರಂಗೇಗೌಡ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಹೆಜ್ಜೆಗುರುತು

ಲೇಖಕರು
**ಡಾ॥ ದೊಡ್ಡರಂಗೇಗೌಡ**

**ಕರ್ನಾಟಕ ಸರ್ಕಾರ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**HEJJE GURUTHU** : Collection of Poems by **Dr. Doddarangegowda**, Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಎರಡನೇ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಪುಟಗಳು : XXX + ೩೩೮
ಬೆಲೆ : ರೂ. ೮೫/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೬೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಬೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳದ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತಿವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳು ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦



# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ: ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಅರ್ಪಣೆ

ನನ್ನ
ಮೇಲೆ
ತುಂಬಾ
ಪ್ರಭಾವ ಬೀರಿದ
ನವ್ಯ ಲೇಖಕ
ನಾಟಕಕಾರ
ಧೀಮಂತ ಪತ್ರಕರ್ತ
**ಪಿ. ಲಂಕೇಶ್**
ಅವರ
ಮಧುರ ಸ್ಮೃತಿಗೆ–
ಈ
ಕೃತಿ ಅರ್ಪಿತ.

**ಡಾ॥ ದೊಡ್ಡರಂಗೇಗೌಡ**

## ಕವಿತೆಗಳನ್ನು ಓದುವ ಮೊದಲು.......

ಅರವತ್ತರ ದಶಕದಲ್ಲಿ ಕವಿತೆಗಳನ್ನು ಬರೆಯಲು ನಾನು ಪ್ರಾರಂಭಿಸಿದಾಗ "ನವ್ಯ ಕಾವ್ಯ ಮಾರ್ಗ" ಆಗಲೇ ಚೆನ್ನಾಗಿ ಅಸ್ತಿತ್ವದಲ್ಲಿತ್ತು. ಕೆಲವು ಹಿರಿಯ ಕವಿಗಳು "ನವೋದಯ ಕಾವ್ಯ ಮಾರ್ಗ"ದಲ್ಲೇ ಇನ್ನೂ ಆರ್ದ್ರವಾಗಿಯೇ ಬರೆಯುತ್ತಿದ್ದರು.

ನಮ್ಮ ನಾಡಿನ ಬಹುತೇಕ ಕನ್ನಡ ಪತ್ರಿಕೆಗಳು ಎರಡೂ ಕಾವ್ಯ ಮಾರ್ಗಗಳಲ್ಲಿ ಬರೆಯುವ ಕವಿಗಳನ್ನು ಪ್ರೋತ್ಸಾಹಿಸುತ್ತಿದ್ದರು. ನನಗೆ ಅನಿಸಿದ್ದೆಲ್ಲವನ್ನೂ ಬರೆಯುತ್ತಾ ಹೋದೆ. ನನ್ನ ಅಭಿವ್ಯಕ್ತಿಗೆ ಅಂತರಂಗದ ಭಾವನೆಗಳ ಒತ್ತಡ ಮುಖ್ಯ ಪ್ರೇರಣೆಯಾಗಿತ್ತು.

ಕವಿತೆ ಎನ್ನುವುದು ಕವಿಯ ಅಂತರಾಳದ ನುಡಿ ನುಡಿಯ ಭಾವ ಕ್ವಣಿತೆ. ಅದು ಒಮ್ಮೊಂದೊಮ್ಮೆಗೆ ಭಾವ ಕಾರಂಜಿಯಾಗಿ ಪುಟಿಯುತ್ತದೆ. ಅದನ್ನು ಜಾಗೃತಿಯಿಂದ ಸಂಚಯಿಸಿ ಕಾವ್ಯ ರೂಪ ನೀಡುವವನೇ ಕವಿ !

ಕಾವ್ಯ ಮೂಡುವಾಗ ಕವಿ ಮನದಲ್ಲಿ, ರಮ್ಯ, ನವ್ಯ, ದಲಿತ, ಬಂಡಾಯ– ಎಂಬ ಯಾವ ರೂಪದ ನಿರ್ಬಂಧ ಇರುವುದಿಲ್ಲ. ಅದು ತನಗೆ ತಾನೇ ಅಂಕುರಿಸುತ್ತದೆ. ಪಲ್ಲವಿಸುತ್ತದೆ. ಈ ನಾಲ್ಕು ದಶಕಗಳಲ್ಲಿ ನನ್ನ ಮನದಲ್ಲಿ ಮೂಡಿದ ಪದ್ಯಗಳು ಇವು. ಸಂಗ್ರಹಿಸಿ... ಸಂಕಲನ ರೂಪದಲ್ಲಿ ನೀಡಿದ್ದೇನೆ. ಈ ಕವಿತೆಗಳನ್ನು ಸಹೃದಯರು ಸ್ವಾಗತಿಸುತ್ತೀರೆಂದು ನಂಬಿದ್ದೇನೆ.

**ಡಾ॥ ದೊಡ್ಡರಂಗೇಗೌಡ**



## ಜೀವನದ ಹಾದಿಯಲ್ಲಿ ಅನುಭವದ ಹಜ್ಜೆಗುರುತು

ಕವಿತೆ.. ಕವಿಯ ಹೃದಯಾಂತರಾಳದ ಭಾವ ಸರಿತೆ; ಅಲ್ಲಿ ಎಂದೂ ಬತ್ತಿ ಹೋಗದ ಅನುಭವದ ಒರತೆ. ಯಾವ ಕವಿಗೆ ಉತ್ತಮ ಸಂಸ್ಕಾರ ಇರುತ್ತದೋ ಅಂಥ ಕವಿ ವಾಗರ್ಥಗಳ ಸಂಹಿತೆ ಮೀರಿ ತನ್ನ ಬುದ್ಧಿ ಭಾವದಲ್ಲಿ ತೆಕ್ಕೆಯಾದ ಗ್ರಹಿಕೆಗಳಿಗೆ ತಕ್ಕ ಆಕಾರವನ್ನು ಕೊಡಬಲ್ಲವನಾಗಿರುತ್ತಾನೆ.

ಕೆಲವು ಕವಿಗಳು ಅಧ್ಯಯನದಾಚೆಗೂ ಜಿಗಿದು ಆಶಕು ಕವಿತ್ವವನ್ನು ನಿಚ್ಚಳವಾಗಿ ಪ್ರಕಟಿಸಬಲ್ಲರು. ಸಾಹಿತ್ಯದ ಓದು ಬರಹಗಾರನಿಗೆ ತನ್ನ ಅಭಿವ್ಯಕ್ತಿ ಮಾಧ್ಯಮದ ಬಗ್ಗೆ ಹಿಡಿತವನ್ನು ಮೂಡಿಸುತ್ತದೆ. ಪ್ರಖರ ಅನುಭವವೇ ಕವಿಯ ಕಾವ್ಯದ ಜೀವಾಳ. ವ್ಯಾಸಂಗದಿಂದ ಸಾಹಿತ್ಯ ಕೃಷಿ ಇಂಬಾಗಿ ಅಭಿವ್ಯಕ್ತಿಯ ತಾಂತ್ರಿಕತೆ ಪರಿಣಿತವಾಗಿ ಭಾಷೆಯನ್ನು ಅಂಥ ಕವಿಗಳು ಲೀಲಾಜಾಲವಾಗಿ ಬಳಸಬಲ್ಲವರಾಗಿರುತ್ತಾರೆ. ಆದರೆ ಕಾವ್ಯ ಕೊನೆಗೂ ಸಹೃದಯನಿಗೆ ಮೆಚ್ಚುಗೆಯಾಗುವುದು ಅದರ ಜೀವನಾನುಭವದ ನೈಜ ದ್ರವ್ಯದಿಂದಲೇ ! ಅದನ್ನು ಕವಿ ಹೇಗೆ ನುಡಿಯಲ್ಲಿ ಪಡಿಮಾಡಿಸಿದ್ದಾನೆ ಎಷ್ಟೆಲ್ಲಾ ಚೋದ್ಯದಿಂದ ಅದನ್ನು ಸುಂದರವಾಗಿ ನಿರೂಪಿಸಿದ್ದಾನೆ ಎಂಬುದು ಕವಿಯ ಸಾಮರ್ಥ್ಯವನ್ನೂ ತಿಳಿಸಲು ಸಾಧ್ಯವಾಗುತ್ತದೆ.

ವಾಸ್ತವವಾಗಿ ಕವಿತೆ ಕವಿಯ ಹೃನ್ಮನದಿಂದ ಸಹಜವಾಗಿ ಮಾಡಬೇಕು ಎಂದು ಭಾವಿಸಿದವನು, ನಾನು ಹೂ ಅರಳುವ ಹಾಗೆ, ನವಿಹರಿಯುವ ಹಾಗೆ, ಕಾರಂಜಿ ಪುಟಿಯುವ ಹಾಗೆ, ಸೂರ್ಯ ಮಾಡುವ ಹಾಗೆ, ಗಾಳಿ ಬೀಸುವ ಹಾಗೆ... ಕವಿಕೆ ಹುಟ್ಟಬೇಕು. ಆಗಲೇ ಕಾವ್ಯದ ಸಹಜ ವಾಗರ್ಥದ ಸೊಗಡು.

ಇಂಥ ಒಂದು ಅಯಾಚಿತ ಅವಿಷ್ಕಾರದಲ್ಲಿ ಪಲ್ಲವಿಸಿದ ಕವಿತೆಗಳು ಇಲ್ಲಿ ಸಂಕಲಿತಗೊಂಡಿವೆ. ಸಹೃದಯರೇ ಪರಾಂಬರಿಸಿ.

**ಡಾ॥ ದೊಡ್ಡರಂಗೇಗೌಡ**

# ಡಾ. ದೊಡ್ಡರಂಗೇಗೌಡರ ಕಿರುಪರಿಚಯ

ಶಿಕ್ಷಣ, ಸಾಹಿತ್ಯ ಚಲನಚಿತ್ರ, ಸುಗಮ ಸಂಗೀತ, ರಂಗಭೂಮಿ ಹೀಗೆ ಹಲವು ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ತಮ್ಮ ಪ್ರತಿಭೆಯನ್ನು ತೊಡಗಿಸಿಕೊಂಡ ಸೃಜನಶೀಲ ಕವಿ ಡಾ. ದೊಡ್ಡರಂಗೇ ಗೌಡರು.

ಇವು ಹುಟ್ಟಿದ್ದು ೦೭.೦೨.೧೯೪೬ರಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಕುರುಬರಗಳ್ಳಿಯ ಗ್ರಾಮೀಣ ಪರಿಸರದಲ್ಲಿ. ತಂದೆ ದಿ.ಕೆ. ರಂಗೇಗೌಡ ತಾಯಿ ಶ್ರೀಮತಿ ಅಕ್ಕಮ್ಮ ಅವರು. ಹುಟ್ಟಿದ ಊರು ಕುರುಬರಹಳ್ಳಿಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿದ ಇವರು ಬಡವನಹಳ್ಳಿ. ಮಧುಗಿರಿ, ತುಮಕೂರು ಹಾಗೂ ಬೆಂಗಳೂರುಗಳಲ್ಲಿ ಅಧ್ಯಯನ ಮಾಡಿದ್ದಾರೆ. ೧೯೬೪ರಲ್ಲಿ ಬಿ.ಎಸ್ಸಿ. ೧೯೭೦ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎ. ಆನರ್ಸ್ ೧೯೭೨ರಲ್ಲಿ ಎಂ.ಎ. ಪದವಿ, ೨೦೦೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಜಾನಪದ ಇವರ ವಿಶೇಷ ಅಧ್ಯಯನ.

೧೯೭೨ರಲ್ಲಿ ಬೆಂಗಳೂರು ನಗರದ ಎಸ್.ಎಲ್.ಎನ್. ಕಲೆ, ವಾಣಿಜ್ಯ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ ಶ್ರೀಯುತರು ೧೯೮೦ರಲ್ಲಿ ಕನ್ನಡ ಪ್ರವಾಚಕರಾದರು. ೧೯೯೫ರಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ೧೯೯೦ರಲ್ಲಿ ಪ್ರಾಂಶುಪಾಲರಾಗಿ ೨೦೦೨ ರಿಂದ ೨೦೦೬ ರವರೆಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ  ನಿವೃತ್ತರಾಗಿದ್ದಾರೆ,

ವಿದ್ಯಾರ್ಥಿ ದೆಸೆಯಿಂದಲೇ ಕತೆ, ಕವಿತೆ, ವಿಮರ್ಶೆಗಳನ್ನು ರಚಿಸುತ್ತಾ ಬಂದಿರುವ ಡಾ. ದೊಡ್ಡರಂಗೇಗೌಡರವರು ಕವನ ಸಂಕಲನ, ನವ್ಯ ಕಾವ್ಯ, ಕೃತಿ, ಪ್ರಗಾಥ, ಮುಕ್ತಕ, ಗದ್ಯ ಕೃತಿ, ವಿಮರ್ಶಾಕೃತಿ ಅಭಿನಂದನಾಗ್ರಂಥ, ಜೀವನ ಚರಿತ್ರೆ, ರೂಪಕ, ಚಿತ್ರಸಾಹಿತ್ಯ, ವೈಚಾರಿಕ ಸಂಭಾವನಾ ಗ್ರಂಥಗಳು ಸೇರಿದಂತೆ ೭೭ಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯಕ್ಷೇತ್ರಕ್ಕೆ ನೀಡಿ, ಸಮೃದ್ಧಗೊಳಿಸಿದ್ದಾರೆ.

೧೦ ಚಲನಚಿತ್ರಗಳಿಗೆ ಸಂಭಾಷಣೆಯನ್ನು ಬರೆದಿರುವ ಶ್ರೀಯುತರು ೬೦೦ಕ್ಕೂ ಹೆಚ್ಚು ಕನ್ನಡ ಚಿತ್ರ ಗೀತೆಗಳನ್ನು ರಚಿಸಿ, ಕನ್ನಡ ಜನಮನ ಗೆದ್ದ ಪ್ರೀತಿಯ



ಕವಿಯಾಗಿದ್ದಾರೆ. 'ಪಡುವಾರಹಳ್ಳಿ ಪಾಂಡವರು', 'ಪರಸಂಗದ ಗೆಂಡೆತಿಮ್ಮ', 'ಬಂಗಾರದ ಜಿಂಕೆ' 'ಅಶ್ವಮೇಧ', 'ಆಲೆಮನೆ', 'ಗಣೇಶನ ಮದವೆ', ಜನುಮದ ಜೋಡಿ' ಮುಂತಾದ ಚಲನ ಚಿತ್ರಗಳಿಗೆ ಭಾವನಾತ್ಮಕ ಗೀತೆಗಳನ್ನು ರಚಿಸಿ ೧೯೮೨, ೧೯೯೨, ೧೯೯೫, ೧೯೯೭ರಲ್ಲಿ ಚಲನಚಿತ್ರರಂಗದ ಅತ್ಯುತ್ತಮ ಗೀತೆಗೆ ವರ್ಷದ ಶ್ರೇಷ್ಠ ಗೀತೆ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ದೇಶ–ವಿದೇಶಗಳಲ್ಲಿ ಪ್ರವಾಸ ಮಾಡಿ, ಹಲವಾರು ಸಾಹಿತ್ಯಕ ಉಪನ್ಯಾಸಗಳನ್ನು ನೀಡಿರುವ ಶ್ರೀಯುತರ ಸಾಹಿತ್ಯಕ ಸಾಧನೆಗಳನ್ನು ಗುರುತಿಸಿ ನೂರಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಅಭಿನಂದಿಸಿವೆ. ೧೯೭೨ರಲ್ಲಿ ಕರ್ನಾಟಕ ರಾಜ್ಯ "ಸಾಹಿತ್ಯ ಅಕಾಡೆಮಿ"ಯ ಬಹುಮಾನ ೧೯೯೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ "ರತ್ನಾಕರವರ್ಣಿ ಕರವಣಿಘ ಮುದ್ದಣ' ಕಾವ್ಯ ಪ್ರಶಸ್ತಿ ೧೯೯೯ ರಲ್ಲಿ "ಕರ್ನಾಟಕ ರಾಜ್ಯೋತ್ಸವ" ಪ್ರಶಸ್ತಿಯನ್ನು ಪಡೆದಿರುವ ಶ್ರೀಯತರಿಗೆ ೨೦೦೦ದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಿಂದ "ಕೆಂಪೇಗೌಡ ಪ್ರಶಸ್ತಿ' ೨೦೦೨ರಲ್ಲಿ ಶ್ರವಣಬೆಳಗೊಳದ ಶ್ರೀಮಠದಿಂದ "ವರ್ಧಮಾನ ಮಹಾವೀರ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿನ ತಮ್ಮ ಅನನ್ಯ ಸೇವೆಯ ಮೂಲಕ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿರುವ ಶ್ರೀಯತರು ಪ್ರಸ್ತುತ ಕರ್ನಾಟಕ ವಿಧಾನ ಪರಿಷತ್ತಿನ ಗೌರವ ಸದಸ್ಯತ್ವಕ್ಕೂ ಪಾತ್ರರಾಗಿದ್ದಾರೆ.

## ವಂದನೆಗಳು

* ಈ ಕೃತಿಯನ್ನು ಪ್ರಕಟಿಸುತ್ತಿರುವ "ಕನ್ನಡ ಮತ್ತು ಸಂಸ್ಕೃತಿ" ಇಲಾಖೆಗೆ–
* ನಿರ್ದೇಶಕರಾದ ಕವಿ ಮಿತ್ರ ಶ್ರೀ ಮನು ಬಳಿಗಾರ್ ಅವರಿಗೆ–
* ಆಯ್ಕೆ ಸಮಿತಿ ಸಂಪಾದಕರುಗಳಿಗೆ–
*

  ನನ್ನ ಬರಹಗಳಿಗೆ ನಿರಂತರ ಪ್ರೋತ್ಸಾಹ ನೀಡುತ್ತಾ ಬಂದ ಬಾಳ ಸಂಗಾತಿ ಡಾ. ಕೆ. ರಾಜೇಶ್ವರಿ ಗೌಡ ಅವರಿಗೆ–
* ನನ್ನ ಕವಿತೆಗಳ ಹಸ್ತ ಪ್ರತಿಗಳನ್ನು ಜೋಪಾನ ಮಾಡಿ ಸಮಯ ಬಂದಾಗ ಸಂಕಲಿಸಿ ಕೊಡುವ ಮಗ ಚಿ॥ ಡಿ. ಭರತ್ ಮತ್ತು ಮಗಳು ಶ್ರೀಮತಿ ಡಿ. ಸ್ಮಿತಾಗೆ–
* ಕೃತಿಯ ಅಂದವಾದ ಮುದ್ರಣಕ್ಕೆ ಕಾರಣರಾದ ಮಯೂರ ಪ್ರಿಂಟ್ಸ್ ಆ್ಯಡ್ಸ್ ಮುದ್ರಕರಿಗೆ
* ಕಲಾತ್ಮಕ ರಕ್ಷಾ ಪುಟ ಸಿದ್ಧ ನೋಡಿಕೊಟ್ಟು ಕಲಾವಿದ ಶ್ರೀ.................. ಅವರಿಗೆ

ನನ್ನ ಹೃತ್ಪೂರ್ವಕ ವಂದನೆಗಳು

**ಡಾ॥ ದೊಡ್ಡರಂಗೇಗೌಡ**



## ಪರಿವಿಡಿ


| | |
|---|---|
| ಶುಭ ಸಂದೇಶ | III |
| ಚೆನ್ನುಡಿ | IV |
| ಎರಡು ನುಡಿ | V |
| ಅಧ್ಯಕ್ಷರ ಮಾತು | VI |
| ಪ್ರಕಾಶಕರ ಮಾತು | VII |
| ಆಯ್ಕೆ ಸಮಿತಿ | IX |
| ಅರ್ಪಣೆ | XI |
| ಕವಿತೆಗಳನ್ನು ಓದುವ ಮೊದಲು....... | XII |
| ಜೀವನದ ಹಾದಿಯಲ್ಲಿ ಅನುಭವದ ಹಜ್ಜೆಗುರುತು | XIII |
| ಡಾ. ದೊಡ್ಡರಂಗೇಗೌಡರ ಕಿರುಪರಿಚಯ | XIV |
| ವಂದನೆಗಳು | XVI |

ಗುರು ಪರಂಪರೆಗೆ
ಕಣ್ಣು ನಾಲಗೆ ಕಡಲು (ಒಂದು ನಿತ್ಯ ಪ್ರಗಾಥ)
ಗಮನ
ಹೂವಲ್ಲದ ಚಿತ್ತ
ಸ್ವರೂಪ
ವಾಂಛೆ
ಗುಡ್ಡಕ್ಕೆ ಕಲ್ಲು
ತೊಡಕು
ಯೌವ್ವನ
ಅಸಂಗತ ಸಾಂಗತ್ಯ
ನನ್ನ ಯುಗದ ಮೀಸೆಗಳಿಗೆ
ಆಕಸ್ಮಿಕ
ಸಂತಸ ಕನ್ಯೆಗೊಂದು ಕಣ್ಣ ಕವಣೆ ಬೀರಿದೆ....

ಸಂಚಾರಿ
ಕೊಡೆ ಹುಡುಕುವವನಿಗೆ
ಕೂಡಿಕೆ
ಹಚ್ಚೆ ಚುಚ್ಚಿತು ಪ್ರೀತಿ
ಕಾಯುವುದು
ಒಂದು ಸಾರಿ....
ಕಾಣದ ಮೈ
ಪ್ರಪಂಚ ಹುಟ್ಟಿದ್ದು
ಜೀವ ಜೀವನ ಜಗತ್ತು
ಕಣ್ಣುಗಳು
ಸತ್ಯದ ಸುತ್ತ
ನೆನಪು ಬೇಸಗೆಯಲ್ಲ
ಡೈರಿಯೊಳಗೆ ಬರೆಯದ ಸಾಲು
ಬೆಸುಗೆ
ಇವರ ಸಂಗೀತ ಪ್ರೇಮ
ವಿಚಾರ ರತಿ
ಕ್ರೇಜಿ
ಅಹವಾಲು
ಇಂಗಿತದ ಸುತ್ತ
ಸಂದಿಗ್ಧ
ಕಾಗುಣಿತ ಕಲಿತ ಮೇಲೆ...
ಸಂಗಾತಿ
ಕಣ್ಣು ನಾಲಗೆ ಕಡಲು
ಸೃಷ್ಟಿಕರ್ತರು
ಜೇಡ
ಕಾಲದ ಎದುರು
ಸವಾಲು
ವೈಪರೀತ್ಯ
ಸಂಜೆ



ಪ್ರಕೃತಿ
ಪಂಚಮುಖಿ ಪ್ರಗಾಥ
ಕಣ್ಣು ನಾಲಗೆ ಕಡಲು : ಒಂದು ರೂಪಕ
ಪ್ರಕೃತಿ ಪ್ರಗಾಥ
ಕಣ್ಣು
ನಾಲಗೆ
ಕಡಲು
ಪ್ರಕೃತಿ ಮತ್ತು ಪುರುಷ
ಪೃಥ್ವಿ ಪ್ರಗಾಥ
ಪಕ್ಷಿ ಪ್ರಗಾಥ
ನೀಲ ನೀಲ ನೈಲು
ಬಿನ್ನಹ
ದೀವಳಿಗೆಯ ಹಾಡು
ಜ್ಞಾನಶ್ರೀ
ವಸಂತಾಗಮನ
ಬದ್ಧತೆ
ವೈಭವರೂಪಿಃ ವಸುಂಧರೆ
ನಿಜವ ಹುಡುಕು
ಕಣ್ಣಿಗೆ ಕಾಣದ ಸೃಷ್ಟಿಯ ಬೇರು
ಬಂಜೆ
ಅರ್ಪಣೆ–ಸಮರ್ಪಣೆ
ಕನ್ನಡವೇ ಮಾರ್ದನಿಸಲಿ
ಅಳಿಯದು ನಮ್ಮ ಕನ್ನಡ
ಪರಿವರ್ತನೆ
ಚಿರಂತನ ಕನ್ನಡ
ವ್ಯಾಕುಲ
ಕೀಚಕರ ಕ್ಷೇತ್ರದಲ್ಲಿ
ಇಂದಿನ ಓದು
ಭೂಕಂಪ

ಬೆಂಗಳೂರ ರೂವಾರಿ
ದೀವಳಿಗೆ ಹೊಸ ಗೀತೆ
ಇಂದಿನ ಮಕ್ಕಳು : ನಾಳಿನ ಪ್ರಜೆಗಳು
ಒಳಿತಿನಿಂದ ಒಳಿತಿನೆಡೆಗೆ......
ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ...
ನಾರಿ : ನಡೆಸಿಕೊಂಡರು ಈ ಪರಿ
ಅಮೃತವರ್ಷಿಣಿ
ಕಣ್ಣು ನಾಲಗೆ ಕಡಲು
ಜಗಲಿ ಹತ್ತಿ ಇಳಿದು.....
ನಾಡಾಡಿ
ಮುಕ್ತ ಕಾವ್ಯ
ಯುಗಾದಿ ಗೀತೆ
ಅಭಿವ್ಯಕ್ತಿ
ಸಾಮರಸ್ಯ
ಭೇಟಿ
ಚೈತನ್ಯಾಮೃತ
ಅತಿವೃಷ್ಟಿ
ಹಾಲಾಹಲ
ಸವಾಲು
ಒಲವಿನ ಗಂಟು
ಅಕ್ಕರೆಯ ಅಣ್ಣ.... ಕೆ.ವಿ. ಸುಬ್ಬಣ್ಣ
ತತ್ವ ಚಿಂತನ : ಪು.ತಿ.ನ.
ಮೈಸೂರ ಹುಲಿ ಕಾಣಾ : ಟಿಪ್ಪುಸುಲ್ತಾನ
ನೌಕಾಯಾನ
ನಿಸರ್ಗ ನಿಯತಿ
ವಸಂತ ಸಂಭ್ರಮ
ಪ್ರಜ್ಞಾ ಪ್ರಗಾಥ
ಸ್ವಾಭಿಮಾನ ಮೊಳಗಲಿ
ಬಿತ್ತಿದಂತೆ ಬೆಳೆ



ಏನೇನೆಲ್ಲಾ ನಡೆದಿದೆ ಇಲ್ಲಿ.....!
ಶ್ರೀಗುರು ಸನ್ನಿಧಿ
ನುಡಿ ನಮನ
ದಾರಿದೀಪ
ಸೂರ್ಯೋದಯ
ಕೆಂಪೇಗೌಡರ ಗುಣಗಾನ
ಉದಯ ರವಿ
ಭಾರತ ಹುಣ್ಣಿಮೆ
ದೇಶಾಭಿಮಾನದ ಹಾಡು
ಆದರ್ಶ ಶಿಕ್ಷಕ
ಮೌನ ಸಾಕ್ಷಿ
ಒಳಿತಿನಲಿ ಭಗವಂತ ಜೀವಂತ
ಪ್ರೀತಿ ಬಿತ್ತಿ; ಪ್ರೀತಿ ಬೆಳೆ
ಸತ್ಯ ಶೋಧ
ಕರೆ
ತಮ್ಮ ಬೆನ್ನು ತಮಗೆ ಕಾಣದು
ರೈತರ ರ್‍ಯಾಲಿ
ಅರ್ಪಣೆ
ಆತ್ಮಹತ್ಯೆ
ಅರಿವಿನ ಹಡಗು
ಕ್ರಾಂತಿ ಗೀತೆ
ವಿಶ್ವಶಾಂತಿಯೆಡೆಗೆ....
ಶುಭಾಶಯ ಗೀತೆ
ಸಮಾನತೆಯ ಸಂಕೇತ : ದೀಪಾವಳಿ
ಒಲುಮೆ ಸಿರಿಯ ಕಂಡು
ಆತ್ಮದ ಅರಗಿಣಿ
ಪ್ರೇಮ ಪರೀಕ್ಷೆ
ರಾಗದೊಳಗಿನ ರಾಗ
ಪ್ರೇಮದ ಸುಗ್ಗಿ

ಅರಳಿತು ಅರ್ತಿಯ ಅರವಿಂದ
ನೀನಿರೆ .. ಸ್ವರ್ಗ
ಜೀವಂತ ಪ್ರೀತಿ
ಕಣ್ಣಿನ ಕಾಗುಣಿತ
ಹೃದಯ ಗೀತೆ
ಸೊಬಗಿನ ಸನ್ನಿಧಿಯಲ್ಲಿ
ಪ್ರೀತಿ : ಪರಸ್ಪರ
ಆಕರ್ಷಣೆ
ತುಡಿತ–ಮಿಡಿತ
ಪ್ರೇಮಧಾರೆ
ಅರ್ತಿ ಹೊಲದ ಹಸಿರು
ನನ್ನ ಹೃದಯ ನಿನ್ನ ಬಿಡದು
ಸಂಗಾತಿಗೆ
ರಾಗ ರಂಗಿನ ಹಾಡು
ಒಲವೆಂಬ ರಂಗು
ಅಯಸ್ಕಾಂತದ ಸುತ್ತ ......
ನಿನ್ನ ಕಂಡ ಕ್ಷಣದಿಂದ
ಒಲವೇ ಬೆಡಗು
ನೀನಿಲ್ಲದೆ ಬದುಕಿಲ್ಲ!
ಒಲವೇ ನಮ್ಮ ಸೀ ಹೂರಣ
ಪ್ರೇಮ ವೃಕ್ಷ
ಪ್ರೇಮದೊಸಗೆ
ನಿನ್ನ ನೆನಪು
ನನ್ನ ಒಲುಮೆ ಭಾನು ನೀನು!
ಪ್ರೇಮದ ಸ್ಪಂದನ
ನಿನ್ನ ನಗೆ ಮಲ್ಲಿಗೆ
ರಮ್ಯ ರಾಗ
ಪ್ರೇಮ – ಕದಂಬ
ಪ್ರೇಮಲಗ್ನ



ಪ್ರೀತಿ ದೀಪ
ಬಾಳಿನ ಬೆಳಕು
ಎಲ್ಲಿ ನೀನು – ಅಲ್ಲಿ ನಾನು
ಪ್ರೇಮ ಜೀವನ
ಪ್ರೇಮಪರ್ವ
ಸ್ಫೂರ್ತಿಗೀತ
ಬಾಳುವೆಯ ಮೇಳ
ಪರಸ್ಪರ
ಅಡ್ಡ ಗೋಡೆಗಳು
ವಿದಾಯ
ವಿಷಾದ ಗೀತ
ಅನುರಾಗ ತೋಟದಲ್ಲಿ
ಅಭಿವಂದನೆ
ಮುಂಜಾನೆ ಮೂಡಿದ ಹಾಗೆ
ಅನುರಾಗದ ಹಕ್ಕಿ
ನಿನ್ನ ಸೊಗಸೇ ಸೊಗಸು
ದಿಬ್ಬಣದ ಹಾಡು
ವಿರಹದ ಹಕ್ಕಿ
ಮಧುರಗಾನ
ನಿನ್ನ ರೂಪ ಪ್ರತಿರೂಪ
ಕರೆದಿದೆ ನಿನ್ನ ದನಿ
ಸ್ವಪ್ನ ಸುಖ
ನಮ್ಮೂರ ಮಂದಾರ ಹೂವೇ
ಆಸೆ ಒಸಗೆ
ಪ್ರೀತಿ ರತಿ
ವಿರಹ–ಸಹರಾ
ಮಾತಾಡೇ... ನೀರೆ
ವಿಶ್ವಾಸ ವರ್ಷ
ಸವಿ ನೆನಪೇ ನನ್ನ ಕಾಡಿದೆ

ಪ್ರೇಮೋನ್ಮಾದ
ಮೈತ್ರಿ–ದಿವ್ಯ
ಪ್ರೇಮ ಸಿಂಧು
ಮಂದಾರದ ಮೊರೆ
ಜನುಮ ಜನುಮದ ಕೆಳೆ
ಅರ್ತಿಗೀತ
ಪ್ರೇಮವೇ ಸಿರಿ ದೀವಿಗೆ
ಚುಕ್ಕಾಣಿಯಿರದ ಹಡಗು
ಅಮೃತ ಬಳ್ಳಿ
ಪ್ರೇಮದ ತೇರು
ಅರುಣರಾಗ
ಚಿತ್ತ – ಚೋರಿ
ಪ್ರತೀಕ್ಷೆ
ವಿರಹ ಗೀತ
ಪ್ರೀತಿ ಬದುಕೇ ಸಲಿಲ!
ಪ್ರೇಮಾಗ್ನಿಯ ಸ್ವರ್ಗ
ತುಂಬು ಜವ್ವನದ ತರುಣಿ
ಕಾವ್ಯಕನ್ಯೆ
ಅನುರಾಗ ಕೋಗಿಲೆ
ಒಂದು ಯುಗಳ ಗೀತೆ
ಒಲವೆಂಬುದೇ ಚೆಲುವು
ನಿನ್ನ ನಗೆ ಮಲ್ಲಿಗೆ ಅರಳಿ
ಹೆಜ್ಜೆ ಗುರುತು
ಕೆಂಪಣ್ಣನ ವೈಖರೀ
ಕಟ್ಟಿಟ್ಟ ಬುತ್ತಿ
ಮುಖವಾಡದವರು
ಅನಾಥರು
ನಗ್ನ ಸತ್ಯ
ಪರಿಸರ ಗೀತೆ



ಹಾಡು – ಪಾಡು
ಕರುಳಿದ್ದವರ ಕಡೆ ಕೂಗು
ಉರುಳಿನ ಮೇಲುರುಳು
ಆದರ್ಶ ರಹಿತ ನಾಡು
ಯಾರಿಗೆ ಹಬ್ಬ?
ಪಂಚ ನದಿಗಳ ನಾಡಿನಲ್ಲಿ
ಬೆಂಕಿ ಭುಗಿಲು
ಕೂಗಿದೆ ಕರುಳ ಅಳಲು
ಜಾಗೃತಿ ಗಾನ
ಹಿಡಿ ಕೂಳಿಗಾಗಿ!
ಮೌಲ್ಯ ಗಾನ
ವಿರೋಧಾಭಾಸ
ಬಡತನದ ರಕ್ಷಕರು
ಕೂಲಿಗಳ ಪಾಡು
ಬಂತೇಕೋ ಯುಗಾದಿ?
ಸಿಟಿಯ ದೈತ್ಯ ಕಟಿ
ಕಲಾಸಿಪಾಳ್ಯ
ಕಾಲೇಜ್ ಕ್ಯಾಂಪಸ್ಸಿನಲ್ಲಿ.....
ದೀವಳಿಗೆ ಮೂಡುವುದೆಂದಿಗೆ
ಚುನಾವಣೆ
ಜೀತ ಜೀವಿ
ನುಂಗಾಸುರನ ನಂಜು
ಎಂಥವರಯ್ಯಾ ಇವರು ಎಂಥವರು?
ಸಮಾನತಾ ಸಂಕುಲ?
ಆಧುನಿಕ ದರ್ಬಾರು
ಮೈತ್ರಿ ಗೀತ
ಕ್ರಾಂತಿ ಗೀತೆ
ಅಂಬೇಡ್ಕರ್ ಅವರಿಗೆ
ನೋವಿನ ನದಿ

ಪ್ರೀತಿ ಕೊಟ್ಟು ಪ್ರೀತಿ ಪಡೆಯೋ!
ನಮ್ಮ ನಾಡಿನ ಹಿರಿಮೆಯ ಹಾಡು
ಮಾಗಿದಾಗ...
ಅಂದಚೆಂದದ ಬಗೆ ಬಗೆ
ಕನ್ನಡ ರಾಜ್ಯೋತ್ಸವ
ಚಂಡಮಾರುತ
ವಸಂತೋತ್ಸವ
ಪ್ರೀತಿಯ ಮೂಲ
ಪುನರುತ್ಥಾನ ಪ್ರಗಾಥ
ಒಗ್ಗಟ್ಟಿನಲ್ಲಿ ಬಲ
ಶ್ರಮಿಕ ತಪಸ್ವಿ
ಎಲ್ಲಾ ಅವನ ದಯೆ!
ದೀವಳಿಗೆಯ ಹಾಡು
ಗುರಿ
ಜೀವನ ಸಂಗ್ರಾಮ
ನಿರಾಕರಣೆ
ಅಪೂರ್ವ ಫಲಶೃತಿ
ಬಾನ ಸೂರ್ಯ
ಸಂಬಂಧಗಳು
ಬಾಳಿನ ಬೆಳಕು
ರೈತಾಪಿಗಳ ರಾಗ–ತಾಳ
ಪ್ರೀತಿ: ವಿಶ್ವರೂಪಿ
ಭಯೋತ್ಪಾದಕರು
ಪಯಣ
ಅಕಳಂಕ ಪ್ರೀತಿ
ದೇವಿ ಪ್ರಗಾಥ
ವಿಶ್ವಮಾನ್ಯ ಸರ್.ಎಂ. ವಿಶ್ವೇಶ್ವರಯ್ಯ
ಸ್ವಾಮೀಜಿ ಸಂದೇಶ
ಜಾರು
ಬದ್ಧತೆ
ವೈಭವರೂಪಿ : ವಸುಂಧರೆ
ನಿಜವ ಹುಡುಕು
ಕಣ್ಣಿಗೆ ಕಾಣದ ಸೃಷ್ಟಿಯ ಬೇರು
ಬಂಜೆ
ಅಭಿವ್ಯಕ್ತಿ
ಭೇಟಿ
ಸಾಮರಸ್ಯ
ಚೈತನ್ಯಾಮೃತ
ಸವಾಲು
ವಿಪರ್ಯಾಸ
ಯಹೂದಿಗಳ ನಾಡಿನಲ್ಲಿ
ಬದುಕು ಭೂಮಿಗೆ ಭಾರವಾಗದ ಹಾಗೆ
ಮೊರೆ
ಅತಿ–ಗತಿ
ಹುತಾತ್ಮ ವೀರನ ಶೌರ್ಯ ಪ್ರಗಾಥ
ನೇಹಿಗನಿಗೆ
ಆಸ್ಪತ್ರೆ ಎಂಬ ಆಶ್ಚರ್ಯ
ಮರೆಯಲುಂಟೇ?
ಅರ್ತಿ ಆಲದಮರವೇ
ಸಪ್ತ ಮಾತೃಕಾ ಸೌಭಾಗ್ಯ ಪ್ರಗಾಥ
ವಿಜ್ಞಾನ ಪ್ರಗಾಥ

# ಹೆಜ್ಜೆ ಗುರುತು

## ಗುರು ಪರಂಪರೆಗೆ

ಎಲ್ಲೋ ಇದ್ದ ಕಲ್ಲು ನಾನು
ತಿದ್ದಿದಿರಿ, ತೀಡಿದಿರಿ......ನೀವು;

ನಾ ಆಕಾರ ಪಡೆದೆ
ಆಕರ್ಷಕವಾದೆ!

ಕಲ್ಲಲ್ಲಿ ಕಣ್ಣು ಅರಳಿದ್ದು ಸೋಜಿಗ
ಅಂಥ ವಿಸ್ಮಯ ಸರಮಾಲೆ ಈ ಜಗ!

ಶಿಲೆಯಲ್ಲೂ ಹೃದಯವಿತ್ತು
ಅಲ್ಲಿ ಭಾವ ಸೆಲೆಯಿತ್ತು
ಕಾವ್ಯ ಕಲೆ ನೆಲೆಯಿತ್ತು...

ನೀವು ಹಿರಿಯರು, ಗುರುತಿಸಿದಿರಿ
ನಾನು ಮಾತಾಡಿದೆ, ಹರಸಿದಿರಿ ;

ನಾನೊಬ್ಬ ಕವಿಯಾದೆ
ಕತ್ತಲೆಯ ಗವಿಯಾದೆ;
ಕತ್ತಲೆಯ ಗವಿಯಿಂದ
ಹೀಗೇ ಹೊರಬಂದೆ
ಕಾವ್ಯದ ಬೆಳಕಾದೆ!

ಕನ್ನಡಿಗರ ಮುಂದೆ ನಿಂದೆ !
ಪ್ರೀತಿ ಬೆಳಕಿನಲ್ಲಿ ಹೊಳೆಹೊಳೆದೆ.

* * * *

## ಕಣ್ಣು ನಾಲಗೆ ಕಡಲು
### (ಒಂದು ನಿತ್ಯ ಪ್ರಗಾಥ)

ಜೀವ ಜೀವದಲೂ ನೋಟ, ನೋಟದ ಆಟ
ಅನವರತ ಜೀವಂತ, ಹೊಸ ಗ್ರಹಿಕೆ ಧಾವಂತ;

ಕಣ್ಣು ಬಿಟ್ಟ ಮೇಲೆ ಹೊರ ಜಗದ ಸತ್ಯ ಸ್ವರೂಪ
ಹೀರಿ ಬೆಳೆಯುವ ವೇಳೆ, ಬುದ್ಧಿ ಭಾವದ ಕುಣಿತ –
ಸೆಳೆದು ಅಳೆದಳೆದು ಹಿರಿದಿರಿದು ಅರಿತ
ಬಗೆ ಬಗೆ ಬೆಳೆದು ಪರಿಧಿ ಸಹಜದಲಿ ಹಿಗ್ಗುತ್ತಾ...

ಅಮ್ಮನ ಅರಸಿ ಅಕ್ಕರೆ ಬಯಸಿ
ತಣಿವು ಕನಸಿ ದಾಹ ಉಣಿಸಿ

ನೋಟಕ್ಕೆ ನೂರು ಬಗೆ ಗ್ರಹಿಕೆ, ಸಾವಿರದ ಸೋಗೆ
ಅಲ್ಲಿಂದ ಎಲ್ಲ ಬೇಗೆ ಬಯಕೆ ಪಾಡಾದ ಧಗೆ!

ದಿಟ್ಟಿ ದಿಟ್ಟಿಯೇ ಕೇಂದ್ರ, ಗ್ರಹಿಕೆ ಭಾವವೂ ಸಾಂದ್ರ
ಅದು ಮೊದಲು ಮುಂದೆಲ್ಲ ಹುಡುಕಾಟ ಮುದ...

ನೆಟ್ಟಷ್ಟೂ ನೋಟ ಹದ
ನೋಡಿದಷ್ಟೂ ಸ್ಫೋಟ ಪದ

ಎಲ್ಲಿ ಕಾಣುವ ಅಭೀಪ್ಸೆ ಅಲ್ಲಿ ಮೋಹದ ವರಸೆ
ಹರಿದತ್ತ ಚೈತನ್ಯ ನೋಟ ಅಟ್ಟಿದಷ್ಟೂ ಪಾತ್ರ
ಬಿತ್ತರದ ಬೆರಗು ಚಿತ್ತಕ್ಕೆ ಬೆಡಗು

ಜೀವಭಾವಕ್ಕೆ ಕಲ್ಪನೆಯ ಹಡಗು!
ಕಣ್ಣು ಕನಸಿದಷ್ಟೂ ಕಲ್ಪನೆಯ ಹಂಸ
ಮನಸು ಹೆಕ್ಕಿದಷ್ಟೂ ಬುದ್ಧಿಭಾವ ವಿಲಾಸ

ನೋಡಿದುದ ಹಾಡುವ, ಹಾಡಿಗೆ ನಾಲಗೆಯೊಡ್ಡುವ
ಉಚ್ಛ್ವಾ–ಸ ನಿಶ್ವಾಸ ಅಜಪಾಜಪ,
ಜೀವಯೋಗದ ಮಂತ್ರ ವಿಶ್ವರೂಪ!

ಎಲ್ಲಿ ತಪ ಅಲ್ಲಿ ಜಪ
ನೋಟ ನೋಟಕ್ಕೊಂದು ಭಾವಲೇಪ!

ನೋಟ ಶಬ್ದಾತೀತ, ಕಣ್ಣು ಅಲ್ಲಿನ ಚಿಲುಮೆ ದಿಟ್ಟ ಜಲದೊರೆತ
ನಿತ್ಯ ನಿತ್ಯ ಉಕ್ಕುವ ದಿಟ್ಟಿ ಅಟ್ಟಿ ವರಾತ;

ಮೌನ ಗ್ರಹಿಕೆಗೂ ಉಂಟು ಮುಗಿಯದ ಪುಟ
ಜಗದ ಬೀಜಾಕ್ಷರವೂ ಗ್ರಹಿಕೆಯಲಿ ಅಯಾಚಿತ !

ಮೊದಮೊದಲು ಹೊರ ಹೊನಲು ಹೀರುವ ನೋಟ
ತದನಂತರವೇ ಒಳಗು ಗ್ರಹಿಸುವ ತಪ್ತ ಆಟ;

ಸುಪ್ತ ಹುಡುಕಾಟಕ್ಕೆ ಕಣ್ಣು ಆಪ್ತ
ಆಪ್ತ ತಡಕಾಟಕ್ಕೆ ಕುಂಭಕದ ಸೂಕ್ತ
ಆತ್ತ ರೇಚಕ ಇತ್ತ ರೋಚಕ
ಇತ್ತ ಪೂರಕ ಅತ್ತ ಕುಂಭಕ

ದಿನ ರಾತ್ರಿ ಸತತ ನೋಟದಾಟದ ಯೋಗ
ಅಲ್ಲೇ ಅಂಕುರಿಸಿತ್ತು ಜಗದ ರಾಗ
ಬಾಹ್ಯ ಸೆಳೆದ ಅಭ್ಯಂತರದ ಕುತೂಹಲದೊರೆತ
ಕುಂಭಕ ಅಕುಂಭಕ ಮೀಟಿ ದೃಷ್ಟಿ ಪ್ರಗಾಥ!

೨

ಕಣ್ಣ ಸೆಳೆತದ ನೋಟ ಆಳಕಿಂತಲೂ ಆಳ
ಕಣ್ಣು ಗ್ರಹಿಕೆಯ ಗಾಳ, ಅದರ ದೂರ ವಿಶಾಲ!
ದಿಟ್ಟಿ ಅಟ್ಟುವ ವೇಗ, ಸೂರ್ಯ ಕಿರಣದ ವೇಗ
ಕಣ್ಣ ಬಾಣ ಸರಾಗ, ಅಲ್ಲಿ ಹುಡುಕಾಟ ಸಹಜ ಯೋಗ;
ನೋಟ ಪಯಣಕ್ಕೆ ಜ್ಞಾನಸಂಸರ್ಗ

ಕಣ್ಣು ಕಡಲಾದಾಗ ಓಂಕಾರ ಮೀಟಿದ ಸ್ವರ್ಗ!
ನೋಟ ಆಯುಧವೆನ್ನಿ ಅದರಲ್ಲಿ ಹರಿತ ಗ್ರಹಿಕೆಯ ರೂಪು
ಎಲ್ಲಿ ತನ್ಮಯತೆ ಅಲ್ಲಿ ತೀವ್ರತೆ, ನೋಟ ಶಿವನೆಡೆ ಸರಿಯೆ
ಅಲ್ಲಿ ಭಕ್ತಿಯ ತಂಪು ಅಲ್ಲಿ ಭಾವದ ಚೂಪು ಕಣ್ಣು
ಎಲ್ಲಿ ಹೃದಯಕೆ ಕಣ್ಣು, ಅಲ್ಲಿ ಮೌಲ್ಯದ ಹಣ್ಣು, ಹೊಳಪು;

ಕಣ್ಣು ನೆಟ್ಟರೆ ಸೃಷ್ಟಿ ಸಿರಿ ಓಂಕಾರ ಸಾಮೀಪ್ಯ
ನೋಟ ದಟ್ಟವಾಗಿ ಸಮಾಧಿಗಿಳಿದರೆ ಆಧ್ಯಾತ್ಮ ದೇದೀಪ್ಯ;
ದಿಟ್ಟಿಯಲ್ಲಿದೆ ಈಶ ದಿಟ್ಟಿಯಲ್ಲಿದೆ ಸರಸ
ದಿಟ್ಟಿಯಲ್ಲಿದೆ ಹರಿತ ದಿಟ್ಟಿ ಬಾಣದ ಎಸೆತ–

ದಿಟ್ಟಿ ನೆಟ್ಟರೆ ಗುಂಭ ದಿಟ್ಟಿ ಬಗೆದರೆ ಗೂಢಗರ್ಭ
ದಿಟ್ಟಿ ಚಲಿಸೆ ನಿರಾಳ ದಿಟ್ಟಿ ಅನುಭವ, ಧವಳ ಸ್ವರ್ಗ!

೩

ದಿಟ್ಟಿ ದೀಪ್ತವಾಗಿ ಅರಣಿ, ದಿಟ್ಟಿ ಆಪ್ತವಾಗಿ ಅರ್ತಿಭರಣಿ
ದಿಟ್ಟಿ ಕಾಣ್ಕೆಯಾದರೆ ಪ್ರಣವ, ದಿಟ್ಟಿ ಧನ್ಯವಾಗೆ ಅಮೃತಸಂಭವ

ಎಲ್ಲಿ ಕಣ್ಣಿನ ನೋಟ ವಿಸ್ತಾರ ಅಲ್ಲಿ ನಿರ್ವಿಕಲ್ಪ ಅಕ್ಷರ
ದಿಟ್ಟಿ ವ್ಯೋಮ ಮುಟ್ಟಿದರೆ ತಟ್ಟಿದರೆ ಓಂಕಾರ ಝೇಂಕಾರ

ದಿಟ್ಟಿ ಅಭಿಜಾತವಾದರೆ ಉಂಟು ಏಕಾಗ್ರತೆ ಶಿಖರ
ದಿಟ್ಟಿ ಧ್ಯಾನವಾಗಿ ಧಾರಣವಾಗಿ ಸಮಾಧಿಗಿಳಿದರೆ ಆತ್ಮಗೋಚರ
ಜಗ ಜಗದ ವಿಹಾರ, ಆನಂದ ನೋಟ ಸಂಚಾರ

ನೋಟಕ್ಕೆ ರಾಗ ಅನುರಾಗ ಭೋಗ ತೆಕ್ಕೆ
ನೋಟದಾಟಕ್ಕೆ ರತಿಯ ಹೃದಯ–ಹಕ್ಕಿ;
ನೋಟ ಮೀಟಿದಷ್ಟೂ ಪ್ರಣಯ ಪೂರ್ಣ ಚುಕ್ಕೆ
ಎಡವಿದರೆ ಚಕ್ಕೆ ತೊಡರಿದರೆ ಧಕ್ಕೆ
ಅತಿಯಾಗಿ ಅಡರಿದರೆ ರಾಡಿ ಕೆಸರಿನ ಉಕ್ಕೆ!

ನೋಟ ವಾತ್ಸಲ್ಯವಾದರೆ ಪೀಯೂಷ ಪಾತ್ರೆ
ನೋಟ ವಿರಾಗವಾಗಿರೆ ಆಧ್ಯಾತ್ಮ ಪತ್ರೆ
ನೋಟ ನವಿರಾದರೆ ಕಾವ್ಯ ಸಂಗೀತ ನೃತ್ಯಸರಿತೆ
ಕಣ್ಣು ಸಂಪೂರ್ಣ ಕಡಲಾದರೆ ವಿಶ್ವಮುಖಿ ಆರದ ಹಣತೆ
ತನ್ಮಯವಾಗಿ ಜ್ಞಾನ ಸವಿದರೆ ಧರೆಯೆಲ್ಲ ಅಮರ ಕವಿತೆ!

೪

ಕಣ್ಣು ಮಾಯಾಮೂಲ; ನೋಟ ನದಿ ಸ್ವರೂಪಿ–
ಅಭಿವ್ಯಕ್ತಿ ಜ್ಞಾನ ರೂಪಿ; ಸರಸ್ವತಿಯೆ ಶಿಲ್ಪಿ!

ನೋಡುವ ಕ್ರಿಯೆ ಗ್ರಹಿಸುವ ಕ್ರಿಯೆ ಜ್ಞಾನಾಶ್ರಯೀ
ಪ್ರಜ್ಞೆಯ ಕ್ರಿಯೆ ಸೃಜನೆಯ ಕ್ರಿಯೆ ಪ್ರತಿಭಾಶ್ರಯೀ

ದಿಟ್ಟಿಗೆ ದಿವದ ಹೊಳಪು ಸೃಷ್ಟಿಗೂ ಧವಳ ಕೀರ್ತಿಯ ಹೊಳಪು
ಜ್ಞಾನ ಸಿರಿಗೆ ಹಾದಿ ಹೆಜ್ಜೆ ಅನಿತೂ ಮೂಡಿದ ಸುದ್ದಿ ಸೊಂಪು
ಕಣ್ತೆರೆದರೆ ಅಂತರಂಗ ಪ್ರತ್ಯಕ್ಷ ಕಾವ್ಯಕನ್ನಿಕೆ
ಕುಂಚ ಹಿಡಿದರೆ ಪ್ರತಿಭಾ ಮಿನುಗು ರಮ್ಯ ರಂಗಿನ ಕುಣಿಕೆ
ಚಿರಾಯು ಅಂತರಂಗ ದರ್ಶನ
ಅಂತಃಸ್ಸತ್ವ ಅನುರಣಿಸಿದ ಗಾನ
ಅದರ ತಾನ–ವಿತಾನ, ಮೇಳಗೀತ ಕಾಣಾ!

* * *

ಕಣ್ಣು ಹೆಕ್ಕಿ ನಾಲಗೆಯಲಿ ಮಾತುಕ್ಕಿ
ಅನುಭವ ಕಡಲಿನ ಅಲೆ ಅಲೆಯಲಿ ಜೀಕಿ ವಾಗರ್ಥ ತುಳುಕಿ
ಅನೂಹ್ಯ ಕಾವ್ಯಲೋಕ, ಅಂತರಂಗದ ಬೆಳಕ ಜೀಕಿ ವಾಙ್ಮುಖಿ
ಪ್ರಗಾಥ ಪ್ರವಾಹವಾದ ಪರಮಾನಂದ ಪುಳಕ!
ಎಲ್ಲಿ ಮಾತು ಮೂಡುತ್ತೋ ಎಲ್ಲಿಂದ ಧ್ವನಿ
ತರಂಗ ತರಂಗವಾಗಿ ಹಬ್ಬುತ್ತೋ ಅರಿಯಲಾಗದು ಕಾಣಾ
ಕಣ್ಣು ಕಡಲಾದ ನಾಲಗೆ ಮೊರೆವ ಪರಿ ಪರಿಯಲಿದೆ ಕಾವ್ಯ ನರ್ತನ !

೫

ನಾಲಗೆಯ ನರ್ತನಕೆ ವಾಗ್ದೇವಿ ಕುಣಿತ
ನರ್ತನ ಪ್ರಭುತ್ವಕ್ಕೆ ವಾಗರ್ಥ ಮಣಿತ...

ನಾಲಗೆ ನಾಗ ಆಡಿಸುತಾ ಪದರಾಗ
ಲಾಸ್ಯವಾಗಿ ವಾಗ್ಜಾಲ ವೈಭವದ ವಿಲಾಶ ಯೋಗ–

ಮಾತು ಚಪಲವಾಗೆ ಬತ್ತೀತು ವಾಗರ್ಥ ಗಂಗೆ!
ಮಾತು ಮುತ್ತಾಗೆ ಕಾವ್ಯಕಣಜದೊಳಗೆ
ಅನುಭವ ಹರಳಾದ ಮುತ್ತು ರತ್ನದ ಕೊಳಗ;

ಮೌತು ಕೌದಿಯಾದರೂ ಸರಿ ಇರದು
ಗುಪ್ಪೆ ಗುಪ್ಪೆ ಗೊರಗಾದರೂ ಸರಿ ಬರದು
ಕೌಪೀನವಾದರೂ ರಂಗಿರದು
ಅಂಗಿ–ಸೀರೆಯಾದರೆ ಚೆಂದ, ಕುಬಸ ಕುಲಾವಿ ಬಂಧ
ತೊಡುಗೆಗೆ ವಿನ್ಯಾಸ ಛಂದ, ಬೆಡಗಿನ ಗಂಧ
ಆಗ ವಾಗರ್ಥ ಜೋಳಿಗೆಯಲಿ ಧ್ವನಿ ಅಕ್ಷಯ ಉತ್ತುಂಗ
ನಾಲಗೆ ಕಡಲಾಗಿ, ಕವಿಗೆ ವಚೋ ವಿಲಾಸ ಸೃಜನರಂಗ!

ಕಂಗಳು ದಿಟ್ಟಿ ಕಟೆದಷ್ಟೂ...
ಕಾಮನೆ ಗೀತಗಳು;
ಆಸೆಗಳು ಒಳಗೊಳಗೇ ಬೆಳೆದಷ್ಟೂ
ಇಂಗದ ದಾಹಗಳು !

* * *

ಕಣ್ಣಲಿ ಉಕ್ಕಿದ ವ್ಯಾಮೋಹಗಳು
ನಾಲಗೆಗಿಳಿದು ಮಾತಾಗಿ
ಬೆಣ್ಣೆ ನಯಗಾರಿಕೆಯಿಂದ ಆತ್ಮವಂಚನೆ
ನಾಲಿಗೆಗೆ ತಪ್ಪಿದ ನೀಯತ್ತು!
ಗೊಂದಲದ ಭಾವಗಳು ಕಡಲಲೆಗಳಾಗಿ
ಉಕ್ಕುಕ್ಕಿ ಮೊರೆ ಮೊರೆದು
ವಿಕ್ಷಿಪ್ತ ಚಿತ್ತದಲಿ ಲಾವಾಗ್ನಿ ಸ್ಫೋಟ!

## ೭

ಕಣ್ಣು ಕಂಡ ಎಲ್ಲ ಚಿತ್ರ ಆಗಿ ಒಳಗೆ ಭಾವ ಪಾತ್ರ
ಭಾವ ಶಕ್ತಿ ಸಿರಿವಂತಿಕೆ ಅಭಾವ ಕರಗಿ ನಿರ್ನಾಮಿಕೆ ಭಾವಸೂತ್ರ

ನೋಟ ಪೂರ್ಣ ಜ್ಯೋತಿ ರೂಪ
ಆಕಾರ ಅರಿಯೆ ಜ್ಞಾನ ಪೆಂಪ–

ತುಂಬಿ ಬಂದು ನಂಬಿ ಬಂದು ಹೊಂದಿ ಬಂದು ವಿವೇಕ
ಆನಂದವಾಗಿ ಹೃದಯಬೀಗಿ ಕ್ಷಣಕ್ಷಣವೂ ನವೀನ ಪುಳಕ!

ದಿಟ್ಟಿ ಹರಿದ ಹಾಗೆ ಬೆಳಕ ಮಹಾಪ್ರವಾಹ
ಅರಿವಿನೆರಕ ಅಪ್ಪಿದ ಹಾಗೆ ದೀಪ್ತಭಾವ ಪ್ರಣವ ತರಹ–

ಸತ್ಯ ಪ್ರಜ್ಞೆ ಪ್ರಜ್ವಲ
ಗ್ರಹಿಕೆ ಕೂಡ ಉಜ್ವಲ!

ತಿರುಳ ಹೊರಬಂದು ಅರಳು, ಬುದ್ಧಿಭಾವದ ಹಗಲು
ಅನಂತ ಆಯಾಮದ ವಾಣಿಯ ಸಿರಿ ಕೊರಳು
ಸಂತಸದಲಿ ಹೃನ್ಮನ ನಗಲು

ದಿನದ ಹಕ್ಕಿ ಗುರುತಿಸಿದ ಅಕ್ಷಿಪಟಲ
ಜಲದ ಕಣ್ಣು ಬೆಳಗಿಸಿದ ಮಣ್ಣ ಸಂಕುಲ
ಎಲ್ಲ ಪೃಥ್ವೀಮೂಲ
ತಾಯಿ ಸರಸ್ವತಿ ಸರಿತೆಯಾಗಿ ಹರಿವ ಜಾಲ !

## ೮

ಎಂದು ಕಣ್ಣು ನೋಟ ಸಿರಿ ಫಲ ಸವಿಯುತ್ತೋ
ಅಂದಂದೇ ನಾಲಗೆಯಲಿ ಮಾತೊದಗಿ ರಸ ರಾಗಿಣಿ
ಅಗೆಲ್ಲ ಆನಂದ ಕಡಲ ಅಮೃತ ವಾಹಿನಿ !

ಕವಿಗದೇ ಕಾವ್ಯ ಕಬ್ಬು, ಗೀತ ಕದಳಿ ಖರ್ಜೂರ

ಅನುಭವವದ ಉದ್ದಗಲ ಇದ್ದದ್ದೇ ಮೌನ ಮಂದಾರ
ಅಪೂರ್ವ ಚೆಲುವ ಅಕ್ಷರ ಕಾಂತಾರ
ಅಲ್ಲಿ ತುಂಬೆಯಿದೆ ಜಾಜಿಯಿದೆ ಮಲ್ಲಿಗೆಯಿದೆ
ಸಂಪಗೆಯಿದೆ ಜಾಲಗಿರಿ ಗೊಂಚಲಿದೆ
ಹೊಂಗೆ ತೊಂಗಲಿದೆ ತಂಗಡಿ ತೇರಿದೆ
ಗಂಟೆ ಟಿಂಟಿಣಿ ಇನಿದನಿ ಕೊರಳಿದೆ
ಆ ಎಲ್ಲ ವಸುಮತಿ ನಿರಿಗೆಯಲಿ ಕಾವ್ಯೋತ್ಸವವಿದೆ
ಅಲ್ಲಿ ನೆಲ ಪ್ರಸ್ತಾರದಲಿ ಕಡಲ ಕುಣಿತವಿದೆ, ಧ್ವನಿ ಅನುರಣಿತವಿದೆ!

೬

ಜಿಹ್ವೆಯಲಿ ಅಡಗಿಹಳು ಗುಪ್ತಗಾಮಿನಿ ಸರಿತೆ
ಸುಷುಮ್ನದಲಿ ಸರಸ್ವತಿಯು ಹರಿದಿಹಳು, ಅರಿತೆ!

ಬುದ್ಧಿಭಾವದ ಹದಕೆ ಹೃನ್ಮನದ ಸಿರಿ ಮುದಕೆ
ಜಾಗೃತಳು ಸವಿ ಸರಿತೆ ಕ್ರಿಯಾಶೀಲೆ ಜನಪದಕೆ–

ಇದ್ದೂ ಇಲ್ಲದ ಹಾಗೆ ಒಳಗೊಳಗೇ ಮೊರೆತ
ಹೊರ ನೋಟದಸ್ತಿತ್ವ ಮರೆತಂತೆ ವರ್ತಿಸುತ....
ಮಾತು ಚಿಲುಮೆಯಲಿ ಹುದುಗಿ ಸಮಯದಲಿ ಸ್ಪಂದಿಸುತ
ಕಣ್ಣು ಕಂಡದ್ದ ಚಿತ್ತ ಆಸ್ವಾದಿಸುತ ಹೃದಯದಲಿ ಕವನಿಸುತ–

ಸರಸತಿಯ ಸರ್ವಮಯಿ ಪಿಂಡಾಂಡ ಬ್ರಹ್ಮಾಂಡ
ಸಾಧನೆಗೆ ತಾ ಒಲಿದು ಅಬಲ ಜಗದಲಿ ಸಬಲ ಸಾಹಿತ್ಯ ಪ್ರಕಟ !

ನಾಲಗೆಯ ಒಳಗೊಳಗೆ ಅವಿತ ಅಪರಾಜಿತ
ಸಂಗೀತ ಸಾಹಿತ್ಯ ಶ್ರೀ ಅಧಿದೇವತಾ!

ಬೇಕೆನಲು ಧುತ್ತೆನುತಾ ಪ್ರತ್ಯಕ್ಷತಾ
ಬೇಡದಿರೆ ಮೌನದಲಿ ಅಂತರ್ಗತಾ!

## ೧೦

ನಾಲಗೆಯ ನುಡಿಗಿಹುದು ನವ್ಯತೆಯ ಮಹಾಪೂರ
ಗರ್ಭದಲಿ ಗುಡಿಗಟ್ಟಿ ಪ್ರೇರಣೆಗೆ ಮಧುರ ಸ್ವರ !

ಎಂದು ಉನ್ಮುಖ ಗೀತ ಅಂದು ಆನಂದ ಪರಿಪ್ಲುತ
ಎಲ್ಲಿ ಸರ್ವತೋಮುಖ ಅಲ್ಲಿ ಆತ್ಮತೃಪ್ತ;

ಸತ್ಯವೇ ಸ್ವತ್ತಾಗಿ, ಸ್ಪಷ್ಟತೆಯೇ ಹೊಳಪಾಗಿ
ಕಲ್ಪನೆಯೇ ಹೊಳಹಾಗಿ, ಅಭೇಧ್ಯ ಆಶ್ರಯವಾಗಿ.....

ಸರಸತಿಯು ಕುಣಿಕುಣಿದು ಜಿಹ್ವೆ ಮಾಯಾರೂಪ
ಸರ್ವರಕ್ಷಣೆ ಕಂಡ ಜ್ಞಾನಪ್ರದೀಪ;

ನುಡಿವ ನುಡಿ ಸೌಭಾಗ್ಯ ಅಪೇಕ್ಷೆಯೇ ಸಾಹಿತ್ಯ ಶುಭ ಸಂಪದ
ಬರೆವ ನುಡಿ ದಿಗ್ದೇಶ ದಾಟುತ್ತಾ ಕಲೆಯ ಸ್ವರ ಸಂಹಿತಾ !
ನುಡಿಸಿರಿಗೆ ಶುಭಾಶಯದ ಸಪ್ತಮಾತೃಕೆ ಹಾರೈಕೆ
ಭೂಮಿ ಆಕಾಶಕ್ಕೆ ವಾಗರ್ಥ ವಿಜಯದ ಪತಾಕೆ–

ಇನಕಿರಣ ಮೀರಿಸುವ ಸಾಹಿತ್ಯ ಮಿಂಚು
ಮಾತಿನಲಿ ಮುತ್ತಿನ ಹಾರದಾ ಮಿರುಗು ಬೆರಗು;

ಸಾಹಿತ್ಯ ಸರಸ್ವತಿಗೆ ನಾಲಗೆಯೇ ಮೂಲ
ಒಲಿದರೋ ವೇಗವತಿ ವಾಙ್ಮಯದ ಜಾಲ !

## ೧೧

ಕಂಗಳು ಹೆಕ್ಕಿದ ಅನುಭವ ಅಗಣಿತ–
ಅಲ್ಲಿ ಹಳ್ಳದ ದಂಡೆಯ ಆಹ್ಲಾದ ತೋಷ ತಾಡಿತ
ಬೆಳ್ಳಿ ಬೆಡಗಿನ ಕೊಕ್ಕರೆ ಸಾಲು ಉದ್ದೀಪಿತ
ಕಳ್ಳಿ ಕಂಟಿಯ ಮೇಲ್ಬುಳಿತ ಗುಂಚಕ್ಕಿ ಮನಮೋಹಿತ...
ಎಲ್ಲಿ ಹಸಿರಿನ ಪತ್ತಲ ಅಲ್ಲಿ ಕಂಗಳಿಗೆ ಆನಂದ ಉಜ್ಜಲ

ಅತ್ತ ನೋಟಕೆ ಅನುರಕ್ತಿ, ಇತ್ತ ಚಿತ್ತಕೆ ಕ್ರಿಯಾಶಕ್ತಿ!
ತಿಳಿ ಭಾವದ ಬೆಳ್ಳುದುರೆ ಓಡುತ್ತಾ ಜೀವಂತ ವೀಕ್ಷಣ
ಹೀಗೆ ನೋಡುತ್ತಾ ನಾಡ ಅರಿತೆ
ಉಬ್ಬಿ ಹಾಡುತ್ತಾ ಜೊತೆ ಬೆರೆತೆ
ಅಲ್ಲಿ ಸುಲಕ್ಷಣ ಗಣ ಸೆಳೆದು
ನನ್ನಪ್ಪುತ ಬರಸೆಳೆದು ತುಟಿಗೆ ತುಟಿ ತಂದಾಗ
ಮಾಧುರ್ಯ ಸಂಚಲನ ಸವಿಜೇನ ರಸಪಾನ

ಸಾಗಿದೆ ತೂಗಿದೆ ಬಾಗಿದೆ ಬೀಗಿದೆ
ಸರಸತಿ ಜೊತೆ ಜೊತೆ ಸೌಭಾಗ್ಯದಾನಿಧಿ
ಚೇತನ ಉನ್ಮಾದಿ ಪ್ರೇರಣೆ ಜ್ಞಾನ ನದಿ

ಸುಜ್ಞಾನ ಶಿಖರವ ಸವಿದವನು ಮಹಾಜನತೆ ಬದಿ ಬದಿ
ಬೆರೆತು ಹೋಗಿ ಒಂದಾದೆ ನಾನಾಗ ಅನಂತ ಸಾಗರದಿ!

೧೨

ನೋಡಿದ ನೆಲ ಹಾಡಿದ ಮನ ಮಿಡಿದ ಎದೆ
ಗ್ರಹಿಸಿದ ಗತಿ ಆಗದೆ ಅತಿ ಮೀರದೆ ಮಿತಿ
ಒಂದಲ್ಲ ಎರಡಲ್ಲ ಅಸಂಖ್ಯ ಜನಮನ

ವಿಶಾಲ ಧರೆಯ ತಿಟ್ಟು ತೆವರ ವಿಸ್ತಾರ ಹಸಿರ ಎತ್ತರ ಬಿತ್ತರ
ಬನ ಗಿರಿ ಒಂದೇ? ಕಾಡು ಕಣಿವೆ ಒಂದೇ?
ತೊರೆ ಸಾಗರ ಒಂದೇ? ನದಿ–ನದಗಳು ಒಂದೇ?

ಜಗದುದ್ದ ಜಗದಗಲ ಕಂಗಳು ಮಿಂದವು
ಒಳಗೊಳಗೇ ಹೃದಯದ ಜೊತೆ ಏನೇನೋ ಅಂದವು

ಮುಗಿಯದ ಹಾದಿಗಳ ನಡೆದು
ಹಳಸದ ಪ್ರಕೃತಿ ಸವಿದು
ಕರಗದ ಮಲೆಮಲೆಗಳ ಹತ್ತಿ ಇಳಿದು

ತೋಷದಲಿ ಮುಳುಗೆದ್ದವು ಒದ್ದೆ ಕಂಗಳು
ಮಂಪರಲೂ ದಿಟ್ಟಿಸಿದವು ನಿದ್ದೆ ಕಂಗಳು

ನಿಗೂಢ ಬಗೆದು ಚರಿತ್ರೆ ತಿಳಿದು ಕಂಡ ಸತ್ಯ
ಧರಿತ್ರಿ ಹಿರಿದು ಅವಧಿ ಚಿಕ್ಕದು
ಬದುಕು ದೊಡ್ಡದು, ಜಗತ್ತು ಹೊಸದು ಹೊಸದು
ಸಾಯ್ವುದಿಲ್ಲ ಕಂಗಳು ಎಂದೂ
ದಾಖಲಿಸಿವೆ ದಿಟ್ಟಿ ಹಿಂದು, ಮುಂದು ಇಂದೂ !

ದೃಷ್ಟಿ ದೃಷ್ಟಿ ಗ್ರಹಿಕಾಮುಖಿ
ಸಮೃದ್ಧಿಶೀಲೆ ಇಳಾಸಖಿ!

ಜ್ಯೋತಿ ಸ್ವರೂಪಿ ಕಣ್ಣ ಪಾಪೆ, ನೋಟ ಶಿಖಿ
ಆರ್ದ್ರ ಸಂವೇದನೆ ಕಂಡು ಉಂಡು ದೀಪ್ತೋನ್ಮುಖಿ

ಅಗ್ನಿಯುಂಟು ಸೆಳೆತದಲ್ಲಿ
ಜಲಧಿಯುಂಟು ಸರಿತೆಯಲ್ಲಿ

ಪಡೆದನಿತೂ ನೀಡುವ, ನೀಡಿದನಿತೂ ನೋಡುವ
ನೋಡಿದನಿತೂ ತಿಳಿಯುವ, ತಿಳಿಯುವನಿತೂ ಹೇಳುವ

ನೋಟ ನೋಟದಲೆಗಳು
ಕಣ್ಣಂಚಲಿ ಹನಿಗಳು

ಕಣ್ಣು ಕಣ್ಣಲ್ಲ ಶಕ್ತಿರೂಪಿ
ಸರ್ವಗ್ರಾಹಿ, ನೋಟವೇ ನೋಂಪಿ
ಕ್ಷಣ ಕ್ಷಣ ಸ್ವೀಕರಣ
ಮನಮಂಥನ ಸಂವರ್ಧನ

ಬಾಳ್ಪಯಣಕೆ ನಿಜ ಇಂಧನ
ಸಹಸ್ರಾರಕೆ ಸಂದರ್ಶನ
ಆತ್ಮದೆಜಮಾನಗೆ ನಿತ್ಯಾರ್ಪಣ
ಆ ಆನಂದಕೆ ಅಂತರಂಗ ಕಣ್ ಕಣಾ!
ಮೂಡಿದಭಿವ್ಯಕ್ತಿಯೆಲ್ಲ ಕೃಷ್ಣಾರ್ಪಣ!

ಹೆಕ್ಕುತ್ತಾ ಕಣ್ಣು ಉಕ್ಕುತ್ತಾ ಮನಸು
ಅರಿಯುತ್ತಾ ಹೃದಯ ಕಡಲು
ತುಳುಕುತ್ತಾ ಅನುಭವ ಹೊನಲು

ವಿಚಾರ ವೀಚಿಗಳು ಸಂವೇದನ ಜ್ಞಾನ
ಸವ್ಯಸಾಚಿಗಳು ಅಭಿವ್ಯಕ್ತಿ ಗಾಳಿಪಟಕೆ
ಗ್ರಹಿಕೆ ಬಾಲಂಗೋಚಿಗಳು !

ಬೀಸುತಿರಲಿ ಹೀಗೇ ಜಗವ ನಡೆಸುವ ಪವನ
ಸೂಸುತಿರಲಿ ಹೀಗೇ ಭಾನು ಜ್ಞಾನ ಕಿರಣ

ಕಣ್ಕಂಡುಂಡು ಮನ ಸವಿದುಂಡು
ನಾಲಗೆ ನಲಿದುಂಡು ಬಾಳಿನನುಭವ ದಂಡು
ಗೆಲ್ಲುತಿರಲಿ ಅನುದಿನ ಅನುಕ್ಷಣ ಕಷ್ಟಗಳ ಕದನ!

* * * *

# ಗಮನ

ಒಂದು ದಿನ ಕೆಂಪು ಗುಲಾಬಿಯೊಂದು ಸಣ್ಣ ಮೀನಕಣ್ಣಿನ
ಹೆಣ್ಣಿನ ವಿಳಾಸ ತಿಳಿಸಿತು– ನೇರ; ಮುನ್ನುಗ್ಗಲು ಬಿಂಕ ಬಿಗುಮಾನ

ಹಿಂದುಳಿಯಲು ಆತಂಕ ಹಿಂಡುವ ಮೌನ
ಕಷ್ಟಕ್ಕೆ ಇಟ್ಟುಕೊಂಡಿತು ಪ್ರೇಮ–ಬಂಧುರ–ಭಾರ

ಮನಸ್ಸು ಚೆಲುವಿನ ಎಣಿಕೆ ಕುಣಿಕೆಯಲ್ಲಿ ಲಾಸ್ಯ ಕನಸಿನ ಹೆಣಿಕೆಯಲ್ಲಿ
ಹಂತ ಹಂತ ಕಟ್ಟಿತು – ಸುಂದರ ಆಸೆ ಗೋಪುರ;
ಒಮ್ಮೆಗೇ ತಡೆ ಕಂಟಿ ಅಂಟಿ ನವಿರಂಗಿ ಮುಳ್ಳಿಗೆ ತೊಡರಿ ನದರು ಅಡರಿ
ಹೂಗಿಡದ ನಡುವೆ ತೂಗಾಡುತ್ತಿದ್ದ ಚೂಟಿ ಚಿಟ್ಟೆ ಅತ್ತಿತ್ತ ಜೀಕಿ
ಎಗರಿ ಕಂಡಿತು ಕಣ್ಣಿಗೆ – ಮುಗಿಲ ಹಿಡಿದ ಸಾಹಸದ ನಗೆ ಒಳಗೊಳಗೇ;
ಹಿಡಿಯ ಹೋದಷ್ಟೂ ನೆಗೆದು ಹಾರಿದಷ್ಟೂ ಹುಮ್ಮಸ್ಸು ಪುಟಿದು
ಆ ಜೂಜಾಟ ಜಾಡು ಕಡೆದು ಹತ್ತಿಕೊಂಡಿತು ಮೈಗೆ ಲಗುಬಗೆ,
ಸಾಗರ ಈಜಿದಾನಂದ – ಹಿಡಿದ ಬೆರಳಿನ ತುದಿಗೆ.

ಪ್ರೀತಿ ಪುಷ್ಪ ಧೂಳಿರಾಶಿ, ಹೆಣ್ಣು ಸುಗಂಧ ಕನಸು ಕಾಶಿ–ಮೂಸಿ
ಕಂಡಷ್ಟೂ ಮಾತಿನ ಮಳೆ ಹನಿಸಿ ವಿಶ್ವಾಸ ಮೈನೆನಸಿ ಸರಸ ಸೇರಿಸಿ
ಜೇಡಿಯಾಯ್ತು–ಜಿಗುಟಾಯ್ತು – ಮಿದಿಯುತ್ತ ಹಗುರ ಅಡಿಗಡಿಗೆ
ಬಂಧಿತವಾಯ್ತು ಸ್ನೇಹಸೇತು, ಸಡಗರದ ಸಲಿಗೆ ಹೊಲಿಗೆ
ದಿನ ದಿನ ಅಲ್ಲಿ ಇಲ್ಲಿ ಓಡಾಡುತ್ತ ವ್ಯತಿರಿಕ್ತ ನುಡಿ ಅಡ್ಡಗೋಡೆ ಕರಗುತ್ತ
ಲಾವಣ್ಯ ಮಿಂಚುನಗೆ ಮಿನುಗುತ್ತ ಏಕವಾಯ್ತು ಸುರತ, ಮಾಗಿತು ಚಿತ್ತ.

ಕಣ್ಣಾಲಿಗಳಲ್ಲಿ ಬಲಿತ ಪ್ರಯಣಲಾಲಿತೂಗಿ ಹತ್ತಿರ ಹತ್ತಿರ ಕೂಡಿ ಬಾಗಿ
ಮುಂದೆ ಹೋದ ಹಾಗೆ ಪರಸ್ಪರ ಹೆಜ್ಜೆ ಒಮ್ಮುಖವಾಗಿ ಹಿಗ್ಗಿ ವಸಂತ ಸುಗ್ಗಿ
ಉಕ್ಕಿ
ಹರಿಯಿತು ಖುಷಿ ಸರಸ್ಸು – ಒಲುಮೆ ಪೂರದ ಬದಿ ಬದಿ
ಹರಿದಷ್ಟೂ ಒಂದೇನದಿ.... ಒಂದೇ ಆಟ.... ಒಂದೇ ಹಾದಿ.

* * * *

# ಹೂವಲ್ಲದ ಚಿತ್ತ

ಪ್ರಲೋಭನೆ ಸೆರೆಯ ಕಾಮನೆ ಸುರೆಯ
ಗಗನ ಕುಸುಮ ಜಿಂದಗಿ ಇಂದ್ರಿಯಗಳಿಗೆ–
ಶರೀರ ಪೂರ್ತಿ ಕಣ್ಣು ಪ್ರೀತಿ ರತಿ ಸೋನೆ ಜಿನುಗಿಗೆ
ಚಿಂತೆ ಜಿತೆ ಹತ್ತಿ ಉರಿದರೂ ಕರುಳು ಕಲಕುಮಲಕು.

ಕರೆಯ ಮೊರೆಯ ಅನುಕೂಲ ಬೆಳಸು ಹೊಳೆಸಿದ
ಹಾಸು ಬೀಸಿಗೆ ನೋಟ ಸಂತೆ ಥಳ ಥಳಿಸಿ
ನೆಲದ ಎದೆಯಾಸೆ ಕಸುಕಾಯಿ, ಹಣ್ಣಾಗುವ ಕಾತರ
ಭಿಡೆ ತೊರೆದ ಮಿಂಚುವ ಸಂಚಾರ;

ತುಡಿಯುವ ಕಣ್ಣಿನಾರತಿ ಎತ್ತಿ ತೇವ ಮೈತ್ರಿ
ಕುಡಿಯುವ ಹಸಿದ ರೆಪ್ಪೆಗಳ ತೆರವು
ಸಂತೋಷ ಸಿಂಪಡಿಸುವ ಪೂರ್ವ ಪರಿಧಿ ಗೆರೆಗೆ
ಸುತ್ತಿಕೊಳ್ಳುತ್ತೆ, ಒಂದೊಂದೇ ಗುರುತು ಮಾತು.

ಗಾಯ ಮಾಯದೆ ಹನಿ ಭಯ ಬೇರಿಗೆ ಬೇರನ್ನೇ
ಕೀಳುವ ಕೊಂಡಿಸುವ ಕಲಸುವ ಸಂಕಲಿಸುವ
ಒಂದಲ್ಲದ ಹತ್ತ ಹೂವಲ್ಲದ ಚಿತ್ತ ಬೆಳೆದ ಹುತ್ತ
ಕಡಿಯಲಾರೆ ನಿಕ್ಷೇಪ–ಅಗೆಯಲಾರೆ ಆಳಕ್ಕೆ ಇಳಿದ ಕಾಂಕ್ಷೆ ;

ಕನಸು ಕವಲು ಮೈತುಂಬ ಚಿಕ್ಕೆ ಕೆದಕಿ
ಕಳಿತ ಶಾಣೆತನ, ಬಿಕೋ ಬಿಕೋ ಅಂತ ಮುಲುಕಿ ಕುಳಿತವನೂ
ಎದ್ದೆ ಲಕ ಲಕಾ ಅಂತ ಧಾವಂತ ಕೆತ್ತುತ್ತ
ತುರುಬು ಹುಡುಕಿದೆ, ಹೊಲಬ ತಡಕಿದೆ
ಸುಖ ಸರೋವರದ ಹಕ್ಕಿ ಉಕ್ಕೆಯಾಯ್ತು.

* * * *

# ಸ್ವರೂಪ

ಬಿರಿದ ಬೇಸಗೆ ನೆಲ ಮುಗಿಲ ಮಳೆಗೆ
ಕಾಯುವ, ಕಾತರಿಸುವ ಹಾಗೆ
ಕಾವ್ಯದಲ್ಲಿ ಪ್ರತಿಮಿಸುವ ಸವಕಲುಥಲ, ಒಳಗಿನ ಬಗೆಗೆ;

ಪ್ರೇಮ ಕವಿತೆಯ ತುಂಬ ಹೋಲಿಕೆ ತುಂಬಿ
ಬರಿ ಮಾತು ತಬ್ಬುವ ಭಾವ ಘಟಿಸುವ ಸಿಂಬಿ
ಫಲವಷ್ಟೇನೇ ಪ್ರೇಮ? ಪ್ರೇಮದರ್ಥ ಜಾಲ?

ಪ್ರಣಯಿ ಕಾಯುವುದು ಕ್ಷಣ ಕ್ಷಣವೂ ಕೂಡಿಕೆ ಕಾತರಿಸುವುದು
ಮೈ ಬೆಂಕಿಯಾಗುವುದು
ಮಾನಸಿಕ ಬೆಸುಗೆ ಕುರಿತ ಪ್ರಶ್ನೆಯಷ್ಟೇ ಅಲ್ಲ–

ದ್ವಂದ್ವ ಒಂದಾಗುವಲ್ಲಿ ಯಮಳ ಏಕವಾಗುವಲ್ಲಿ ಮೊರೆಯುವ
ಏಕದಲ್ಲೂ ವಿರತಿಗೆ ಬೆಲೆಯನರ್ಪಿಸುವ
ಚೆಂದದೊಂದಾಗಿ ಪ್ರಣಯ ನಿರಿಗೆ ತೊಡೆಯಲ್ಲಿ ಮರೆಯಾಗುವ
ಮುಗಿಲ ಲವಲವಿಕೆಗಳು ನೆಲದ ತೆಕ್ಕೆಗಳು ಮರಿಹಾಕಿ
ಒಂದು ಹತ್ತಾಗಿ ಚರ್ಮ ಚರ್ಮ ಸುತ್ತುವ ಗಾಣಗಳು
ವಾಸ್ತವ ಸ್ಪರ್ಶಕ್ಕೂ ಮೀರಿ ಫ್ಯಾಂಟಸಿನೆಗೆತಗಳು
ವ್ಯಕ್ತ ಪದಗಳ ಸುತ್ತ ನಾಟ್ಯವಾಡುತ್ತಿವೆ ಗೀಳು
ಒಂದೊಂದೂ ಲಾಸ್ಯದ ಪರಿವೆ ಕುಂಕುಮ ದೊಗಲು
ಸಂಪಿಗೆ ಎಸಳು ನಿಜ ವಿಜಯದೊಳು ತೋಳು ಬಂಧನಕ್ಕೆ –
ತುಟಿ ಚುಂಬಕ್ಕೆ ತೇರು ಕಟ್ಟಿ ಹಟ್ಟಿ ಪೂರ್ಣ ಚಂಡಿಕೆ.

ಅದೆಲ್ಲ ತುಟಿಯಲ್ಲಲ್ಲ ಗಲ್ಲದಲ್ಲಿಲ್ಲ ಕಣ್ಣ ಲಸಿಕೆಯಲ್ಲ
ಕಾವಿನದೂ ಅಲ್ಲ ತೇವದ್ದೂ ಅಲ್ಲ.....
ಲಲ್ಲೆ ಮುಖಕ್ಕೆ ಮುಖವೊತ್ತಿ ಎಂಜಲು ಸಿಹಿಯಾಗುವಲ್ಲಿ
ಕ್ಷತಾಂತ ಸಕ್ಕರೆ ಮೂಡಿ ಸ್ಮೃತಿಜೇನ ಪದರುಗಳಲ್ಲಿ
ಮುದ್ರೆ ಬಿಂಕ ಒತ್ತುವಲ್ಲಿ ಕಬ್ಬಿನ ಬಾಗು ಬಳ್ಳಿಯ ಬಿಗು
ಸುತ್ತಿ ಸುತ್ತಿ ಸುಖದ ಸೂತ್ರ–ಅಂಗಾಂಗಕ್ಕೂ ನಗು;
ಕಣ್ಣಿನ ಕನಸಿನ ಮಿಲನದ ಆನಂದದ ಅಧರಕ್ಕೆ ಅಧರದ

ಜಿನುಗು ಬೆರೆಸಿ ಕಟಿ ಬಳಸಿ ನೀಳ ಬಾಹುಗಳಲ್ಲಿ ಬೆಂದ ಹದ
ಗಿಡ–ಬಳ್ಳಿ ಬಳಸುವಾಟವಾಡಿ ಆಟ ಮರೆತು ಅತ್ತಿತ್ತ
ಜರುಗುವ ಸ್ವಾರಸ್ಯ ಮರೆತು ಮೈಮೊರೆತ ನಿತ್ಯಜೀವಂತ;

ಮೊರೆತ ಮೀರಿದ ಆದರ್ಶ
ಆದರ್ಶ ಹತ್ತಿಕ್ಕಿದ ಪ್ರೀತಿಸ್ಪರ್ಶ
ಸ್ಪರ್ಶ ಸೆರೆಯಾದ ಬಂಧನದ ಹರ್ಷ
ಪ್ರಕರ್ಶ ಬಂಧನವಾಗದೆ ಬಾಂದಳ ಸ್ವೇಚ್ಛೆ –

ತೊಯ್ದ ಘಾಟಿನ ಮಣ್ಣು
ಮುಂಗಾರಿನ ಘಾಟಿ ನೀರು
ಕೂಡಿದರೆ ಜೋರು ಕೆಸರಲ್ಲ ಸಂಗೀತ ಮೀಟುಗಣ್ಣು

ತುಡಿತ ಸಹಜ ಉಸಿರು ಒಲವು ಹಸಿರು
ಚಿರಂತನವಾಗದೇ?
ಹೆಣ್ಣು ಗಂಡಿಗಷ್ಟೇ ಸೀಮಿತ ಬೆದೆ?

ಆ ಹಿಂದೆ ಮುಂದೆ ಬೆಣೆಗೊಂಡ ಬೆಸೆ ತಗಾದೆ
ಬೆಳಗಿನಲ್ಲಿ ಬೈಗಿನಲ್ಲಿ ಸೂರ್ಯನಲ್ಲಿ ಚಂದ್ರನಲ್ಲಿ
ತಾರೆಯಲ್ಲಿ ಜಾರೆಯಲ್ಲಿ ಮೊರೆಯುವ ಮೋರೆಯಲ್ಲಿ
ವಿಲಾಸದಷ್ಟೇ ನಡೆದಿದೆ
ಈ ನಿಯತಿ ರತಿ ರಂಜನಕ್ಕೆಲ್ಲಿದೆ ಎದೆ?

* * * *

# ವಾಂಛೆ

ಹೆಜ್ಜೆ ಹೆಜ್ಜೆಗೆ ವಂಚಿಸಿಕೊಂಡು ನಡಿಗೆಗೆ ಧಗೆ
ಅರಿವಾದದ್ದ ಕಂಡದ್ದ ದಾಕ್ಷಿಣ್ಯಕ್ಕೆ ಮುಚ್ಚಿಟ್ಟು ಮೈಮನಸ್ಸಿಗೆ ಬೇಗೆ;
ಸೋಗಿನ ಸನ್ನೆ ಮೇಲೆ ತೆವಳಿದರೆ ಬದುಕು ಓರೆಕೋರೆ–
ಹೋಳಾಗಿ ಹಾಳಾಗಿ ಬಾಳಲಾರೆ ಹೀಗೆ.

ಎತ್ತ ಬೇಕಾದರೂ ಸುತ್ತಿ ಮತ್ತೆ ಮೊರೆತ ಕುಣಿತ ಮುತ್ತುತ್ತ
ಮೂಲ ಬಾಲ ಹೊತ್ತ ಕಪಿತನಕ್ಕೆ ಜೀವಂತ ನೆಗೆತ–ಬೇಡ ನನಗೆ
ಖಾರದ ಹಿಕಮತ್ತು ಗೊತ್ತು–ಹಾಗಾಗಿ ಹಾದರಕ್ಕಿಳಿದಿದೆ ನಾಲಗೆ;

ತಿಳಿಗಾಳಿ ಮುಗಿಲಗಲ ಸುಳಿದರೂ ಬಳಿಬಾರದು
ಗೂಳಿ ಕೊರಳು ಮಾತಾಳಿ ಕರುಳು ಕೊಚ್ಚಿ
ಹೋಗದ ಹೊರತು ಹರವಾಗುವುದಿಲ್ಲ ಹಗುರವಾಗುವುದಿಲ್ಲ...
ನುಗ್ಗಿ ಹೋಗಬೇಕು, ಒಳಿತಿಗೆ–
ಸ್ಥಿರವಾಗುವ ಬೆಳಕಿಗೆ ನೂಪುರವಾಗುವ ಬೇರೆ ಹಾರೈಕೆಗೆ
ನೆರವಾಗುವ ನವಿರಾಗುವ ಅಭಿಜಾತ ಸೆಳೆತ
ಮೊರೆಯುತ್ತೆ ಅಕಾಲ ದಾಖಲೆಗೆ.

ಜೀವನದ ಹಗ್ಗ ಕುತ್ತಿಗೆಗೆ ಬಿಗಿದು
ಕೋಟು ಪ್ಯಾಂಟುಗಳಲ್ಲಿ ಕೈಕಾಲು ಮೈತೂರಿ ನಗೆಯೇರಿ
ಕಂಡವರ ನಡುವೆ
ಕಾಣದ ತೆರೆ ಎಳೆದು ಮಾತು ಸುರುಳೀಕರಿಸಿ
ಮರೆಯಾಗಲಾರೆ;
ತೆರೆದ ಬದುಕು ಬೇಕೆಂಬ ಇಂಗಿತ ಸಂಗೀತ
ಬಿದ್ದು ಹುತ್ತವೆದ್ದಿದೆ ಎತ್ತರ.

* * * *

## ಗುಡ್ಡಕ್ಕೆ ಕಲ್ಲು

ಬಿರುಗಾಳಿ ಎದ್ದು ನೆಲದ ಧೂಳು ಕಣ್ಣಿಗೆ ಬಿದ್ದು ನೋಟ ಕಡಿಯಿತು,
ಚಡಪಡಿಸಿದೆ. ಯಾರು ಯಾರನ್ನೋ ಬೇಡಿ ರೆಪ್ಪೆಗೆ ಉಸಿರೂದಿಸಿಕೊಂಡೆ

ಮೆಲ್ಲಮೆಲ್ಲಗೆ ತೆರೆದೆ–
ಹತ್ತಿರ ದೂರ ಸಾವಕಾಶ ನೋಡಿದೆ–ಸಿಟಿ ಕಟಿಯೊಳಗೆ
ಜಾರ ಜಾರೆಯರು ಕಂಡರು. ಕುತೂಹಲವುಕ್ಕಿ ದೃಷ್ಟಿ ನೆಟ್ಟೆ
ಹಳೆಯ ರಾಜ ಮಹಾರಾಜರ ಜರಿ ಮುರಿ ಪುಢಾರಿಗಳ ರಾಜಕೀಯ–
ನಾಟಕ ಬೀದಿ ನಲ್ಲಿಯ ಬಳಿ ಹೆಂಗಸರ ಜಗಳ ಹಿಡಿಂಬೆಯರ ಗದ್ದಲ
ಚರಂಡಿ ಬದಿ ಕೂಲಿಗಳ ದುಡಿತ ಮಹಡಿಗಳ ಮುಂದೆ ಪಟಾಕಿ ಸಿಡಿತ
ಗಲ್ಲಿಗಳಲ್ಲಿ ಕಕ್ಕಸ್ಸಿನ ನಾತ; ಸಿಟಿ ಸೆರಗಿಗೆ ಹೊಲಗಳಲ್ಲಿ
ರೈತರ ಉತ್ಸಾಹ, ಮಳೆ ಬರದ ಕ್ಷಾಮ ಹೊಲವಿರದಿದ್ದವರ
ಲೋಕಾಭಿರಾಮ
ಮಾರ್ಕೆಟ್ಟಿಗೆ ಹೊರಟವರು ಹೈದರು ಸಾಲು ಸಾಲು ಕಂಡಿತು ;

ಕುಕ್ಕಿತು ಕಣ್ಣು –
ಮುಗಿಯದ ಪುರುಷಾರ್ಥಕ್ಕೆ ಈ ಎಲ್ಲ ತಕರಾರು, ಗೋಣು.

ಲೆಕ್ಕ ಹಾಕುತ್ತ ಅಡ್ಡಾಡಿದೆ ಊರು ಕೇರಿ ನಗರ ಗೋಡೆಗಳಲ್ಲಿ
ನಟಿಯರ ಕಟಿ ಪತಿವ್ರತೆಯರ ತುಟಿ ಅಂಗಳದಲ್ಲಿ
ಗಂಡಸರ ಗುಂಡಿಗೆ ಸಂತೆಗಳಲ್ಲಿ ಖೋಜಾಗಳು ಹೋಟೆಲಲ್ಲಿ
ಖೋಟಾಗಳು ಗುಜುರಿ ವ್ಯಾಪಾರಿಗಳು ಕೋಳಿ ಕಾಳಗ ಹುಲಿ–
ವೇಷ ಹುಡುಗಿಯರ ನಡಿಗೆ ಗುಸ ಗುಸ –ಕಿಲಾಡಿತನ ಕಾಡಿತು;
ಕುತೂಹಲ ನಿಲ್ಲಲಿಲ್ಲ.

ಮುಂದೆ ಸಾಗಿದಷ್ಟೂ ಪ್ರಕೃತಿ ರತಿ ಸಮಾಜವಾದದ ನಾದ ಸಾಮ್ಯವಾದದ
ಬೇಧ ಕ್ರಾಂತಿಕಾರರ ಪಿತೂರಿ ಬಂಧ

ಮನಸ್ಸು ಕನಸ ಕೆಡಿಸಿತು.
ಮೀನ ಮೇಷ ಎಣಿಕೆ ನ್ಯಾಸಕ್ಕೆ ಕೈಕೊಟ್ಟು ನಡೆದೆ ಸರಾಗ
ಲಾಲಸೆ ತೆರೆ ಚರ್ಮ ಕೊರೆದು ಮರ್ಮಘಾತ ಮಂದಿ ನಕ್ಕರು
ಭ್ರಮೆಗೆ ಭ್ರಮೆಯೇ ಡಿಕ್ಕಿ ಹೊಡೆದು ಸ್ಫೋಟವಾಯ್ತು ಕೋಪ;

ಬೆಂಕಿ ಭಾವದ ಕಣಕ್ಕಿಳಿದು ನೋವು ತೇಲಿತು
ಋತು ಸಂಕರದ ಹೊರಳಲ್ಲಿ ಕಾಲು ತರಚಿತು
ಕಿರಿಯ ಕೊರಳ ಆಳದಲ್ಲಿ ಕೀರಲೂ ಚೀರಿತು.

ನಾಲ್ಕು ಕಡೆಯ ಜನ ನಕ್ಕರು
ಇರುವ ಒಂದೊಂದೇ ತಲೆಗೆ ನಾಲಗೆ ನೂರು ತೆಗೆದರು
ಕಂದರ ಕಂಡಿತು ಕ್ರಿಯೆಯ ಸೆಲೆಯೇ ಇಂಗಿತು–ಮಾತು
ಮೌನ ನುಂಗಿತು;

ಕಣ್ಣ ಕಿರಣ ಸೆಳೆತ ಆಯತಪ್ಪಿ ಮತ್ತೆ ಹೊಲಬು–
ಅಂಧಕಾರ.... ನಿಂತಲ್ಲೇ ನಿಂತು ಕೂಗಿಕೊಂಡೆ
ಕೈನೀಡಿ– ಬೇಡಿಕೊಂಡೆ, ಮುಂದೆ
ಬಂದು ಕೇಳುವವರಾರು?

ಎಲ್ಲರಿಗೂ ತಮ್ಮ ತಮ್ಮ ತಗಾದೆ
ಗುಡ್ಡಕ್ಕೆ ಕಲ್ಲು ಹೊರುವುದೇ?

ಸಮುದ್ರಕ್ಕೆ ನೀರು ಹೊರುವುದೂ ಒಂದೇ
ಊರದವನ ಕಾದು ಕೀರ್ತಿ ಕಿರೀಟ ಪಡೆವುದೂ ಒಂದೇ!

ಗಾಳಿಗುದ್ದಿ ಕೈ ನೋಯಿಸಿಕೊಳ್ಳುವುದು ಒಂದೇ
ಸಾರ್ವಜನಿಕ ಸೇವೆ ಮಾಡುವೆನೆನುವುದೂ ಒಂದೇ

ಆಕಾಶ ಅಳೆದಂತೆ ಮೇದಿನಿಯ ಮತ್ತೆ ಮತ್ತೆ
ತಿರುಗಿದಂತೆ ಮೌನ ಮಾತಾಗಿಸುವ ಕಥೆ!

* * * *

## ತೊಡಕು

ಆಗೀಗ ನಾಲ್ಕಾರು ಪದಗಳ ಗುಡ್ಡೆ ಕೆದರುವಾಸೆ –
ಹತ್ತಿಕೊಳ್ಳುತ್ತೆ ಅಂತರಂಗ ಸುತ್ತಿಕೊಳ್ಳುತ್ತೆ; ಭಾವ ಬುದ್ದಿ ಪಡೆ
ಒಡೆದು ಪುಡಿಯಾಗುತ್ತೆ ನೀರಾಗುತ್ತೆ ಕದರಿಕೊಳ್ಳುತ್ತೆ. ಆಂತರ್ಯದೊಳಗೆ
ಆತಂಕ ಬೆಂಕ, ನೆಲದ ಮೇಲೆ ಮನುಷ್ಯನಾಗಿ ಹುಟ್ಟಿದಕ್ಕೆ
ನಾಲಗೆ ಹುಟ್ಟುವಾಗಲೇ ಇದ್ದದ್ದಕ್ಕೆ – ಮೂಗನಾಗದ್ದಕ್ಕೆ
ತೀಟೆಯಾಗುತ್ತೆ.. ತೆರೆದರೆ ಸುಂಕ, ತೆರೆಯದಿದ್ದರೆ ಬಿಂಕ.

ಹೊರಗೆ ಹೊರಟರೆ ಹೊರಗಿನ ಶಾಖ
ಒಳಗೇ ಕೂತರೆ ಕೂರದ ಕಾಟ ಕಕ್ಕಾವಿಕ್ಕಿ ಮನಸ್ಸಿಗೆ
ತುರಿಕೆ ಜಾಯಮಾನ; ಬಿಗುಮಾನಬಿಟ್ಟು ಯಾರಾದರೂ ಕೊರೆತಕ್ಕೆ
ಸಿಕ್ಕಾರೆಂಬ ಆಸೆಗೆ ಬೇಟೆ–ಬಲಿಯಾಗದು ಹಕ್ಕಿ
ಬಲಿಯಾದದ್ದು ನಾನು–ನನ್ನ ಮುದುರಿ ಕೂರದ ನಾಲಗೆ.

ಬೀಸುವ ಗಾಳಿಯೂ ಕತೆ ಚಿಮುಕಿಸಿ ಪಕ್ಕೆಯೊಳಗೆ ನೋವು–
ಕಾವು ಕವನಿಸುತ್ತೆ ರೋಗ ರಾಗಗಳ ಕರುಳಿಸುತ್ತೆ ಉದ್ವೇಗ ಸರಾಗ ಸ್ವರಗಳ
ಫಲವಾಗದ ಭೀತಿ; ಸ್ವೈರವೊಂದೆ ಸಿಕ್ಕ ಸೀಳು ನನ್ನ ಗುರಿಗೆ.
ಕೆದರುವ ಪ್ರತಿ ಪದಕ್ಕೂ ಒಂದೊಂದರ್ಥ

ಕದಡುವ ಭಾವಗಳಿಗೊಂದೂ ಸೊಂಪು ಸೂತ್ರ
ಇರುವ ತೊಂದರೆಗಾಗಿ ಮಾತು ಕತೆಯಾಗುವ ಭಯ
ಘಳಿಗೆ ಘಳಿಗೆಗೆ ಬೆಳೆದು ಬೆಟ್ಟವಾಗಿದೆ.

ಅನ್ನಿಸಿದ್ದನ್ನ ಅನ್ನಿಸದ ಹಾಗೆ ಹೇಳಲಾಗದ ಅಪಾಯ
ಕೊರಳ ತುರಿಸುತ್ತೆ; ನಾನು ನಿರುಪಾಯ,
ನನ್ನ ನಿಧಾನ–ಸಹಗಮನ ದಾಂಧಲೆ ತರಲೆ ತಲೆಯೊಳಗೆ
ತೋರಿಕೆಗೆ ಸಾಚಾ ಸೀದಾ ಎಲ್ಲಾ ಹೊರ ಹೊರಗೇ.

ನಾನು ಗೀತವಾಗಬೇಕು ಮತಿವಂತ ಮಾತು ಗಾಳಿಯೊಳಗೆ;
ಗಾಳಿಮಾತಿನ ಗೋಳಿಗೆ ಆಚೆ ಪರದೆಯಿಲ್ಲ ಬಜಾರಿಗೆ
ಬೀದಿಗೆ ಬಚ್ಚಲಿಗೆ ಕೆಚ್ಚಲಿಗೆ ಉರಿಯುವ ಕೆಂಡಕ್ಕೆ
ಅರಳುವ ಮಲ್ಲಿಗೆ ಹುಟ್ಟುವ ಮಗು ಹರಿಯುವ ತೊರೆಗೆ

ನರ್ತಿಸುವ ಮೋಡಕ್ಕೆ ಕಟ್ಟುವ ದನಕ್ಕೆ ಅಡ್ಡಾಡುವ ಜನಕ್ಕೆ
ಯಾರು ಯಾರಿಗೆ ಹೊರೆ?

ಬೆಳಕಿನೊಳಗೆ ಮಾಯವಾಗದ ಧ್ವನಿ ಕತ್ತಲೆಗೆ ಹೆದರದೆ
ಸಂಚಾರ ಸೀಮೆಗೆ ಬಿಡುವಿರದ ಕಾರುಭಾರ–
ವಚನ ಪಚನದ್ದೇ ;

ಅಡೆತಡೆಗೆ ಸೋಡಿಯಾಗುವ ಭಾವ ಹೆಗಲಿಗೆ ಗಂಟು–
ಬಿದ್ದು ಆ ಈ ಗುಂಗಿಗೆ ಮುಗಿಯದ ಪಾಂಗಿಗೆ
ನಂಟು ಮುಗಿವಿರದ ರಂಗಿಗೆ
ಅನಂಗ ಗ್ರಹಿಕೆ ಕುಂಟು... ಕಾಡಿದ್ದೇ, ಕಾಡಿದ್ದೂ ಕಾಡಿದ್ದೇ.

ಈ ಎಲ್ಲ ಪಡಪೋಸಿ ಲೆಕ್ಕ ಚುಕ್ತವಾಗುವುದಿಲ್ಲ
ನಾನು ಸಶೇಷವಾಗಬೇಕಿಲ್ಲ
ಈ ಹುಸಿ ಗೊಡವೆ ಅಭಿನಯ ಕೂಡಿಕೆ ಮಡುವಿನಲ್ಲಿ
ಬಿದ್ದು ಹತ್ಯೆ ಕಾಣುವುದೇ ಬೇಕಾಗಿಲ್ಲ–
ಕ್ಷಯದೊಳಗೆ ಅಕ್ಷಯವಾಗುವುದೇ ದೊಡ್ಡದುಗುಡ.

ಪರಿಚಿತರೊಡನೆ ಅಪರಿಚಿತನಾಗಿ
ಸಂತೆಯಲ್ಲಿ ಸನ್ಯಾಸಿಯಾಗಿ
ಬಿರುಮಳೆಯಲ್ಲಿ ಮನೋಶಿಲೆಯಾಗಿ
ಕರಿಮಲೆಯಲ್ಲಿ ಜನಹೊಂದಿಗನಾಗಿ
ಹಿರಿಯರ ನಡುವೆ ಕಿರಿಯನಾಗಿ
ಕಿರಿಯರ ಮಧ್ಯೆ ಮುಗ್ಧನಾಗಿ
ಅಬ್ಬರದ ಯುಗದಲ್ಲಿ ಶಾಂತ ಸಂಗೀತವಾಗಿ
ಬೆತ್ತಲೆ ಜನರ ಹುಚ್ಚು ಪರಿಷೆಯಲಿ
ಬಟ್ಟೆಯುಟ್ಟ ಸಂಭಾವಿತನಾಗಿ ಬದುಕುವುದೇ ತೊಡಕು !

* * * *

# ಯೌವ್ವನ

ಪ್ರಾಯದ ಹುಚ್ಚು ಕಚ್ಚಿ ಓಡತೊಡಗಿತು ಕಾಲು ಬಗೆ ಬಗೆ
ದಿಕ್ಕಿಗೆ; ಕಾರ್ಯದ ನಚ್ಚು ಅಚ್ಚೊತ್ತುವ ಬದಲು
ಶೌರ್ಯದ ಕೆಚ್ಚು ಕ್ರೌರ್ಯದ ಸ್ವಿಚ್ಚು ಹಚ್ಚುವ ಮೊದಲು
ಅತೃಪ್ತ ಬಯಕೆ ಬೆಂಕಿ ಹಸಿ ಭಾವಗೀತೆಯಾಯ್ತು

ಕಾಂಕ್ಷೆ ಲಯ ವಿಷಯ ಮುನ್ನುಗ್ಗುವ ಪದಗತಿಗೆ
ಮಧುರ ಯಾತನೆ
ವಿಫಲ ಯೋಜನೆ–ಕಾಮಿ ಕನಸಿಗೆ ಅತಿಕ್ರಮಣ
ಹುಮ್ಮಸ್ಸಿಗೆ ಅಂಕಿ ಅಂಶದ ಸಾಣೆ; ಒಳ ಶಿಥಿಲ ಸ್ವಭಾವ ಮುಚ್ಚಿ
ಒಡಕೂ ತೋರಗೊಡದೆ ನಕಲಿ ಬಂಧ ನುಡಿಗೆ, ನಡೆಗೆ.

ಸುಡು ಬೇಸಗೆಗೆ ವಸಂತ ಹುಡುಕ ಹೊರಡುವ ತವಕ
ಹಟ ಆತುರಪಟ್ಟು ಉದ್ವಿಗ್ನ ನಿರ್ವಾಹಕ
ಪೆಟ್ಟು ತಗಲಿ ಅವರಿವರಿಂದ ಬೈಗುಳಗಳ ಸಿಡಿತ ಕಂಡರೂ
ಹೀರುವ ಹಾರುವ ಹೋರುವ ಒದರಾಡುವ ಅಂಕ
ಹದ್ದುಮೀರಿ ಅನ್ನಿಸಿಕೆ ಭ್ರಾಮಕ ಜಗತ್ತು ರೆಪ್ಪೆ ಕೆಳಗೆ–

ತುಂಡು ಮನಸ್ಸು ಸಾರಿ ಸಾರಿ ಕೂಗಿ ಹೊಸೆಯುತ್ತೆ
ತೊಂಡು ಯೋಚನೆಗಳ ಕೊರಳ ಹುರಿಮಾಡಿ;

ಹದಗೆಟ್ಟ ಗತಿಗೆ ನೂರು ಲಯ–
ಬಂತು ಪಟ್ಟಕ್ಕೆ –ಈಗ ಹರೆಯ.

* * * *

## ಅಸಂಗತ ಸಾಂಗತ್ಯ

ಕುಡಿದೆ–ಒಬ್ಬರ ಸಹವಾಸದಿಂದ
ಪುಸ್ತಕ ಮುಚ್ಚಿದೆ–ಇಬ್ಬರ ಮಾನಿನಿಯರಿಂದ
ಪ್ರೇಮಿಗಳು ನಾವು ದೂರ ಮಲಗಿದೆವು–ಮೂರನೆಯವರು ಮಧ್ಯೆ
ಬಂದದ್ದರಿಂದ; ಹೀಗೆ ರುಚಿ ಚಪಲ ಖಾನವಳಿಗಳ ವಿಂಧ್ಯೆ ದಾಟುತ್ತ
ವಾಸ್ತವಿಕ ಫಿಲಾಸಫಿ ಕಂಡ ಕಂಡ ಸ್ಯಾಂಪಲ್ಲುಗಳ ಮೆಲ್ಲುತ್ತ ನಿದ್ದೆ

ಪ್ರೀತಿ ಮತ್ತು ವಾಣಿಜ್ಯದ ನಡುವೆ ನಡೆದಾಡಿ ಎಲ್ಲ ಗಿಣಿಹಾಡು
ಸಂಕಲ್ಪ ಕೊರತೆ ಸಾಧನೆ ಕೊರತೆ ಒಳಗಿರುವ ಒತ್ತು ರಂಜನೆ ಹಿಂಡು
ಕಡಿಯುವುದಿಲ್ಲ ಲಾಲಿತ್ಯವನ್ನು ಮಿಡಿಯುವುದಿಲ್ಲ
ಅತ್ತಿತ್ತ ಹೊಳೆಯುವ ಹೊರಳುವ ಕೈ ಗಮನಿಸುತ್ತೆ
ಆಟ ಊಟ ನೋಟ ಕೂಟ
ಗಾಳಿ ಬೀಸುವ ಕಾಲಹಗಲಲ್ಲೂ ಕತ್ತಲೆ ತೊಂದರೆ
ನಿದ್ದೆಯಿಲ್ಲದ ನಾನು ಜೀವಂತ ರೋಗಿ–ನನ್ನ

ಪೆದ್ದತನ ಅಸಹಾಯಕತೆ ಅಳುಬುರುಕುತನ ಚಿಲ್ಲರೆ ಬುದ್ಧಿ ಅಪರಾಧ ವ್ಯಾಧಿ ಕನಿಷ್ಠತನ ಎಲ್ಲ ಬೆತ್ತಲೆ. ಒಂದಕ್ಕೂ ಕೊನೆತನಕ ಉಳಿಗಾಲವಿಲ್ಲ. ಬಲಿಷ್ಠತನ ಜಾಣತನ ಅವಷ್ಟೇ ಸರ್ವಸ್ವವಾಗುವುದಿಲ್ಲ. ಧೈರ್ಯ ದುಮ್ಮಿಕ್ಕಿದಾಕ್ಷಣಕ್ಕೆ ಮೆರೆಯದು ಮೈಗಳ್ಳತನ; ಉತ್ತರಿಸಿದ ಅನುಮಾನ ಕಿವುಡು ಕರೆಯುವುದು ಮೊರೆಯುವುದು ಊಳಿಡುವುದು ಕೋಡುಮೂಡಿಸಿ ಬಾಲ ಅಲ್ಲಾಡಿಸಿ ನಿಗುರುವುದು ಹುಂಬತನ;

ಸೋಲು ಕಲಕುತ್ತೆ ಪತಾಕೆಗಳನ್ನ; ಅಳಗಳನ್ನು ಕೂಡುವ ಅಗಲಗಳನ್ನು ನೋಡುವ ಮುನ್ನ ಸಕಲ ಹೋರಾಟ ಸಮ್ಮಾನ ದುಮ್ಮಾನ ಶಾಂತ ಸಬಲ ಹೊರೆ ಭಾರ ಉದರ ರುಗ್ಣತೆಯನ್ನು ಹೊಡೆದಾಡಿ ಒಳಿತು ದಕ್ಕದೆ ಒಳಗೊಳಗೆ ಮನಸ್ಸು ಬಡಿದಾಡಿ ಮುಗಿವಿರದ ಗೋಣು–ಕೊನೆಗೆ ಶರಣು; ಎಷ್ಟೆಂದರೆ–ನಂಬದಷ್ಟು – ನನ್ನ ಕಾಯಿಲೆತನ;

ಶಬ್ದವಿಲ್ಲದೆ ನದಿ ಹರಿಯುವುದಿಲ್ಲ. ಗುಹೆಯಲ್ಲಿ ಬೆಳಕಿರುವುದಿಲ್ಲ. ನನ್ನಲ್ಲಿ ಅಳಲಿಲ್ಲದಿಲ್ಲ ಶಕ್ತಿಯಿಲ್ಲದಿಲ್ಲ–ಪ್ರತಿಮೆಯಾಗಿದೆ ಜಗತ್ತು ಕೇವಲ, ಕೇವಲ

ನಾನು ಮಲಗಿ ಕಾಯುತ್ತೇನೆ ಬೆಳಗಿಗಾಗಿ ಹಕ್ಕಿಗಳಿಗಾಗಿ
ಮೊದಲ ಹೆಜ್ಜೆಗಳು ಬೀದಿ ಗುಡಿಸುವ ಮೊದಲೇ ಮೂಡುತ್ತವೆ.
ಹಾದಿಯ ಮೇಲೆ; ಕುತ್ತಿಗೆಗಳಲ್ಲಿ ಸ್ಕಾರ್ಫ ಕಟ್ಟಿದ ಹುಡುಗಿಯರೂ
ಗದ್ದಲ ಮಾಡುತ್ತ ನಡೆಯುತ್ತಾನೆ.

ಬಾಟಲಿ ಪುಸ್ತಕ ಹೆಂಡತಿ–ಎಲ್ಲ ಹಾದು ಹೋಗುತ್ತಾರೆ
ಏನೂ ವ್ಯತ್ಯಾಸವಾಗುತ್ತಿಲ್ಲ, ಯಾವುದೂ ಹೊಸದಾಗಿ ಕಾಣುತ್ತಿಲ್ಲ.
ಅರೆ, ಹೇಗೆ–ಹೀಗಾದರೆ?

ಕುಡುಕರ ನಡುವೆ ಸಿಡುಕದೆ
ಆಲ್ಕೊಹಾಲಿನವರ ನಡುವೆ ಹಾಲು ಕುಡಿದೇ
ಲಂಪಟಿಗರ ನಡುವೆ ಶ್ರೀರಾಮಚಂದ್ರನಾಗಿ ನಡೆದೆ!

ಮಾರುಕಟ್ಟೆ ಮಧ್ಯೆ ಸ್ಮಶಾನ ಕಂಡಿತ್ತು
ಶಾಲೆ ಕಸಾಯಿಖಾನೆಯಾಗಿತ್ತು
ಆಫೀಸು ವಸೂಲಿ ವಠಾರವಾಗಿತ್ತು
ಮಠ ರಾಗರಂಗಿನ ತಾಣವಾಗಿತ್ತು
ಧರ್ಮಪೀಠ ರಾಜಕಾರಣದ ಅಖಾಡವಾಗಿತ್ತು
ಕಲಾ ಜಗತ್ತು ಅಡ್ಡನಾಡಿ ಅಡ್ಡೆಯಾಗಿತ್ತು
ಝಣ ಝಣ ಹಣ ಲೇಖನಿ ನುಂಗಿತ್ತು
ಪ್ರಗತಿ ಚರಿತ್ರೆಯು ಧವಳ ಕೀರ್ತಿ ತಿಂದು ತೇಗಿತ್ತು

ಮತ್ತೆ ಅದೇ ಸೂರ್ಯ ಅದೇ ಚಂದ್ರ ಅದೇ ಗಾಳಿ
ಅದೇ ನೀರು ಆದರೆ ಗಾಳಿಯಲ್ಲಿ ವಿಷಾನಿಲ ದಂಡಿ ದಂಡಿ!
ನೀರಿನಲ್ಲಿ ಕೊಚ್ಚೆ ಕಲಗಚ್ಚಿನ ರಾಡಿ.... ರಾಡಿ... ರಾಡಿ!

* * * *

## ನನ್ನ ಯುಗದ ಮೀಸೆಗಳಿಗೆ

ಮುತ್ತುವ ಚಿಂತೆಗೆ ಮಾತಿನ ನಡುವೆ ಮೌನದ ನೆಲದ ಧೂಳು ಕಣ್ಣಿಗೆ
ವಿಷಯ ವಿವರ ವ್ಯವಹಾರ ಉಭಯ ಕುಶಲೋಪರಿಯೊಂದಿಗೆ
ರಾಜಕೀಯ ಬೈಗಳುಗಳ ಪೋಲಿ ಖಯಾಲಿಗಳು ನಾವು–ಕುತೂಹಲಿಗಳು;
ಬೀಳುತ್ತೇವೆ ಮನಸ್ಸಿನಲ್ಲೇ ಸುತ್ತಲ ಪ್ರಕೃತಿ ಬೆದೆಗೆ ಸಮಾಜದ ಪಾದಕ್ಕೆ
ಪದಕ್ಕೆ ಶಾಕಿಗೆ... ವಿಷಾದ ಷೋಕಿಗಳಲ್ಲಿ ಕಟ್ಟುತ್ತವೆ ಕನಸುಗಳು
ಕನಸಲ್ಲೂ ಅಸಂಗತಗಳೇ ಆತ್ಮೀಯ.

ಹತ್ತಿರದ ಬೊಗಳೆಗಳು ಅಸಹ್ಯವಲ್ಲದೆ ಬೇರೇನಿಲ್ಲ ಕೇವಲ ಲಾಲಸೆ ತೆರೆಗಳು
ಕೋಮಲ ಕುಳಿಗಳು ಹರಡಿ ಒಂದೊಂದೂ ಚರ್ಮ ತೆರೆಯುವ
ಕಿಲಾಡಿಗಳು
ಪಾಳೆಯಗಾರ ಮರ್ಮಗಳು–ಅಕ್ಕಪಕ್ಕ ನಡೆದಾಡಿದೆ ಬೆರಗಾದೆ ದಿನೇ ದಿನೆ
ಗಟ್ಟಿಯಾದೆ ಋತು ಸಂಕರದ ಹೊರಳಲ್ಲಿ ಬೆಂದೆ;

ನಮ್ಮ ತಲೆಗೆ ನುಡಿ ಕಿಡಿಗಳು ಸಾವಿರಾರು–
ತರಲೆಯಲ್ಲೂ ಕ್ಷಿತಿಜದ ಗೆರೆ ಹಾರಿ ಹೋಗುವ ವಿಪ್ಲವದ ಹದಮೀರಿದ
ನಾದ
ಮಿಡಿಯುತ್ತೆ. ನಿಸರ್ಗ ಋಷಿಯೆದುರು ಕೃತಕ ಹಾದರ ನಡೆಸಿ
ತೊಡೆ ತಟ್ಟಿಕೊಳ್ಳುವ ನಾವು ಪರಾಕ್ರಮಿಗಳು. ಇದು ಕ್ಲೀಷೆ.
ಕ್ರೌರ್ಯದ ಹಿಂದಿನ ಗಾಳಿ ತಲೆಕೊಡುವುದಿಲ್ಲ–ಕೋಳಿ ಜಗಳಗಳು ನಮ್ಮವು.
ವಿಷಗಾಳಿ ಕೊರಳು ನಮಗೆ ತೆವಲು;

ವಾರಿಗೆಯವರ ಮಾತಿನ ಧಗೆ ಡೈನಮೈಟ್ ಸ್ಫೋಟ, ರಸನೆ ಹೊಗೆ
ಹೊರಗೆ ಚಾಚಿದರೆ ನಾವು ಕಾಂಟ್ರವರ್ಸಿ ಪ್ರೇತಗಳು
ಚಕ್ಕಲಗುಲ್ಲಿಯಲ್ಲಿ ಸಿದ್ಧಹಸ್ತರು–ಎಲ್ಲರೂ ನಾಗರಿಕರು.

ಸುತ್ತಲ ತರಗೆಲೆಯನ್ನ ಬೆಂಕಿ ಸುಡಬಲ್ಲದು
ಬೇರೆ ದಾರಿ ಎಲ್ಲಿಹುದು?
ಬೇರಿಳಿದ ಆಲಗಳ ಮರಿಯಿಡುವ ಬಿಳಲುಗಳ ಕಿತ್ತು ಬೂದಿಮಾಡುವ
ನಮ್ಮ ಷರತ್ತು–ಇನ್ನು, ಬೇಜವಾಬ್ದಾರಿ ಮಾತು.

* * * *

## ಆಕಸ್ಮಿಕ

ಹೇಳದೆ ಕೇಳದೆ ಮಳೆ ಬಂತು ಓಡಿದೆ ಮರಗಿಡಗಳಡಿಗೆ
ನಿಲ್ಲದೆ ಜೋರಾದ ಬಿರುಮಳೆ ಹೊಡೆಯಿತು ನೆಲ ನಡುಗುವ ಹಾಗೆ;

ಜೋರಿನ ಹನಿ ಬಿದ್ದಹಾಗೆ ಮೊರೆಯುವ ಭೂತದನಿಗಳು ಮರ
ಮರದೊಳಗೆ ಪಕ್ಕ ಯಾರಿಲ್ಲ–ನಡುಗುವ ನಾನು, ಬೀಳುವ ಮಳೆ
ನಿಂತ ಮರಗಳು–ಭೀತನಾಗಿ ಓಡಿದೆ.

ಕತ್ತಲೆ ಆಸರೆಯೊಳಗೆ ಬೆಂಕಿ ಕಂಡಿತು ನುಗ್ಗಿದೆ
ಭಯದ ಕಣ್ಣಿನೊಳಗಿನ ರಕ್ತ ಕನಸಿನ ಬಣ್ಣ ಅರಳಿಕೊಂಡಿತು
ನಾಲಗೆ ಮಾತಿಗೆ ಹಾತೊರೆದ ಹಾಗೆ
ನಯದ ಮಾತಿನ ಜೋಕೆ ಗೆಜ್ಜೆ ಕೈಯೊಳು ಹಿಡಿದು
ಬೆಂಕಿ ಹಿಡಿದವರ ವಿಶ್ವಾಸಕ್ಕಿಳಿದೆ.

ಹೆಜ್ಜೆ ಹೆಜ್ಜೆಗೆ ಒಳಗಿನ ಅಳ್ಳೆದೆ ಲಜ್ಜೆ ಅಳ್ಳಾಡಿ ದನಿ ಮೂಡಿದ ಹಾಗೆ
ಹರಿಯಿತು ಇಂಗಿತ ನಾಲಗೆ ತಳದೊಳಗೆ
ಸಿಡಿಯಿತು ಚಿನುಕುರುಳಿ ನಗೆ–ಸಂಭಾಷಣೆ ಸ್ಪ್ರಿಂಗಿಗೆ.

ಗ್ಯಾರಂಟಿ ನುಡಿ ಪರಸ್ಪರ ಮಿಡಿದ ಹಾಗೆ
ಸ್ನೇಹ ರಹದಾರಿ ತೆರೆದುಕೊಂಡಿತು
ನಡುಗುತ್ತಾ ನಿಂತ ನಾವು ಮಾತಾಡಿದೆವು ಮತ್ತೆ ಮತ್ತೆ
ಮಳೆ ನಿಲ್ಲುವುದರೊಳಗೆ ಪರಿಚಯಗಳು ಸಂಬಂಧವಾದವು;

ಅಗಲುವಾಗ ಒಂದು ಥರ ಎದೆ ಭಾರ
ಮುಂದೆ ಎಂದಾದರೂ ಸಿಕ್ಕೋಣ.... ಹೀಗೆ ಹಾರೈಕೆ ಸ್ವರ
ಚೆಲ್ಲಿತು ಒಮ್ಮೆಗೇ ಕುಲುಕಿದ ಕೈಗಳೊಳಗೊಳಗೇ.

* * * *

## ಸಂತಸ ಕನ್ಯೆಗೊಂದು ಕಣ್ಣ ಕವಣೆ ಬೀರಿದೆ....

ಮನ ತುಂಬ ಭಾವ ಗಂಧ ತಂದ ಸ್ಮೃತಿ ಗುಂಭ ತುಂಬ
ಭವ ಬಂಧ ಬೆಂದ-ಮುಖ ತುಂಬ ನಗೆ ಮೊಗ್ಗು
ದೇಹಕ್ಕೆ ಮಯೂರ ಹಿಗ್ಗು.

ಕಹಿ ತೆರೆ ಸರಿದು ಹಾಡು ಸುರಿದು ಮುಗಿಲ ಹಾರಿ ಗರುಡ
ಅಷ್ಟ ಕೋರೆ ಕಡಿದು ಅನಂದ ದನಿಮಿಡಿದು
ವಿಹಾರ ನಾರಿ ಕೇಳ.

ಬಾಳ ತುಂಬ ವಸಂತ ಮಧು ಬಂದು ಹಳೆನೋವು ಕಳೆದು
ಹರ್ಷದ ಹೊನಲು ಹರಿದು ಸಂತಸ ಕನ್ಯೆ ಹಿಡಿದು
ಜೀವಕ್ಕೆ ಹಸಿರುಡುಗೆ ಕೋಡು.

ಉಲ್ಲಾಸ ಕೇಕೆ ಹಾಕಿ ಹೊಳೆವ ನೀಲಿಗಗನ
ಚಿಂತೆ ಶ್ವೇತ ಕಂತೆ-ಲೀನವಾದಂತೆ ಕಲಕಿದ ಜಲ
ಪ್ರಶಾಂತ ಮೌನ.

ಗರುಡ ಕಣ್ಣಿಗೆ ಕಾಣದ ಸ್ಥಳವಿಲ್ಲ
ಏರದ ಜಾಗವಿಲ್ಲ
ಶ್ವಾಸ ಜಿಂಕೆ ನಿಲ್ಲುವುದಿಲ್ಲ ವಿಶ್ವಾಸ ಶಂಕೆ ಒದ್ದು ಏನೆಲ್ಲ ರೆಕ್ಕೆ?

ಹಕ್ಕಿ ಬೆಳೆದ ಹಾಗೆ ಹಾಡುತ್ತೆ ಮುಗಿಲಗಲ-ಅವಕಾಶ
ಕಡಿಯುತ್ತೆ ತೃಪ್ತಿ ನಿಲ್ಲದೆ ಎದೆ ಕುದಿಯುತ್ತೆ
ಅಲ್ಲಿ ಪ್ರತಿಮೆಗಳಿಲ್ಲ;

ಎಲ್ಲಿ ಶಬ್ದಗಳಿಲ್ಲ ಅಲ್ಲಿ ಪ್ರಪಂಚವಿಲ್ಲದಿಲ್ಲ ಎಲ್ಲಿ ನಗ್ನನೃತ್ಯ
ಪ್ರಕೃತಿಯಾಗುತ್ತೆ ಅಲ್ಲಿ ಸಂಕೋಚವಿಲ್ಲ
ನರ್ತನದ ಮುಂಗುರುಳು ಬಾಧೆಯಾಗುವುದಿಲ್ಲ. ನೆರಳು ನದಿಯಾಗುತ್ತೆ.

* * * *

## ಸಂಚಾರಿ

ಸಪೂರ ಕೈಬೆರಳುಗಳ ಹಳದಿ ಗುಲಾಬಿ ಬಣ್ಣ
ನನ್ನ ಗಾಜು ಕಣ್ಣನ್ನಾಕರ್ಷಿಸಿ ನಿಂತೆ ನೋಡುತ್ತ,
ಸಿಪ್ಪೆ ಸುಲಿದ ಸೂರ್ಯನಿಗೆ ಎದುರಾದ ಅರಿಸಿನ ಬಣ್ಣ
ತುಂಬಿದೆ ಕೈ ಒಡ್ಡಿದೆ; ಮರಗಿಡದ ಪೊದೆ ಹೊದರು
ಬಯಲಿನ ಗಾಳಿ ಸುಳಿದು ಸೌಮ್ಯ ತುಟಿಯ ಮೇಲೆ ಧೂಳು.

ಮಾವಿನ ಮರದೆಲೆಗಳು ಜರಡಿ ಹಿಡಿದು ಬಿಟ್ಟ ನೆರಳು
ಬೆಳಕಿನ ಕಿಂಡಿ ಕತ್ತಲೆ ಬಿಸಿಲ ಬಲೆ ನೆಲಕ್ಕೆ
ನೆಲದ ಮೇಲಿನ ಬಣ್ಣ ಜಾಲರಿ ತೆರೆ ಸುಳಿದಾಟಕ್ಕೆ....
ಅಡ್ಡಾಡುತ್ತೆ ಮನಸ್ಸು ಈ ಅಂಚಿನಿಂದ ಅ ಅಂಚಿಗೆ,
ಮೆಲುಗಾಳಿಯಲ್ಲಿ ತೇಲಿ ಬರುವ ಸ್ವಪ್ನ ಲೀಲೆಗೆ ಕಾರ್ಗತ್ತಲ
ಕೊರೆದು ಮಿಂಚುವ ನೀಳ ಜಡಿಮಳೆ ನಾಲಗೆ ಧಾರೆಯಾದ ಹಾಗೆ

ನೆರಳು ಬೆಳಕಿನ ಲೀಲೆಯೊಳಗೆ ನಿತಂಬ ಬಿಂಬ ಒತ್ತಾಗಿ
ಸಾಗಿದ ಹಾಗೆ–ತಡೆಹಿಡಿದ ಬಯಕೆ ಜಾರಿ ಹೊಳಪಿನ ಪ್ರತಿಫಲನ....
ಸ್ಮೃತಿಗೆ ಖುಷಿ... ಮೈಗೆ ಬಿಸಿ.. ಕಣ್ಣ ಕೀಲಿಸಿ
ಬೇಬಿ ನೋಟಕ್ಕೆ ಬೇರಿಳಿಯುತ್ತೆ ಗಾಜು ಕಣ್ಣಿಗೆ ಹಿಮ
ಸೂರ್ಯ ತವರಿಗೆ ನಡೆದು ನೆನಪು ನೆನೆಯುತ್ತೆ ಅದೂ ಇದೂ
ಮಿದಿಯುತ್ತೆ ವ್ಯಭಿಚಾರಿ ಅಂಬಲಿ ಮುದ್ದೆಯಾಗುವವರೆಗೆ
ಗಟ್ಟಿಯಾದಾಗಷ್ಟೇ ದುಗುಡ ಗಿಡದ ಬುಡದ ನಡುವೆ
ಹಂಬಲದ ಇಣಚಿ ಓಡಾಡಿದ ಹಾಗೆ ಕಡಿಮೆಯಾಗುವ
ಭಾವದುಬ್ಬರ ಮೆಲ್ಲಗೆ ಕರಗುತ್ತೆ..... ಬೇರೆ ಬೇರೆ ಭಾವದಿಕ್ಕಿಗೆ
ತೆರವಾಗುತ್ತೆ ಒಟ್ಟಿಗೆ ನಿತಂಬ ಬಿಂಬದೊಳಗೆ ಮಗುವಿನ ನಗೆ
ನಗೆ ಕೊನೆಗೆ ಕಣ್ಣಿನ ಬುಗ್ಗೆ ಎದ್ದಹಾಗೆ–ಕನಸು ಕಾಮನಬಿಲ್ಲು.
ಕಣ್ಣು ತೆರೆದಷ್ಟೂ ವಾಸ್ತವದ ಸೂಜಿಗಲ್ಲು.

* * * *

## ಕೊಡೆ ಹುಡುಕುವವನಿಗೆ

ಇವನೊಂದು ಕಡ್ಡಿ–ನುಗ್ಗುತ್ತಾನೆ ಬಿಸಿಲ ಕಡೆಗೆ.
ಮಳೆಯ ಕಡೆಗೆ; ಕೈಗಿನ್ನ ತೊಡೆ ಸಣ್ಣ
ಕಂಚಿನ ಶಬ್ದ ನುಡಿಸುತ್ತಾನೆ ನಾಲಗೆಯೊಳಗೆ.

ಒಳಗಿನಾಕಾಂಕ್ಷೆ ಪಡೆಯ ಬಿಡುಗಡೆಗೆ ಕಣ್ಣ ಕನಸಿನ ಸುಣ್ಣ
ಅರಳಿಕೊಳ್ಳುತ್ತೆ ಕೊಡೆಗಳ ನಿರುಕಿನಲ್ಲಿ, ಕಡ್ಡಿಯ ನೆರಳಿನಲ್ಲಿ;
ಸಾಗಿ ಕರಗಿಸುತ್ತಾನೆ ಆಸೆ ಆಮಿಷಗಳ ಹಿಂಡುಗಳ ಸಂದಿಗೊಂದಿಯಲ್ಲಿ

ನೀರಿಲ್ಲದ ಜಾಗಕ್ಕೆ ಬೇವಿಲ್ಲದೆ ಆಳಕ್ಕೆ ಸುಳಿಯುತ್ತಾ ಹೋಗುತ್ತೆ
ಈ ಅಪ್ಪಟ ಗುಣ–ಬಾಯೊಳಗೆ ಟ್ವಿಸ್ಟಿನ ಗುಣು ಗಾನ.

ಹೆಣ್ಣಿನ ಕಣ್ಣಿನ ಬೆನ್ನು ಹತ್ತಿ ಸುತ್ತು ಸುತ್ತಿ ಈ ಮದನ ಸಮ್ಮೋಹನ;

ನಿಲ್ಲುತ್ತಾನೆ ರೂಮಿನಲ್ಲಿ ಬೆತ್ತಲೆ ನಗುತ್ತಾನೆ ಕತ್ತಲಿಲ್ಲದ ಬೆಳಕಿನಲ್ಲೇ
ಸೆಕೆ ಹತ್ತಿ ಸೋತ ಮೈಕೈ ನಯದ ಗಿಟಾರ್ ಹಿಡಿದು ಜೋಕೆ ಮಿಡಿದು
ಆಟದಮಲಿಗಿಳಿಯುತ್ತಾನೆ ತನ್ನಿಷ್ಟಕ್ಕೆ ತಾನೆ ಮಗುವಾಗುತ್ತಾನೆ.

ಚೋದ್ಯವನ್ನೇ ಉತ್ತು ಬಿತ್ತು ಹುಲುಸಾದ ಸ್ವಭಾವ ಸ್ವತ್ತು ಮಗಮಗಿಸುವ
ಪದಗಳು–
ಚಿನುಕುರುಳಿ ಪಟಾಕಿಗಳು–ಲಗುಬಗೆ ಜೋಕುಗಳು.

ಹಳಸನ್ನೇ ರುಬ್ಬತ್ತ ಆ ಈ ಸ್ನೇಹ ತಬ್ಬುತ್ತ ಕಡ್ಡಿದೇಹ ನಡೆಯುತ್ತ ಹೊರಟರೆ
ಎಂಥ ಕೊಡೆಗಳೂ ಮಾತಾಡುತ್ತವೆ ಬೆಚ್ಚಿ ನಿಲ್ಲುತ್ತವೆ– ಆ ನೆರಳಿನಲ್ಲಿ ಇವ
ಬಿಚ್ಚಿ
ಬೀದಿಯುದ್ದಕ್ಕೂ ಮೆರವಣಿಗೆ ಸ್ವಪ್ನ ಮೋಜಿಗೆ ತಿರುಗುತ್ತಾ
ಗಾಳಿಯಾಗುತ್ತಾನೆ
ಗೂಳಿಯಾಗುತ್ತಾನೆ ಸುತ್ತಿಕೊಂಡವರಿಗೆ ಸುರುಳಿಯಾಗುತ್ತಾನೆ
ಸುಳಿಗಿಳಿಯುತ್ತಾನೆ. ಗಲ್ಲದ ಸವಿ ಗುಲ್ಲಿಗೆಲ್ಲಿದೆ ಎಲ್ಲೆ?

ಇವನ ಶಕ್ತಿಗೆ ಕೊಡೆಯಾದರೇನು? ಕಡ್ಡಿಯಾದರೇನು? ಕಾಡಿಗೆ
ಕಿಡಿ ಮುತ್ತುವ ಸರದಿಗೆ ಬೆಂಕಿಯಾಗುತ್ತಾನೆ–ಆ ಧಗೆಗೆ, ಬೇಗೆಗೆ
ಬಾಧೆಗೆ ಬೆಳೆಯುವ ಈ ಬಂದಳಿಕೆಗುಂಟೇ ನಿಲುವು?

## ಕೂಡಿಕೆ

ನಿಜಕ್ಕೂ ಇದ್ದರೆ,
ದೇವರಿಗೇಕೆ ಸದಾ ನಿದ್ದೆ?

ಪ್ರತಿಯೊಬ್ಬ ಹುಟ್ಟುವುದೂ ಹಡೆಯುವವರ ಭಾರ ಹಗುರಾಗಲಿಕ್ಕೆ
ಕಣ್ಣ ಎಸಳಾಗಲಿಕ್ಕೆ ಅಕ್ಕರೆ ತೆಕ್ಕೆ ಹೊಯ್ದುಕೊಳ್ಳಲಿಕ್ಕೆ...

ಗಂಡು ಹೆಣ್ಣು ಶರೀರಗಳು–ಹುಟ್ಟುವುದು, ಸಾಯುವುದು–ಸಹಜ
ನಿಜಕ್ಕೂ ಇರುವುದಾದರೆ ಆತ್ಮಕ್ಕೇಕೆ ಸದ್ದಿಲ್ಲದ ನಿದ್ದೆ?

ರಕ್ತರುಚಿ ಕಣ್ಣ ಕಚ್ಚಿ ತಬ್ಬುತ್ತವೆ ಹೆಣ್ಣು ಗಂಡು
ಮುಖಕ್ಕೆ ಮುಖ ಶಾಖಕ್ಕೆ ತಕ್ಕ ಶಾಖ
ಅಕ್ಕಪಕ್ಕ ಕೂಡಿಕೆಯ ಲೆಕ್ಕ

ಶೇಷ ತಳಿಯಿಂದಿಳಿಯುವ ಗರ್ಭಕಟ್ಟುವ
ಹೊರಬರುವ ಉಸಿರಾಗುವ
ಜೀವ–ಜಗಕ್ಕೆ
ಇದು ನಗ್ನ ಶಕ್ತಿ ರೇಖೆ.

ನಿಜಕ್ಕೂ ಇದ್ದರೆ ದೇವರಿಗೆ ಕಣ್ಣು...

ಹಾದರ ಮೊಳೆಯುತ್ತಿರಲಿಲ್ಲ
ಜೂಜು ಉಳಿಯುತ್ತಿರಲಿಲ್ಲ
ಲಾಟರಿ ತಲೆಯೆತ್ತುತ್ತಿರಲಿಲ್ಲ
ಭಯೋತ್ಪಾದನೆ ನಡೆಯುತ್ತಿರಲಿಲ್ಲ
ಮಾರಣ ಹೋಮದ ನೆತ್ತರನದಿ ಹರಿಯುತ್ತಿರಲಿಲ್ಲ!

* * * *

## ಹಚ್ಚೆ ಚುಚ್ಚಿತು ಪ್ರೀತಿ

ಗಂಟೆ ನಿಮಿಷಗಳ ದಿನ ವಾರಗಳ
ತಿಂಗಳು ವರುಷಗಳ ಎಣಿಸಲಿಲ್ಲ ನಾನು
ಆ ವಸಂತ ಶ್ರೀಮಂತ
ಅಚ್ಚಳಿಯದೆ ಹೊಳೆಯುತ್ತಿದೆ ಅನವರತ.

ಆಗ ಮಿರುಗಿದ ಮೋಡದ ಮರೆಯ ಚುಕ್ಕೆ
ಈಗ ಮರೆಯಾಗಿಲ್ಲ–ನೀಲ ಆಕಾಶಕ್ಕೆ ತೆಕ್ಕೆ ಬಿದ್ದಹಾಗೆ
ನಗೆ ಮಿನುಗು ಬಗೆ ಬಗೆ ಹಣಿಸಿ ಬೆಳಗುತ್ತಿದೆ
ಧಗೆಯಿಲ್ಲ ನನಗೆ, ಸುಖವೇ ಮುದ್ದೆ.

ಮನಸೊಳಗೆ ಕನಸೊಳಗೆ ಇಣುಕುತ್ತೆ
ಕಣ್ಣೊಡೆಯುತ್ತೆ ಹಿಡಿದರೆ ಕೈತುಂಬ ಹೊರಳುತ್ತೆ
ಬಿಟ್ಟರೆ ಬೀದಿ ತುಂಬ ಎಲ್ಲರ ಸೆಳೆಯುತ್ತೆ
ನೆಲದಗಲ ಜಲದಗಲ ಆಕಾಶದಗಲ ಬೆಳಕ ಬೊಂತೆ.

ಮುತ್ತಿಗೆ ಹಾಕಲೇ ಅದನ್ನ? ಮುಟ್ಟಿದರೆ ಮಾಯ
ತುಟಿಗೆ ಗಾಯ ಕಾಣುವವರೆಗೆ ಇಲ್ಲ ಭಯ
ಮೌನ ಧ್ಯಾನದಲ್ಲೂ ಚುಕ್ಕೆಯದೇ ಗ್ಯಾನ, ಸುಮ್ಮನೆ
ಬಿಗುಮಾನ; ಹಿಡಿಯಲಾರೆ ಆ ಕಿಲಕಿಲ ನಗೆಯನ್ನ;

ಹುಣ್ಣಿಮೆ ರಾತ್ರಿಯಲ್ಲಿ ಪ್ರೀತಿ ಗುಂಗು ತೇಲಿ ನನ್ನವಳ ಬಳಿ
ಸುಳಿದೆ; ರಂಗು ರಂಗಿನ ಕೇಳಿ ಹಾಲುಗಲ್ಲದ ಚೆಲುವ ನಲಿವ
ಒಲವಿನಲ್ಲಿ ಬಳಸಿ ಥಳಥಳಿಸುವ ತುಟಿಯಲ್ಲಿ ಮುತ್ತು ಬಿತ್ತಿ
ಕಟಿಗೆ ಸ್ಪರ್ಶ ಗಾಳಿ.

ತೆರೆದ ಮೈಮೊರೆತ ಇಂಗಿತ ಚುಚ್ಚಿ
ಹಚ್ಚೆಯ ಹೊಯ್ದೆ, ಕುಂಕುಮ ಕಚ್ಚಿ–ಬಣ್ಣವಾಯ್ತು;
ಮಣ್ಣಿನ ನಗೆ ಕಣ್ಣಿಗೆ ಆಸರೆಯಾಯ್ತು, ಗೆದ್ದು ಬಿದ್ದೆ ಭಾವನೆಗೆ.

* * * *

# ಕಾಯುವುದು

ಕತ್ತೆಗೂ ಬೇಡ ಕಾಯುವ ಕೆಲಸ
ಆ ದುಗುಡ ಆ ದಂಧೆ ಯಾರಿಗೂ ಬೇಡ;

ಇದ್ದ ಹಲವು ಮನಸ್ಸು ಒಂದು ಮಾಡಿ
ಇರುವೆರಡು ಕಣ್ಣು ನೂರು ಕಡೆ ಹರಡಿ, ಬರುವಿಕೆ ಹಾದಿ
ನೋಡಿ ನೋಡಿ ಭಂಡ ಹಾಡ ಹಾಡುವುದೇ ಬೇಡ;
ಯಾರಿಗೂ ಕಾಯುವುದು ಕಂಡ ದಂಡ.

ಹೇಳಿದ ಆ ಕಾಲಕ್ಕೆ ಮತ್ತೆ ಹೇಳಿದ ಆ ಆ ಜಾಗಕ್ಕೆ
ಬರುವವರು ಬರದಾಗ ಆರೋಗ್ಯ ಕೂಡ ಜಡ,

ಹಿಂದೆ ಬಿಸಿ, ನೋಟ ಕಹಿ, ಸ್ವಸ್ಥ ಸ್ಥಿತಿ–ಏರುಪೇರು ಪಜೀತಿ
ಕೊನೆಗೂ ಬರಬೇಕಾದವರು ಬಂದಾರೆಂದು ಕೂರುವುದು ಭ್ರಾಂತಿ.
ಅಪ್ಪ–ಅಮ್ಮನಿಗೆ, ನೆಲ–ಮಳೆಗೆ–ಅಮ್ಮ–ಮಕ್ಕಳನ್ನ
ಕಾಯಿಲೆ ಹುಶಾರಾಗುವುದನ್ನ ಹುಡುಗ ಹುಡುಗಿ ಸ್ವಪ್ನ ನಿಜವಾಗುವುದನ್ನ
ಕಾದು ಕರಕಾಗುವ ಪರಿ ಬೇಡ, ಬೇಡ.

ಈ ಬದುಕಿನಲ್ಲಿ ಈ ಗಾಳಿಯಲ್ಲಿ ಇರುವ ಹೊತ್ತನ್ನೆಲ್ಲಾ ತುತ್ತಿಗೆ
ಮರ ಚಿಗುರಿಗೆ, ಮೈ ಬಟ್ಟೆಗೆ ಧೀಮಂತ ಜೀತ
ಕಾಯುವುದು ಮಂಡ ಪಿಂಡ.

ಬರುವುದು ಬಂದೀತು ಎಂದು ಕೂಡುವ ಹಾಗಿಲ್ಲ
ತಾಳ್ಮೆ ಕೇಳುವುದಿಲ್ಲ ಕಾಡದೆ ಬಿಡುವುದೂ ಇಲ್ಲ
ಇದಕ್ಕೆ ಹೊರತಾದುದು ಯಾವುದು ಇದ್ದೀತು?

* * * *

## ಒಂದು ಸಾರಿ....

ಒಂದು ಸಾರಿ ಒಬ್ಬಳು ಗಂಟುಬಿದ್ದಳು
ಥೈಲಿ ಖಾಲಿಯಾಗುವವರೆಗೆ ಜಮಾನ ನಡೆಯಿತು
ಖಯಾಲಿ–ಸುರೆ–ಸ್ವಪ್ನ–ಸರ್ವಸ್ವ ದೇಖಿದ್ದಾಯಿತು
ಕನಸು ಜೀಕಿದ್ದಾಯ್ತು ಅಭೀಪ್ಸೆ ಬುಗುರಿ ತಿರುಗಿತು.

ಅವಳಂಗಾಂಗ ಸಾಮರಸ್ಯ ಸ್ವರ್ಗ ನರಕದ ಕಲ್ಪನೆಗೆ ತಿಂಡಿ ತಿನಿಸಿತು
ಪರ್ಸಿನ ರಹಸ್ಯ ನಾಜೂಕು ಕಾಣಿಸಿದ್ದೇನು? ಒನಪು ವೈಯ್ಯಾರ ಶೃಂಗಾರ
ಹನಿಸಿದ್ದೇನು? ಅರ್ಥಕಾಮಗಳ ತಿರುವು ಬಿಸಲಿಗೆ ಸ್ವಾರ್ಥಸೀಮೆ
ಮೇದ ಮೇವು ಮಳೆಗೆ ಮುತ್ತುವ ರೇಷ್ಮೆ ಇಂಗಿತದ ಲಿಲಾವು ಬಯಕೆ
ಅಡಿಕೆ ಮರದಲ್ಲಿ ಕಾಮಿಗೊನೆ ತೂಗಿತು ಅವಳುದ್ದ ಕುಡಿಯೊಡೆದ ಕಾವು;

ಅವಳೆದೆಯುದ್ದ ಬಾಳೆಗೊನೆ ಮೈ ಹಿಮಾಲಯ ಎತ್ತರ ಅನೆ ನಡಿಗೆ
ಸೋನೆಮಾತಿನ ಸಲಿಗೆ ಸುಸೂತ್ರ ಹರಿದಾಡಿಸಿತು ಅವಳುಸಿರಿನಲ್ಲಿ
ನನ್ನ ಕೇಳಿ ಹೆಸರು ಅವಳ ಬಸಿರಲ್ಲೂ ನನ್ನುಸಿರಿನ ಸಂತಾನ ಹನಿ
ದನಿ ಕೇಳಿ ಹಡಬೆಯಾದ ನನ್ನ ಲಾವಣ್ಯಮಯಿ ಕಾವ್ಯ ತರುಣಿ
ಒಂದು ಮಟ ಮಟ ಮಧ್ಯಾಹ್ನ ಮಾಯವಾದಳು.

ಹುಡುಕಿದೆ ಬೀದಿ ತಡಕಿದೆ ಕಂಡ ಕಂಡ ಮುಖ ಇಣುಕಿದ
ಅವಳಿರವಿಗೆ ಚಡಪಡಿಸಿದೆ–ಯಾವ ಬಜಾರಲ್ಲೂ ಸಿಗದೆ
ಪುನಃ ಪುನಃ ಮಿಡುಕಿದೆ. ಸಿಗಲಿಲ್ಲ. ಸುಮ್ಮನಿರಲಾಗಲಿಲ್ಲ.
ಮೋಜಿನವಳ ಹತ್ತಿರ ಪ್ರೀತಿ ಒತ್ತರ ಹುಡುಕ ಹೊರಟಿದ್ದೇ ತಪ್ಪು.
ಆ ಸಂಗದ ಅನ್ಯೋನ್ಯ ಸುಖದಲ್ಲಿ ಇದ್ದಷ್ಟು ದಿನ ಕಾಲ ಹೋದದ್ದೇ ಗೊತ್ತಿಲ್ಲ
ಇಷ್ಟು ಬೇಗ ಹೀಗೆ ಆ ನಂಟು ಪರ್ಯವಸಾನ ಕಂಡೀತೆಂದು ಬಗೆದಿರಲಿಲ್ಲ
ಮೌನ ಮೈದಡವಿ ಬರುವ ಮುನ್ನವಾದರೂ ಒಮ್ಮೆ ಆಕಸ್ಮಿಕ ಬಂದು
ಭೆಟ್ಟಿಯಾದರೆ ಮಾತಾಡಿಸಬಹುದು ನಿಂತ ಕತೆ ನಡೆಸಬಹುದು
ನುಡಿಸಬಹುದು ನರ್ತಿಸಬಹುದು–ಆದರೆ?

* * * *

## ಕಾಣದ ಮೈ

ಆಮಿಷಗಳ ಹೀರಿದೆ ಚುಚ್ಚಿದೆ ಆಶಯದ ಮೊನೆಗಳ ಕಾವಿನಲ್ಲಿ
ಅನಿಯತ ಆಸೆ ಆಯಾತ ನಿರಂತರ ಮೊರೆದು ತಳಮಳಗಳಲ್ಲಿ
ತೀವ್ರತೆ ಹೆಚ್ಚಿದೆ–ಕಿರಿಕಿರಿಗಳ ಮರೆಯಲು ದಾರಿ
ಹುಡುಕಿ ಉರಿಯುವ ಹಾದಿ ಕಂಡಿದೆ; ನಗದೆ ನೋವಿನ ಲಹರಿ
ಕಮರಿ ನಗು ಉದುರಿದರೂ ಅಪೇಕ್ಷೆ ನಲುಗದೆ
ಜಿಗಿದೆ ಒಳಗಿನ ಒತ್ತಾಯಕ್ಕೆ

ಬಂಧನದ ಇಂಧನವಿತ್ತು
ಮುಜುಗರದ ಬೆಂಕಿಯಿತ್ತು
ಹಕ್ಕಿಯಾಗಿ ಹಾರುವ ಗಾಳಿಯಿತ್ತು

ನಡೆಯಿತು ಒಂದೊಂದೇ ಅಂಕ ನಿರಾತಂಕ ಸುಂಕ ಕಸಿದು ಬಿಸಿ ;
ಹೆಜ್ಜೆ ಸವೆಯದಿದ್ರೂ ಹೊಲಬು ಸವೆಯಿತು
ಬೇರೆ ಬೇರೆ ಗೀಳಿನ ಗಂಧ ತಾಕಿತು
ನಾಡಿನ ಕಾಡಿನ ಹಸಿರೂ ಉಸಿರೂ ಕಂಡಿತು
ಮೈ ಪುಳಕ ಫೌಂಟೆನ್ನಾಗಿ ಮನಸ್ಸು ಭಾವೋದ್ರೇಕ ಸೈರನ್ನಾಗಿ
ಕಾಣದ ಮುಖಗಳು
ಕರಗದ ನಖಗಳು
ಸುಳಿದೂ ಹೊಳೆದೂ ನಿಜ ಸುತ್ತುವರಿಯಿತು ಮುತ್ತಿ;

ಒಳಗೆ ನಲಿಯುವ ಇತರೆ ತೆರೆ ಕೂಡುವ
ಸಂಧಿ ಕಾದ ಬಯಕೆ ನಲಿಯಿತು–ಹೆಣ್ಣಿನ ಸಣ್ಣತನ
ಗಂಡಿನ ಕೀಳುತನ ಕಣ್ಣಿನ ಲಾವಣ್ಯ ದಂಡಿನ ಬಾಹುಳ್ಯ
ರುಚಿಗೆ ರುಚಿ ಕೊಂಡಿ ಹಾಕಿಕೊಂಡು ಒದ್ದಾಡುತ್ತವೆ
ಇರುವಿಕೆ ಸುತ್ತು ಕತ್ತೆತ್ತಿ ಬೇರೆ ತಲೆಯಿಲ್ಲದವುಗಳಿಗೂ
ಕಣ್ಣು ಕಿವಿ ಇರುತ್ತವೆ ಇದ್ದಾವೆ–ಇರಬಲ್ಲವಲ್ಲವೆ?

* * * *

## ಪ್ರಪಂಚ ಹುಟ್ಟಿದ್ದು

ಹಳೆಯದು, ಶತಶತಮಾನಗಳ ಬಸಿರಿಂದ ಬೆಳೆದದ್ದು–
ಯಾವುದು? ಮೇಸ್ಟರ ಪ್ರಶ್ನೆ.

ದರ್ಶನವಿಲ್ಲ; ದಾರ್ಶನಿಕನಿಲ್ಲ
ಎನ್ನುವುದೆಲ್ಲ ಹುರುಳಿಲ್ಲದಿಲ್ಲ;

ಮಂಜಿನ ಕೆಳಗೆ ಬೆಳಕಿನ ಕೆಳಗೆ
ಈ ಧರಿತ್ರಿಯ ಮದ್ದಲೆಯ ಶಬ್ದ ಉಳಿದಿಲ್ಲವೇ, ಹೇಳಿ?–
ಇದು ಮತ್ತೆ ಮತ್ತೆ ಮೊರರೆಯುವ ಮೇಸ್ಟರ ಪ್ರಶ್ನೆ.

ದಾರಿಗಳು ಹಳೆಯವೇ ಚಕ್ರಗಳು ಎಂದಿದ್ದರೂ ಉರುಳುವವೇ
ದಾರಿಯೊಳಗೆ ಚಕ್ರಗಳ ನೆರಳು ಬೀಳದೆ ಹೋದಾವೇ?

ಇದು ದರ್ಶನವಲ್ಲ; ಉತ್ತರ ದಾರ್ಶಾನಿಕನದ್ದಲ್ಲ.

ಎಲ್ಲ ಮಣ್ಣಿನ ಮೇಲೆ ಎಲ್ಲ ಮಣ್ಣಿನ ಕಣ್ಣಿನ ಒಳಗೆ
ಇರಬಹುದಲ್ಲವೇ–ಲೀಲೆ? ಇರುವುದಾದರೆ ಬೊಗಳಿ
ಪ್ರಪಂಚ ಹುಟ್ಟಿದ್ದು ಯಾವ ವೇಳೆ?

ಅವರದೇ ಪ್ರಶ್ನೆಗೆ ಅವರದೇ ಚಕಮಕಿ ಉತ್ತರ
ಹುಡುಗನದ್ದಲ್ಲ; ಹುಡುಗಿಯದ್ದಲ್ಲ
ದರ್ಶನದ್ದಲ್ಲ; ದಾರ್ಶನಿಕನದ್ದಲ್ಲ
ಮೇಸ್ಟರು ತಮಗೆ ತಾವೇ ಗೊಣಗಿಕೊಂಡದ್ದು.

* * * *

# ಜೀವ ಜೀವನ ಜಗತ್ತು

ಈ ಜಗತ್ತಿನ ಗಮ್ಮತ್ತಿನ ಸುತ್ತ ಬದುಕಿಯಾ ಸತ್ತ
ನಾನು ನಗು ನಗುತ್ತಿರಲು ಹಗಲು ಇರುಳು ಹೆಣಗಿದ್ದೇನೆ

ಹೆಣವಾಗೂ ಗೋಣಗಿದ್ದೇನೆ
ಕಣ್ಣು ಗುಂಡಿಗಳಲ್ಲಿ ತೇವ ಒಣಗಿಸಿದ್ದೇನೆ

ಮತ್ತೆ ಮತ್ತೆ ಮಣ್ಣ ಮಿಡಿತಕ್ಕೆ
ಕಾರ್ಯ ಕಾರಣ ಸ್ವರ ಪೋಣಿಸಿ ಗುಣುಗುಣಿಸಿದ್ದೇನೆ

ಜೀವ ಜೀವನಕ್ಕೆ ಬೇಕೆಂದು ಅದಕ್ಕೂ ಇದಕ್ಕೂ ಎಲ್ಲದಕ್ಕೂ
ಧೈರ್ಯವೊಂದನ್ನೇ ತೆತ್ತು ನಕ್ಕು ನೋವಿನಲ್ಲೂ ಲೆಕ್ಕ ಪರಿಗಣಿಸಿದ್ದೇನೆ

ಚೊಕ್ಕ ನಕ್ಕಿ ತಯಾರಿಕೆಗೆ ಠಕ್ಕ ಬಾಯರಿಕೆ ಸರಿಸಿ
ಸೊಕ್ಕ ಕಡೆಗಣಿಸಿ ಹಣ್ಣಾಗಿದ್ದೇನೆ ಹುಣ್ಣಾಗಿದ್ದೇನೆ
ಮಣ್ಣಾಗುವ ತನಕ ಈ ಬಾಳ ತಟವಟದ ಸಿಕ್ಕ ಬಿಡಿಸುತ್ತೇನೆ;

ಲೆಕ್ಕವಿಲ್ಲದ ಸುಕ್ಕ ಬಡ ಬಡಿಸುತ್ತ ಪದ ಪದಕ್ಕೆ
ವರ್ಣದೊಳಗಿನ ನಾದಕ್ಕೆ ಲಯದೊಳಗಿನ ಉತಸಾಹ ಲವಲವಿಕೆ ಚೇತನಕ್ಕೆ
ಬನ್ನ ಬವಣೆಗಳನ್ನೇ ಬಡಿಸಿದ್ದೇನೆ–ಒಡಕು ಹಾಡನ್ನೇ ನುಡಿಸುತ್ತ
ಬಂಧ ಕೆಡಿಸಿದ್ದೇನೆ–ಇಷ್ಟೆಲ್ಲ ಆದರೂ ಅವರಿವರ ಗುಲ್ಲ
ಗೆಲ್ಲಲೆಣಿಸಿ ನಿಷ್ಠೆ ಮಣಿಸಿ ಕಣ್ಣಿಗೆ ಒಳ್ಳೇಯದನ್ನೇ
ಕಿವಿಗೆ ಹಿತವಾದ್ದನ್ನೆ–ಕಾಣಿಸಿದ್ದೇನೆ.

ಜಾಣ ಕೋಣರ ನಡುವೆ ಕವಣೆ ಬೀಸಿ ವೈಪ್ಯರೀತ್ಯದ ಬಾಣ ನಾಟಿ
ಕಂಡು ಕಾಣದ ಹಾಗೆ ಬೆಂದು ಬೇಯದ ಎಡೆಗೆ ಬಾಗಿದ್ದೇನೆ
ಶಾಖ ತಾಕಿದ್ದೇನೆ; ತೂಗಿ ತೊನೆದಿದ್ದೇನೆ.

ಕೊನೆಗೆ ಬೇವನ್ನೇ ತುರುಕಿ ಕವನ ಕುಣಿಸಿದ್ದೇನೆ
ನಾಳಿನ ಕನಸ ಕೊನೆಗಾಣಿಸಿ ಅಂದಂದಿಗೆ ಜೀವ ತೇದೀದ್ದೇನೆ;
ಮನಸ್ಸಿನಾಂಗಿಕ ಅಭಿನಯಕ್ಕೆ ದಸಕತ್ತು ಹಾಕುವ
ತನ್ನತನಕ್ಕೆ ಅಮುಖ್ಯದಲ್ಲೂ ಅರ್ಥಕಾಣುವ
ತವಕ ಉಂಡಿದ್ದೇನೆ.

ಹಲ್ಕಾ ಮಾತು ಒದರಿದರೂ ಯೋಚನೆಯೊಂದೆ ತಲೆ ಬುಡವಾದದ್ದಕ್ಕೆ
ಪಡಪೋಸಿ ಲೆಕ್ಕಾಚಾರಗಳಿಗೆ ಮುಗಿಯದ ಅಂಕ ಕಂಡಿದ್ದೇನೆ.

ರಾಗ ದ್ವೇಷದ ವಿಷದ ಬೀಜದ ಭ್ರಾಂತಿಯ
ಧೈರ್ಯದ ಧೋರಣೆ ಕ್ಯಾಕರಿಸುವುದರಲ್ಲೇ
ನಿರತನಾಗಿದ್ದವನು ಪ್ರತಿ ಮಾತೂ ನಾತವಾಗಬಾರದೆಂದು
ಮೌನ ಕಂಡಿದ್ದೇನೆ.

ಆಮಿಷದೊಳಗೆ ಪಕ್ಕ ವ್ಯಭಿಚಾರ ಕಂಡ ಪಾಲಿಗೆ
ತಾಕತ್ತಿದ್ದಾಗ ಹರಾಮಿತನ ನಡೆಸಿ
ಬ್ರೇಕಿಲ್ಲದೆ ಓಟ ಕಿತ್ತಿದ್ದೇನೆ, ನೋಟ ಕೊಚ್ಚಿದ್ದೇನೆ

ಎದುರು ಗಾಳಿಯ ಸೀಳುವ ಚಾಡಿಯ ಕಿಡಿಗೇಡಿತನ
ಬೆಳೆದು ಸೊಕ್ಕೇ ಬದುಕೆಂಬ ಭ್ರಮೆಗೆ ಬಿದ್ದಿದ್ದವನು
ಯಾರೇ ಅನ್ನಲಿ ಏನೇ ಹೇಳಲಿ ನನಗೆ ಮಜವೊಂದಿದ್ದರೆ
ಸಾಕೆಂದಿದ್ದವನು ಕಾಲ ತಳ್ಳಿ ಕಳ್ಳಿಯಾಗಿದ್ದೇನೆ ಕೊಳ್ಳಿಯಾಗಿದ್ದೇನೆ
ಸುಳ್ಳ ತಳಮಳದಲ್ಲಿ ಸತ್ಯದ ಜಿಗುಟ ಮೆದ್ದಿದ್ದೇನೆ.

ಇಂಥ ನಾನು ಎನ್ನುವವನು ನಿನ್ನೆ ಬದುಕಿದ್ದೇನೆ?
ಈ ಎಲ್ಲ ಅಂಡ ಬಂಡ ಗುನ್ನಗಳಲ್ಲಿ ಇನ್ನೂ ಹುನ್ನಾರು ನಡೆಸಿದ್ದೇನೆ
ನನ್ನ ನಾನೇ ಮೆಚ್ಚಿ ಇನ್ನೂ ಬದುಕಿದ್ದೇನೆ....
ನೆಲದ ವಾಸನೆ ಕಚ್ಚಿ

ಹೊನ್ನನಾಶಿಸದೆ
ಮಣ್ಣನಾಶಿಸದೆ

ಕೊಳೆತು ಕಣ್ಣ ತೆರೆದಿದ್ದೇನೆ ಕುಳಿತಲ್ಲೇ ಕುಳಿತು ಅನಂಗ ವಾಸನೆಗೆ
ಸಹನೆ ಪ್ರಸ್ತಾರ ಹಾಕಿ ನೋಡಿದ್ದೇನೆ
ಅಂಥ ಬದುಕೂ ಮಿಥ್ಯವಲ್ಲ
ಹಾಗಂತ ದಾರಿ ಹರಿದದ್ದಷ್ಟೇ ಪೂರ್ತ ಸತ್ಯವಲ್ಲ
ಮಿಥ್ಯದೊಳಗಿನ ಸತ್ಯ
ಸತ್ಯದೊಳಗಿನ ಸತ್ಯ

ನಿತ್ಯ ನಿತ್ಯವೂ ಬೆರೆತು ಹೊತ್ತು ಹೊತ್ತು ಹೂತು ಚಿಗಿತು
ಉಸಿರು ಹರಿದು ಹೋಯ್ತು;

ಯಾವತ್ತೂ ಜೀವಕ್ಕೆ ಇಹ ಜಗತ್ತು
ಹೇಗೆ ಹೊರತು ನಿಂತೀತು?

ಪ್ರಶ್ನೆ ಪ್ರಶ್ನೆ ಪ್ರಶ್ನೆ
ಉತ್ತರವಾಗಿ ಕಂಡದ್ದು'

ಕಪ್ಪು ಮೋಡದ ತುದಿಗೆ
ಹೊಂಬಿಸಿಲ ಕೇದಗೆ!
ಸ್ಮಶಾನದಲ್ಲಿ ಅಳುವ ಕಂದ!
ಶಹರದಲ್ಲೂ ಒಂದು ಗುಂಚಕ್ಕಿ!
ಕಾರ್ಗಿಲ್ಲಿನಲ್ಲಿ ಕತ್ತಾಳೆ ಹೂವು.

ಎಲ್ಲಿ ಭ್ರಷ್ಟ ಕೈಗಳು ಅಲ್ಲಿ ಪವಿತ್ರ ಬೆರಳುಗಳು
ಎಲ್ಲಿ ಜರ್ಜರಿತ ಹೃದಯಗಳ ರೋದನೆಗಳೊ.....
ಅಲ್ಲಿ ಕೋಗಿಲೆ ಕೊಳಲುಗಳು
ಲಾಲಿ ಹಾಡುವ ತೊಟ್ಟಿಲುಗಳು... ಇರುವಲ್ಲೇ ಇವೆ
ನಾಳೆಯ ಕನಸಿಗೆ ಮೆಟ್ಟಿಲುಗಳು!

* * * *

## ಕಣ್ಣುಗಳು

ಹೊಳೆದವು ನಿಂತುಕೊಂಡ, ಸೆಳೆದು ಗುಂಗಿಗೆ ಬಿದ್ದೆ
ಮಿನುಗಿದವು ಮಿರುಗಿದವು ಕೆಲಸ ಕಾರ್ಯ ತೊರೆದೆ
ಮರೆಯಾದವು ಕನವರಿಕೆ ಮುದ್ದೇಯಾದೆ ಸ್ವಪ್ನ ತೆರೆಯಾದವು
ಇನ್ನೆಲ್ಲಿಯ ನಿದ್ದೆ? ಹುಡುಕಾಡಿದೆ ತಡಕಾಡಿದೆ ಮಿಡುಕಿ ಚಡಪಡಿಸಿ
ಸಿಡುಕಿ ತೊಪ್ಪೆಯಾದೆ, ಕೈಕಟ್ಟಿ ಎಂದೂ ಕೂರದವ ಕುಂತೆ;
ನೆನಪಿನಲೆಯಲ್ಲಿ ತೇಲುವ ತೆಪ್ಪ ಮೀಟಿ ನೋಡಿದೆ, ತರಂಗದಲ್ಲಿ ನೊರೆ
ನೊರೆಯಲ್ಲಿ ಕಾಮನ ಬಿಲ್ಲಿನ ಚಹರೆ, ಕಲ್ಪನೆಗೆ ಹೊಸ ಹೊಳಪು
ಆ ಚೆಲುವಿಗೆ ಆ ಎಳೇತಕ್ಕೆ ಸೆಳೆತಕ್ಕೆ ಮಿಳಿತಕ್ಕೆ ತೆಕ್ಕೆ ಬಿತ್ತು ಮನಸ್ಸು
ಬಣ್ಣ ಬಣ್ಣದ ಬಯಕೆ ಬೆಲೂನು ತೇಲಿ ಬೆನ್ನು ಹತ್ತಿತು ಕನಸು
ಭಿನ್ನ ಭಿನ್ನ ಲಯ ಮಿಂಚಿ ಮಿಂಚಿ ಮಾಯ ಎಂಥದೋ ಭಯ
ಯಾವುದೋ ಅಭಯ; ಶಾಂತ ನಿಲುವಿನೊಳಗೆ ಆಲೋಚನೆ ಮೈ
ತೂರಾಡಿತು.

ನೋಟ ಬುಗುರಿ ಬೇಟೆಗೆ ತಿರುಗಿದ ಹಾಗೆ ಲೆಕ್ಕವಿಲ್ಲದ ಪಟ್ಟಿ
ಹೊಲಸು ಮರೆತು ಕಲಕಿದ ನೋವು ತಿಳಿತು ಕಳಿತು ಗತ್ತು ಮೌನವಾಯ್ತು
ನಡೆದಾಡಿದೆ ಸುಮ್ಮನೆ, ಪರದಾಡದೇ ಬೇನೆ? ಆಸೆ ಬೀಸಣಿಗೆ
ಬೀಸಿಕೊಂಡ ಗಾಳಿ ಅನುದಿನವೂ ಬೇಕಾಯ್ತು ಉದ್ವಿಗ್ನ ಕೆಂಡವಾಯ್ತು
ಪ್ರೀತಿ ಹೊಂಡವಾಯ್ತು ಚಿಂತೆ ಕಂತೆ ಭಾರ ಹೊತ್ತು ಎಣಿಕೆ ದಾಟಿದೆ
ಭಾವನೆಗೆ ಭಾಷೆ ಬೆಳೆ; ಹೆಜ್ಜೆಗೆ ಗತಿ;
ಬಗೆ ಬಗೆ ಮಿಲನಕ್ಕೆ ಉನ್ಮೀಲನ ನಗೆ ತೆರೆದುಕೊಂಡಿತು
ರೆಪ್ಪೆ ಹಿನ್ನೆಲೆಯಲ್ಲಿ ಕುಡಿ ಚಿಗುರಿ ನಿಧಾನ ಬೆಳೆದು ಗಿಡಮರ
ತುಂಬಿ ಉತ್ಸಾಹ ಕೊಂಬೆ ರೆಂಬೆ ಟೊಂಗೆ ಟೊಂಗೆಯಲ್ಲೂ ಹರ್ಷಕೂಡಿ
ನೆರಳು ಬೆಳಕಿನ ನಡುವೆ ಮುಹೂರ್ತ ಮೂಡಿ ಬಂತು.
ಒಪ್ಪಿದವು, ಅಪ್ಪಿಕೊಂಡೆ
ಒತ್ತಿದವು ಮುತ್ತಿನಿಂತೆ–ಇನ್ನೆಂಥ ನಿದ್ದೆ?

* * * *

## ಸತ್ಯದ ಸುತ್ತ

ಆಕಾಶದೊಳಗೆ ಮೀನು ಈಜುವುದನ್ನ ನೋಡಲಿಕ್ಕುಂಟೇ?
ಹಿರಿ ಕಿರಿ ಕುಂಟೆಗೋ
ಕೊಲ್ಲಿ ಕಾರಿಗೋ ಹರಿಯುವ ನದಿಗೋ ಹೋಗಬೇಕು.

ಕೆರೆ ಕರಗಿಸಿ ಹಿಡಿಯ ಹೊರಟವನನ್ನ
ಇಲ್ಲಾ–ನೀರು ಬೇರೆ ಕಡೆ ತಿರುಗಿಸಿ ತಳಾತಳದೊಳಗಿ ನೆಲ್ಲವನ್ನ
ಗುಡ್ಡೆ ಹಾಕುವನನ್ನ–ಕಾಣಲಿಕ್ಕುಂಟೇ?

ಒಂದು ಸಾರಿ ತಿಕ್ಕಲು ಅಂಟಿಸಿಕೊಂಡರೆ ಬಾರಿ ಬಾರಿ ರಂಕಲು ಏರುಪೇರು
ಮನಸ್ಸಿಗೆ ವ್ಯಕ್ತಿಗೆ ವಸ್ತುವಿಗೆ ಕಣ್ಣಿಗೆ ತೊಂದರೆ ತಕರಾರು–
ತೊಲಗುವವರೆಗೆ ಗಾಸಿ ಗಾರು ಗಾರು, ನಡೆ–ನುಡಿ ಓರೆ ಕೋರೆ
ಚಿದರು ಬೆದರು ಹೊದರು; ಅದು ತೊಳಗುವವರೆಗೆ
ಬುದ್ಧಿ–ಭಾವ ಬೇಸಗೆ ಬೇಗೆ ಬಗೆ ಬಗೆ;

ನೆಲ ನೀಲವಾಗುವುದೂ ಉಂಟು ಮಹರಾಯರೇ?
ನೀಲ ಆಕಾಶ ನೆಲದ ಬಣ್ಣ ಕಾಣಿಸಿದರೆ ತಪ್ಪೇನು?

ಅದೆಲ್ಲ ಅಸತ್ಯವೇನಲ್ಲ–ಸತ್ಯ ಸುಳ್ಳಲ್ಲದ್ದಷ್ಟೇ ಅಲ್ಲ
ಸುಳ್ಳು ಸುಳ್ಳಾಗಿಯೇ ಹೇಳಿದಾಗಲೂ ಸತ್ಯವಾಗುತ್ತೆ,

ಕಿಡಿನೆಗಡಿ ದಾಂಧಲೆ ನಡೆಸುತ್ತೆ ಕ್ಷಯ ಅಕ್ಷಯವೆನ್ನುವಂತೆ
ಕಾಡಿಸುತ್ತೆ ಕುಷ್ಟು ತೊನ್ನು ಇಡೀ ಜಾಯಮಾನ ಸವೆಸುತ್ತ
ಕುಷ್ಟು ಅಂಗಾಂಗಕ್ಕೆ ತೊನ್ನು ಚರ್ಮಕ್ಕೆ ನೆಗಡಿ ಕರ್ಚೀಫಿಗೆ
ಕ್ಷಯ ಬೋನಿಗೆ ಹೀಗೆ ಅಸ್ವಸ್ಥತೆಗೆ ಏನೇನೋ ಅಂಟುವುದುಂಟು

ಬೆಂಕಿ ಬಂದವರಿಗೆ ಸುಂಕ ಎತ್ತುತ್ತೆ ತಗಾದೆ ನರಕ ನರಳಿಕೆ
ಇದೆಲ್ಲ ನೂರಕ್ಕೆ ನೂರು ಸುಳ್ಳಲ್ಲ ಅಪ್ಪಟ ನಿಕವಲ್ಲ–ಹಾಗಂತ
ಸತ್ಯ ಸತ್ಯವಾಗಿದ್ದಾಗಲೇ ಅದಷ್ಟೇ ನೆಲೆಯಾಗಿರುವುದಿಲ್ಲ–ಇದು ಖಂಡಿತ.

* * * *

# ನೆನಪು ಬೇಸಗೆಯಲ್ಲ

ಅವಳು ತೌರಿಗೆ, ನನಗೆ ವಿರಹ ಬೇಸಗೆ
ಆ ಸಳಿಗೆ ಸರಸ ಕೆಲಸದ ಮುಂದೆ–ಈಗಿಲ್ಲ ಸ್ಪರ್ಧೆ.

ಅವಳ ಪ್ರೀತಿ ನನ್ನ ಕೊರಳಿಗೆ ರಕ್ತ ಮಾಂಸದ ನೆರಳು
ಅಕ್ಕರೆಯ ಹೃದಯಕ್ಕೊಂದು ಟೆಲಿಫೋನ್ ಕರುಳು
ಜ್ಞಾಪಕಕ್ಕೆ ಉತ್ಸಾಹಕ್ಕೆ ಬಗೆ ಬಗೆ ಮೀಟುಗೋಲು;

ವಿರಹದಲ್ಲೂ ಅವಳ ನಗೆ ಹಲ್ಲು ಹೊಳಪಿನ ಹರಳು
ಅಪ್ಪುಗೆಗೆ ಕಲ್ಪನೆಗೆ ಮೊಳೆತು ಚಿಗಿತು ಜಿಗಿಯುವ
ಬೀಜತೇಜ ಒಟ್ಟಿಲು–ಮಾತಾಡುವ ಕೊರಳು.

ಆ ಕರುಳ ಹೊಳೆಯಿಸುವ ನೆರಳು ಹೊಳೆದು ಕರಗಿ ನೊರೆಯಾಗಿ
ನನ್ನ ನಡಗೆಯುದ್ದಕ್ಕೂ ತೇಲಿ ಬಂದ ಹಾಗೆ– ಆ ಪ್ರೀತಿ ತೊರೆಯಾಗಿ
ಮಾತಿನ ಮೆಲುಕು–ಮಿರುಗುವ ಕಪ್ಪೆ ಚಿಪ್ಪು
ವಿರಹ ಧಗೆಯಲ್ಲಿ ಬೆಂದು ಬೇಸರದಲ್ಲಿ ಹೊರಳುವಾಗ
ಹಾರಿ ಹತ್ತಿರ ಬರುತ್ತೆ ಅವಳ ಮೋಹಕ ಸೆರಗು
ನನ್ನ ದುಗುಡದ ಮೋಡ ಕರಗಿ ಲಲ್ಲೆ ಹನಿಸುತ್ತೆ ಹೂವಿನ ಮಳೆ
ಅವಳ ಸಂಪ್ರೀತ ನೆನಪಿನ ಕೇಳಿ ಹೊಳೆ.

ಬಿರುಗಾಳಿ ಎದ್ದಾಗ ಕಣ್ಮುಚ್ಚಿ ನಿಂತಾಗ
ಬಂದು ಎತ್ತಿಕೊಂಡು ಹೋಗುತ್ತೆ ದೂರ ತೀರಕ್ಕೆ ಸಾಗಿಸುತ್ತೆ
ಸರಾಗ–ಅವಳ ಹಾರೈಕೆ ಕೈ ಬಳೆಯ ಜಲತರಂಗ

ವಿರಹ ಬೇಸಗೆಯಲ್ಲ
ನೆನಪಿನ ಮಳೆಗಾಲ.

* * * *

## ಡೈರಿಯೊಳಗೆ ಬರೆಯದ ಸಾಲು

ಎಷ್ಟೆಷ್ಟೋ ಗಂಟೆ ಹರಟೆ ಕೊಚ್ಚಿದರೂ, ಎಲೆ ತಿರುವಿದರೂ ಅಮಲಿನಲ್ಲಿ
ಹೊರಳಿದರೂ
ಮೋಹಕ ಸ್ಪರ್ಶ ತಬ್ಬಿದರೂ–ತಬ್ಬಿಬ್ಬಾಗುವ ಹೆಬ್ಬಾವು ಸುತ್ತಿಕೊಳ್ಳುತ್ತೆ, ಕುತ್ತಿಗೆಗೆ

ಮರೆತಲಾರೆ ಹಿಂದಿನ ಒಂದೊಂದನ್ನೂ; ಸುರುಳಿ ಸುರುಳಿಯಾಗಿ ಉರುಳಿ
ಹೊರಳಿ ತತ್ತರಿಸುತ್ತೆ ನೆನಪು–ಹೊರಳಲಾರದ ಹೊರೆ
ಎಷ್ಟು ನುಂಗಿದರೂ ಜೀರ್ಣವಾಗದ ತುತ್ತು
ಕಚ್ಚಿದಾಗೆಲ್ಲ ಎಚ್ಚರ–ಅವೇಳೆಯೊಳಗೆ.

ಯಾವ ಘಳಿಗೆಯೋ ಬೆಂಕಿ ಬಸಿರಾಯ್ತು ತಿಳಿಮನಸ್ಸು
ಸರಕು ಒಟ್ಟಿ ಒಟ್ಟಿ ತುರುಕಲಾರದ ಭಾರಿ ಮಳಿಗೆಯಾಯ್ತು
ತರಲೆ ತಲೆ–ಮಳೆ, ಬಿಸಿಲು ಮೊಢ ಅವ್ಯಾಹತ ಆಯಾಸ ಒಳಗೊಳಗೇ.

ಎಂಥ ಕನಸಿನ ಮಾಳಿಗೆ ಹೊಂಚಿದರೂ ಮರೆಯಾಗದಂಥ ಚಳಿ–
ಮರು ಹೊತ್ತೇ ಕಾಯುವ ತುಡಿತ–ಹೆಂಚು ಯಾವತ್ತೌ ಸೋತು
ಸುಸ್ತಾದ ಕಂಚಿನ ಧ್ವನಿಯಾಗದ ಮಾತು ಹೊಸೆದು ಹೊಂಚು ಹಾಕಿದೆ
ಬೇಸರ–ದೌರ್ಬಲ್ಯ ಲಗ್ಗೆ ಕುಣಿಯುತ್ತ ಮುತ್ತಿದ ಧಗೆ–

ಇಂಚಿಂಚು ಬೆಂದು ಹೋದ ಸ್ವಪ್ನ; ಅಂದುಕೊಂಡದ್ದೇ ಸುಂದರವಾಗದೆ
ಭಾರ–ಬೋರು; ತಂಪು ತುಂಬುವ ಅಕ್ಷಯ ಸುಧೆಯ ಸುರಿದರೂ
ದಹಿಸುವ ಜ್ವರ–ಸೇರಿಗೆ ಸವ್ವಾಸೇರು,
ಕಾಣದ ಅಂತಃಕರಣ ಸದಾ ಕದ ತಟ್ಟಿ ಹೆಜ್ಜೆ ಇಟ್ಟಲ್ಲಿ ಕತ್ತಲೆ
ಹೋದಷ್ಟೂ ಗುಹೆ–ಯಾವ ಕರೆಯ ಮೊರೆಯೋ ಏನೋ
ಅಟ್ಟುತ್ತೆ ಅನೂಹ್ಯಕ್ಕೆ–ಕರಿಕತ್ತಲ ತಳಾತಳಕ್ಕೆ–ಪಾತಾಳಕ್ಕೆ
ಹೊರಬರುವುದು ಹೇಗೆ?

ಬದುಕುವಾಸೆಯ ಹೊತ್ತು ನಡೆದಷ್ಟೂ ಮುಟ್ಟದ ಗುರಿ
ತೊಟ್ಟಿ ಹೊಲಸು; ಹಸನಾಗದೆ ತುಂಬಿಕೊಮಡ ವಿಷ ಬೆಳಸು?
ಸೈರಣೆ ಮರುಭೂಮಿಯೊಳಗೆ ಬೊಟಿ ನಗು–ಓಯಸಿಸ್ಸು
ಅನ್ನಿಸಿಕೆಗೆ ಬೇರು ಬಿಟ್ಟಿತೇ ದೇಹ? ಒಳಗೆಲ್ಲ ಶಾಖ

ಹೊರಗೆಲ್ಲ ಶಾಖ; ಎಲ್ಲಿರಬಹುದು ಸುಖದ ಕೊಳ?
ತುಟ್ಟಿಯಾಗಿವೆ ನಾಲಗೆ ಮೇಲಿನ ಪದ
ಉರಿಯುತ್ತಿವೆ ಆನೆ ಬೆಳೆದ ಪಾದ ;

ಹದವಾಗದ ಅಂತರಂಗಕ್ಕೆ ಉಂಟೇ ಕದ?
ಯಾವ ಸ್ನೇಹವೂ ಮೋಹನವಾಗುವುದಿಲ್ಲ
ಎಂಥ ಗುಂಗೂ ಸಂತೋಷ ಗಂಗೆ ಹರಿಸುವುದಿಲ್ಲ

ಆ ಎಲ್ಲ ಹೊಲಬಿನಾಚೀಚೆ ಉಸುಬು
ರೊಚ್ಚಿಯಾಗುವ ಭಾವ ತೂಗುಯ್ಯಾಲೆ,
ಅಚ್ಚ ಶೀಲಕ್ಕೂ ಅಶ್ಲೀಲ ಶೂಲ–ಹೊಲೆ,

ಎಲ್ಲಿ ಹೋಯ್ತು ಸರಸ ಬಂಧ?
ಸುಸ್ವಭಾವಕ್ಕೆ ಎಲ್ಲಿಂದ ಬಂದು ಸೇರಿತೋ ಅಭಾವ?

ಉರಿಯುತ್ತಿದೆ ದಹದಹಿಸಿ ನನ್ನ ತದಕುವ ಜ್ವಾಲೆ–ಮಾಲೆ ಮಾಲೆ
ಕರಿಮುಗಿಲು ಮೇಲೆ, ಬರಬಹುದು ಭಾರಿ ಮಳೆ.

* * * *

## ಬೆಸುಗೆ

ವಾತ್ಸಲ ತೆರೆ ಬಂದು ಅನುರಾಗ ಲೋಕ ತೆರೆದು
ಸಲಿಲ ಸ್ವರ ಮೇಳ; ಒಲುಮೆ ಕರುಣೆ ಮೊರೆದು
ನೆಲದ ಉದ್ದಗಲ ಬೆಳದಿಂಗಳ ಅಂಗಳ ಖುಷಿಯ ಸಂಭ್ರಾಂತಿ
ಪರಿವೆ ಮರೆತ ಪ್ರಕೃತಿ ರತಿ ಉನ್ಮೀಲನ ಗಾನ–ಗೋಳ ಜೋಗುಳ.

ಮೂಡಿ ಬರುವ ಚಂದ್ರನಗೆಗೆ ಸಮ್ಮೋಹನ ಸುಖದ ಒಸಗೆ
ನಮ್ಮ ಗಮನ–ಮಿಲನ ಪೂರ್ಣ–ಮೌನ.
ಅಂತಃಕರಣದ ಅಂತರಾಳದ ಹುಯಿಲಿಗೆ ನಲ್ಮೆ ಹುಣ್ಣಿಮೆ
ದೇಹದ ನಡೆಗೆ ನಾಲಗೆ ನುಡಿಗೆ ಕಡಲ ವಿಶಾಲ ಅಲೆ ಅಲೆ ಏರಿಳಿಯುವ
ಲಾಸ್ಯ ಸೆಲೆಗೆ; ಬೆಸುಗೆ, ಹಾಗೆ–ಹೀಗೆ.

ಮಧುರ ಮೊರೆತ ತುಂಬಿ ಕಣ್ಣು ಕಲ್ಪನೆ ದುಂಬಿ ಬಯಕೆ ಕ್ಷಿತಿಜ
ಹಾರದೇ ? ತಿಳಿಯಾಕಾಶದ ತುಂಬ ಶ್ವೇತ ಕನಸೆ ಕೆರಳಿದೆ
ನಗ್ನ ಜಗವೇ ತೇಲಿದೆ;

ಮಂಜುಳ ರವ ಎದೆಯ ಬೆದೆಯ ಆತ್ಮೀಯತೆ ಮಿಡಿಸಿದೆ ಸಂತಸ–
ಕಡಲುಕ್ಕಿದೆ ಚಂದ್ರ ನೋಡಲು ಮೆರೆದಿದೆ
ಕಣ್ಣು ಕವಣೆ ಬೀರಿ ಕಿವಿಗೆ ಸಂಗೀತ
ನುಸಿ ಮಳಲ ಮೇಲೆ ನಡೆಯುವ ಪಾದಕ್ಕೆ ತಂಪಿನ ಕೊರೆತ
ಉನ್ಮಾದ ಸೆರೆ, ಬೆಳ್ಳಿ ತೆರೆ–ಅಪರೂಪದವಕಾಶ ವಾಸ್ತವ ಸ್ಪರ್ಶ – ಮರೆಸಿದೆ;

ಸೊಬಗು ಬಗಲೊಳಗೆ ಬೆಸುಗೆ ಬಗಲು ರೆಪ್ಪೆಗಳೊಳಗೆ
ಒಳಗೆ, ಒಳಗೆ, ಒಳಗೆ.....

* * * *

## ಇವರ ಸಂಗೀತ ಪ್ರೇಮ

ಎಳೆದರೋ ದನಿಯ–ಅರೆ ಬರೆ ಪರಿಯ
ತೊಳೆದರೋ ತಾಳಲಯ–ಕೊರೆ ಕೊರೆದು
ಕಿರಿಕಿರಿಯ ತೆಗೆದರೂ ಇವರು ಇರುವಷ್ಟೂ ಬಾಯ.

ಅನಂತರಾಗಗಳ ಕೀರಲುವಲ್ಲೇ
ಬಿಗಿಬಿಗಿಯಾಗಿ ಬಗೆಬಗೆಯಾಗಿ
ಮೊಗೆದರೋ ಅರಿಯದ ಸೆಲೆಯ ನೆಲೆಯ
ಮತ್ತೆ ಕೆರಳಿ ಕೆರಳಿ ನಿಂದು
ಸಿಗಿದರೋ ಸ್ವರವ ನಾದದ ಇರವು ತುಂಬಿದ ತೆರವ
ಎಲ್ಲೌ ಉತ್ತಿ ಏನೋ ಬಿತ್ತಿ ಸವೆಸಿದರೂ ಗಂಟಲ
ಏರಿಸಿ ಇಳಿಸಿ ಬೆಳೆಸಿ ಪದ ಕಳಕಳಿಸಿ
ಕೀಲಿಸಿದರೋ ಇವರು–ಲಯದ ಜಾಲದ ಉದ್ದ ಅಗಲ ಸಲಿಲ
ಮೆಲ್ಲಮೆಲ್ಲನೆ ಕಡಿದರು ಧ್ವನಿಯ
ತೊಡೆದರರ್ಥಗಿರ್ಥ ನಾದಗೀದ

ಇದಕ್ಕಿಂತ ಭಜನೆ ಪದ ಎಷ್ಟೋ ಚೆಂದ
ಅಂದ ಮಂದಿ ಮುಂದೆ ಬೇಯದ ಬಾಯ
ಕಾಣಿಸಿಯೇ ಕೈಯ ಮೈಯ
ತೀಡಿದರು ಸ್ವರ ಸ್ವರವ
ಹರಿದ ಪ್ರಸ್ತಾರದೊಳಗೆ–
ಕಿವಿಕಿವಿಯ ಪೊರೆಗಳಲ್ಲಿ ಹರಿವ ತೊರೆ ತೆರೆದು
ಅಡ್ಡಾದಿಡ್ಡಿ ಚೆಂಡಾಡಿದರೋಇವರು
ಗೀತೆ ಗುಯ್ಗುಡುತ್ತ ಗುಂಗುನಾದ ಮರೆದರೋ
ಮುಗಿಯದ ಸ್ತರಗಳ ಜೀಕುತ್ತ–ಸಂಗೀತ ಗಂಗೆ
ಬಗೆದರೋ–ಭಗೀರಥನ ಕಡೆದರೋ....
ಮುಗಿಯದಯ್ಯ ರಾಗ ಮೇಳ
ಕರಗದಯ್ಯ ಧ್ವನಿಯ ಝುಳ
ಯಾವುದು ಇವರ ಮೂಲ ?

* * * *

## ವಿಚಾರ ರತಿ

ದಾಹ. ಹಸಿವು–ಒಟ್ಟೊಟ್ಟಿಗೆ
ಕಣ್ಣು–ಕೈ ಚಾಚಿದ ಹಾಗೆ
ತಿಂಡಿ, ಊಟ–ಹಾಲು, ನೀರು
ಸಿಕ್ಕರೂ ಹಾತೊರೆಯುವ ತುಡಿತ ಬಿಡದ ಭ್ರಾಂತಿ,
ಹೊದರು ಹೊದರು;

ಮೈ–ಮಾಂಸವೂ ಮಾತಾಡುವುದ ಕಂಡು ಕ್ಷೋಭೆಗೊಂಡು–
ದೈಹಿಕ ಸ್ವಭಾವಗಳು ಅಪ್ಪಚ್ಚಿ
ಪ್ರಜ್ಞೆ–ಅಪ್ಪ ನೊಂದಿಗೆ ನನ್ನ ವಿಚಾರ ರತಿ
ಬೆರೆತು ಎದುರೇ ಒರಟುತನ.

ಮೈ ಮನಸ್ಸುಗಳನ್ನ ತಂಪಿಗೆ ಅದ್ದಿ
ಬದುಕಿನ ಭಾವನೆಯ ವಿಭಿನ್ನ–ಗುದ್ದಿನ ಕಡೆಗೆ
ಬೀಸಿ ಬಂದ ಗಾಳಿಯ ಪಾತಾಳಿಯ
ಹುಡುಕುವ ನಡಿಗೆ.

ನನ್ನೊಳಗಿನ ಅಲ್ಪತನ ತುರಿಕೆಗೆ
ಬಯಕೆ ಬೇಡಿಕೆಗೆ ಆಚೀಚೆಗೆ ಸರಿದು ಸೆರೆ;

ನೆಲ ಮುಗಿಲಿನ ಕಣ್ಣ ಕುಕ್ಕಿಸುವ ಈ ಜಗತ್ತಿನ
ಜನ ಯಾವ ಉಪಕರಣಕ್ಕೂ ಮೀರಿ ನಿಂತು ಸಾಹಸದುನ್ಮೀಲನ.

ನನಗಿದೆ ನನ್ನಲ್ಲೆ ಸ್ವರ್ಗ
ಸೂಕ್ತ ನರಕ ಸ್ಪರ್ಶ.

ಇಂಥ ವೃತ್ತದೊಳಗೆ ಕಂಡಿದೆ ಹಸಿರಿನ
ಹಸಿರಿನೊಗರನೂ ಮೀರಿ ನಿಂತ ಚಿಗುರಿನ–
ಹೊದರನೂ ಮೀರಿ ಮುಖವಿತ್ತ ಕೊಂಬೆ.
ಈಗ ನನಗೆ ನಾನಷ್ಟೆ ಹೂವಲ್ಲವೆಂಬ
ಜಂಬ ಕರಗಿದ ಡಿಂಬ.

ಯುಗ ಯುಗದ ಅರ್ಥಕ್ಕೆ
ನಾವೆಲ್ಲ ಕಾಗುಣಿತವಾಗಿ ಅಜ್ಞಾನದ ಹೊಂಗನಸ ಕಟ್ಟಿ
ಕಲ್ಪನೆಗಳ ಬಿಟ್ಟಿ ಚಕ್ಕಂದ

ಹಾಡಿದ ತಪ್ಪಿಗೆ?

ಇದು ನನ್ನದಷ್ಟೆ ಪ್ರಶ್ನೆಯಲ್ಲ–
ನಿಮ್ಮದಷ್ಟೇ ಉತ್ತರ ಸಾಲದು.

ಅನಂತ ಉತ್ತರಗಳ ನಡುವೆ
ನಡೆದರೂ ಬದುಕು ತೀರುವುದಲ್ಲ?

ಕೊಬ್ಬಿ ಓಡಾಡುವ ಮಂದಿಯ ಛೇಡಿಸಿ
ಕ್ಯಾಕರಿಸಿ ಸವಾಲಾಗಿ
ಸ್ಥಿತಿ–ಗತಿಗೆ ರೆಕ್ಕೆ ಪುಕ್ಕ ಬೆಳೆದು
ನನ್ನೆದೆ ಆಳದೊಳಗೆ
ಹಡೆಯುವುದು ನನಗೆ ಸಾಕಾಗಿದೆ.

ಇನ್ನು ನನ್ನ ನೆಲೆ?

ಈ ನೆಲದ ಮೇಲೆ ನನ್ನ ಕಡಿತ–
ಹಿಡಿತದ ಮೇಲೆ;

ವಿಷಯ ವಿಷ ಬೆರಸಿ
ಸಾಗುವ ಈ ಕಸರತ್ತು ಬೋರಾಗಿದೆ.

ನಾನು 'ಶ್ವೇತಕೇತು'ವಲ್ಲ.

* * * *

# ಕ್ರೇಜಿ

ಎಮ್ಮೆ ಹಸು ಕುರಿ ಮರಿ
ಅಡ್ಡಾಡಿಸಿದ ತುಡುಗುತನ
ಸುಂದರ ಭಾವನೆ ಹೊತ್ತು ಹೆಮ್ಮೆ ಮರೆತು
ಕಾಸು ಮರೆತು ದಾರಿ ಮರೆತು ಪರಾರಿಯಾಗದೆ ಅಲೆದಲೆದು
ನವಿರು ಮನಸ್ಸಿನ
ಬಿಳಿ ಕನಸ್ಸಿನ ಹಸಿರು ಕೂಡ ತುಂಬಿದ್ದು ಪೂರಾ ಹೊಡೆದದ್ದು ಸಿಟಿ
ಸಂದುಗಳಲ್ಲಿ.
ಗಲ್ಲಿ ಕೊಳಚೆ ದನದಂತಹ ಜನ
ಹೋರಿಯಂಥ ಹೆಣ್ಣ ಹೊಲಸು ಹೊಗೆ ಇಕ್ಕಟ್ಟುಗಳಲ್ಲಿ
ಹುಟ್ಟಿದ ರಸ್ತೆಗಳ ಬದಿ ಕಂಡು ಸಿಡಿಮಿಡಿಗೊಂಡ ಮೇಲೇ;
ಶೀಲದ ಕೂಡ ಚೂರಾದದ್ದು ತಾರುಣ್ಯ ಹರಿದದ್ದು ಕಟಿ ಕಂದರಗಳಲ್ಲಿ

ಚೂರುಪಾರು ಆದರ್ಶದ ಒಳನೀರು
ಹರಿದು ಬೀದಿಗೆ ಬಿದ್ದು
ಕ್ರೇಜಿ ಕಾಮಾಲೆ
ನಗಬಲ್ಲೆ ಆದರೆ ನಗಲಾರೆ ಎನ್ನುವ ಸತ್ತ
ಮುಖ ಪಿಳುಕರಿಸುತ್ತೆ

ಯೌವ್ವನದ ಲೀಲೆಗಳಿಗೆಲ್ಲ ಎಲ್ಲಿದೆ ಹೇಳಿ?

ಒಂದಕ್ಕೊಂದು ಸರಮಾಲೆ
ಕೊಂಡಿ ಕಂಡ ಮೇಲಲ್ಲವೇ
ಅನುಭವ–ಸುಳಿ?

* * * *

# ಅಹವಾಲು

ನಾನು ನೌಕರ–ಕೆಲಸ ಗಮನಿಸುವುದಷ್ಟೆ ನನ್ನ
ವ್ಯವಹಾರ; ಎದುರು ಎಂಟೊಂಬತ್ತು ಸ್ಥಿಮಿತವಿರದ ತಲೆ
ಕುಡಿದು ನೂರು ತರಲೆ ಹೊಡೆದು ಮೋಜುಲೀಲೆ ನಡೆಸಿದರೂ
ಸುಮ್ಮನಿರಬೇಕು–ಕೇಳಿದರೆ ಅವ್ಯವಹಾರ
ಯಜಮಾನನಿಗೆ ಅಪಚಾರ.

ಹಗಲು ಇರುಳು ಸರಿದು ಬೆಳಕು ಕತ್ತಲೆ ಬಿರಿದು
ದಿನಗಳುರಳಿದರೂ ಇಲ್ಲಿ ಬೆಳಗಿಲ್ಲ ಸದಾ ರಾತ್ರಿ ಕತ್ತಲು
ಮಿಣುಕು ದೀಪ ಸುತ್ತಲೂ.

ಅಮಲು ತುಂಬಿದ ತೆವಲು ನಂಬಿದ
ನಡೆ ಮರೆತ ನುಡಿ ಮರೆತ
ಸಭ್ಯರಿಲ್ಲಿ ಬಂದು ತೇಲುವರು ಸ್ವಪ್ನ ಲೋಕದಲ್ಲಿ
ಬೆದೆ ಹತ್ತಿ ಮರೆಯುವರು ಮೆರೆಯುವವರು–ಎಂಜಲು
ತೆಕ್ಕೆಯಲ್ಲಿ, ಹಕ್ಕಿಗಳ ಹಿಕ್ಕೆಯಲ್ಲಿ.

ಈ ಜಾಗ ಅರಸಿ ಬರುವ ಅರಸರಿಗೆ ಚೆಂಡಿನ ಚಿಂತೆ
ಅಂಡಿನ ಚಿಂತೆ–ಎಸೆದಾರು ನೋಟಿನ ಕಂತೆ
ಸಂಸ್ಕೃತಿ, ನೀತಿ, ನಡಾವಳಿಕೆ ಎಲ್ಲ ಹುಸಿಕಂತೆ ಇವರಿಗೆ
"ಇದು ಸಂತೆ ಇದು ಪ್ರಪಂಚದ ಜೀವಂತ ಚಿತೆ
ಇದು ದ್ರಾಕ್ಷಿ ಸಿಗದ ನರಿಯ ವ್ಯಥೆ"–ಎನ್ನಬೇಡಿ

ಇದು ಘನತೆ–ಒಪ್ಪಿಕೊಳ್ಳಿ
ಪ್ರಶ್ನೆ ಬೇಡ–ಜೈಕಾರ ಹೇಳಿ ನಗಬೇಡಿ, ನೋಡಿ
ಬಿದ್ದಾವು ಚಡಿ ಹೊಡೆತ ಇದು 'ಮೆಜಾರಿಟಿ'ಯ ಯುಗ
'ಮೈನಾರಿಟಿ'ಯ ಮಹನೀಯರೇ
ನಾವು ಮಾಡುವುದು ಸರಿ ನಾವು ಕೂಡುವುದು ಹಾಡುವುದು
ಎಲ್ಲ ಸರಿ–ಬೇಕಾದರೆ ನೀವೂ ಸೇರಿ
ತರಲೆ ಮಾತ್ರ ಬೇಡ ನಿಮಗೆ–ನಿಮ್ಮ ಆಚಾರ ವಿಚಾರ
ಪೂರ್ವೋತ್ತರ ಸಂಸ್ಕಾರ ಇರಲಿರಲಿ ನಿಮ್ಮ ನಿಮ್ಮ ಹತ್ತಿರ

* * * *

## ಇಂಗಿತದ ಸುತ್ತ

ಮಣ್ಣ ಮೇಲಿನ ನಾವು
ಮಣ್ಣಿಗೇ ನಡೆದು ಹೋಗುವೆವೆಂದು
ಇರದ
ಇರಬಹುದಾದ
ತತ್ತ್ವ–ಗಳ
ಅಶಾಶ್ವತಗಳ ಶಾಶ್ವತ ಕೆಳೆಯ ಹೊರಟು
ಅಶಕ್ತಿ–ಹಾದರ ನಡೆಸ ಹೊರಡುವುದು ಬೇಡ.
ನಾವು ಹಿಡಿವ ಕುಡುಗೋಲು ಕತ್ತರಿಸುತ್ತಿರಲಿ
ಬೆಳೆವ ಹುಲ್ಲುಗಿಡ ಗಂಟೆಗಳನ್ನ....

ಆದರೆ ಅದೇ ಕೈ ಆಸರೆ ಮೀರಿ
ಕಾಲ ತೆವಲಿಗೆ ಬೇರೆ ದಾರಿ
ಹಿಡಿದು ನಯವಂತಿಕೆ ಸೇರಿ
ರಕ್ತದ ತುಡಿತ ಮರೆಯದಿರಲಿ;
ನೆರಳಿನ ಭೂತ ಬಿಡದಿರಲಿ.

ಮಣ್ಣಿನ ಜನರೂ ಕನ್ನಹಾಕಿದ್ದಾರೆ
ಕಣ್ಣಿನ ಜನರೂ ಗುನ್ನ ಹಾಕಿದ್ದಾರೆ
ಹೃದಯವಂತ ಜನರು ಅನ್ನ ಹಾಕಿದ್ದಾರೆ

ಅರ್ಥವಾಗಬೇಕು ನಮಗೆ
ಮೊಟ್ಟೆ ಇಡುವುದಿಲ್ಲ ಹಣ
ಸುಟ್ಟರೂ ಸಾಯುವುದಿಲ್ಲ ಮೂಲಗುಣ
ಕಟ್ಟಿ ಕಾಡಿ ಕೂಡಬೇಕಿಲ್ಲ ಹೆಣ್ಣ !

* * * *

# ಸಂದಿಗ್ಧ

ಮುಗ್ಧ ಕಣ್ಣು ಮಾದಕ ನಿಯಾನ್ ಬೆಳಕ ನೋಟದೊಳಗೆ
ಚೆಲ್ಲಿ ಸ್ನಿಗ್ಧ ಭಾವ–ಬಯಕೆ ಎಂಬುದೇ ಇಲ್ಲ;
ಹಣ್ಣು ತಿನ್ನುವ ಆಸೆ ಪದಕ ದಕ್ಕಿಸಿ ರಸ್ತೆಯುದ್ದಕ್ಕೂ
ತೋರಿಕೆ ಮೆರವಣಿಗೆಯೊಳಗೆ ಬೀದಿ ತಿರುಗುವ
ಮಾಡರನ್ ಥಳುಕ ಹೊಳೆಯಿಸುವ ಕಸುಬಿನರಿವಿಲ್ಲ
ಆಲೋಚನೆ ಥಳಿಗೆ–ಕೀಟಗಳಿಗೆ ಹಾಜರಾಗಿ
ಬಜಾರಿಯರ ಬೇಜಾರಿಗೆ ಬೋರ್ ಹಿಡಿಸಿ
ಮಾತಿನ ಹಾದರದ ಬಜಾರಾದಾಗ
ಸಂದಿಗ್ಧ ಹೊಳಪು–ಇಕ್ಕಟ್ಟಿಗೆ
ಪಲಾಯನ ಪಠಣ ಇರುವಿಕೆ ಬೆದೆಗೆ
ಅಂಟಿಕೊಂಡು ಎದೆಯ ಢವ ಢವ ಸದ್ದು
ಬುಲ್ಡೋಜರಿನ ಜೋಕು.

ಅ, ಆ, ಇ, ಈ–ಎಂಬೀ ನಾಗರಿಕರ ಸುತ್ತ
ಸತ್ತ ಮುಗ್ಧ ಮೆಳ್ಳೆಗಣ್ಣು ಕಾಣುತ್ತಾನೆ
ಬಲಿತ ಮೆದುಳ ತಿಕ್ಕುತ್ತಾನೆ
ಕಾರ್ಬನ್ ಕಾಪಿ ಐಡಿಯಾಗಳ ಪ್ರತಿಭಟಿಸಿ
ಆ ಜನಗಳು ಕೋಣಗಳು ಕುದುರೆಗಳು ಕತ್ತೆಗಳೂ
ಹಂದಿಗಳು ಎಂದು ಹಲುಬಿ ಹೊಲಬ ಕಾಣದೆ
ಹಂಗಿನ ಅಭಿಪ್ರಾಯ ಬಿತ್ತರಿಸುತ್ತ
ಭರ್ಜರಿ ವ್ಯಾಖ್ಯಾನ ನಿಂತ ಬಸ್ ಸ್ಟಾಪಿನಲ್ಲಿ
ಕುಂತ ಕ್ಯಾಂಟೀನಿನಲ್ಲಿ ತಂಗಿದ ಹೋಟೆಲಿನಲ್ಲಿ
ನುಂಗಿದ ಹಣಕಾಸಿನ ಕೊಸರಿನ ವ್ಯವಹಾರಗಳಲ್ಲಿ
ಸಂಘ ಸಂಸ್ಥೆಗಳ ಅವ್ಯವಹಾರ ಖಾತೆಗಳಲ್ಲಿ–ಗುಡುಗಿ
ಸ್ವರ ಹುದುಗಿಸಿಕೊಳ್ಳುತ್ತಾನೆ–

* * * *

## ಕಾಗುಣಿತ ಕಲಿತ ಮೇಲೆ...

ಕಾಗುಣಿತ ಕಲಿತ ಮೇಲೆ
ಬರವಣಿಗೆ ಕುಣಿತ ಕೊಯಿಲು
ಮುಳ್ಳು ಬೇಲಿಯ ನಡುವೆ
ರಕ್ತವಾಗಿ ಒಸರಿ
ಇದುವರೆಗೆ ಹೆಕ್ಕಿದ್ದು
ಗಾರು ಗಾರು
ತುರುಚಿ ಗಾಯವಾದ ತುರುಚದ ಮಂಡಿ;

ಹರಿದ ಒಂದೊಂದೂ ತೊಟ್ಟು
ರಕ್ತ
ಮುಕ್ತ ಅಭಿಪ್ರಾಯ
ಸಿಕ್ತ ಇಂಗಿತದ ಹುತ್ತ.

ಕಾಗುಣಿತ ಕಲಿಯದಿದ್ದರೂ
ಗೊತ್ತಾಗುತ್ತದೆ ಪ್ರೇಮದ ಕಾಗುಣಿತ
ಅರಿವೆಗೆ ಬರುತ್ತದೆ ಬಯಕೆಯತ ಬೀಜಗಣಿತ
ಸುತ್ತಿಕೊಳ್ಳುತ್ತದೆ
ಸಾಯುವವರೆಗೆ ನರನಾಡಿಯಲ್ಲಿ ಹರಿದಾಡುವ
ಕಂದರ್ಪನ ಗುಣಿತದ ಮಣಿತ!–

* * * *

# ಸಂಗಾತಿ

ಬದಕುವುದೆಂದರೆ ಬೋರೆಂದು ನನಗೆ ನಾನೇ
ಭಾರವಾಗಿದ್ದಾಗ–
ಒಬ್ಬಳು ಮುಂದೆ ಬಂದಳು ತಾನೇ–
ನನ್ನ –
ಕೊಳೆತ ಕಣ್ಣಗುಳಿಗಳ ತಡಕಿ
ನೋಟದಲೆಗಳ ಕಲಕಿ, ಹುಳಿತ ಕೈಗೆ
ತನ್ನ –
ಕಳಿತ ಕೋಮಲ ಕೈ ಕುಲುಕಿ, ನಗುತ್ತಾ
ಸದಾ, ನಾನು ನಿಮ್ಮವಳು ಎಂದಂದು
ಬಂಧವಾದದ್ದೇ ಒಂದು ಚೆಂದ.
ಕಿಲ ಕಿಲ ಸುಖವನ್ನ

ಕಲ ಕಲ ನಗೆಯನ್ನ–ಒಳ್ಳೊಳ್ಳೆ ಊಟ
ಲಲ್ಲೆ ಮಾತ ಕೊಟ್ಟಂಥ ಸಂಗಾತಿ
ಬಹಳ ಐನಾತಿ.
ಒಡಕು ಗಂಟಲು ಕೀರಲು ಹಾಡಿಗೆ
ಲಯ, ಶ್ರುತಿ, ಬಿತ್ತಿ
ಮತ್ತೆ ಮತ್ತೆ ಮುತ್ತು–
ವವಳ ಜಾಡ
ನೋಡುವುದೇ ಪೂರ್ತಿ ಭ್ರಾಂತಿ
ನನ್ನ ಕರಾಳ ತಳಮಳ ಸಮುದ್ರದ ಉಪ್ಪು ನೀರನ್ನ
ತನ್ನ ತಿಳಿ ಮಳೆ ಹನಿಗಳಾಗಿ ಮಾಡಿಬಿಡುವ
ಪವಾಡ–ನೋಡುತ್ತಾ ಕೂಡುವುದೇ ನೆನಪಿಗೆ
ಬುತ್ತಿ.
ಋತು–ವಸಂತ, ನೆಲ–ಮುಗಿಲ, ಮರ–ಗಿಡ
ಹೂ ಬಳ್ಳಿಗಳ ಬದಲಿಸಿದ ರೀತಿ
ನನ್ನವಳ ಪ್ರೀತಿ–ನನಗೆ ಸಂಗಾತಿ.

* * * *

## ಕಣ್ಣು ನಾಲಗೆ ಕಡಲು

ಕಣ್ಣು ನಾಲಗೆ ಕಡಲಾಗಿ ಹರಿದಿದೆ ಕರುಳು
ಕೂಳಿಗೆ ದುಂಬಾಲು ಗೋಳಿಗೆ ಕೋಟಿ ಕೆರಳಿದ ಕೊರಳು
ಕೂಗುತ್ತಿವೆ ಹಗಲೂ ಇರುಳೂ
ಸಾಗದೆ ನೆರಳಿನ ನೂರುರುಳು?

ಸ್ವಪ್ನಲೋಕದ ಗೀಳು ಊಹೆಗೂ ಸಿಗದು
ಕೆಂಡ ಕಾಲುವೆ ಕೋಡಿ ಹರಿದಿದೆ.

ನರಕ ಶಾಖ ಸುತ್ತಲೂ;

ರಕ್ತ ಹೂರಣ ಬಿಸಿಲು ಹಸಿವು ಕೀಳುವ ದಿಗಿಲಿಗೆ
ಸತ್ತ ನಡಗೆ ಹೊತ್ತ ಕಾಲಿಗೆ
ಮುಗಿಲು ಜೀಕುವ ತೆವಲು
ಆಸೆ ಹುತ್ತ ಬೆಳೆದು ಹನುಮಂತನ ಬಾಲ
ಬಿಚ್ಚಿ ಹೇಳಲು
ಸ್ವರವಿಲ್ಲ, ಒಂದೆಡೆಗೆ ಕುಂತದ್ದಿಲ್ಲ
ನಡುಗೆ ನಿಂತದ್ದಿಲ್ಲ–ಮುಕ್ತ ಅಳಲು;

ಮಣ್ಣಿಲ್ಲ ಕಿವಿಯಿಲ್ಲ
ನರಗಳಲ್ಲಿ ಬಿರಿದ ಕಾವಿನ ಸಿಡಿತ ಕ್ರೂರ ಹಿಮ್ಮಡಿ ಹೊಡೆತ
ಹುಣ್ಣು ಮನೆ ಮಾಡಿದೆ
ಬೇನೆ ಚಿಗುರಿದೆ
ತೊನ್ನು ನೆಲದ ಹುತ್ತದಲ್ಲಿ
ನಾಕ ಕನಸಿನ ನಲಿವಿಗೆ, ಸಾವಿರ ಕಣ್ಣಿನ
ಊಹೆ ನವಿಲ ಬಾಗಿಲು
ಒಂದು ಬಾಗಿಲಿಗೂ ಚಿಲಕವಿಲ್ಲ;

ಆತ್ಮ ಕೂಡಿಹಾಕಲಿಕ್ಕೆ ಬೀಗವಿಲ್ಲ–
ಅಮರವಾಗಲಿಕ್ಕೆ ಈಗ ಕಲಿಗಾಲ !

* * * *

# ಸೃಷ್ಟಿಕರ್ತರು

ಅವಿಚಾರಕ್ಕೂ ಸೆಡ್ಡು ಹೊಡೆಯಬಲ್ಲ ಇವರು ಘಾಟಿ ಕುಳಗಳು
ಹುರುಪಿನ ಉಕ್ಕು ಸಿಡಿಸಬಲ್ಲ ಠಾವು ಇವರ ಇಂಗಿತದ ತಳಗಳು
ವಾಂಛೆ ಸೊಕ್ಕಿನ ಬುಡಕ್ಕೂ ಬೆಂಕಿಯಿಡುವ ತೀಟೆ ಕಿಡಿಗಳು;

ಖಾರಕ್ಕೆ ಆದ್ಯರಾಗುವ ಕ್ಷೀರಕ್ಕೆ ಚೋದ್ಯರಾಗುವ
ಅಕ್ಷರಕ್ಕೆ ನೆತ್ತರು ತುಂಬುವ ನದರು, ಬಿಸಿ ಒಗರು ಹೊತ್ತ ಇವರು
ಸುತ್ತ ಸಹರಾ ಕಂಡರೂ ಪುಟಿಯ ಹೊರಟ ಕ್ಷುದ್ರರು.
ನೋವುಂಡರೂ ಹೂಂಕರಿಸುವ ಹಠತೊಟ್ಟ ಭಂಡರಂತೆ
ಇವರಿಗೆ ಒಳ್ಳೆ ಗಾಲಿ ಬೆಳಕು ಬೇಕಂತೆ, ಒಳ್ಳೊಳ್ಳೆ ತಳಿ ಬೇಕಂತೆ
ಶೂರರಲ್ಲವಂತೆ ಸ್ವಾಮಿ, ಇವರು ನಿಮಿತ್ತ ಮಾತ್ರರಂತೆ.

ಕಿರಿ ಕಿರಿ ತೊರೆ ಮೀರಿ ಸಮುದ್ರವಾಗುವಾಸೆ ಇವರಿಗೆ
ಆಯುಷ್ಯ ಪೂರ್ಣ ಶಬ್ದವಾಗುವ ಗುಂಗಿಗೆ ನಾಲಗೆ ಚಾಚಿ
ನಿರಾಶೆ ಕೆತ್ತುವ ಒಣ ಸಿಬುರು ಚಕ್ಕಿ ಹಸಿ ಹುಸಿ ಕೊಚ್ಚಿ
ಬಿಸಿ ಶ್ವಾಸದ ಚಕ್ಕೆ ಸಿಗಿದವರು–ಇವರು
ನೀರ್ವೀಯರಲ್ಲವಂತೆ ಸ್ವಾಮಿ, ಇವರು ಸೃಷ್ಟಿಕರ್ತರು.

ಬೀಳುವ ಎಲೆಗೆ ಕಡ್ಡಿ ಕಾದಿರಿಸಿ ಬೆಂಕಿ ಹಚ್ಚುವ ಉತ್ಸಾಹ ಯಶಸ್ಸು
ಇವರು ಕನಸು; ಕೆಡುವ ಬಸಿರ ಉಳಿಸುವ ಆಶ್ವಾಸ ವಿಶ್ವಾಸ ಇವರಿಗೆ
ಮೂಲ ಹವಿಸ್ಸು. ತಣ್ಣನೆ ಗಾಳಿಯೊಳಗೆ ಬೆರೆತ ವಿಷಕ್ಕೆ ಸಿಡಿಯಾಡಿಸ
ಹೊರಟ ಇವರ ಚಾಳಿ ಭುಜಗಳಿಗಿದೆಯಂತೆ; ಇನ್ನೆಂಥದಿವರ ನೋಟ?
ಮಲೆತು ನಿಂತದ್ದೆಲ್ಲ ಕಲಕಿ ಜಲತರಂಗ ಚದುರು ಬಯಸು
ಕಲ್ಲೆಸೆದವರು ಇವರು, ತುಡುಗರು; ಪೆಟ್ಟು ಕೊಟ್ಟು ಕೊಡುವ ಗೈರತ್ತು
ಇವರ ಉಸಿರು; ಹೊಸ ದಾರಿ ಹುಡುಕ ಹೊರಟಿಹರಂತೆ ಎಲ್ಲ ಕೇಳಿ
ನೀರು ನೆಲ ಜಿಗಿದು ಕೃತಿ ಮಾಡುವುದೇ ಇವರ ಮೂಲ ಕೇಳಿ!

ಬುದ್ಧಿ ಮತಾಪುಗಳ ಹಚ್ಚಿ ಬೆಳಕಿನರಘಳಿಗೆ ಹಿಗ್ಗಿಗೆ ಮೈ
ನೋಡಿಕೊಳ್ಳುವ ಇಚ್ಛೆಗೆ ಇವರು ವಿರುದ್ಧವಂತೆ ಎಲ್ಲಿ ತರತಮಗಳಿವೆ
ಅಲ್ಲಿವರ ಬಯಲು–ಇದು ಸತ್ಯವಂತೆ, ಪ್ರತಿಯೊಬ್ಬರಿಗೆ ಹೊಸ ಜೀವ ಕೊಡುವುದೇ
ಇವರ ಉಸಿರಾಗಿದೆಯಂತೆ–ಇನ್ನೇಕೆ ಚಿಂತೆ ನಮಗೆ?

# ಜೇಡ

ಎದುರು ಕೂತ ನನ್ನವಳಕ್ಕರೆ ಮೊರೆ ತುಂಬಿಕೊಳ್ಳುತ್ತೆ ಬೇಸರದ ಕಸ, ಮಾತಿನ ಗುಸ ಗುಸ ವಿರಸ–ಸರಸ, ಆಸೆ ಆಮಿಷ ತೆರೆದ ವಿಶೇಷ–ಆವೇಶದೊಳಗೆ. ಆ ನೋಟ ಬುಟ್ಟಿಗೆ ಬಿದ್ದು ತೆರೆದುಕೊಳ್ಳುತ್ತೆ ಎದೆ, ವಿನಿಮಯದೊಂದೆ ಪದದಿಟ್ಟಿಗೆ ಇಟ್ಟ ಹಾಗೆ ಆತ್ಮೀಯತೆ ಬೆರೆತ ಪದರ ಪದರ ಅಕ್ಕಪಕ್ಕ ಕತೆ ಕೂಡುತ್ತ ಸಂಭಾಷಣೆ ನಿರತ ಕಟ್ಟಡ ಮೇಲ ಮೇಲಕ್ಕೆ

ಕೆಳಗೆ ಪ್ರೀತಿ ಭದ್ರವಾದ ಹಾಗೆ ಬಿಡಿಸುತ್ತಾಳೆ ಮಾತಿನ ನಲಿವಿನ ಕಾಯ–ಮೈಯಪರೆಯ ಮೆಲ್ಲಮೆಲ್ಲಗೆ, ಸುಲಿಯುತ್ತಾಳೆ ಸಲಿಗೆ ಅವರೆಯ ಮುತ್ತಿನ ಕಾಳು ದಕ್ಕುವವರೆಗೆ. ನನ್ನವಳಿಗಿಲ್ಲ ಭಯ; ಎಲ್ಲಿಯ ನಯ ನಾಜೂಕು ಕಲಿತಳೋ? ಕೆಲಸ ಕಾಯ ಹಿಡಿದಾಗೆಲ್ಲ ಗಂಭೀರ ಶ್ರದ್ದೆ; ಸುತ್ತು ಮುತ್ತಿನಾಕರ್ಷಣೆಗೆ ಹಾಕಿದ ಬ್ರೇಕು ಕೇಂದ್ರೀಕೃತ. ಮೀರಿದುತ್ಸಾಹದೊರತೆಯತ್ತ.

ಒಂದರ ಹಿಂದೊಂದು ಕೊಂಡಿಗೊಂಡು ಬೆಳೆಯುವ ಮುತುವರ್ಜಿ ಸಬಲ ಸರಾಗ– ಸಲಿಲ–ಶಾಂತ. ಇವಳ ಜೊತೆ ಹೆಗಲ ಕೊಟ್ಟು ಹಗಲ– ಇರುಳ ನೆರಳ ಉರುಳಿಸತೊಡಗಿ, ಮಲಿನ ಮೇಳ; ಈ ಬಾಳ–ಸುಖದ ಮೂಲ, ಸಖ್ಯದ ಬಿಲ–ಪಲ್ಲವಿಸಿ ಏನೆಲ್ಲ?

ಇವಳಿಳಿದಲ್ಲೆಲ್ಲಾ ಹರಡಿಕೊಳ್ಳುತ್ತೆ ಜಾಲ ಇವಳ ಒಳ ತಳ ಪಾತಾಳ
ನನಗರ್ಥವಾಗುವುದಿಲ್ಲ.

ಹೆಣ್ಣು ಮಾಯೆಯಲ್ಲ ಮಂಜು; ಮಂಜಿನಲ್ಲೂ
ಇರಬಹುದು ಮೋಹದ ಪಂಜು! ಪಂಜಿನಲ್ಲಿಲ್ಲವೇ
ಉರಿನ ಕರೆವ ಮೊರೆವ ಬೆರೆವ ಕೊರೆವ ಸ್ಪಂಜು?
ನೋಡುವ ಕಣ್ಣಲ್ಲಿದೆ ಜಗವು. ಅರಿಯುವ ಮನದಲ್ಲಿದೆ
ಯುಗ ಯುಗಾಂತರವೂ ! ತೆರೆಯುವ ಬದುಕಲ್ಲಿದೆ
ಚರಿತೆಯ ಪುಟಪುಟವೂ!.....

* * * *

## ಕಾಲದ ಎದುರು

ಮುಗಿಯದ ಜಗತ್ತಿನೆದುರು ಕೆಲವರು ಗಡಿಯಾರವಾದರೆ
ಇನ್ನು ಕೆಲವರು–ಅಂಥ ಗಡಿಯಾರಗಳಿಗೆ ಕೀಕೊಡುವ ಕಿಲಾಡಿಗಳಾಗುತ್ತಾರೆ;

ಯಾರೂ ಇದನ್ನು ಅಲ್ಲಗಳೆಯುವಂತಿಲ್ಲ, ನಗುವಂತಿಲ್ಲ.
ಜೊತೆಗೆ ಅಲಾರಾಮ್ ಇಡುವ ಚತುರರಿದ್ದಾರೆ;
ಇರುವ ಕೀ ಮುರಿಯುವವರಿದ್ದಾರೆ;

ಒಬ್ಬರು ಉಸಿರು–ಮತ್ತೊಬ್ಬರು ಹಸಿರು, ಇನ್ನೊಬ್ಬರು ಒಗರು
ಹೀಗೆ ಸಾಗಿದೆ ಜಗತ್ತು ಗಡಿಯಾರದೆದುರು.

ಆದರೆ ಮುಂದುವರಿದವರು ರಿಪೇರಿ ಮಾಡುತ್ತಾರೆ
ಹಿಂದುಳಿದವರು ಗಡಿಯಾರ ಅಡವಿಡುತ್ತಾರೆ
ತಲೆಯಿದ್ದವರು–ತಾವೇ ಗಡಿಯಾರ
ಆಗಿ ಗುಡಿಯಾಗುತ್ತಾರೆ, ತಮ್ಮ ಸುತ್ತ ಗುಡಿ ಕಟ್ಟಿ–ಗಡಿ ದಾಟಿ
ಬಿಟ್ಟು ಹೋಗುತ್ತಾರೆ.

ನಿಜ ಹೇಳಬೇಕೆಂದರೆ ಇಡೀ ಜಗತ್ತೇ ಒಂದು ಗಡಿಯಾರ–
ನಡೆಯುತ್ತಾ, ಗಂಟೆ ನುಡಿಯುತ್ತಾ, ಬದುಕಿನ ತಂಟೆ ತಕರಾರ
ನುಡಿಸುತ್ತಾ ಹೋದರೆ, ಎಂಥ ಮಾನವರೂ ಚಿಕ್ಕವರಾಗುತ್ತಾರೆ
ಹೆದರುತ್ತಾರೆ.. ಗಡಿಯಾರದ ಬಡಿತಕ್ಕೆ ಸದಾ ಅದುರುತ್ತಿರುತ್ತಾರೆ–

ಅಂದರೆ, ಯಾರೂ ಅಳಬೇಕಾಗಿಲ್ಲ; ಮೈ ಕೈ ಅದುರಿಸಬೇಕಾಗಿಲ್ಲ

ಮರೆಯದ ಜಗತ್ತಿನೆದುರು ಮೊರೆಯುವ ಮಾನವರು
ಎಂದಿದ್ದರೂ ಉದುರು– ಅಂದರೂ ಯಾರೇಕೆ ಹೆದರಿಯಾರು?

* * * *

## ಸವಾಲು

ಮೈಯಿರದ ತಲೆಗೆ ಮೂರೂ ಹೊತ್ತು ರೇಸು
ಓಡುತ್ತೆ ದೂರ

ಗುರಿಯಿರದ ಕಡೆಗೆ ತೆರೆದ ಗುಂಗು ಕಿತ್ತು
ಮೇಯುತ್ತೆ ಆಸೆ ಹುಲ್ಲು,
ಒಂದು ಕಡೆ ನಿಂತದ್ದಿಲ್ಲ ಗುರಿಯ ಕಡೆ ಪೂರಾ ಓಡಿದ್ದಿಲ್ಲ

ಇಲ್ಲಿ ಇಳಿಯದೆ
ಅಲ್ಲಿ ಹತ್ತದೆ–
ಅತ್ತ ಗೆಲ್ಲಲಿಲ್ಲ; ಇತ್ತ ಸಾಯಲಿಲ್ಲ.
ಆಸೆ ಆಮಿಷದ ತೇವ ಬಯಲಲ್ಲಿ
ತೆವಲು ನೂಕು ನುಗ್ಗುಲು,

ಹಿಡಿದ ಸ್ವರ ಸಿಗದಿದ್ದಕ್ಕೆ; ಕಂಡ ಕಾಮನ ಬಿಲ್ಲು ದಕ್ಕದ್ದಕ್ಕೆ
ಎಗರಾಟ ನಿರಂತರ ಬಿಕ್ಕಟ್ಟು–ಬೆಂತರ,

ಎತ್ತ ನಡೆಯಬೇಕು–ಗೊತ್ತಿಲ್ಲ
ಎಲ್ಲಿ ಸುತ್ತಬೇಕು–ಗೊತ್ತಿಲ್ಲ
ಯಾವಾಗ ನಡೆಯಬೇಕು? ಹೇಗೆ ನುಡಿಯಬೇಕು?

ಇಲ್ಲ... ಇಲ್ಲ... ಏನೊಂದೂ ಗೊತ್ತಿಲ್ಲ
ಗೊತ್ತಿಲ್ಲದಿಲ್ಲ
ಅರಿವಿಲ್ಲ... ಅರಿವಿಲ್ಲದಿಲ್ಲ
ನಿಯಂತ್ರಣವಿಲ್ಲ
ನಾನು ಚಿರಂತನವಲ್ಲ
ಖಂಡಿತ ಆಗಿಲ್ಲ.... ಆಗಬೇಕಿಲ್ಲ
ಈ ಎಲ್ಲ ಏಕೆ ಬಿಡಲಾಗಿಲ್ಲ ಎಂಬೆಲ್ಲ ಪ್ರಶ್ನೆ
ಹತ್ತಿಕ್ಕಲಾಗಿಲ್ಲ
ಸ್ವಾಮೀ, ನಾನು ಪ್ರಾಣಿಯಲ್ಲ–
ಮನುಷ್ಯನಾಗಲಿಲ್ಲ.

# ವೈಪರೀತ್ಯ

ಯೋಚನೆ ಗಂಧ ತಟ್ಟಿ ವಾಸ್ತವ ಸುಗಂಧ ಹಳಿ ಬಿಟ್ಟಿತು;

ಢವ ಢವ ಬಡಿತ ಜೋರು ನಿಧಾನವಾಗಿ ಹದಕ್ಕೆ
ತಿರುಗಿ ಯಾಂತ್ರಿಕವಾಗಿ ಮತ್ತೆ ಮೂಲ ಒತ್ತಡಕ್ಕೆ
ಬರುವ ಹೊತ್ತಿಗೆ ದಿನಗಳಿಗೆ ತೊಡೆ ಬಲವಾಗಿ ಮೀಸೆ ಬಂದು
ಕ್ಯಾಕರಿಸುವ ಸ್ಟಂಟುಗಳಿಗೆ ವಾಲುವ ಒಲವ ಪಲ್ಲವಿಗೆ ಸಿಂಧು–
ವಾಗುವ ಕಾಮಿದಂಥೆ ನಡೆಸುವ ಧೀರತನಕ್ಕೆ ಲಗಾಮಿಲ್ಲ ನೋಟಕ್ಕೆ
ಬಿಂಕ ಬಿಗುಮಾನವಿಲ್ಲ ತಿರುಗಾಟಕ್ಕೆ ... ಕಂಡ ಕಂಡ ಒಂದೊಂದೂ ಅಂಡ ಬಂಡ
ದೃಶ್ಯಾವಳಿ ಕಾಳಿ ಕೇಳಿ ರೂಪ ತಾಳಿ
ಮನೆ ಆಫೀಸು ಹೊಲ ಪಾರ್ಕು ಗದ್ದೆ ಬಯಲ ಉದ್ದಗಲ ಸೀಳಿ–
ಈ ಲೋಕ ದುಗುಡ ಹೊಂಡ.

ಇಲ್ಲಿ ನಾಕ ನರಕ ಪಟ್ಟಿ ಹುಡುಕುವುದೇ ಬೇಡ
ಎಲ್ಲಿ ಸುಂಕ ಅಂಕೆ ಮೀರಿ ತೊಟ್ಟಿಯಾಗಿದೆ ಅಲ್ಲಿ ಹಾಡ ನುಡಿಯುವುದೇ ಬೇಡ;
ಸಮಸ್ತವೂ ರೆಡಿಯಿದೆ ಈ ಹವೆಯಲ್ಲಿ ಕಿರುಕುಳದ ಗಡಿಯಿದೆ ವರ್ತನೆಗಳ
ಪುರಾವೆಯಲ್ಲಿ ನಾಟಕವಾಡಿ ಬೀಳುತ್ತೇವೆ ಬಿದ್ದರೂ ಬೀಳದ
ಹಾಗೆ ಅಳದೆ ಅಳ್ಳೆದೆ ತೋರುಗೊಡದೆ ನಡೆದು ನಮಗೆ ನಾವೇ
ಗುಂಡಿ ತೋಡಿಕೊಳ್ಳುತ್ತಿದ್ದೇವೆ ಉರಿದಿವೆ ಅಗ್ನಿಕುಂಡಗಳು ಮೆರೆದಿವೆ–
ಬಿಕನಾಸಿ ಧರ್ಮ ದಳ್ಳಾಳಿಗಳು;

ಅಡಿಗಡಿಗೆ ವಂಚನೆ ಗಡಿಬಿಡಿ ಪೈಪೋಟಿ ಗಂಡಾಗುಂಡಿ ಲಾಲಸೆ ಲಸಿಕೆಗಳು
ಸತ್ಯಸಸಿಗಳ ಕಡಿದಿವೆ, ಬಳ್ಳಿ ನಯವಾಗಿ ಪ್ರಿಯವಾಗಿ ಎಂದಿನಂತೆ
ಎಲೆಗಳು ನಾದ ಪಲ್ಲವಿ ಮಿಡಿದಿವೆ–ಹಳ್ಳದಲ್ಲಿ ನೀರು ಬೆಟ್ಟದಲ್ಲಿ
ಸೂರ್ಯ ತೇರು ಆಕಾಶದಲ್ಲಿ ಗಾಳಿ ಮೇರು ವರ್ಣಲೀಲೆ ಗಾರು ಗಾರು ಎಳೆತದಲ್ಲಿ
ಪೃಥ್ವಿ ಪುಕಾರು ಕಂಡಂತೆ ಇಳಿತದಲ್ಲಿ ಏರುಪೇರು ಮಿಳಿತದಲ್ಲಿ ಒಗರು
ಕದುರು ಮುಗಿಯದ ಹುನ್ನಾರು ಉಂಡಂತೆ ಕಿನಿಸಿದೆ ಸುತ್ತ ಅಸ್ತವ್ಯಸ್ತ...

ಇನ್ನು ಆರಂಭ ಮಾಡಬೇಕು ಮೊದಲಿಂದ
ಹೊಸ ಹೊಸ ಕನಸು ಮಸ್ತಾಗಿವೆ ಉತ್ಸಾಹ ಸಿಕ್ಕಾಪಟ್ಟೆ ಓಟ ಕಟ್ಟಿ
ಒಂದೊಂದರಿಂದ ಎದೆಯಾರು ಕಳೆದು ಮೂಲ ಮೂಲದಿಂದ
ಗಟ್ಟಿ ಮನಸು ಹೊನ್ನನ್ನೇ ಹೊಳೆಸಿ ಹೊನ್ನಾಸೆ ಇಳಿಸಿ
ನೆಲ ಮುಗಿಲಿಗೆ ಸಂದೇಶ ಮುಟ್ಟಿ ನಾವು ಮೆರೆಯಬೇಕು–ಎಂಬೆಲ್ಲಕ್ಕೂ

ಆದರ್ಶದ ಉಡಾಫೆ ಕೊಳೆಸಿ ಕರಗಿಸಿ ನಾವೆಲ್ಲ ನಾಲಾಯಕ್ಕು
ಎಂದಷ್ಟೇ ಒದರಿ, ಮೊಟ್ಟ ಮೊದಲಿಂದ
ಸ್ಲೇಟು ಬಳಪ ಹಿಡಿಯಲಾಗದಕ್ಕೆ, ಹೀಗೆ...

ಇನ್ನಾದರೂ ನಾವು ತಿಳಿದುಕೊಳ್ಳಬೇಕಾಗಿದೆ–
ವಿಕಾಸವಾಗುತ್ತಿದೆ ಆಕಾಶ!

ಭೂಗೋಳದಾಚೆಗೂ ಖಗೋಳ ಕಾಯಗಳಿವೆ;
ಗುರುತ್ವ ಶಕ್ತಿ ಇದ್ದಾಗಲೇ ಗ್ರಹಪಥ
ಮಾನವ ಬದುಕಿನ ಪ್ರೀತಿ ರಥ
ಜೀವ ಭಾವಗಳ ಸಂಚಲನ ಸರಿತ!

ಎಲ್ಲಿ ಸುಪ್ತ ಮೌನ ಬ್ರಹ್ಮನಿದ್ದಾನೋ
ಅಲ್ಲಿ ಭದ್ರ ಕಾಳಿಯೂ ಇದ್ದಾಳೆ....

ವ್ಯೋಮದಲ್ಲಿದ್ದಾನೆ ಶ್ಯಾಮ
ಶ್ಯಾಮನಲ್ಲಿದ್ದಾನೆ ರಾಮ
ರಾಮನಲ್ಲಿದ್ದಾನೆ ಹನುಮ....

ಎಲ್ಲೆಲ್ಲಿ ಹನುಮ ಅಲ್ಲಲ್ಲಿ ಕಲ್ಪನೆ ವಿಹಂಗಮ
ಕಾವ್ಯ ಶಿಲ್ಪ ಗೀತ ನೃತ್ಯ ಸೃಜನೆ ಸರಿಗಮ!

* * * *

# ಸಂಜೆ

ದೂರ ದೂರ ಗಾಳಿ ಅರಸಿ ಹೋದ ಹಕ್ಕಿ ಪಕ್ಕಿ ರೆಕ್ಕೆಯಿಕ್ಕಿ
ನೆಲ ಜಲ ಹಾರಿ ಮರಳಿ ಗೂಡಿಗೆ ತಿರುಗಿ ಬರುವ ಹೊತ್ತು.

ಆಕಾಶದ ತುಂಬ ಸಂಜೆ ಚಂದ್ರನುಕ್ಕಿ ಬೆಳಕು ಕುಕ್ಕಿ
ನೀಲಿಯೊಳಗೆ ನಕ್ಕಿ ನಿಂತ ಹೊತ್ತು ಬೆರಗಾಗಿದೆ ಮೆಲ್ಲಗೆ;

ಮುಗಿದ ಹಗಲ ಮೆರೆಯ ಹೊರಟ ಚಂದ್ರ ಸಂಚಾರಿಗೆ
ತಣ್ಣಗೆ; ಇದು ಭೂಮಿ ಇದು ಹಗಲು ಇದು ರಾತ್ರಿ–
ಬಾಣಂತಿ ಗುರುತು ಹತ್ತದ ಎಳೆ ಹೊರಳಿ ಆಕಾಶದ ನಡುವೆ
ನಡೆದ ಬೈಗು ಮಬ್ಬಿನ ತೆರೆ–ಮುತ್ತಿ

ನೀಲ ದೂರ ದೂರ ಕರಗಿ ಸರಿದ ಹಾಗೆ
ಬಣ್ಣ ತಿರುಗುವ–ತಿರುಗಿ ಮರಳುವ–ಮರಳಿ
ಹಕ್ಕಿ ಪಕ್ಕಿ ಚಿಲಿಪಿಲಿ ಕೂಗುವ ಚುಕ್ಕಿ ಚುಕ್ಕಿ ಮಿನುಗುವ
ಭ್ರಮೆ–ಕಾಣದ ಭೂಮಿ ಮೇಲೆ ಬೆಳಕು–ಕತ್ತಲೆಯಲ್ಲಿ
ಹೊಳೆದ ಚಂದ್ರ.

ನೆಲ ತಬ್ಬಿ ನಿಂತ ಮರ,
ಗಿಡ ಮರ ಹೂಬಳ್ಳಿ ಸುತ್ತ ಅರಳಿ ಹಾದಿ ಹೊಳಪು
ಬೆಳೆದು ಊದಿ ಬಯಲು ಚಂದ್ರಕಾಂತ,

ದೂರ ದೂರದಿಂದ ಗಾಳಿ ಬದಲಾಗಿ ಬರುವ ವೇಳೆ–
ಇಳೆಗೆ ಕಳೆ–ಕಣ್ಣ ಹರಿಸಿದತ್ತ ಬೆಳ್ಳಿ ಬೆಳಕಿನ ಬೆಳೆ.

* * * *

# ಪ್ರಕೃತಿ

ಬೈಗು ನಕ್ಕಿತು, ಮುದುಕಿ ನಗೆ ಬಾನ ಮುಖದೊಳಗೆ–
ನೋಡುತ್ತ ನಡೆದ ಮಬ್ಬುಕತ್ತಲೆ ಕೆಳಗೆ :
ಹಕ್ಕಿಹಾಡು ಕಾಡಿನ ಜಾಡಿನ ಉದ್ದಗಲ ಮೇಳ ನಡೆಸಿದೆ
ರೆಕ್ಕೆ ಬಡಿತ ಗಾಳಿ ಪಲುಕು ದಂಗುಳಿ ಹಿಮ್ಮೇಳ ಹೊಂದಿಸಿದೆ
ಗಿಡಮರ ಮಾತಾಡುತ್ತಿವೆ ಎಲೆ ಉದುರಿದ ನೆಲದ ಮೇಲೆ ಕತ್ತಲೆ–ನುಣ್ಣು
ಪೊರೆ ಸೀಳಿ ಮಿನುಗುತ್ತಿವೆ ಮಿಣುಕು ಹುಳು ತಲೆಯೆತ್ತುತ್ತಿವೆ ಚುಕ್ಕೆಕಣ್ಣು.

ಕಂಡ ರೆಪ್ಪೆಗಳೊಳಗೆ ಬಸಿರಾಯ್ತು ಕಲ್ಪನೆ
ತುಳುಕಿ ಪದ ರತಿಯನಾದ ಸ್ಖಲನ ಬಂತು–ನೆನಪಿಗೆ ಕಮ್ಮನೆ;
ವ್ಯಕ್ತದ ಸುತ್ತ ಕರಿ ಕತ್ತಲು ಮುತ್ತಲು ಗಾಳಿ ಮದ್ದಲೆ ಬಡಿತ
ಅವ್ಯಕ್ತ ಒಂದೊಂದೂ ಲಯ ಬಿತ್ತಲು ಶಬ್ದದ ಅನುಭವ ನುಡಿತ
ಮುಕ್ತ ಧ್ವನಿ ಮಿಡಿತ–ಬಳ್ಳಿ. ಬೀಳಲು ಕೊಂಕಿಸಿದವು ಕತ್ತ;

ಬಿಗಿ ಹಗಲ ಸದ್ದಿರಿದು ಕೊರೆಯುವ ಮೌನ
ಬೆನ್ನ ತೆರೆದು ಇರುಳುತೇಲಿ ಬಂತು
ನಿಶಿ ನೃತ್ಯಕ್ಕೆ ಹೊರಟಳು ಬೆತ್ತಲೆ–ತ್ರಿಕಾಲ ತಂತು ನಿಂತು ಕುಂತು.

ಉಂಡ ಜುಗುಪ್ಸೆ ಭಯ ಕರಗಿ ಜಲವಾಯ್ತು ಕಾಲುವೆಯಾಯ್ತು
ಕಿರು ಹೊಳೆಯಾಗಿ ತೋರು ನದಿಯಾಗಿ ಜನಸಮುದ್ರ ಕೂಗಿ ಮೈತ್ರಿ
ಹಸಿರ ಒಸರಿ ಬಾಗಿ ತೂಗಿ ತೊನೆಯಿತು
ವಿಶ್ವಾಸ–ಕಂಪು–ಕಳೆ–ಹಂದರ ಸಂಭ್ರಾಂತಿ

ಯಾವಾಗ ಮೋಡ ಕಟ್ಟಿ ಎಷ್ಟು ಹೊತ್ತು ಮಳೆ ಹೊಡೆಯಿತೋ?
ಯಾವಾಗ ಮಳೆ ಬಿಟ್ಟು ಬೆಳಗಾಯಿತೋ?
ಎಲ್ಲಿಂದ ಬೆಳ್ಳಿ ಬೆಳೆ ಉಸಿರಾಡಿತೋ?

ನೆನಪಾಗುತ್ತಿಲ್ಲ; ನಡೆದ ಹೆಜ್ಜೆಗಳೆಲ್ಲ ನುಡಿಯೊಡೆದದ್ದು ಅರಿವಾಗುತ್ತಿಲ್ಲ
ಸುತ್ತಲ ನಿಶ್ಶಬ್ದದೊಳಗೆ ಪಾತಾಳ ಗಾಳ ತಿರುಗಿ ವಿಕೃತಿ
ಜಟಿಲ ಅಟ್ಟಹಾಸ ರೇಗಿ ಮತ್ತೆ ಮತ್ತೆ ನಿಗಿ ನಿಗಿ ಸದ್ದುಗದ್ದಲ.

* * * *

## ಪಂಚಮುಖಿ ಪ್ರಗಾಥ

ಹುಟ್ಟಿದ ಕ್ಷಣವೇ ನೋಡಿತು ಕಣ್ಣು
ಗ್ರಹಿಸಿತು ಮೊದಲಿಗೆ ಅನಂಬ ಬಣ್ಣ!
ಇತ್ತೇ ಬಣ್ಣಕೆ ಬಗೆ ಬಗೆ ಕಣ್ಣು?
ಕಣ್ಣಿನ ಒಳಗೂ ಇತ್ತೇ ಬಣ್ಣ?

ಗ್ರಹಿಸುವ ವೇಳೆಯೇ ಆಲಿಸಿತು ಕಿವಿ
ಅಲ್ಲಿತ್ತೆ ಸಾವಿರದ ಮರ್ಮರದಾಸವಿ?
ಇರದೆ ಮರ್ಮರದಲಿ ಮಧುರ ಸಂಗೀತ?
ಗೀತದ ರೀತಿಯೇ ಮನ ಮುಟ್ಟಿ
ಇನಿದನಿ ಹೃದಯವನತೂ ತಟ್ಟಿ
ನಾಲಗೆ ನುಡಿಯಿತು ಸರಿಗಮಪದನಿಸ
ವಿಧ ವಿಧ ಸಂತಸ ದನಿ ಏರಿಳಿತಕೆ
ಆಡಿತು ನಾಲಗೆ ಆ ಕಡೆ ಈ ಕಡೆ
ಯಾ ಕಡೆ ಹೊರಳಲಿ ಸಂಗೀತ
ಗೀತದ ಅರಳಲಿ ಮಾತು ಹಿತ
ಮಾತಿನ ನಡುವೆ ಮೌನ ಪಥ
ಮೌನದ ತುದಿಗೆ ಶಾಂತಿ ರಥ!

ಹಿತ ಹಿತ ಮಾತು ಹಿತದಾನೋಟ
ಹಿತ ಸಂಹಿತೆಗೆ ಮಾಧುರ್ಯದ ಝರಿ

ಕೇಳಿ ಕೇಳಿ ನೋಡಿನೋಡಿ
ನಾಲಿಗೆ ಸರಸಕೆ ಹಾಡು ಮೂಡಿ
ಹಾಡಿನ ನಡಿಗೆ ಕಣ್ಣಿನ ಪಯಣ
ಹಾದಿಯ ಬದಿಗೆ ಮೂಗಿನ ಸವಿಗೆ
ಯಾನ ವಿಹಾರ ಗಾಳಿ ಸಂಚಾರ
ತನುವಿಗೆ ಗೋಚರ ಹಿತಕರ ಪವನ

ತಂಗಾಳಿಯ ಆಕಾರ ಬಯಲ ವಿಹಾರ
ಬಯಲಿನ ಆಕರ ಶೂನ್ಯದ ಸಂಸಾರ

ಒಂದಕೆ ಒಂದು ಬೆಸುಗೆಯ ಬಂಧುರ
ಕಣ್ಣಿದೆ ಕಿವಿಯಿದೆ ಮೂಗಿದೆ ತ್ವಚೆಯಿದೆ
ಎಲ್ಲವ ಬಲ್ಲಂತೆ ನಾಲಗೆ ನುಡಿಯಿದೆ
ಅರಿಯದ ನಾಲಗೆ ಮೌನಕೆ ಕಣ್ಣಿದೆ
ಕಣ್ಣಿನ ನೋಟಕೆ ವಿಸ್ಮಯ ಬೆಡಗಿದೆ
ವಿಸ್ಮಯ ಅರಿಯಲು ಆಲಿಸೋ ಕಿವಿಯಿದೆ
ಸದ್ದಿನ ಆಚೆಗೆ ನಿಗೂಢ ಜಗವಿದೆ
ಜಗಕೊಂದು ಮಾಯ ಜೀವಗೊಂದು ಕಾಯ
ಎಲ್ಲಿಯೋ ಅಡಗಿದೆ ಕಾಯದ ಮಾಯ!
ಮಾಯೆಗೆ ಮೋಹದ ತನುವಿನ ಸಂಚಯ;

ಎಂದು ಕಣ್ಣು ಚೆಲುವಿನ ಹಾಡ ಹಾಡುವುದೇ
ಅಂದು ನಾಲಗೆ ಮಾತಿನ ಸೌಂದರ್ಯ ಸವಿವುದು!
ಎಂದು ಜಿಹ್ವೆ ವಚನಸಿರಿಯ ಪಚನ ಕಾಣುವುದೋ
ಅಂದು ತನುವು ಜಗದ ಪರಿಯ ಅರಿಯ ಹೊರಡುವುದು.

ಎಂದು ತನುವು ಮಾರುತನ ಸ್ಪರ್ಶ ಸವಿದು ನಡೆವುದೋ
ಅಂದು ಕಿವಿಯ ಸಂತಸದಿಂಗಿತ ಸೂರೆ ಮಾಡುವುದು
ಎಲ್ಲಿ ಆನಂದ ಸೂರೆಯಾಗುವುದೋ ಅಂದು ಆತ್ಮಗಾನ
ಅಲ್ಲಿ ಬದುಕಿನ ಕವನ ಅಲ್ಲೇ ಅನುಭವ ಸಿರಿಕಥನ

ಕಥನದಲಿ ಕಣ್ಣಿಲ್ಲವೇ? ಕಣ್ಣಿನಲಿ ಕಿವಿ ಹೆಕ್ಕಿದ ದನಿ ಇಲ್ಲವೇ?
ದನಿಯಲ್ಲಿ ಆಘ್ರಾಣಿಸಿದ ಜಗದ ಸವಿಯಲ್ಲವೇ?
ಸವಿಯಲ್ಲಿ ತನುವಿನ ಪಾತ್ರವಿಲ್ಲವೇ ನಿರಂತರ?
ಪಂಚೇಂದ್ರೀಯಗಳಲಿ ಸುಪ್ತ ಅರಿವಿನ ಸಂಚಾರ.

ಅಲ್ಲಿ ಪ್ರತಿ ಘಳಿಗೆ ಅರಿವಿನ ಮತ್ತು ಅನುಭವದ ಜೋಳಿಗೆಗೆ
ಜೋಳಿಗೆ ತುಂಬಲು ಕಾವ್ಯ ವಿಹಾರ
ಅಲ್ಲಿದೆ ಕಲೆಯ ಸೌಂದರ್ಯ ಅಗೋಚರ
ನೋಡುವ ರಸಿಕನೇ ಚಿತ್ರಕಾರ ಹಾಡುವ ಕವಿಯೇ ಕಲೆಗಾರ
ಕಲೆಯಲಿ ಲೋಕದ ನಿಗೂಢ ನಿಖರ
ಪಂಚೇಂದ್ರಿಯಕೆ ಜೀವನದನುಭವ ಕ್ಷಣಕ್ಷಣ ಆವಿಷ್ಕಾರ!

# ಕಣ್ಣು ನಾಲಗೆ ಕಡಲು : ಒಂದು ರೂಪಕ

೧

ಈ ಲೋಕದಲ್ಲಿ ಕಣ್ಣೋಟದಲ್ಲಿ ನೋಟದಾಟದಲ್ಲಿ
ಭೂಮಿ ಬಾನಸಿರಿ ಸೆಳೆತ ಸಾವಿರ!
ಮಾತು ಮೌನದಾಚೆ ಧ್ಯಾನಲೀನವಾಗೆ
ಆ ಗಾನ ಗಂಭೀರ!
ಹಾಡಿ ಪಾಡುವಾಗ ಗಾನ ಕಾಡುವಾಗ
ಸಂಗೀತ ಸಾಗರ!

ಆಕಾಶದವಕಾಶ ನೋಡಿ ನೋಡಿ ಏನಾಶ್ಚರ್ಯ
ಮಾತಾಡಿ ಮಾತಾಡಿ ಕೂಡಿ ಕಾಡಿ ಏನಾಂತರ್ಯ
ಆನಂದದಲಿ ಜೀವ ಭಾವನದಿ
ರಾಗರಂಗಿನಲಿ ಸ್ನೇಹ ಸಂಗದಲಿ
ಮಿಂಚು ಸಂಚಾರ!
ಸೌಂದರ್ಯದಾಂತರ್ಯ ಕಂಡಾಗ
ಕವಿತೆ ಸಾಕಾರ!

೨

ನೋಟ ಮೀಟಿದಾಗ ಲಾಸ್ಯ ಧಾರೆಯಾಗಿ
ನವ ನಾಟ್ಯದಾಕಾರ!
ಮೊದ ಮೊದಲಾಟ ಬರಿ ಹುಡುಗಾಟ
ಬೆಳೆ ಬೆಳೆದಾಡುವ ಬಾಳ ಪರದಾಟ!

ನಿನ್ನೆ ನಾಳೆ ಹೇಗೋ ಏನೋ–
ಇಂದು ಹಾದಿ ಸಾಗಿ ನೀನು ಬದುಕೋ!
ಬದುಕೋ.... ಬದುಕು.... ಬದುಕೋ.... ಬದುಕು....!
ಬೆಳಕೋ... ಬೆಳಕು.... ಬೆಳಕೋ..... ಬೆಳಕು!

ಮಳೆ ಹನಿ ಹನಿ ಸೇರಿ ಸೇರಿ ಹೊನಲೋ!
ನದಿಗೆ ನದಿ ಸೇರಿ ಸೇರಿ ಕಡಲೋ!

ಆನಂದ ಆನಂದ ತೇರು
ಮೈಯೆಲ್ಲಾ ಹೂವಾದ ತೇರು
ತೇರು...... ತೇರು...... ತೇರು....
ತೇರು.... ಬಂತು..... ತೇರು......
ಮೊಗ್ಗೆಲ್ಲಾ ಹೂವಾಗಿ ಕಾಯಾಗಿ ಹಣ್ಣು
ಮಾತೆಲ್ಲಾ ಮುದವಾಗಿ ಮೈಯೆಲ್ಲಾ ಕಣ್ಣು!

೩

ಅಕ್ಷರ ಅಕ್ಷರ ಕಲಿಯುತ ಸಾಕ್ಷರ
ಸಾಕ್ಷರ ಭೀಕರ ಬೆಳೆಯುತ ರಾಕ್ಷಸ
ಗಾವುದ ಗಾವುದ ನಡೆದನೋ ಮಾನವ
ನಿತ್ಯವೂ ನಿತ್ಯವೂ ಆದನೋ ದಾನವ
ದಾನವ ಮಾನವ ಆದರೆ ಚೆನ್ನೋ
ಎಲ್ಲಕೂ ಮೂಲವು ನಿನ್ನಯ ಕಣ್ಣೋ

ಕಣ್ಣಲಿ ಕವನಿಸೆ ನಾಲಗೆ ಹೆಣ್ಣೋ
ಹೆಣ್ಣನು ಅರಿಯುವ ಕಡಲದು ಗಂಡೋ
ಗಂಡೋ.... ಹೆಣ್ಣೋ... ಹೆಣ್ಣೋ..... ಗಂಡೋ....
ತಿರುಗುವ ಭುವನವೇ ಸೃಷ್ಟಿಯ ಚೆಂಡೋ
ಸೃಷ್ಟಿಯ ಚೆಂಡೋ.... ಸೃಷ್ಟಿಯ ಚೆಂಡೋ!

* * * *

## ಪ್ರಕೃತಿ ಪ್ರಗಾಥ

ಆದಿಯಲಿದ್ದುದು ಪ್ರಕೃತಿಯೇ
ಆನಂತರ ಮೂಡಿದ್ದು ಪುರುಷಕೃತಿಯೇ!
ಮೋಹಕ ಪ್ರಕೃತಿ ಚೆಲುವೆ ಪೃಥ್ವಿಯೇ
ಒಂದಕ್ಕೆ ಹನ್ನೊಂದು ಕೊಡುವ ದೇವಿ ರತಿಯೇ;

ಮುಪ್ಪಿಲ್ಲ ಸಾವಿಲ್ಲ ವಸುಂಧರೆಗೆ......
ಯಾವತ್ತೂ ಬಂಜೆಯಲ್ಲ ಇಳಾ ತಾಯಿ ಒಡಲಿಗೆ
ಹಗಲೂ ಇರುಳೂ ನೋಡಿದರೂ ಮುಗಿಯದ ರೂಪು

ಮೇರೆಯಿಲ್ಲ ಧಾರೆಯೆಲ್ಲಾ ವಸುಧೆ ಒನಪಿಗೆ
ಅಕ್ಷಯ ನಿಧಿ ಅಕ್ಕರೆಯ ಅಮ್ಮ ಧರಿತ್ರೀ ಮಾತೆಗೆ
ಶಾಶ್ವತ ರಮ್ಯ, ಧಾರಿಣಿ ಪೆರ್ವ್ ನಲ್ಮೆತೋಳಿಗೆ
ಅನಂತ ಆಯಾಮ ಸಾವಿರದ ಕರ್ಮ ಅವನಿತಾಯಿಗೆ
ಅಗಣಿತ ಚೆಲುವು ಅನುಪಮ ಮಿಡಿತ
ಭೂದೇವಿ ಸೃಜನೆಗೆ
ಅಪ್ರತಿಮ ಶಾಂತಿ ಅಕಳಂತ ಕೀರ್ತಿ
ಆನಂದಿ ಮೇದಿನಿಗೆ
ಒಂದಲ್ಲ ಎರಡಲ್ಲ ಕೋಟಿ ಸೃಷ್ಟಿ
ನಗನಗವ ನೆಲದಮ್ಮಗೆ
ಮುಗಿದರೂ ಮುಗಿಯದ ಅಮ್ಮಯ ವರ್ಷಿಣಿ
ಅರ್ತಿ ಅವನಿಗೆ!

## ಕಣ್ಣು

ಜಗದರಿವೂ ದೊರೆತುದೇ ನಿನ್ನಿಂದ ನಯನ
ನಿನಗಿದೋ ಹುನ್ಮನದ ಭಾವನಮನ
ತಾಯ್ತಂದೆ ಅಜ್ಜಜ್ಜಿ ಬಂಧುಬಳಗ
ನೀ ಕೊಟ್ಟ ತಿಳಿವಿಂದ ಸಂಬಂಧ ಯೋಗ
ನಾ ಕಂಡ ಹಸುಕರು ಎತ್ತು ಎಮ್ಮೆ
ನಿನ್ನ ನೋಟ ಕರಣಿಸಿದ ಗ್ರಹಿಕೆ ಹೆಮ್ಮೆ!

## ನಾಲಗೆ

ನುಡಿ ನುಡಿಯ ಮೂಡಿಸಲು ಹಸುಳೆತನದ ಹೋರಾಟ
ಮೊದಲ ತೊದಲಿಗೆ ಅಪ್ಪ ಅಮ್ಮ ಪಟ್ಟ ಸಂತಸ ಎನಿತೋ
ಅರೆಬರೆ ಮುದ್ದು ಮಾತಿಗೆ ಅಜ್ಜ ಅಜ್ಜಿಗೋ ಹರುಷ
ಪ್ರತಿ ನುಡಿಗೆ ಮನೆಮಂದಿ ಮುಖವೆಲ್ಲ ಊರಗಲ
ಅಂದು ಕಂಡ ಆನಂದ ತಾಯ್ನುಡಿಯ ಮಕರಂದ
ನುಡಿ ಹಡೆದ ನಾಲಗೆಯೇ ಪಾರ್ವತಿಪರಮೇಶ
ವಾಗರ್ಥ ಹೆತ್ತದ್ದು ಅನನ್ಯ ಹೊನ್ನುಡಿ ಕಣ್ನುಡಿ
ಸವಿನುಡಿ ಕಸಿನುಡಿ ಶಶಿನುಡಿ ನನ್ನಿನುಡಿ ಚೆನ್ನುನುಡಿ
ನಲ್ಮೆ ಸಿರಿ ಕೋಟಿನುಡಿ ವಾಗ್ದೇವಿ ವರವೋ
ಗೀತನಿಧಿ ಕಾರಂಜಿ ಪ್ರೀತಿ ನಾಲಿಗೆಯ ಫಲವೋ.

## ಕಡಲು

ನದಿ ನದಿಯ ನೀರು
ಸೇರಿ ಕಡಲ ತೇರು
ಅಲೆ ಅಲೆಯಾ ಜೋರು
ಸರ್ಪವಾಗಿ ಹೋರು
ಎಲ್ಲ ಎಲ್ಲೆ ಮೀರು

ಅನುಭವವ ಹೀರು
ಸೃಜನೆಯ ಕಾರು!

ಕಲ್ಪನೆಯ ನಾಟ್ಯ
ಕಡಲಾಗಿ ಲಾಸ್ಯ
ಅಭಿವ್ಯಕ್ತಿ ಬರೆದ ಭಾಷ್ಯ
ವಾಗರ್ಥ ಎಂದೂ ನವ್ಯ
ಗ್ರಹಿಸುತಿರೆ ಜಗವೂ ರಮ್ಯ !

* * * *

## ಪ್ರಕೃತಿ ಮತ್ತು ಪುರುಷ
(ಒಂದು ಅನಾದಿ ಪ್ರಗಾಥ)

ಭೂಮಿಯನು ವ್ಯೋಮವನು ಹೀರ ಹೊರಟನು
ನಮ್ಮ ನವಮಾನವ,
ಎನಿತು ಸಾವಿರ ವರುಷ ಆಗಿ ಹೋದವೋ ಏನೋ
ಓ ಭುವಿಯು ಇಲ್ಲೀ ಹುಟ್ಟಿ, ಅಪೂರ್ವ ಸಂಭವ!
ಎಂದು ಬೆಂಕಿಯ ಬಳಕೆ ಕಂಡುಕೊಂಡನೋ ನರನು
ಅಂದೇನೆ ನಾಗರಿಕತೆಗೆ ನಾಂದಿ ಹಾಡಿದ!

ಸೃಷ್ಟಿಕರ್ತ ಎಲ್ಲಿಹನೋ, ಎಂತು ಅಡಗಿ ಕುಳಿತಿಹನೋ
ಕಂಡ ಮಹನೀಯನು ಎಲ್ಲೂ ಇಲ್ಲವೋ!
ಅಂತಿರಲು ನವ ಬ್ರಹ್ಮ, ಹೊಸ ಹೊಸತು ಸೃಷ್ಟಿಸಿಹನೋ
ಮಾನವನು ಕೃಷಿಯನ್ನು ಕಂಡುಕೊಂಡನೋ!
ಮೆದುಳಿನಿಂದ ಯೋಚಿಸಿದ ಕೈಗಳಿಂದ ಆಗು ಮಾಡಿದ
ನರ ಮಾನವನ ಬುದ್ದಿಬಲ ಊಹಾತೀತವೋ!
ತನ್ನೆಲ್ಲ ಬಲದಿಂದ, ತನ್ನೆಲ್ಲ ಭಾವದಿಂದ, ಏನೆಲ್ಲ ನಿರ್ಮಿಸಿದ
ಈ ನರನು ಅಳವಾಚೆ ಮೀರಿ ಬೆಳೆದನೋ
ಅಣು ಬಾಂಬು ಸೃಜಿಸಿದ, ಚಂದ್ರನ ಮೇಲೆ ಕಾಲಿರಿಸಿದ
ಮಾನವನು ಸೃಜನೆಯಲಿ ಅಪ್ರತಿಮನೋ

ಲಕ್ಷ ಲಕ್ಷ ವರ್ಷದಿಂದ ಅನುಕ್ಷಣವೂ ಚಿಂತಿಸಿದ
ಅನುದಿನವೂ ಸಾಹಸಕೆ ತಾನಿಳಿದನೋ
ಕೋಟಿ ಕೋಟಿ ವರ್ಷದ ಹಿಂದೆ ಕಣ್ಣೆದುರಿನ ಈ ಭೂಮಿ
ಸೂರ್ಯನಿಂದ ತಾ ಸಿಡಿದು ಬೇರೆಯಾಯಿತೋ
ಆ ಮೇಲೆ ಜೀವ ಜಲ ಹಸಿಹಸಿರು ಗಿಡಗಂಟೆ
ಈ ಚೆಲುವ ಇಳೆ ಮೇಲೆ ಸೃಷ್ಟಿಯಾಯಿತೋ
ಐವತ್ತು ಕೋಟಿ ವರ್ಷದ ಹಿಂದೇನೇ ಉದಿಸಿತ್ತು
ಅಸಮಾನ್ಯ ಆದೀಜೀವಿ 'ಅಮೀಬಾ" ವೋ
ಏಕ ಕಣದ ಆ ಜೀವಿ ಆಹಾರ ತಿನಬಲ್ಲ
ಸೃಜನಶೀಲತೆಯಿಂದ ಸಂತಾನ ಕಾಣಬಲ್ಲ
ಅದುವೇನೆ ಆದಿಶಕ್ತಿ ಮಾನವ ಮೂಲವೋ!

ಅಲ್ಲಿಂದ ಭುಮಿ ಮೇಲೆ ಪೌರುಷದ ಶ್ರೀ ಪುರುಷ
ಹುಟ್ಟಿದವನು ನಡೆದಿದ್ದ
ಗೆಡ್ಡೆ ಗೆಣೆಸ ತಿಂದಿದ್ದ
ಬೇಟೆಗಳ ನಾಡಿದ್ದ
ಬದುಕ ನಡೆಸಲು
ಕೈಗಳನೇ ಬಳಸಿದ್ದ
ಶತ್ರು ಹಿಡಿಯಲು!

ನೆಲೆಯನ್ನೇ ತಿಳಿಯದವ ಬದುಕಲಿಕೆ ತಿನ್ನುವವ
ಮೂರು ಹೊತ್ತು ಅಲೆದಾಡಿ ತಾ ಉಳಿದನೋ
ಪ್ರಾಣಿಯಂತೆ ಸದ್ದು ಮಾಡಿ ತಾ ಮೆರೆದನೋ
ಸಿಡಿಲನ್ನೂ ಎದುರಿಸಿದ ಗುಡುಗನ್ನೂ ಎದುರಿಸಿದ
ಬಿರುಗಾಳಿ ಮಿಂಚು ಮೀರಿ ತಾ ಉಳಿದನೋ
ಭಯದಿಂದ ಭೀತನಾಗಿ ಗಟ್ಟಿ ಮನಸು ತಾ ಮಾಡಿ

ಇದ್ದೆಲ್ಲ ಅಂಜಿಕೆಯ ತಾಗೆದ್ದನೋ
ಕಲ್ಲು ಮುಳ್ಳು ಹಾದಿಯಲಿ ತಾ ನಡೆದನೋ
ಹುಳಹುಪ್ಪಟೆ ಸಾವರಿಸಿ ನೆಲೆ ನಿಂತನೋ
ವಿಷಜಂತು ಪರಿಹರಿಸಿ ತಾ ಗೆದ್ದನೋ!

ಹಂತಹಂತ ಮೇಲೇರಿ ತಾ ಬೆಳೆದನೋ
ನಾಗರಿಕತೆ ಮೆಟ್ಟಿಲೇರಿ ತಾ ನಿಂತನೋ
ಅಂದಿನಿಂದ ಇಂದಿನ ತನಕ ಹೋರಾಟವೇ
ಪ್ರಕೃತಿಜೊತೆ ಪುರುಷನ ಸೆಣೆಸಾಟವೇ

ಏನೆಲ್ಲ ಬವಣೆಯಲೂ ಬಿಡದಂತೆ ತನ್ನ ಛಲ
ಬದುಕಲಿಕೆ ಮಾನವನ ಸಂಗ್ರಾಮವೇ
ಎಲ್ಲ ಗೆದ್ದೂ ತಾ ಮೆರೆದ, ತಾ ಮೆರೆದೂ ಅಧೀನನಾದ
ಪ್ರಕೃತಿಗೆ ಅಧೀನನಾದ ನರ ಕುಬ್ಜವೇ
ಪುರುಷ ಪ್ರಕೃತಿ ಮುಂದೆ ಪುಟ್ಟ ಅಣುವೇ!

* * * *

## ಪೃಥ್ವಿ ಪ್ರಗಾಥ

ಹೆಬ್ಬನವು ನಲ್ಮೆ ಕಬ್ಬಿಗನ ಜೊತೆಗೆ
ಸಂವಾದ ಮಾಡುತ್ತಿತ್ತು;
ತಬ್ಬಿಬ್ಬಾದ ಕಬ್ಬಿಗನ ಹೃದಯ
ಅಬ್ಬರಿಸಿ ಮೊರೆಯುತ್ತಿತ್ತು!
ಅಂದೆನ್ನ ಒಡಲು ಹೂ ಹಸಿರ ಮಡಿಲು
ಇಂದೇಕೆ ಬರಡು ಹೀಗೆ?
ಕಬ್ಬಿಣದ ಮನುಜ ತಾಯಿ ಮರೆತನೇಕೆ?

ಬೀಳಾಯಿತೇಕೆ ವನವು?
ಅತ್ತ ಚಿಗುರೂ ಇಲ್ಲ; ಇತ್ತ ಕದಿರೂ ಇಲ್ಲ
ಮರುಭೂಮಿಯಾಯ್ತೆ ಬನವು?

ಈ ಮಣ್ಣು ಮನುಜ ಕಲ್ಲಾದನೇಕೆ
ಬಂತೇಕೆ ಈ ದುರಾಸೆ?
ಮುಗಿಲೆತ್ತರ ಬೆಳೆದ ಮರಗಿಡವ ಕಡಿದು
ಸುಡುಗಾಡು ಮಾಡಿದನೇಕೆ?
ಬಣ್ಣದ ಹಕ್ಕಿ ಇಲ್ಲ ಕಣ್ಣಿಗೆ ನೋಟವಿಲ್ಲ
ದುಡ್ಡು ಮಾಡಹೊರಟನೇಕೆ?
ಎಂಥ ಕಗ್ಗಾಡಿತ್ತು? ಏನು ಅಂದವಿತ್ತು?
ಇನ್ನಂಥ ಚೆಂದಬಹುದೇ?
ಕಡಿಕಡಿದು ಮರವ ಕೊಡಲಿದಾಸನಾದ
ಇನ್ನೆಷ್ಟು ದಾಹ ಅವಗೆ?

ಇಲ್ಲಿ ತರು ತೇರಿತ್ತು ತನಿ ತಳಿರಿತ್ತು
ತನ್ನೊಡಲ ತಂಪೂ ಇತ್ತು
ತಿಳಿಗಾಳಿಯಿತ್ತು ಸಿರಿ ತರು ಇತ್ತು
ತರು ಕರು – ಮೇಯುತ್ತಿತ್ತು
ಮಿಗದ ಹಿಂಡಿತ್ತು ತಾಯ್ಮೊಗವಿತ್ತು
ನಗೆ ನವಿಲು ಕುಣಿಯುತ್ತಿತ್ತು!
ಋತು ರಂಗಿತ್ತು ಬೆಳಗು ಬೈಗಿತ್ತು

ಈಗೇಕೆ ಎಲ್ಲ ಬಯಲು?
ಎಲ್ಲಿ ಹೋಯ್ತು ಬೆರಗು? ಎಲ್ಲಿ ಹೋಯ್ತು ಮಿರುಗು?
ನೆನೆದರೆಲ್ಲ ಈಗ ದಿಗಿಲು!
ಆ ಬಿನದವಿಲ್ಲ; ನೀನಾದವಿಲ್ಲ!
ಎತ್ತ ಹೋಯ್ತು ನೆಲದ ಆಮೋದ?

ಪಚ್ಚೆ ಪಸುರಿಲ್ಲ ಹಸಿರ ಉಸಿರಿಲ್ಲ
ಹಣ್ಣ ಹೆಸರೂ ಈಗ ಇಲ್ಲ!
ಸೊಬಗನ್ನೆಲ್ಲಾ ಸೂರೆ ಮಾಡಿ ಹೀಗೆ
ಸುಡುಗಾಡು ಮಾಡಿದರೇನು?
ದುಡ್ಡು ದುಡಿಯಹೋಗಿ ಸೌಂದರ್ಯ ನುಂಗಿ
ಎಲ್ಲ ರಾಕ್ಷಸರಾದರೇನು?
ಕೊಡಲಿಗಳನೆತ್ತಿ ಕರುಳಗಳಕೊಯ್ದರೇ?
ಗರಗಸವೂ ಮಾತಾಡಿತೇನು?
ಮರಮುಟ್ಟಿಗಾಗಿ ಮರದಸ್ವರ ಕೊಂದರೇ?
ಮತ್ತೆ ಹಸಿರು ಮೂಡಿತ್ತೇನು?

ಇಲ್ಲಿ ಕಲಕಲ ಇತ್ತು ಕಲರವ ಇತ್ತು
ಆ ಕಿಲಕಿಲ ಎಲ್ಲ ಹೋಯ್ತು?
ಆ ಮಳೆ ಇಲ್ಲ ಆ ಬೆಳೆ ಇಲ್ಲ
ಆ ಇಂಚರ ಬತ್ತಿ ಹೋಯ್ತು!

ಎಷ್ಟು ಬಗೆಯ ಚಿಟ್ಟೆ? ಎಷ್ಟು ಬಗೆಯ ಹೂವು?
ಏನೆಲ್ಲ ವೈಭವ ಇತ್ತು?
ಆ ತೆನೆಗಳೇನು? ಆ ದಿನಗಳೇನು?
ಹೊನ್ನು ಚಿನ್ನ ಬನದ ಒಡಲು
ಗಿಣಿ ಕೋಗಿಲೆ ಇಲ್ಲ; ಲಾವುಗೆಯಾ ಇಲ್ಲ
ಬೆಂಗಾಡಾಯ್ತೆ ಕಾಡ ಮಡಿಲು?

ಕಲ್ಪವೃಕ್ಷವಿಲ್ಲ; ಕಾಮಧೇನುವಿಲ್ಲ
ಕಂಸಾಸುರರೇ ಈಗ ಎಲ್ಲ!
ಜೀವ ಲಕ್ಷ್ಮಿ ಇಲ್ಲ; ಭಾವದೇವತೆ ಇಲ್ಲ
ಹಣದ ಹೆಮ್ಮಾರಿಯಾದರೆಲ್ಲ!

ಚೆಂಡು ಹೂ ಇಲ್ಲ; ಗೊಂಡೆ ಹೂ ಇಲ್ಲ
ಪ್ಲಾಸ್ಟಿಕ್ಕೂ ಮನೆಯಲ್ಲೆಲ್ಲಾ!
ತುಂಬೆ ಹೂ ಇಲ್ಲ; ರೆಂಬೆ ಹೂ ಇಲ್ಲ
ಚಿತ್ರವಷ್ಟೇ ಗೋಡೆಯಲ್ಲೆಲ್ಲಾ!

ಬಣ್ಣದ ಮನೆಯ ಕಟ್ಟಿ ಬಣ್ಣದ ಮಾತಾಡಿದ
ಭಾವಕೋಶಕೆ ಬೆಂಕಿ ಇಟ್ಟ
ಯುಗಯುಗಗಳಿಂದ ಪ್ರಕೃತಿ ತಂದ
ಜೀವಜಾಲ ಒಟ್ಟಿಗೆ ಸುಟ್ಟ

ಮಣ್ಣ ಮನಷ್ಯನೇಕೆ ಹಣದ ಮನುಷ್ಯನಾದ
ಹೆಣವಾದಳೇ ತಾಯಿ ಅವನಿ?
ಎಂಥ ನಿಸರ್ಗವಿತ್ತು? ಪಚ್ಚೆ ಸ್ವರ್ಗವಿತ್ತು?
ಕಂಗಾಲಾದಳೇ? ತಾಯಿ ಧರಣಿ?

ಮೇಘ ಮಾಲೆಯಾ ಇಲ್ಲ; ಅಂಬರ ಲೀಲೆಯಾ ಇಲ್ಲ
ಬಯಲಂತೆ ಬಾನೂ ಬಯಲು
ಹುಟ್ಟು ಹಾಡೂ ಇಲ್ಲ; ಈಗ ಭುಗಿಲು
ಮಹಲ ಮೇಲೆ ಮಹಲು ಕಟ್ಟಿ ಕೋಟಿ ನೆರಳು
ಅಲ್ಲಿಲ್ಲ ಹಕ್ಕಿಕೊರಳು

ಗಾಜು ಗೋಡೆ ಮಹಲು ಮುಟ್ಟಿಹವು ಮುಗಿಲು
ಎಳ್ಳಷ್ಟೂ ಇಲ್ಲ ಹಸಿರು
ಬೆಂಕಿಬಿತ್ತೆ ಬನಕೆ? ಅಂಕೆ ಇತ್ತೆ ಮನಕೆ?
ಶಂಕೆ ಎದ್ದಿದೆ ಪ್ರಗತಿ ಉಸಿರು!

ತಾಯಿ ಇದ್ದ ಕಾಲಕೆ ಶೃಂಗ ಶೃಂಗ ಗುಡ್ಡಗಿರಿಯು
ಹೊಂಡ ಹೊಂಡ ನೀರ ಝರಿಯು
ಎಲ್ಲ ಒಣಗಿ ಈಗ ಬಾಯಿ ಬಿಟ್ಟ ದರಿಯು
ಕೊಳ್ಳೆಯಾಯ್ತೇ ಪ್ರಕೃತಿ ಸಿರಿಯು?

ಅಮ್ಮ ಕೊರಗಿ ಕೊರಗಿ ಕೃಶವಾಗಿ ಈಗ
ನಾಗರಕ ಪರಿಸರ ಬದಿಗೆ

ಹುರುಳಿರದ ಕೃತಿಗೆ ಮುಖ ಪುಟದ ವೈಭೋಗ
ಹೊರಗೆ ರಾಗ ರಂಗಿನ ಹೊದಿಕೆ

ಲೂಟಿಯಾಯ್ತೆ ಕಾಡು? ಖಗಮೃಗದ ಬೀಡು!
ಇನ್ನೆಲ್ಲಿ ಹಸಿರ ಹಾಡು?
ಅತ್ತ ಕರಗಿ ಕೋಡು ಗಿರಿಯಾಯ್ತುದರಿಯು
ಹರಿದಿದೆ ಅಳಲು ಓಡು!

ತಾಯಿ ಪೃಥ್ವಿ ಕೊರಗು ನೀಳ ನೀಳ ಕೊರಗು
ನಿಟ್ಟುಸಿರಿಗಿದೆಯೇ ಬೆಳಗು?

ಮನುಜ ಕಣಜವಾಗಿ ಸ್ವಾರ್ಥಗೂಡು ಕಟ್ಟಿ
ಪ್ರಕೃತಿಯ ಒಡಲೂ ಬರಿದು!
ವಿಕೃತಿಯ ಕಂಡ ಸ್ವಾರ್ಥಿ ಮಣ್ಣ ಮನುಜ
ನಿಸರ್ಗ ಚಿತ್ರ ಮಾತ್ರ ಬರೆದು!

* * * *

# ಪಕ್ಷಿ ಪ್ರಗಾಥ

ಎಂಥ ಕಾಲ ಬಂತೋ ನಮಗೆ
ನೀರು ನೆರಳಿಲ್ಲದಾಯ್ತು ಧರೆಗೆ
ಹಸಿರ ಜಾಗರವಿತ್ತು ಪ್ರಾಣಿ ಅಗರವಿತ್ತು
ಬದಿಗೆ ನಾಗರವಿತ್ತು ಜೊತೆಗೆ ಸಾಗರವಿತ್ತು.

ಎಂಥ ಬರವು ಬಂತೋ ಬುವಿಗೆ
ಯಾವ ಮೇವಿರದಾಯ್ತು ಸವಿಗೆ;
ಕಣಿವೆಕಾನನವಿತ್ತು ನಗುವ ಹೂಬನವಿತ್ತು
ಕಳವೆ ಗದ್ದೆಯೂ ಇತ್ತು ಬಣವೆ ಬಂಕಗಳಿತ್ತು
ಎಂಥ ಘಳಿಗೆ ಬಂತೋ ಬಾಳಿಗೆ
ಮೇಘರಾಯ ಹೋದನೆಲ್ಲಿಗೆ?

ಅತ್ತ ತಿನ್ನಲು ತಿಂಡಿ ಇತ್ತ ದವಸದ ಬಂಡಿ
ಹಣ್ಣು ಹಂಪಲು ದಂಡಿ ಕೊಂಬೆರೆಂಬೆಗೆ ಜೇನಗಿಂಡಿ
ಉಪವಾಸ ಇದ್ದಿಲ್ಲ ಕಾಡ ನಾಶ ಇದ್ದಿಲ್ಲ
ಸ್ಫೋಟದಾಟ ಸದ್ದಿಲ್ಲ ಕ್ರಿಮಿನಾಶ ಮದ್ದಿಲ್ಲ

ಇದ್ದದ್ದೆಲ್ಲಾ ಇರವ ಸಿರಿಯೋ
ಮೆದ್ದದ್ದೆಲ್ಲಾ ರಸದ ಪರಿಯೋ
ಈಗ ಯಾವುದೂ ಇಲ್ಲ ಬರಡು ಕಾಲವೆಲ್ಲಾ
ಸ್ನೇಹ ಪ್ರೀತಿಯೂ ಇಲ್ಲ ಯಾವ ಮೈತ್ರಿಯೂ ಇಲ್ಲ
ಇರುವುದೊಂದೇ ಭುಮಿಕಾಣೋ
ಅದೂ ಒಣಗಿ ನಿತ್ರಾಣ ಕಾಣೋ!

ಆಗ ಕೇಕೆ ಇತ್ತು ಮೋಹಕ ಕುಣಿತವಿತ್ತು
ರಾಗಭೋಗವೂ ಇತ್ತು ತ್ಯಾಗಯೋಗವೂ ಇತ್ತು
ಎಲ್ಲ ಎಲ್ಲ ಎಲ್ಲಿ ಹೋಯ್ತೋ?
ಬೆಂಗಾಡೇ ಗತಿಯಾ ಆಯ್ತೋ!
ನೂರು ಹಕ್ಕಿ ಇಂಚರ ಹೂವ ಪರಿಮಳ ಮಧುರ
ಬನದೇವಿ ಹತ್ತಿರ ಮನುಜ ಮೌಲ್ಯದ ಉತ್ತರ

ಈಗ ಶೂನ್ಯ ಶೂನ್ಯ ಪ್ರಸ್ತಾರ
ಸುಳಿವ ಮನುಜನಲ್ಲಿ ಮತ್ಸರ
ಆಗ ಹೆಜ್ಜೆಗೆ ಹೆಜ್ಜೆ ಮಳೆ ಹನಿಯಗೆಜ್ಜೆ
ಭೂತಾಯಿಗೆ ವರ್ಷದ ಓಜೆ
ಹರ್ಷದಭಿಷೇಕ ಮುಂಜಾನೆ ಮುಸ್ಸಂಜೆ!

ಗೂಡ ಸದ್ದೂ ಇಲ್ಲ ಕಾಡ ಸದ್ದೂ ಇಲ್ಲ
ಆಗ ಇಳೆಯೆಲ್ಲಿ ಸ್ವರ್ಗವಿಲ್ಲಾ!
ಈಗ ಯಾಕಿಂಥ ಕ್ಷಾಮ ರೋದನ?
ಕುಣಿದು ಕುಪ್ಪಳಿಸೋದೆಂತು ತನು–ಮನ?
ಯಾವ ಲಾಸ್ಯವಿಲ್ಲ ರಮ್ಯ ಭಾಷ್ಯವಿಲ್ಲ
ಕವಿಯ ಕಾವ್ಯವಿಲ್ಲ ಕಲೆಯ ಸಾತತ್ಯವಿಲ್ಲ

ಬಂತು ಬಂತೋ ಎಂಥ ಕಾಲ?
ಕೊಂಪೆ ಕೊಂಪೆ ಈಗ ಕಂಗಾಲ!
ಇನ್ನೆಲ್ಲಿ ಚಿಂತನ? ಇನ್ನೆಲ್ಲಿ ನರ್ತನ?
ಉಕ್ಕಿತೇ ಇಂಪಿನ ತಾನ?
ಹರೀದೀತೇ ಗಾನ–ವಿತಾನ?
ತೆರೆದೀತೇ ರಸಿಕತೆ ಹೃನ್ಮನ?

ಎಲ್ಲ ರೋಗದ ಮೂಲ ಈ ಮಾನವನಯ್ಯ?
ಇವನ ಮನಸಿನ ತಾಣ ದುರಾಸೆಯಯ್ಯ
ಇವನ ಲಾಲಸೆಗೆಲ್ಲಾ ಸ್ವಾಹಾ
ಕಾಡುಕಡಲೂ ಕರಗಿಸೊ ದಾಹಾ
ಇದ್ದ ಭೂಮಿ ನುಂಗಿದ ಬೆಟ್ಟ ಬೆಟ್ಟ ನುಂಗಿದ
ಕಾಡು ಕಾಡು ನುಂಗಿದ ಕಡಲ ಮಡಿಲು ನುಂಗಿದ

ಚೆಂದದ ಒಡಲೂ ನುಂಗಿ ಹಸಿರ ಹಡಿಲೂ ನುಂಗಿ
ಕಣ್ಣು ಕಣ್ಣು ನುಂಗಿ ಗರಿಯ ಗರಿಯಾನುಂಗಿ
ನುಂಗಾಸುರನಾದ ಮನುಜ
ಇನ್ನೆಲ್ಲಿ ಸೌಂದರ್ಯ ಸಹಜ?
ಬಂದೀತೇ ನನಗೆ ತೇಜ?
ಕಂಡೀತೇ ಹಸಿರ ಕಣಜ?
ನಾ ಆದೇನೆ ಲಾಸ್ಯದ ರಾಜಾ
ಪರಿಸರವಿದ್ದರೆ ಸೃಷ್ಟಿಯ ಬೀಜ !

# ನೀಲ ನೀಲ ನೈಲು

ಮರಳು ಕಾಡಿನಲಿ ಅರಳಿದಮೃತವಾಹಿನಿ
ನೀಲ ನೀಲ ನೈಲು,
ಪಿರಮಿಡ್ದು ಪರಿಸರದ ಪ್ರಾಣ ನಂದಿನಿ–
ನೀಲ ನೀಲ ನೈಲು!

ಐಗುಪ್ತ ದೇಶದ ವರ ಪ್ರಸಾದವೇನೋ–
ಈ ನೀಲ ನೀಲ ನೈಲು!
ಹನಿ ಮಳೆಯಾ ಇರದ ಬೆಂಗಾಡ ನಡುವೆ
ಹರಿದಿದೆ ಮೈಲು ಮೈಲು!

ಜೀವನದಿಯ ದಡಕೆ ಜೀವರಾಶಿ ನಗರ
ನಗರಗಳ ರಾಜ ಕೈರೋ!
ಒಂದು ಕಾಲಕ್ಕಿಲ್ಲ ಆಡಳಿತ ಕ್ರೂರ–
ಆಗಿ ಹೋದರೆವನಿತೋ ಫೆರ್ರೋ!

ನಾಲ್ಕು ಸಾವಿರ ಮೈಲು ಹರಿಯುವ ನೈಲು
ಸುತ್ತ ಮುತ್ತ ಕುರುಚಲು ಕಾಡು,
ದಿಗ್ದಿಗಂತ ತೋರೋ ರಾಶಿ ರಾಶಿ ಮರಳು–
ಈ ಈಜಿಪ್ಟ್ ನೈಲು – ನಾಡು !

ಅತ್ತ ಇತ್ತ ಗುಡ್ಡ, ಚಿಕ್ಕ ಪುಟ್ಟ ಗುಡ್ಡ
ಹರಿದಿದೆ ಮದ್ಯೆ ನೈಲು,
ಹರಿದಂತೆ ಮುಂದೆ ಹರಿದ್ವರ್ಣ ಕಾಡು
ಅಡವಿ ನಡುವೆ ಬಳಕೋ ನೈಲು

ಸುತ್ತ ಹಳದಿ ಮರಳು ಅರಳರಳು ಅರಳು
ಕಗ್ಗತ್ತಲ ನಡುವೆ ನೈಲು
ಗೂಢ ರಹಸ್ಯ ಹೊತ್ತ ಆಫ್ರಿಕಾದ ಕಾಡು
ಮಧ್ಯೆ ಪ್ರಶಾಂತ ನದಿಯೇ ನೈಲು

ಹರಿಬಿಸಿಲ ಹಗಲ ನಡುವೆ ಹೊಳೆವ ನೈಲು
ಮಹಾನದಿ ಎನಿಸಿದ ನೈಲು
ಸುವಿಶಾಲ ಆಫ್ರಿಕಾ ಬಾಳಿ ಬೆಳಗಿದಂಥ
ಜೀವಂತ ಅಯ್ಯೋರ್ಟಾ ನೈಲು!

ನ್ಯಾನ್ಸಾ ಸರೋವರದ ಮೂಲವೇನೆ ನೈಲು
ಈಜಿಪ್ಟಿನ ಪ್ರಾಣ ಹೊನಲು,
ದೂರ ದೂರ ಹರಿವ ಯುಗ ಯುಗದ ನೈಲು
ಬತ್ತದ ಜಲದ ಮುಗಿಯದ ವಾಹಿನಿ ನೈಲು !

ಏಳು ಸಾವಿರ ವರುಷ ಹಿರಿಮೆಯನು ಪಡೆದ
ಜೀವ ನದಿಯೇ ನೀಲ ನೈಲು,
ಪೂರ್ವ ಪಳಮೆ ಕಂಡ ಪ್ರಾಚ್ಯ ಗರಿಮೆ ಉಂಡ
ಈಜಿಪ್ಟಿನಾ ಪ್ರಾಣ ನೈಲು!
ಲೆಕ್ಕವಿರದ ದೋಣಿ ಎನಿತೆನಿತೋ ಹಡುಗು
ಈಜಿಪ್ಟಿನ ದ್ರವ್ಯ ರಂಗು,
ನೈಲಿರಲು ಮೆರಗು, ನೈಲಿರಲು ಬೆರಗು
ನೈಲಿದ್ದಲ್ಲಿ ಹಸಿರ ಸೆರಗು!

ಈ ನದಿ ಹೆತ್ತ ಖರ್ಜೂರ ಕದಳಿ
ಅಗಣಿತವೋ ಬೆಳೆದ ರೀತಿ!
ಆ ಜಲದ ರಾಶಿ ಹರಿಹರಿದು ಸುರುಳಿ
ನೈಲೆಂಬ ಅನಂತವಾಹಿ!

ಐಗುಪ್ತ ಸಂಸ್ಕೃತಿ ಇಲ್ಲೇನೆ ಅರಳಿ
ಬರೆದದ್ದು ಸುವರ್ಣ ಚರಿತ್ರೆ
ಒಂದು ನಾಡನುಳಿಸಲೊಂದು ನದಿಯು ಸಾಕೋ!
ಅಂಥ ನೈಲು ಜೀವ ಸರಿತೆ!

* * * *

# ಬಿನ್ನಹ

ನಿನ್ನ ಚರಣದಲಿ ನಾನು ತಲೆಯಿಡುವೆ
ಹರಸು ದಿವ್ಯ ತಾಯೇ,
ನಿನ್ನ ಕರುಣೆಯನು ನಾನು ಬಯಸಿರುವೆ
ಆಶೀರ್ವದಿಸು ಜಗನ್ಮಾಯೆ!

ನಿನ್ನ ನಲ್ಮೆವಾಣಿಯದು ನಿಜಕ್ಕೂ ಅಮೃತ
ನನ್ನ ಜೀವ ಚೈತನ್ಯವದು ಹರಿಸು ಸುಕೃತ;
ನಿನ್ನ ದಿವ್ಯ ಸುರಭಿಯದು ನೀಡು ಅಕ್ಕರೆ
ನನ್ನ ಬಾಳಿಗೆ ಧಾರೆಯದು ಹರಿಯಲಿ ಹಾಲ್ತೊರೆ!

ಮೌನಿ ನಾನು, ನಿನ್ನಿಂದ ಮಾತು ಮೂಡಿಬರಲಿ
ವಾಗರ್ಥಪೂರ ಪದ ಪದದಲ್ಲೂ ಕೂಡಿಬರಲಿ;
ವಾಗರ್ಥದಾಚೆ ಧ್ವನಿಯಾಗಿ ಮೊರೆಯುತಿರಲಿ
ನಿಜಕಾವ್ಯವಾಗಿ ಸಹೃದಯನಲ್ಲಿ ಪಲ್ಲವಿಸುತಿರಲಿ!

* * * *

## ದೀವಳಿಗೆಯ ಹಾಡು

ಅನುದಿನ ಮನ ಮಿಡಿದಿದೆ ಬೆಳಕಿನ ಪ್ರಭೆಗೆ
ಅನುಕ್ಷಣ ತನು ತುಡಿದಿದೆ ಕಿರಣದ ಕಡೆಗೆ
ಹೊಂಗಿರಣದ ಎಡೆಗೆ!

ತಂದ ಬಸಿರ ಬಗೆಯುವಲ್ಲಿ
ಅಜ್ಞಾನ ತಿಮಿರ ತೆಗೆಯುವಲ್ಲಿ –

ಅಕ್ಷರಕ್ಷರ ಜ್ಯೋತಿರ್ದೀಪ ಹೊಂಬೆಳಕನು ಚೆಕ್ಕುವಲ್ಲಿ
ಬರೆಯಲಿ ದೀವಳಿಗೆಯ ದೇದೀಪ್ಯಮಾನ ರಂಗವಲ್ಲಿ;

ಮೌಢ್ಯವೆಂಬ ಮಾರಿಯನ್ನು ರಶ್ಮಿರಾಜ ದೂರ ಮಾಡಲಿ
ದಾರಿದ್ರ್ಯದ ನಿಜ ಶೃಂಖಲೆ ಚೂರು ಚೂರಗಲಿ ಬೆಳಕಿನಲ್ಲಿ–

ಮನೆ ಮನೆಯಲಿ ಹಣತೆ ಸಾಲು ಬೆಳ್ಳಂಬೆಳಗು ಬೆಳಗಲಿ
ಮನ ಮನದಲಿ ಹೊಸವಿಚಾರ ನಿರಂತರವೂ ಮಿನುಗಲಿ.

ದ್ವೇಷದ ಖಡ್ಗದಾರ್ಪು ಮೂಲೆಯಲ್ಲಿ ಅಡಗಲಿ
ಪ್ರೀತಿಯ ಸಿರಿ ಜ್ಯೋತಿರ್ಮಾಲೆ ದೇಶ ವಿದೇಶ ಹರಡಲಿ;;
ತಾರರಮ್ಯದ ಉಕ್ಕಿನ ಪರದೆ ತುಂಡು ತುಂಡಾಗಲಿ ಒಮ್ಮೆಗೆ
ತಿಳಿಬೆಳಕಿನ ಸಿರಿ ಪ್ರತಿಫಲಿಸಲಿ ನಿತ್ಯ ನಿತ್ಯ ಜಗದೊಳಗೆ –

ವರ್ಗ ವರ್ಣ ಭೇದ ಭಾವ ಪೂರಾ ಅಳಿದು ಹೋಗಲಿ
ಮೂಡಲಿ ಹೊಸತು ದೀವಳಿಗೆ ನಮ್ಮ ನಿಮ್ಮ ಬಾಳಲಿ....

ಸ್ನೇಹ ಪ್ರೀತಿ ವಿಶ್ವಾಸ ಜ್ಯೋತಿ ಮತ್ತೆ ಮತ್ತೆ ಪ್ರಜ್ವಲಿಸಲಿ
ಎಲ್ಲೆಲ್ಲೂ ಅಡಿಗಡಿಗೆ ಪಲ್ಲವಿಸಲಿ ಬೆಳಕಿನ ಸಿರಿ ರಂಗವಲ್ಲಿ!

* * * *

# ಜ್ಞಾನಶ್ರೀ

ಎನಿತೆನಿತು ಸವಿದರೂ ಮುಗಿಯದ ಸವಿಯ ಸಿರಿ
ಎನಿತೆನಿತು ಮೊಗೆದರೂ ಕರಗದ ಹಿರಿಯ ಸಿರಿ
ಜ್ಞಾನ ಶ್ರೀ..... ಸುಜ್ಞಾನ ಶ್ರೀ..... ವಿಜ್ಞಾನ ಶ್ರೀ.

ವಸುಂಧರೆಯಂತೆ ವಿಶಾಲ ಸುವಿಸ್ತಾರ ಪರಿ
ಬಾಂದಳದಂತೆ ಅಗಾಧ ಅನೂಹ್ಯ ಪರಿ
ಜ್ಞಾನ ಶ್ರೀ.... ಸುಜ್ಞಾನ ಶ್ರೀ..... ವಿಜ್ಞಾನ ಶ್ರೀ.

ಹೊನ್ನೇಸರಂತೆ ಉಜ್ವಲ ರಮ್ಯೋಜ್ವಲ ಕಾಂತಿಸಿರಿ
ಬೆಳ್ದಿಂಗಳಂತೆ ಪ್ರಶಾಂತ ಪರಿಪೂರ್ಣ ಶಾಂತಿಸಿರಿ;
ತಂಗಾಳಿಯಂತೆ ಜೀವಕ್ಕೆ ಪುಳಕ ಝುರಿ
ಮಹಾಗಂಗೆಯಂತೆ ನಿರಂತರ ಚೈತನ್ಯ ಲಹರಿ !

ಹಿಮಗಿರಿಯಂತೆ ಭವ್ಯೋಪ ಭವ್ಯಪರಿ
ಮಹಾ ಕಡಲಂತೆ ಅನುಪಮ ಅಸದಳಸಿರಿ,
ನಿತ್ಯ ಕ್ಷಿತಿಜದಂತೆ ನಿಗೂಢ ನಿಗೂಢ ಸಿರಿ
ಸತ್ಯ ನಿಧಿಯಂತೆ ಅದ್ವಿತೀಯ ಅಪೂರ್ವಪರಿ!

ತಿಳಿದಷ್ಟೂ ತಿಳಿಸುವ, ಹೊಳೆದಷ್ಟೂ ಹೊಳೆಸುವ
ಸಿದ್ಧಿ ಬುದ್ಧಿ ಕಲಿಸುವ, ನವ್ಯ ಭಾವ ಬೆಳೆಸುವ –
ಅಂಧಕಾರ ಕಳೆಯುವ, ತಿಳಿ ಬೆಳಕ ಬೀರುವ
ಬಾನಗಲ, ಭೂಮಿಯಗಲ, ಮುಗಿಲಗಲ, ಬಗೆಯಗಲ.....
ಜ್ಞಾನ ಶ್ರೀ ....... ಸುಜ್ಞಾನ ಶ್ರೀ..... ವಿಜ್ಞಾನ ಶ್ರೀ.

* * * *

## ವಸಂತಾಗಮನ

ವಸಂತ ಬಂದನು ವಸುಧೆಯೊಳು
ಸ್ವರ್ಗದ ಸನ್ನಿಧಿ ಎಲ್ಲೆಲ್ಲೂ!

ಚಿಗುರನು ತೂಗುವ ತಂಪಿನ ಎಲರೊಳು
ನಾಕವೇ ಕಾಂಬುದು ನರಕದಲೂ!

ಇನಿಯಳನಪ್ಪುವ ಇನಿಯನ ತೆರದೊಳು
ಹೂಗೊಂಚಲು ತಬ್ಬಿವೆ ಲತೆಲತೆಯಲ್ಲೂ;

ತಾಯನು ಅರಸುವ ಮಗುವಿನ ಬಗೆಯೊಳು
ಕೋಗಿಲೆ ಹಾಡುತ ಬಂದಿತು ಇಳೆಯೊಳು!

ಕಾಡಿನ ನಡುವೆಯೂ ಹೊಳೆದನು ನೇಸರು
ಮರಗಿಡಬಳ್ಳಿಗೂ ಬಿಸಿಯುಸಿರು;

ವಸಂತ ಬಂದಿರೆ ವಸುಂಧರೆ ಮಡಿಲು
ಹೂವಿಂದ ತುಂಬುತಾ ಬಣ್ಣದೊಡಲು !

* * * *

# ಬದ್ಧತೆ

ಮೋಹದ ಮನಸಿನ ಮಾದಕ ಬಯಕೆಗೆ
ಕೊನೆಯೆನ್ನುವುದಿಲ್ಲ,

ದಾಹದ ತನುವಿನ ಆಸೆಯ ಒರತೆಗೆ
ಮೊದಲೆಂಬುದೂ ಇಲ್ಲ–

ಸ್ನೇಹದ ಬದುಕಿನ ನಲ್ಮೆಯ ಶರಧಿಗೆ
ನದಿ ಇಲ್ಲದೆ ಇಲ್ಲ,

ತಾಳ್ಮೆಯ ಇರವಿನ ತೀರದ ಅರಿವಿಗೆ
ಗುರಿ ಇರದೆಯೂ ಇಲ್ಲ!

ಪ್ರೀತಿಯ ಬಾಳಿನ ಅರಿಯದ ಬಂಧಕೆ
ಮುಗಿವೆಂಬುದೂ ಇಲ್ಲ

ಧರ್ಮದ ನಡತೆಯ ಬದ್ಧತೆ ಬದುಕಿಗೆ
ಕ್ಷೋಭೆಯ ಅಬ್ಬರವಿಲ್ಲ !

* * * *

## ವೈಭವರೂಪಿಃ ವಸುಂಧರೆ

ಸಸ್ಯರೂಪಿ ಶ್ಯಾಮಲೆ, ಪುಷ್ಪರೂಪಿ ಕೋಮಲೆ
ವಸಂತನಿಗೊಲಿದಳು;

ಸೃಷ್ಟಿರೂಪಿ ಸಿರಿ ಇಳೆ, ದೃಷ್ಟಿರೂಪಿ ಶಾಂತಲೆ
ಋತುರಂಗಲಿ ನಲಿದಳು!

ವೃಕ್ಷಭವ್ಯ ಶಕುಂತಲೆ, ಪಕ್ಷಿಮಧುರೆ ಶ್ರೀ ವಿಮಲೆ
ಹೂಮೇಳ ತೆರೆದಳು;

ಪರ್ಣರೂಪಿ ಅಸದಳೆ, ಪೂರ್ಣರೂಪಿ ಸದಮಲೆ
ನವಕವಿತೆ ಬರೆದಳು!

ದೃಶ್ಯರೂಪಿ ಚಿತ್ಕಳೆ, ರಮ್ಯರೂಪಿ ರಸೋಜ್ವಲೆ
ಜಗಕೆ ಹೊಸತು ನೀಡಿದಳು

ನವ್ಯರೂಪಿ ನಿರ್ಮಲೆ, ಭವ್ಯರೂಪಿ ಶುಭ ಬಕುಳೆ
ಚೈತ್ರ ಗೀತೆ ಹಾಡಿದಳು!

* * * *

## ನಿಜವ ಹುಡುಕು

ಜಡತೆ ಎಂಬುದು ಎಂದೂ ಹಿಂದಕೆ ಸೆಳೆವುದು
ಜತನವೋ ಈ ಮನುಜಾ......!

ಜಯವನು ಪಡೆಯಲು ಜಂಜಡ ತೊರೆವುದು
ದುಡಿಯುತಿರು ಸಹಜಾ!

ಜಾಗೃತವಾಗಿರೆ ಸರಿ–ದಾರಿ ಕಾಂಬುದು
ಪಯಣವ ತೊರೆಯದಿರು,

ಕಾಯಕ ನಿನಗಿರೆ ಗೆಲುವೂ ಸಿಗುವುದು
ಬೆವರನು ನೀ ಸುರಿಸು !

ವಿಜಯವ ನೀ ಗಳಿಸು !
ಜಾತನಾದೆ ನೀನು, ಜಗವೇ ಕಲಿಸುವುದು
ಜಾಗರೂಕ ನೀನಾಗಿರು !

ಜಿಗುಟು ಗುಣವಿರಲು ಬದುಕೇ ಕೊಳೆವುದು
ಜಿಬರು ತೆಗೆದು ನೀ ಜೀವಿಸು
ಜೀವಾಳ ಕಂಡು ನಿಜವ ಅರಸು !

* * * *

## ಕಣ್ಣಿಗೆ ಕಾಣದ ಸೃಷ್ಟಿಯ ಬೇರು

ಬಾನಿಗೆ ಬೆಡಗನು ಇತ್ತವರಾರೋ....?
ಬಯಲಿಗೆ ಬೆರಗನು ಇತ್ತವರಾರೋ....?

ಕಾಡಿಗೆ ಒಡಲನೂ
ನಾಡಿಗೆ ಮಡಿಲನೂ
ಇತ್ತವರಾರೋ...? ಇತ್ತವರಾರೋ....?

ಮಣ್ಣಿಗೆ ಕಣ್ಣನು ಇತ್ತವರಾರೋ....?
ಕಣ್ಣಿಗೆ ದಿಟ್ಟಿಯ ಇತ್ತವರಾರೋ.....?

ಹಕ್ಕಿಗೆ ಉಲಿವನೂ
ಚುಕ್ಕಿಗೆ ಮಿನುಗನೂ
ಇತ್ತವರಾರೋ....? ಇತ್ತವರಾರೋ....?

ಕಣ್ಣಿಗೆ ಸೃಷ್ಟಿಯ ಶ್ರೀಗುರು
ಬಣ್ಣನೆಗೆಟುಕದ ರೂವಾರಿ ದೇವರು

ಹೊನಲಿಗೆ ಹರಿವನು ಇತ್ತವರಾರೋ
ತಳಿರಿಗೆ ಚೆಲುವನು ಇತ್ತವರಾರೋ

ಸೂರ್ಯಗೆ ಬೆಳಕನೂ
ಚಂದ್ರಗೆ ಕದಿರನೂ
ಇತ್ತವರಾರೋ...? ಇತ್ತವರಾರೋ....?
ಕಣದಲಿ ಅಣುವೂ
ಅಣುವಲಿ ಬಲವೂ,

ಮನದಲಿ ಒಲವೂ
ಒಲವಲಿ ನಲಿವೂ....

ಕೊಟ್ಟವ ಕಣ್ಣಿಗೆ ಕಾಣದ ದೇವರು
ಸೃಷ್ಟಿಯ ಗುಟ್ಟಿನ ಪುಷ್ಟಿಯೇ ದೇವರು

ದೇವರೇ ನಿಜ ಕವಿ ನಾವೇ ರಸಿಕರು
ಸೃಷ್ಟಿಯೇ ಕಲ್ಪತರು ಮನಜರೇ ಭಕ್ಷಕರು

ಎಲ್ಲಕೂ ಮೂಲವೇ ಕಾಣದ ದೇವರು
ಅಗಣಿತ ಸೃಜನೆಯ ರಚಿಸುವ ಶ್ರೀಗುರು !

## ಬಂಜೆ

ಅಮ್ಮನಾಗುವುದು ಅಮೃತ ಘಳಿಗೆ
ಹೆಣ್ಣಿಗೆ
ಅಂದಿನಿಂದಲೇ ಅವಳ ಬಾಳಿಗೆ
ತಾಯ್ತನದ ದೀವಳಿಗೆ;

ಬಂಜೆಯಾದರೆ ಸಮಾಜದ ಕಣ್ಣಿಗೆ
ಬರಡುತನ ಭೂಮಿಗೆ
ಯಮಯಾತನೆ ದೇವಿಗೆ!

ತಿರಸ್ಕಾರ ದೃಷ್ಟಿ–ಗಂಡನ ಮನೆಯವರಿಗೆ
ಮುಗಿಯದ ದುಃಖ.... ಅಡಿಗಡಿಗೆ,
ಕೊರಗಿನೆದೆಗೂಡು.... ನಾರೀಮಣಿಗೆ !

ಹೊನ್ನಿದ್ದರೇನು? ಚೆನ್ನಿದ್ದರೇನು?
ಬೆಲೆ ಇದೆಯೇ ಗೊಡ್ಡು ಹಸುವಿಗೆ?
ಬರೆಯದ ಚರಿತೆ ಮಾತೆಯಲ್ಲದ ಮಡಿಲಿಗೆ !

* * * *

## ಅರ್ಪಣೆ–ಸಮರ್ಪಣೆ

ಅರ್ಪಿತವಾಗಲಿ.... ಸಮರ್ಪಿತವಾಗಲಿ
ನಮ್ಮಯ ಬದುಕು ತಾಯಿಗೆ
ನಮ್ಮೆಲ್ಲ ಜೀವನ ನಾಡಿಗೆ!

ಕನ್ನಡ ಕವಿಗಳ ಕಾವ್ಯದ ಮೇಲಾಣೆ
ನಮ್ಮಕ್ಕರೆ ಬಾನು ತಾಯಿಗೆ ಅರ್ಪಣೆ;
ಕನ್ನಡ ನೆಲ ಜಲದ ನಿಧಿಯ ಮೇಲಾಣೆ
ನಮ್ಮೆಲ್ಲ ಚಿಂತನೆ ತಾಯಿಗೆ ಸಮರ್ಪಣೆ!

ಕನ್ನಡ ಪ್ರೀತಿಸಿ ಕನ್ನಡ ಪೂಜಿಸಿ
ಕನ್ನಡವನೇ ಬಳಸಿ ಕನ್ನಡವನೇ ಬೆಳೆಸಿ
ಸೂರ್ಯ ಚಂದ್ರರಂತೆ ತಾಯ್ನುಡಿ ಹೊಳೆಸಿ
ಭೂಮಿ ಬಾನಂತೆ ಚಿರಂತನವಾಗಿಸಿ

ಯುಗ ಯುಗದಲ್ಲೂ ಮೊಳಗಲಿ, ಇತಿಹಾಸ ದಾಖಲಿಸಿ!

* * * *

## ಕನ್ನಡವೇ ಮಾರ್ದನಿಸಲಿ

ಕನ್ನಡ ನಾಡಲಿ ಕನ್ನಡವೆಂದೂ ಮೊರೆಯಲಿ ಮುಗಿಲೆತ್ತರ
ಕನ್ನಡ ಮನೆಯಲಿ ಸನ್ನಡೆಯೆಂದೂ ಮೊಳಗಲಿ ಆಶೋತ್ತರ !

ನಮ್ಮಯ ವನಗಳು ಮರ ಮರದಲ್ಲೂ ಕನ್ನಡ ಸಿರಿ ತೋರಲಿ
ಹೆಮ್ಮೆಯ ನದಿಗಳು ಅಲೆ ಅಲೆಯಲ್ಲೂ ಕನ್ನಡ ನುಡಿ ಹಾಡಲಿ

ಕನ್ನಡ ನಾಡಿನ ಅಂಗಳದಲ್ಲಿ ಕನ್ನಡದ ಮಳೆಗರೆಯಲಿ
ಕನ್ನಡ ಕನಸಿನ ದಿವ್ಯಾಂಬರದಲಿ ನಲ್ಮೆಯ ರವಿ ಹೊಳೆಯಲಿ!

ನಾಡದೇವಿಗೆ ದಿನವೂ ನುಡಿ ಘಂಟೆ ಘಣ ಘಣಿಸಲಿ
ನಾಡ ಜನರ ನಾಲಗೆಯೂ ಕನ್ನಡವನೇ ಗುಣುಗುಣಿಸಲಿ

ನಮ್ಮ ಬಯಲು ಬಾನ್ಗಳಲಿ ಕನ್ನಡದ ಗುಡಿ ಮೆರೆಯಲಿ
ನಮ್ಮ ಒಳಗು–ಹೊರಗೆಲ್ಲ ಕನ್ನಡವೇ ಮಾರ್ದನಿಸಲಿ !

* * * *

## ಅಳಿಯದು ನಮ್ಮ ಕನ್ನಡ

ಜಾಗತೀಕರಣ ಜಗವ ಕಲಕಿದರೂ
ಅಳಿಯದಯ್ಯಾ ನಮ್ಮ ನಲ್ಮೆ ಕನ್ನಡ!

ನಾಗರೀಕರಣ ಹಬ್ಬಿ ಹರಿದರೂ
ಅಳುಕದಯ್ಯ ನಮ್ಮ ಹಿರಿಮೆ ಕನ್ನಡ!

ಕೈಗಾರಿಕೀಕರಣ ಕೊಬ್ಬಿ ಕೂಗಿದರೂ
ಉಳಿವುದಯ್ಯ ನಮ್ಮ ಪ್ರೀತಿ ಕನ್ನಡ;

ಉದಾರೀಕರಣ ಇಳೆಯ ಆಳಿದರೂ
ಬೆಳೆವುದಯ್ಯ ನಮ್ಮ ಅಮೃತ ಕನ್ನಡ!

* * * *

## ಪರಿವರ್ತನೆ

ಅಜ್ಞಾನದಿಂದ ಜ್ಞಾನದೆಡೆಗೆ
ಮೃಗತ್ವದಿಂದ ಮನುಷ್ಯತ್ವದೆಡೆಗೆ–

ಕರೆದೊಯ್ವುದೇ ಶಾಲೆ
ವಿದ್ಯೆ ಎಂದರೆ ಬೆಳಕಿನಲೆ!

ಬೆಳಕಿಂದ ಬದುಕಿಗೆ ಬೆಲೆ
ಜಗದ ಚರಾಚರಕೆ ನೆಲೆ!

ಅಸತ್ಯದಿಂದ ಸತ್ಯದೆಡೆಗೆ
ತಮಸ್ಸಿನಿಂದ ಜ್ಯೋತಿಯೆಡೆಗೆ

ನಡೆಸುವುದೇ ಶಾಲೆ
ಅಲ್ಲಿ ಶಿಕ್ಷಣ ಸೂರ್ಯನಲೆ ಅಲೆ ಅಲೆ!

* * * *

## ಚಿರಂತನ ಕನ್ನಡ

ಖಂಡ ಖಂಡಗಳಾಚೆ ಹಬ್ಬಿದೆ
ಕನ್ನಡಿಗರ ಸಂಸ್ಕೃತಿ,
ಅನ್ಯ ಭಾಷಿಕರನ್ನೂ ತಬ್ಬಿದೆ
ಕನ್ನಡ ಕೀರ್ತಿ ಸುಕೃತಿ!

ಅಮೆರಿಕದಲೂ ಕನ್ನಡ ಸಂಘ
ನಮ್ಮ ಹಿರಿಮೆ ಸಾರಿದೆ,
ಅನ್ಯ ರಾಷ್ಟ್ರಗಳಲೂ ಬಳಗ
ಕನ್ನಡತನವ ತೋರಿದೆ!

ನಮ್ಮ ಕಲೆ ಸಾಹಿತ್ಯ ಸಂಗೀತ
ವಿಶ್ವ ಮಾನ್ಯವಾಗಿದೆ,
ಕುವೆಂಪು ಬೇಂದ್ರೆ ಮಾಸ್ತಿ ಕಾರಂತ
ವಿಚಾರ ಕ್ರಾಂತಿ ನಡೆದಿದೆ!

ನಮ್ಮ ಸನ್ನಡೆ ನಮ್ಮ ಸನ್ನುಡಿ
ಜಗತ್ ಪ್ರಸಿದ್ಧವಾಗಿದೆ,
ಬೇಲೂರು ಹಳೆಬೀಡು ಕೆಮ್ಮಣ್ಣುಗುಂಡಿ
ಅದ್ಭುತ ದಾಖಲೆ ಪಡೆದಿದೆ!

ಮೈಸೂರು ದಸರಾ ಕೋಲಾರ ಚಿನ್ನ
ಅಪೂರ್ವ ಪ್ರಖ್ಯಾತಿ ಕಂಡಿದೆ,
ಗೋಲ್ ಗುಂಬಜ್, ಗೊಮ್ಮಟ, ಯಾಣ
ಜನಗಣದ ಮನದಿ ನೆಲೆಸಿದೆ!

ಪಂಪ ರನ್ನ ಕುಮಾರ ವ್ಯಾಸರ – ಕಾವ್ಯ
ಸರ್ವ ಹೃದಯ ತಟ್ಟಿದೆ,
ದಾಶರ ಶರಣರ ಸರ್ವಜ್ಞ ಸಾಹಿತ್ಯ
ದೇಶ ವಿದೇಶವ ಮುಟ್ಟಿದೆ!

ನಮ್ಮಯ ವಿಜ್ಞಾನ ಅದ್ಭುತ ತಂತ್ರಜ್ಞಾನ
ವಿದೇಶೀಜನರನ್ನು ಸೆಳೆದಿದೆ,
ಇಲ್ಲಿಯ ನದಿ–ನದ ಗಿರಿ–ದರಿ ಕಾನನ
ಪ್ರವಾಸೀಪ್ರಿಯರನ್ನು ಕರೆದಿದೆ!

ಒಂದಲ್ಲ ಎರಡಲ್ಲ ನಮ್ಮೆಲ್ಲ ಸಾಧನೆ
ಕನ್ನಡಿಗರ ಚಾರಿತ್ರ್ಯ ಹೊಳೆಸಿದೆ,
ಕನ್ನಡದ ಜನಪದ ಎಂದೂನು ಮೂಂದೇನೆ
ನಮ್ಮೆಲ್ಲ ಮುನ್ನಡೆಯ ತಿಳಿಸಿದೆ!

ನೆಲಮುಗಿಲು ಇರುವನಕ ಕಡಲು ಬತ್ತುವ ತನಕ
ಚಿರಂತನ ಕನ್ನಡ ಮೆರೆಯುತ್ತದೆ
ಧರೆಯೊಳಗೆ ಹಸಿರಾಗಿ ಕನ್ನಡಿಗರ ಉಸಿರಾಗಿ
ಆಚಂದ್ರಾರ್ಕ ಕನ್ನಡ ಮೊರೆಯುತ್ತದೆ !

* * * *

## ವ್ಯಾಕುಲ

ನಿರ್ಧೂಮ ವಲಯ ಈ ನಗರದಲ್ಲಿ
ನಿರ್ಮಾಣವಾದೀತೇ ಪ್ರಸ್ತುತದಲ್ಲಿ?

ಪರದೇಶೀ ಗೀಳೀನ ವ್ಯಾಮೋಹದಲ್ಲಿ
ದೇಶೀಯ ಚಿಂತನೆ ಮೂಡೀತೆ ಇಲ್ಲಿ?

ನಕಲಿಗಳ ಮಿಂಚಿನ ಈ ನಾಡಿನಲ್ಲಿ
ಅಸಲಿಗಳ ಉದ್ಧಾರ ಆದೀತೆ, ಹೇಳಿ!

ನಿಕೇತನರ ಸ್ವಾರ್ಥದ ನಂಜು ನೆರಳಲ್ಲಿ
ಅನಿಕೇತನ ತತ್ವ ಪಲ್ಲವಿಸೀತೆ ಇಲ್ಲಿ?

* * * *

## ಕೀಚಕರ ಕ್ಷೇತ್ರದಲ್ಲಿ

ತಲೆ ತಿನ್ನೋ ಜನರ ಈ ಕಾಲದಲ್ಲಿ
ತಲೆದೋರೋ ತರಲೆಗಳೇ ನಗರಾಯಣದಲ್ಲಿ......

ಕಣ್ಣು ಕುಕ್ಕೋ ಶೈಲಿಗಳ ತೋರಾಣಿಕೆಯಲ್ಲಿ
ಮಿನುಗ್ಯಾವೇ ಮುದ್ದಿನ ಕರುಳಿನ ಬಳ್ಳಿ?

ಮೂಗಿಗೆ ತುಪ್ಪ ಹಚ್ಚೋ ಸಂತೆ ಮಂದಿಯಲ್ಲಿ
ಕಂಡೀತೆ ನಿರ್ಮಲ ಪ್ರೀತಿ ಭಾವವಿಲ್ಲಿ?

ಉತ್ತರ ಕುಮಾರರೇ ಫೇರಾಯಿಸುವಲ್ಲಿ
ಅಭಿಮನ್ಯುಗಳಿಗೆ ಅವಕಾಶ ಇದ್ದೀತೇನಿಲ್ಲಿ?

* * * *

## ಇಂದಿನ ಓದು

ಬಿಳೀ ಕುದುರೆ ಚಾಕರಿಯಲ್ಲಿ
ಕಪಿ ಮುಷ್ಠಿಯ ಕ್ರೂರ ಹಿಡತ;

ಗಿಳಿಯ ಓದಿನ ಹಾಜರಿಯಲ್ಲಿ
ಕೋಲೆ ಬಸವನ ತಲೆಯಲ್ಲಾಟ–

ಅಜ್ಜನ ಕಾಲದ ಕಗ್ಗಂಟಿನಲ್ಲಿ
ಗರಿಗಟ್ಟದ ಚಂಚಲ ಚಿತ್ತ!

ಹಕ್ಕಿ ಗುಟುಕಿನ ಸಂಬಂಧದಲ್ಲಿ
ತನ್ನತನವಿರದ ಟೊಳ್ಳು ಗಣಿತ...

ಇಂದಿನ ಮಕ್ಕಳ ಬಾಯಿ ಪಾಠದಲ್ಲಿ
ಮುಂದಿಗೆ ದಕ್ಕದ ಮಾಹಿತಿ ಒಣವ್ರತ !

* * * *

# ಭೂಕಂಪ

ನಿಂತ ನೆಲವೇ ಕಂಪಿಸಿತು
ಆಕಾಶವೇ ತಲೆಯ ಮೇಲೆ–
ಕಳಚಿ ಬಿದ್ದಂತಾಯಿತು!

ಜನ ಮನದ ಮುಗಿಯದಳಲು
ಮುಗಿಲು ಮುಟ್ಟಿತು–
ಮನೆ ಮಠ ಶಾಲೆ ಎಲ್ಲಾ
ಗಾಳಿ ಪಾಲಾಯಿತು,

ನಾಡ ಪ್ರಗತಿ ಜನರ ಉನ್ನತಿ
ನೀರಿನ ಮೇಲೆ ಬರೆದಂಥ–
ಬರಹವಾಯಿತು,

ಆಸೆ ಕನಸು ಯೋಜನೆ ಬದುಕು
ಕಣ್ಣೆದುರೇ ಕ್ಷಣದೊಳಗೆ
ನೆಲಸಮವಾಯಿತು

ಜಗದ ಜನರ ಅಳಲಹೊಳೆ
ಉಕ್ಕುಕ್ಕಿ ಹರಿಯಿತು.

* * * *

## ಬೆಂಗಳೂರ ರೂವಾರಿ

ಬಾನಗಲ ಭುವಿಯಗಲ
ಮೆರೆದಿಹುದು ಬೆಂಗಳೂರು,
ನಾಡಪ್ರಭು ಕೆಂಪೇಗೌಡ
ಶ್ರದ್ಧೆಯಲಿ ಕಟ್ಟಿದ ನಲ್ಮೆಯೂರು!

ಈ ನೆಲದ ಸಿರಿ ಕುವರ
ಗಂಡುಗಲಿ ರಣಧೀರ....
ನಮ್ಮ ಹೆಮ್ಮೆಯ ವೀರ
ಬೆಂದಕಾಳೂರಿನಾ ಶಿಲ್ಪಿ, ಶೂರ!

ದೀನ ದಲಿತರ ಬಂಧು
ನಾಡ ಒಲವಿನ ಸಿಂಧು...
ನೆಂಟನಾಗಿಯೇ ನಿಂತ ಪಾಮರರಿಗೆ
ಪೋಷಕನು ತಾನಾದ ವಿಬುಧ ಸಿರಿಗೆ;

ನಾಲ್ಕು ಗುಡಿ ಗೋಪುರವ ಕಟ್ಟಿದಾತ
ಶತ್ರುಗಳ ದೂರ ದೂರ ಹಿಮ್ಮೆಟಿದಾತ;
ದಾನ ಧರ್ಮ ಸಮೃದ್ಧ ಮಾಡಿದಾತ
ಬಡ ಜನರ ಬವಣೆಯ ಹೊರದೂಡಿದಾತ!

ಕಬಳಿಸಲು ಬಂದವರ ಹಿಡಿದು ತದುಕಿದ ಕಲಿಯು
ಗೆಳೆತನಕೆ ಒಲಿದವರ ಅಪ್ಪಿ ಬೆಳೆಸಿದ ಹುಲಿಯು,
ಸಾಹಿತ್ಯ ಕಲೆಗಳಿಗೆ ಬೆಲೆಕೊಟ್ಟ ಅಭಿಮಾನಿ
ನಾಡ ಮುನ್ನಡೆಸಿದ ದಿಟ್ಟ ವೀರಾಗ್ರಣಿ!

ಪರಸರವ ಪ್ರೀತಿಸಿದ ನಿಸರ್ಗ ಪ್ರೇಮಿ
ವಿಜಯನಗರದರಸರೇ ಅವನ 'ಸ್ವಾಮಿ"!
ಹಗಲಿರುಳು ಊರಿಗಾಗಿ ದುಡಿದ ಮಹಾಪುರುಷ
ಈ ಹೊತ್ತಿನ ಈ ನಗರದ ನೆಲವೆಲ್ಲ ನಿಜ ಪರುಷ!

ದೇಶ ವಿದೇಶದಲ್ಲೂ ಖ್ಯಾತಿವೆತ್ತ ಸಿರಿನಗರ–
ನಿರ್ಮಾತೃ, ನಮ್ಮೆಲ್ಲರ ಕೆಂಪೇಗೌಡ ಅಜರಾಮರ!
ಕೆರೆ ಕಟ್ಟೆ ಬಾವಿಗೂ ಇಟ್ಟಿಹೆವು ಅವನ ಹೆಸರ
ಅವನಿಂದ ಹೊಳೆದವು ನಮ್ಮ ಧರ್ಮದ ಗುಡಿ ಗೋಪುರ!

ಕೆಂಪೇಗೌಡನ ಊರು ಇಂದು ವಿಶ್ವವಿಖ್ಯಾತ
ಮರೆಯದಿರಲಿ ನಾಡವರು ಅವನ ಮನದಿಂಗಿತ,
ಕನ್ನಡವು ಉಸಿರಾಗಿ ಕನ್ನಡವು ಹೆಸರಾಗಿ ಮೆರೆಯಲಿ ಶಾಶ್ವತ
ನಗರ ನಿರ್ಮಾತೃವಿಗೆ ಐದು ಕೋಟಿ ನುಡಿ ನಮನ ಇಲ್ಲಿ ಅರ್ಪಿತ!

* * * *

## ದೀವಳಿಗೆ ಹೊಸ ಗೀತೆ

ಕವಿದ ಕತ್ತಲೆ ತಿವಿದು ಬರಲಿ
ಜ್ಞಾನ–ಜ್ಯೋತಿ ದೀಪಾವಳಿ; ಬೆಳ್ಳಿ ಬೆಳಕು ಅರಳಲಿ!

ಶತ ಶತಮಾನದ ಮೌಢ್ಯದ ಮನದಲಿ
ವಿಚಾರದ ಜ್ಯೋತಿ–ಝರಿ ಹರಿಯಲಿ;
ದೀಪದ ಹಿರಿ–ಸಿರಿ ಮಿನುಗಲಿ!

ಜಾತಿಯ ಭೂತದ ಬೇಲಿಯ ತೊಲಗಲಿ
ನಮ್ಮೆದೆ ಕಡಲಲಿ ಪ್ರೀತಿ ಹಣತೆ ಉರಿಯಲಿ
ಮಾನವ ಬದುಕು ಬೆಳಗಲಿ!

ಉಚ್ಚ–ನೀಚ, ಭೇದ ಭಾವ, ಧರೆಯಲಿ
ದೂರಾಗಲಿ, ನಾವೊಂದೇ ಎನ್ನಲಿ
ಅಕ್ಷರ ಸಿರಿ ಜ್ಯೋತಿ ಊರೂರಲಿ ಹೊಳೆಯಲಿ
ಸ್ನೇಹ ವಿಶ್ವಾಸ ಮೂಡಲಿ

ಈರ್ಷೆ ದ್ವೇಷ ಜಗಳ ರಗಳೆ ಯುದ್ಧ ಮೊದಲು ನಿಲ್ಲಲಿ
ಪ್ರೀತಿ ಶಾಂತಿ ಪಾರಿವಾಳ ಜಗದ ಉದ್ದ ಅಗಲ ಹಾರಲಿ

ನಮ್ಮತನದ ದೇಸಿ ಸತ್ವ ಸೊಡರ ಸೊಗಡು ತೋರಲಿ
ಭೂಮಿ–ಬಾನು, ಸೂರ್ಯಚಂದ್ರ ನಿಯತಿಯಲ್ಲಿ ಸಾಗಲಿ

ಉಂಡು ತಿಂದು ಬುದ್ಧಿ ಕಲಿತು ಮಕ್ಕಳೆಲ್ಲ ಬಾಳಲಿ
ಗಡಿಗಳು ಪುಡಿಯಾಗಲಿ ಹುಡಿಹುಡಿ ನಲ್ಮೆ ಸೂಸಲಿ!

ಕಿಡಿ ಕಿಡಿ – ಸಿಡಿ ಆರಲಿ, ನೆಮ್ಮದಿ ನುಡಿ ಮೂಡಲಿ....
ಡೊಳ್ಳು ಹೊಟ್ಟೆ, ರಕ್ಕಸ ಬಾಯಿ.... ಇಂದೇ ಅಳಿಯಲಿ
ಕೋವಿ ಕೋವಿಯಲ್ಲಿ ಗುಬ್ಬಿ ಮುದ್ದುಮನೆಯ ಮಾಡಲಿ

ಪೃಥ್ವಿಯಲ್ಲಿ ಪ್ರೇಮ ಪಲ್ಲವಿ–
ಬೆಳಕ ಹಾಡ ಹಾಡಲಿ;

ಜಗದ ಜನತೆ ಒಂದೇ ಎಂಬ–
ವಿಶ್ವ ಗೀತೆ ಮೊಗಳಲಿ!

* * * *

## ಇಂದಿನ ಮಕ್ಕಳು : ನಾಳಿನ ಪ್ರಜೆಗಳು

ಹೂವಿನಂತೆ ಕೋಮಲ ಮುದ್ದು ಮುದ್ದು ಮಕ್ಕಳು
ಪುಟ್ಟ ಪುಟ್ಟ ಮಾತನು ಉಲಿವ ಚೆಲುವ ಗಿಳಿಗಳು!
ದೇವರನ್ನೇ ತೋರುವ ಮಿನುಗುವ ಸಿರಿ ಕಂಗಳು
ನಗುವ ಜಗದ ಸೊಬಗಿನ ಮುಗ್ಧ ಮಾದರಿ ಮೊಲಗಳು!

ಅಕ್ಕರೆಯನ್ನು ನೀಡಲು ಮುಗಿಯದ ಬಾಲ ಲೀಲೆಗಳು
ವಾತ್ಸಲ್ಯ ಹೊಳೆಯ ಹರಿಸಲು ಆನಂದ ತರುವ ಅಲೆಗಳು!
ಪ್ರೀತಿಯಿಂದ ಸಲಹಲು ಮಕ್ಕಳಿಗೆ ಸಂತಸದ ಆಟಗಳು
ನಲ್ಮೆಯಲಿ ಮೈದಡವಲು ಉಬ್ಬುಬ್ಬಿ ಕುಣಿವ ನವಿಲುಗಳು

ಇಂದಿನ ಮಕ್ಕಳೇ ಏಳಿಗೆ ಸಾರುವ ನಾಳೆಯ ಪ್ರಜೆಗಳು
ಕಲೆ ಸಾಹಿತ್ಯ ವಿಜ್ಞಾನ ಸಂಗೀತ ಕ್ಷೇತ್ರದ ಸಾಧನೆ ಕುಡಿಗಳು;
ಮಕ್ಕಳು ಎಂದಿಗೂ ದೇವರ ಪ್ರತಿರೂಪಿ ಪ್ರೀತಿಯ ನೆಲೆಗಳು
ನಾಡಿನ ಮಡಿಲಲ್ಲಿ, ಆಡುವ ಓಡುವ ಜಿಂಕೆಯ ಮರಿಗಳು!

* * * *

## ಒಳಿತಿನಿಂದ ಒಳಿತಿನೆಡೆಗೆ......

ಒಳಿತನೆಸಗುವುದೇ
ನಮ್ಮ ಅಭಿಲಾಶೆಯಾಗಲಿ,
ಒಳಿತನಾಡುವುದೇ
ನಮ್ಮ ಸಂಕಲ್ಪವಾಗಲಿ

ಒಳಿತು ಚಿಂತನೆಯೇ
ಹೃನ್ಮನದ ಧ್ಯೇಯವಾಗಲಿ,
ಒಳಿತಿಂದ ಒಳಿತಿಗಾಗು
ಒಳಿತಿನಲ್ಲಿ ನಾವು ನಿರಂತರವಾಗಿ...

ಒಳಿತು ನುಡಿದು ಒಳಿತಿನತ್ತ ನಡೆದು
ಒಳಿತಾದರೆ ಮಂಗಳದ ಮಹದಾನಂದ
ಒಳಿತಿದ್ದರೆ ಜೀವನ ಹದ
ಒಳಿತಿಗೆ ಒಳಿತೇ ಅನುಬಂಧ!

ಒಳಿತಿನಿಂದ ಒಳಿತು ಮುದ
ಒಳಿತೇ ಬಾಳಿನ ನಿಜಸ್ವಾದ
ಒಳಿತಿದ್ದರೆ ಜೀವನದೇಳಿಗೆ
ಒಳಿತಾದರೆ ಬಾಳಿನಲ್ಲಿ ಸಂತಸದ ಹೋಳಿಗೆ!

* * * *

## ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ...

ಅನುಕ್ಷಣವೂ ಶರಣೆನುವೆ; ಅನುದಿನವೂ ಶರಣೆನುವೆ
ಸಿದ್ಧಗಂಗೆ ಸಿದ್ಧಯೋಗಿಗೆ......
ಭಕ್ತಿಯಲಿ ಶರಣೆನುವೆ; ಪ್ರೀತಿಯಲಿ ಶರಣೆನುವೆ
ಶಿವರೂಪಿ ಧರ್ಮಗುರುವಿಗೆ....

ವಿಶ್ವಖ್ಯಾತಿ ಸಿರಿಗುರುವೇ ಜ್ಞಾನರೂಪಿ ಸಿರಿವರವೇ
ಶರಣೆನುವೆ ಶಿವಯೋಗಿಗೆ
ಶರಣೆನುವೆ ಸನ್ಮಾರ್ಗಿಗೆ!

ಜನ ಮನಕೆ ವಿದ್ಯೆ ಕೊಡುವ ದೀಪಧಾರಿಯೇ
ಬಂದ ಜನಕೆ ಅನ್ನ ನೀಡೋ ದಾಸೋಹಿಯೇ....

ಬಾಳ ಬೆಳಗುವಾ ರವಿರೂಪಿಯೇ
ನಡೆ ಕಲಿಸುವಾ ರೂವಾರಿಯೇ...
ಶರಣೆನುವೆ, ಶರಣೆನುವೆ.... ನಿಜ ಪೂಜ್ಯರೇ;

ಧರ್ಮ ಧ್ವಜವ ಎತ್ತಿ ಹಿಡಿದ ಯುಗಯೋಗಿಯೇ
ಸಂಸ್ಕೃತಿಯ ಸಾರಿ ನಿಂತ ಸುಜ್ಞಾನಿಯೇ...

ತ್ಯಾಗ ಹಿರಿಮೆಯಾ ಶಿವಮೂರ್ತಿಯೇ
ಶುಭ ಹರಸುವ ವಿಶ್ವ ಪ್ರೇಮಿಯೇ
ಶರಣೆನುವೆ.. ಶರಣೆನುವೆ.... ಧರ್ಮಸೂರ್ಯರೇ.

* * * *

## ನಾರಿ : ನಡೆಸಿಕೊಂಡರು ಈ ಪರಿ

ಹರಿಸಿಹಳು ನಾರಿ ಈ ನೆಲದಿ
ಕಣ್ಣೀರಿನ ಕೋಡಿ
ಬಯಸಿಹಳು ಬಿಡುಗಡೆಯ ಕೆಳದಿ
ಸ್ವಾಭಿಮಾನವು ಮೂಡಿ;

ವೇದಿಕೆಯ ಭಾಷಣದಿ
ಹೆಸರಿಗೆ ನಾರಿ – ದೇವತೆ,
ಬದುಕಿನ ರೂಕ್ಷ ವಾಸ್ತವದಿ
ಶೋಷಣೆಗೆ ಈಡಾದ ಅಬಲೆ;

ಒಂದು ಕಾಲಕ್ಕೆ ಇದು ಅಪೂರ್ವ
ಸಂಸ್ಕೃತಿಯ ತೊಟಿಲು
ಈಗ ಅಕ್ರಮ ಅನ್ಯಾಯ ಅಧರ್ಮ
ತಲೆಯೆತ್ತಿವೆ ಒಮ್ಮೆಗೇ ಒಟ್ಟಿಲು!

ಎಲ್ಲಿ ನಾರಿ ಪೂಜ್ಯಳೋ
ಅಲ್ಲಿ ನಾಡ ಏಳ್ಗೆ ಕಡಲು,
ಎಲ್ಲೆಲ್ಲಿ ನಾರಿ ಶೋಷಿತಳೋ
ಅಲ್ಲಲ್ಲಿ ಎಂದೆಂದೂ ಅಳಿಯದ ಅಳಲು!

* * * *

## ಅಮೃತವರ್ಷಿಣಿ

ಪೂಜ್ಯಳಾದ ಜಗನ್ಮಯಿ
ಇಂದು ದುಗುಡ ಕಂಡ ತಾಯಿ;
ಹೊಗಳಿಕೆಯ ದೇವತೆ
ಇರುವಿಕೆಯಲ್ಲಿ ಹೀನಾಯ ಸ್ಥಿತಿ!
ಮನುಜನಿಗೆ ಜನ್ಮಕೊಟ್ಟ–
ಮಹಾಮಾಯಿ– ತಾಯಿ!
ಪ್ರೀತಿಯಲ್ಲಿ ವಾರಿಧಿ
ವಾತ್ಸಲ್ಯಮಯಿ ಸಹೃದಯಿ;

ಅವಳ ತ್ಯಾಗ ಅನುಪಮ
ಸಹನೆಯಲ್ಲಿ ಅದ್ವಿತೀಯ;
ಅಹರ್ನಿಶೆ ಕಾರ್ಯಧುರಿ
ಕೊಡುಗೈಯಲಿ ಅಮೃತವರ್ಷಿಣಿ!

* * * *

## ಕಣ್ಣು ನಾಲಗೆ ಕಡಲು

ಕಣ್ಣು ತೆರೆದು ನೋಡಿದೆ
ಜಗದಿ ಅನುಭವ ಕಾಡಿದೆ,
ನಾಲಗೆ ತೆರದು ಹಾಡಿದೆ
ಕಡಲ ಮೊರೆತ ಕೇಳಿದೆ!

ಕಣ್ಣಲ್ಲಿ ವಿಶ್ವ ವಿಶಾಲ
ಮನದಲ್ಲಿ ತಿಳಿವಿನ ಗೋಲ–
ನಾಲಗೆಗೆ ಮಾತಿನ ಚಪಲ
ಕಡಲಿಗೆ ಸದಾ ಕುದಿವ ಹಂಬಲ;

ಕಣ್ಣು ಸೆರೆ ಹಿಡಿದಷ್ಟೂ
ನಾಲಗೆ ಅಳೆದು ಸುರಿದು–
ಕಡಲು ತುಳುಕಿತು ಕಲಕಲ!
ಹೃನ್ಮನ ನಕ್ಕಿತು ಕಿಲಕಿಲ!

* * * *

# ಜಗಲಿ ಹತ್ತಿ ಇಳಿದು.....

ಮನೆಯೊಳಗಿಂದ ದೇಕುತ್ತಾ
ಅಂಗಳಕ್ಕೆ ಬಂದೆ
ಮೆಲ್ಲಗೆ ಮೇಲೆದ್ದ!
ಏನೋ ಸಂತೋಷ; ಏನೋ ಉಲ್ಲಾಸ

ಎಲ್ಲರೂ ನೋಡುತ್ತಿದ್ದರು
ಹುಷಾರೆಂದು ಹೇಳುತ್ತಿದ್ದರು
ತೊಪ್ಪೆ ತೊಪ್ಪೆ ಹೆಜ್ಜೆ ಇಟ್ಟೆ
ಕೊಂಚ ಕೊಂಚ ಭಯವ ಬಿಟ್ಟೆ!

ಹೇಳಲಾಗದ ಹರುಷ; ತಾಳಲಾಗದ ಸಂತಸ
ಮೆತ್ತಗೆ ಮೆತ್ತಗೆ ಹತ್ತಿರ ಹೋದೆ
ಹಾಗೂ ಹೀಗೂ ಜಗಲಿ ತಲುಪಿದೆ

ಎಲ್ಲ ಬಲ ಸೇರಿಸಿ ಹತ್ತಿದೆ
ದಾಪುಗಾಲಿಟ್ಟೇ ಹತ್ತಿದೆ
ಕೊನೆಗೂ ಜಗಲಿ ಹತ್ತಿದೆ; ಆನಂದ ಕೇಕೆ ಹಾಕಿದೆ
ಮೆಲ್ಲಗೆ ಜಗಲಿ ಇಳಿದೆ ಹಿಡಿದ ಹಠ ಸಾಧಿಸಿದೆ!

* * * *

## ನಾಡಾಡಿ

ನಾಡಾಡಿಯಾಗಿ ನಾನು ನಾಡ ನೋಡಿದೆ
ಅಲ್ಲಿ ಇಲ್ಲಿ ಎಲ್ಲೆಲ್ಲೂ ಪಾಡು ಕಂಡಿದೆ–
ಅಜ್ಞಾನ ಬೀಡು ಬಿಟ್ಟು ಕೇಡು ತಂದಿದೆ
ಸುಜ್ಞಾನ ಮೂಡಿ ಬೆಳಕು ಹರಿಯ ಬಂದಿದೆ

ದೇಶ ದೇಶ ತಿರುಗಿದಷ್ಟೂ ವಿಶ್ವಾಸ ಹೆಚ್ಚಿದೆ
ಎಲ್ಲೇ ಹೋಗಲಿ ಅಲ್ಲಿ ಪ್ರೀತಿ ಸ್ನೇಹ ನೆಚ್ಚಿದೆ
ಪ್ರಕೃತಿಗಿಂತ ಚೆಲುವಿನ್ನಿಲ್ಲ ಸೌಂದರ್ಯ ಮೆಚ್ಚಿದೆ
ದೇವನೆಂಬುವನಿದ್ದರೆ ನಿಸರ್ಗದಲ್ಲೇ ಕಿಚ್ಚಿದೆ!

ಭಾಷೆ ಬೇರೆ ಇದ್ದರೇನು ಭಾವ ಅದೇ ತಾನೆ?
ವೇಷ ಬೇರೆ ಆದರೇನು ಮನುಷ್ಯ ಅವನೇ ತಾನೆ?
ಜೀವ ಜೀವದಲ್ಲೂ ನಾನು ಭರವಸೆಗಳ ಕಂಡೆ
ನಾಡಾಡಿಯಾಗಿ ನಾನು ಅಪೂರ್ವ ಅನುಭವವುಂಡೆ!

* * * *

# ಮುಕ್ತ ಕಾವ್ಯ

ಹಾಡುವೆನು.... ನಾ.... ಹಾಡುವೆನು
ಮನದಲಿ ಮೂಡಿದ್ದ ಹಾಡುವೆನು;

ನನ್ನ ಅನುಭವ ಚಿಲುಮೆಯ ಮೊಗೆಯುವೆನು
ಬೊಗಸೆ ಬೊಗಸೆ ಕವಿತೆಯ ನೀಡುವೆನು
ಮೂಲೆ ಮುಡುಕು ಬಿಡದೆ ನೋಡುವೆನು...
ಅಲ್ಲಿ ಇಲ್ಲಿ ಅಲೆಮಾರಿಯಾಗಿ ಅಡ್ಡಾಡುವೆನು
ಸಿಕ್ಕಿದ್ದ ಹೆಕ್ಕಿ ಹೆಕ್ಕಿ ತಿದ್ದಿ ತೀಡುವೆನು

ಆ ಊರು ಈ ಊರೆನ್ನದೆ ತಿರುಗೆವೆನು
ಅನುಭಾವದಗ್ನಿಕುಂಡ ಹಾಯುವೆನು
ವಾಗರ್ಥದಾಚೆ ಅಗ್ನಿದಿವ್ಯ ಹಡೆಯುವೆನು
ನೋಡುವೆನು... ಜಗ... ನೋಡುವೆನು
ಯುಗಯುಗದ ಒಳಗ ಹೊರಗ ಇಣುಕುವೆನು
ನನ್ನ ಬುದ್ಧಿಯನ್ನೇ ನಾನು ಕೆಣುಕುವೆನು
ಭಾವಕಾಸಾರದಲ್ಲಿ ಪೂರಾಮೀಯವೆನು
ಮಿಂದು ಮಿಂದು ಮತ್ತೆ ಮತ್ತೆ ಏಳುವೆನು

ಬೆರಗಿನ ನೀಲಿಯ ಕಡಲಿನಲ್ಲಿ ತೇಲುವೆನು
ತೇಲುವೆನು.. ನಾ... ತೇಲುವೆನು,
ತೇಲಿ ತೇಲಿ ಗಾನಲೋಲ ಆಗುವೆನು
ಅನನ್ಯ ಗಿರಿ ಶಿಖರಗಳ ಏರುವೆನು
ಅಲ್ಲಿನ ತಂಗಾಳಿಗೆ ಮೈಯೊಡ್ಡುವೆನು!

ಬೆಳ್ಳಿಮುಗಿಲ ಅರಳೆಯ ಮೇಲೆ ಮಲಗುವೆನು
ಗರುಡನಾಗಿ ದೂರ ದೂರ ನಾ ಹಾರುವೆನು
ಹಾರುವೆನು... ನಾ... ಹಾರುವೆನು!

ವಾಙ್ಮಯ ವಾರಿಧಿ ಈಜುವೆನು
ಜ್ಞಾನ ದಿಗಂತವ ಮುಟ್ಟುವೆನು!

ಜನಮನದೇಳಿಗೆ ಬಯಸುವೆನು
ಸಾಮಾಜಿಕ ನ್ಯಾಯವ ಅರಸುವೆನು;

ಹಾಡುವೆನು... ಗೀತ... ಹಾಡುವೆನು
ನೋಡುವೆನು.. ನಾಡ... ನೋಡುವೆನು;

ರಸಿಕರ ಹೃದಯವ ತಟ್ಟುವೆನು
ಅಜ್ಞಾನ ದೂರಕೆ ಅಟ್ಟುವೆನು!

ಅಲೆಯುವೆನು... ದೇಶ.. ಅಲೆಯುವೆನು
ಕಂಡ ಕಂಡ ವಿಶೇಷವ ಬರೆಯುವೆನು!

* * * *

## ಯುಗಾದಿ ಗೀತೆ

ಬೀಸುವ ಗಾಳಿ ಹೇಳಿದೆ, ಹರಿಯುವ ನದಿಯು ಹೇಳಿದೆ
ಮಣ್ಣಿನ ಕಂಪು ಸಾರಿದೆ, ಉರಿಯುವ ನೇಸರು ಸಾರಿದೆ
ಯುಗಾದಿ ಬಂತೆಂದು, ಸಂತೋಷ ತಂತೆಂದು!

ಒಲವಿನ ನಲ್ಲೆಗೆ ಚೆಲುವಿನ ಚೈತ್ರವು
ಬಗೆ ಬಗೆ ಹೂಹೊತ್ತು ಮುದವ ತಂತು!
ನಲ್ಮೆಯ ನಲ್ಲಗೆ ರಂಗಿನ ಚೈತ್ರವೂ
ತನಿ ತನಿ ಭಾವದಾ ಬುಗ್ಗೆ ತಂತು!
ಹಳ್ಳಿಯ ಸಡಗರ ಸಾರಿದೆ, ಜನಮನ ತೋಷವ ತೋರಿದೆ
ಮಕ್ಕಳ ಕೇಕೆಯ ಕೇಳಿದೆ, ಹೆಂಗಳ ಇನಿದನಿ ಮೊರೆದಿದೆ
ಯುಗಾದಿ ಬಂತೆಂದು, ಹೊಸ ವರುಷ ತಂತೆಂದು

ಬನಬನ ಮೆಲ್ಲಗೆ ಹೊಸತನ ಸಾರಿತು
ಹೊಸ ಹೊಸ ಕಂಪಿಂದ ಹರುಷವ ತಂತು!
ಇಂಪಿನ ಕೋಗಿಲೆ ಹೊಸಗೀತ ಹಾಡುತ
ಇನಿದನಿ ನೀಡುತ ಚೇತನ ತಂತು!
ಪರಿಸರ ಪ್ರೇರಣೆ ನೀಡಿದೆ, ಜನಗಣ ಹಬ್ಬವ ಕಂಡಿದೆ
ಎಲ್ಲೆಡೆ ಮೋದವು ತುಂಬಿದೆ, ನಾಡಿಗೆ ನಾಡೇ ಮೆರೆದಿದೆ!
ಯುಗಾದಿ ಬಂತೆಂದು, ಹೊಸ ವರುಷ ತಂತೆಂದು!

* * * *

## ಅಭಿವ್ಯಕ್ತಿ

ಅಂತರಾಳದಾಳದೊಳಗೆ ಹುದುಗಿದೆ ಸಿರಿ ಪ್ರತಿಭೆ
ಕ್ಷಣಕ್ಷಣವೂ ಹೊರ ಬರಲು ತಹತಹಿಸಿದೆ ಸೃಜನ ಪ್ರಭೆ;

ಅವಕಾಶ ಸಿಕ್ಕ ಘಳಿಗೆ ಚಿಮ್ಮುವುದು ಒಳ ಬುಗ್ಗೆ
ಸಾಮರ್ಥ್ಯ ಇರುವಷ್ಟೂ ಎತ್ತರೆತ್ತರ ಜಿಗಿದೇ ಒಮ್ಮೆಗೇ–
ಪಲ್ಲವಿಸಿ, ಮೆಲ್ಲ ಮೆಲ್ಲಗೆ ಪಡೆವುದಾಕಾರ, ಬಗೆ!

ಒಮ್ಮೆ ಕಂಡರೆ ಪಾತ್ರ, ಗಟ್ಟಿಯಾಗುತ ಸೂತ್ರ....
ದಿಟ್ಟ ಹರಿಸುತ ನೇತ್ರ, ಪಡೆಯುತ್ತ ನಿಜಚಿತ್ರ–
ಹೆಕ್ಕುತ್ತಾ ಒಳತಂತ್ರ, ಧ್ವನಿಸುತ್ತಾ ಯಶೋಮಂತ್ರ
ಬಂಧವಾಗುವುದೇನೆ ಬದುಕಿ ಬಾಳ್ವುದು ಜೀವಂತ!

* * * *

## ಭೇಟಿ

ನಿನ್ನ ಮೊಗ ನನಗೆ ಒಲಿದು
ನಿನ್ನ ದಿಟ್ಟಿ ನನ್ನ ಕರೆದು–
ಹೃದಯ ಉಬ್ಬಿದೆ, ಕಳೆಯ ತಬ್ಬಿದೆ!

ಮನವ ಸೆಳೆದ ಚೆಲುವ,
ಎಲೆ ಎಲೆಯ ಮೇಲೆ ಬರೆದೆ
ಹಳದಿ ಬಣ್ಣವ–
ತುಳುಕಿಸಿದೆ ನಲಿವಿನ
ಬೆಳಕಿನ ಒಲವ,

ಮುಗಿಲಲಿ ಮೆಲ್ಲಿಗೆ ಓಡುವ ಮೋಡ
ಶ್ಯಾಮಲ ಶ್ಯಾಮಲ ಬಣ್ಣದ ಬಿಂಬ
ಕೋಮಲ ಕೋಮಲ ಪ್ರೇಮವೇ ತುಂಬ!

ತಂಗಾಳಿ ತಂದಿದೆ ಅಮೃತ ವರ್ಷಿಣಿ
ತನುಮನ ಕುಣಿಸಿದೆ ವರ್ಷದ ಹನಿ ಹನಿ
ಬೆಳಗಿನ ರಶ್ಮಿಯ ರಂಗಿನ ಪುಳಕ
ಪ್ರಾಣಕೆ ಚೇತನ ತಂದಿದೆ ಬೆಳಕ!

* * * *

## ಸಾಮರಸ್ಯ

ಪುಳಕವಿರದ ಬಾಳೇತಕೆ?
ರಮ್ಯ ಸ್ಪರ್ಶ ಬದುಕಿಗೆ ಚೇತನ ತರಲಿ!
ಸಂಭ್ರಮವಿರದ ದಿನವೇತಕೆ?
ರಾಗಸಂಭ್ರಮ ಜೀವನದಲ್ಲಿ ಉಲ್ಲಾಸ ತುಂಬಲಿ!

ಮುಗ್ಧತೆ ಇರದ ಮನವೇತಕೆ?
ಜಗವ ನೋಡುವ ಕುತೂಹಲ ಬರಳಿ!
ಆಲಂಗಿಸದ ತನುವೇತಕೆ?
ಹೊಸ ಹೊಸ ವಿಚಾರ ನಮ್ಮನ್ನು ತಬ್ಬಿಕೊಳ್ಳಲಿ!

ಕರ್ಮವಿರದ ಇರವೇತಕೆ?
ಧರ್ಮವಿರದ ಇಳೆಯೇತಕೆ?
ವಸುಧೆಯೊಳಗೆ ಧರ್ಮ–ಕರ್ಮ ಸಾಮರಸ್ಯ ಮೂಡಲಿ!

* * * *

# ಚೈತನ್ಯಾಮೃತ

ಸ್ನೇಹವೆಂಬುದು ಮಧುರ, ಆತ್ಮೀಯತೆಯ ಆಗರ;
ಎಲ್ಲಿ ಸ್ನೇಹವೋ ಅಲ್ಲಿ ಮಾತು ಮೃದುವು...
ನಡೆ ಹಿತವು, ಬಗೆ ಹದವು, ಬಯಕೆ ಮುದವು!
ಸ್ನೇಹಕ್ಕೆ ಬೇಕಿಲ್ಲ ಮುನ್ನುಡಿ, ಹಿನ್ನುಡಿ, ಬೆನ್ನುಡಿ....
ಅಪೂರ್ವ ಮೈತ್ರಿಯಲ್ಲಿದೆ, ಹೃದಯದ ಕನ್ನಡಿ!

ಸ್ನೇಹ ಎತ್ತೆತ್ತ ಸಾಗಿದರೂ ಅತ್ತತ್ತ
ಚಿತ್ರ ಸೆಳೆಯುತ್ತಾ.... ಬೆಳೆಯುತ್ತಾ.... ಉಳಿಯುತ್ತಾ
ಹಾಡುವುದು ನಲಿಯುತ್ತಾ ! ಹಾತೊರೆವುದು ಸ್ನೇಹಿಯತ್ತ!
ಅದಕ್ಕೇ ಇರಬೇಕು ಸ್ನೇಹ ಚೈತನ್ಯಾಮೃತ!
ಜೀವನದಲ್ಲಿ ಸ್ನೇಹ ಜೀವಂತ, ಅನುಕ್ಷಣ ಸ್ಪಂದಿತ
ಅನುದಿನ ಸಂವರ್ಧಿತ
ಸ್ನೇಹವೆಂದೂ ಜೀವಂತ!

* * * *

# ಅತಿವೃಷ್ಟಿ

ಅನಿರೀಕ್ಷಿತ ಅಯಾಚಿತ
ಆಕಾಶವೇ ಹರಿದು ಬಿತ್ತು!
ಸಾಮಾನ್ಯರ ಜೋಪಡಿ ಬದುಕು–
ನೀರ ಮೇಲಣ ಗುಳ್ಳೇಯಾಯ್ತು;

ಪಕ್ಕದ ಮೋರಿ ಉಕ್ಕುಕ್ಕಿ ಹರಿದು
ಗುಡಿಸಲ ಗುಂಪು ಪುಡಿಪುಡಿಯಾಗಿ
ಕೊಚ್ಚಿ ಹೋಯಿತು;

ಕಣ್ಣತೆರೆಯಲಿಲ್ಲ ಆಳುವಜನ,
ಕರಗಲಿಲ್ಲ ಉಳ್ಳ ಜನ,
ಮರುಗಲಿಲ್ಲ ಸಾಮಾನ್ಯ ಜನ,

ಕಾಲ ಕೆಳಗಿನ ಸಿರಿ ಭೂಮಿ–
ಪೂರಾ ಕುಸಿಯಿತು
ಕೈಯೊಡ್ಡುವುದು ಅನಾಥರಿಗೆ
ಬದುಕಾಯಿತು!

* * * *

# ಹಾಲಾಹಲ

ಮನ ಮನದಲಿ ಅರಿವಿಲ್ಲದೆ ಹರಿದಾಡಿದೆ ವಿರಸ!
ದಾಂಪತ್ಯದ ಪ್ರಾರಂಭಕೆ ಕಂಡದ್ದಷ್ಟೇ ಸರಸ!

ಏನಾಯಿತೋ ಈ ಮನಗಳು? ಏಕಾಯಿತು ಬಿರುಕು?
ದಿನದಿನವೂ ಬೃಹತ್ ಕಂದರ! ಹೋಳಾಯಿತೇ ಬದುಕು?

ಆ ನಗೆಗಳು ಹೋದವೆಲ್ಲಿಗೆ? ಆ ಪ್ರೀತಿ ಅದೆಲ್ಲ ಹೋಯಿತೆಲ್ಲಿಗೆ?
ಮುನಿಸೆಂಬುದು ಮೇರುವಾಯಿತೇ? ನರಕವಾಯಿತೇ ಸಂಸಾರ?

ನಗೆಪಾಟಲು ಆದೇವು ನಾವು? ಏನೆಂದುಕೊಂಡಾರು ಮಕ್ಕಳು?
ನಮ್ಮ ಅಹಂಗಳು ಬೆಳೆಬೆಳೆದವು! ಸೀಳಾಯಿತು ಒಲವು!

ಸುಡುಗಾಡಿದು ಸಂಸಾರವು! ವಿಷವಾಯು ಸಂಚಾರ!
ಏನಾಯಿತು? ಹೇಗಾಯಿತು? ನಂಜಾಯಿತು ಪೂರಾ!

ನಮ್ಮಿಬ್ಬರ ನಡುನಡುವೆಯೂ ಇತ್ತೇ ನಿಜ ಒಲವು?
ಹಾಗಿದ್ದರೆ ಹೀಗೇತಕೆ ಹರಿದಾಡಿದೆ ಹಾಲಾಹಲವು?

* * * *

## ಸವಾಲು

ವೇದ ಕಾಲೀನ ನಾಡಿನಲ್ಲಿ
ನಾರಿ ಕುಲಕೆ ಗೌರವ ಸ್ಥಾನ,
ಸಮಯದ ಗಾಲಿ ಉರುಳಿ ಉರುಳಿ
ದುಃಖಿನಿ ನಾರಿಗೆ ನಿರಾಶಾಗಾನ!

ಈ ಕಲಿಗಾಲದ ವಿಷಮತೆಯಲ್ಲಿ
ನಾರಿಯ ಕುಲಕೆ ಕಷ್ಟದ ಜೀವನ
ದಿನ ದಿನ ಸರಿಯಲು ಕ್ಲೇಶಗಳಲ್ಲಿ
ನಲ್ಮೆಯ ನಾರಿಗೆ ಶತಶತ ಅಪಮಾನ!

ನೂರು ನೈರಾಶ್ಯದ ಮುಗಿಯದ ಮೌಢ್ಯ
ನಾರಿಯ ಬಾಳಿನ ಹಾದಿಯೇ ಮುಳ್ಳು,
ತೀವ್ರ ದಾರಿದ್ರ್ಯದ ಅನುಪಮ ದೈನ್ಯ
ಇಂದಿನ ನಾರಿಗೆ ಪಯಣ ಪಡಿಪಾಟಲು!

ಹೊಮ್ಮೀತೆ ನಾರೀಕುಲದ ಪ್ರತಿಭಾ ಮಿಂಚು?
ಶಕ್ತಿ ಸ್ವರೂಪಿಣಿ ಬೆಳಗಿಯಾಳೆ ತನ್ನ ಕೆಚ್ಚು?
ನಾರೀ ಕುಲಕೆ ಇರಲಿರಲಿ ಅಸಾಧಾರಣ ನೆಚ್ಚು
ಬರುವ ಅಡ್ಡಿ ಆತಂಕ ಎದುರಿಸೆ ಎಲ್ಲರಿಗೂ ಮೆಚ್ಚು!

* * * *

# ಒಲವಿನ ಗಂಟು

ಕಂಗಳು ಬರೆದಿವೆ ಮೌನದ ಭಾಷೆಯ
ಮನಗಳು ಬೆರೆತಿವೆ, ನುಡಿದಿದೆ ಹೃದಯ!

ಹೇಳದ ಆಸೆಯ ತಾಳದ ಬಯಕೆಯ
ಹೇಳಿವೆ ಕಂಗಳು ನೋಟದಿ ನಲ್ಮೆಯ!

ಬಿಚ್ಚದ ಮುಚ್ಚಿದೆ ಎದೆಯಾಳ ವಾಂಛೆಯ
ನೆಚ್ಚಿದೆ ಮೆಚ್ಚಿದೆ ಒಲುಮೆಯ ಪರಿಯ;

ಪ್ರೇಮದ ನೋಟಕೆ ಅಗಣಿಕ ಭಾಷ್ಯ
ನೋಟದ ಆಟಕೆ ಪ್ರೀತಿಯೇ ಪೂಜ್ಯ.

ಮೊಗದಲಿ ಮಿಂಚಿದೆ ಅರ್ತಿಯ ಸೂರ್ಯ
ಅಂತರಂಗ ಸಾರಿದೆ ಪ್ರಣಯಣ ತೂರ್ಯ!

ಕಣ್ಣಿನ ಅಂಚಲಿ ಕಂಬನಿ ಕುಡಿಯ–
ಕಾಣಲು ಸಾಲದೆ ನಿರಾಸೆಯ ಬಗೆಯ?

ನೋವಿನ ನದಿಗಿದೆ ಪ್ರೀತಿಯ ಚಲನ
ಆತ್ಮದ ದನಿಗಿದೆ ವಿಶ್ವಾಸದ ಮಿಲನ;

ಎಲ್ಲಿಯ ಕೆಳೆಯೋ ಎಲ್ಲಿಯ ಎಳೆಯೋ
ಒಲವಿನ ಗಂಟಿಗೆ ಹೃದಯವ ತೆರೆಯೋ!

* * * *

## ಅಕ್ಕರೆಯ ಅಣ್ಣ.... ಕೆ.ವಿ. ಸುಬ್ಬಣ್ಣ

ರಮ್ಯ ನಿಸರ್ಗದ ಆರಾಧಿಸುವ
ತೋಟ ತುಡಿಕೆಗೆ ಕಾಳಜಿ ವಹಿಸುವ
ಸದಾ ಎಲೆ ಅಡಿಕೆ ರಂಗಳಿಸಿರುವ
ಹೊಸ ಹೊಸತಿಗೆ ಚಡಪಡಿಸಿರುವ
ಪರಂಪರೆಯನು ಗೌರವಿಸಿರುವ

ಬೇಸಾಯವನು ಬದುಕಾಗಿಸುವ
ಅಕ್ಕರೆ ಅಣ್ಣ
ಕೆ.ವಿ. ಸುಬ್ಬಣ್ಣ

ಕಲೆ ಸಾಹಿತ್ಯದ ಕಣ್ಣಾಗಿಸುವ
ಅಭಿರುಚಿಯನ್ನೇ ಉಸಿರಾಗಿಸುವ
ಹಳ್ಳಿಗರಿಗೆ ಹಳ್ಳಿಗ
ದಿಲ್ಲಿಗರಿಗೆ ದಿಲ್ಲಿಗ

ಮಾನವೀಯತೆಯ ಅನುರಣಿಸಿರುವ
ಪ್ರತಿಭಾವಂತರ ಪ್ರೀತಿಸಿ ಬೆಳೆಸುವ
ರಂಗಭೂಮಿಗೆ ಜೀವವ ತೇಯುವ
ಬುದ್ಧವಂತರನು ಬೆಳಕಿಗೆ ತರುವ
ನಲ್ಮೆಯ ನಂಟಿನ
ಕೆ.ವಿ. ಸುಬ್ಬಣ್ಣ!

ಕಂಡ ಕನಸನು ನನಸಾಗಿಸುವ
ಹುಟ್ಟಿದ ಊರಿಗೆ ಪಟ್ಟವ ನೀಡುವ
ದೂರದ ದಿಟ್ಟಿಗೆ ಹೆಸರಾಗಿರುವ
ಹಿರಿಯರ ಹಾರೈಕೆ ತಾ ಪಡೆದಿರುವ
ನಮ್ಮ ನಿಮ್ಮ ಅಣ್ಣ
ಕೆ.ವಿ. ಸುಬ್ಬಣ್ಣ!

ಪ್ರಾಚೀನ ಎನಿಸಿದ್ದ ಹೆಕ್ಕಿ ತೆಗೆವ
ಶಾಸ್ತ್ರ ಸಂಪದಕ್ಕೆ ಮನ್ನಣೆ ಕೊಡುವ
ಒಳ್ಳೆಯದೆಲ್ಲವ ಇಲ್ಲಿ ಹಬ್ಬಿಸುವ
ಜನಮನದಾ ಮಧ್ಯೆ ತಾ ಜನವಾಗುವ
ಜನಮುಖಿಯಣ್ಣ
ಕೆ.ವಿ. ಸುಬ್ಬಣ್ಣ

* * * *

## ತತ್ವ ಚಿಂತನ : ಪು.ತಿ.ನ.

ಯದುಗಿರಿಯ ಗುಡಿ ಗೋಪುರದ
ಘಂಟೆ ಟಿಂಟಿಣಿಯಿಂಚರದ
ರೋಮಾಂಚಕ್ಕೆ ಸ್ಪಂದಿಸಿದ ಕವಿಯೇ
ವೇದ ವೇದಾಂತಗಳ ಸಾನಿಧ್ಯ
ಸವಿದ ಭಾವಬಾನ ರವಿಯೇ,

ಪೌರಾಣಿಕದ ಪುಣ್ಯದಲಿ ಕಣ್ಣಾಲಿ ನೆಟ್ಟ
ಜ್ಞಾನಮುಖಿ ಜಿಜ್ಞಾಸುವೇ...
ಶ್ರೀ ಕೃಷ್ಣ ಸ್ಮರಣೆಯಲಿ ಜೀವ ಸವೆಸಿದ
ರಸಿಕ ಮನದ ರಸ ಋಷಿಯೇ...

ನಿಮ್ಮೊಂದೊಂದೂ ಕವಿತೆ ಸುಜ್ಞಾನದ ಹಣತೆ!
ನಿಮ್ಮ ನುಡಿ ಅಭಿಜಾತ ನಕ್ಷತ್ರ ಮಾಲಿಕೆ;
ವೈರಮುಡಿ ಉತ್ಸವದಂತೆ–
ನಿಮ್ಮಭಿವ್ಯಕ್ತಿಯಲಿ ಸಂಸ್ಕೃತದೊರತೆ!

ರಮ್ಯರಾಗ ನಾಗಕ್ಕೆರಗುವ ದಿವ್ಯ–
ದ್ರಷ್ಟಾರ ಗರುಡ ನೀವು'
ನಿಮ್ಮ ಪಲ್ಲವಿಗೆ ಕಾವ್ಯ ಮಾವು
ಅನುಭಾವ – ಬೇವು!

ಸೃಜನೆ ದೇಗುಲದಲ್ಲಿ
ನಿಮ್ಮ ಪ್ರತಿ ಮಾತೂ ಪಡೆದು ಅನಂಗಶರೀರ
ನಿಮ್ಮ ಗಾನವಾಯ್ತು ವೇದಕಾಲೀನ ಶಾರೀರ;

ತೆರೆಯ ಸೌಂದರ್ಯ ಸೂರೆಗೆ ನೀವು ಪದವಿಟ್ಟರೆ–
ಪರಂಪರೆಯ ಕಾವ್ಯ ಧೃವತಾರೆ!

* * * *

## ಮೈಸೂರ ಹುಲಿ ಕಾಣಾ : ಟಿಪ್ಪುಸುಲ್ತಾನ

ಮದಿರೆಯಲ್ಲಿ ಹೊರಳಾಡಿದ
ಮಾನವರನು ಹಿಡಿತಕೆ ತಂದ
ಮೈಸೂರಿನ ಹುಲಿ ಟಿಪ್ಪುಸುಲ್ತಾನ
ಮಾಣವೀಯತೆಯನ್ನು ಎತ್ತೀ ಹಿಡಿದಾನ!

ಮೇಲು ಹೊದಿಕೆಯನು ತೊಡಬಾರದೆಂದ–
ಮನುವಾದಿಗಳನೇ ಧಿಕ್ಕರಿಸಿ ನಡೆದ
ಮಾನವತಾವಾದಿ ಟಿಪ್ಪುಸುಲ್ತಾನ
ಹೆಣ್ಣು ಮಕ್ಕಳ ಮಾನ ಸಂರಕ್ಷಿಸಿದನ!

ರಾಜ್ಯದ ಬೊಕ್ಕಸ ಖಾಲಿಯಾದಾಗ
ಜನಮನ ಬಡತನ ಕಂಗಾಲಾದಾಗ–
ತನ್ನ ಮಕ್ಕಳನೇ ಒತ್ತೆಇಟ್ಟು ಹಣತಂದಾನ
ನಮ್ಮ "ಮೈಸೂರು ಹುಲಿ" ಖ್ಯಾತಿ ಟಿಪ್ಪುಸುಲ್ತಾನ!

ರೇಷ್ಮೆ ಬೆಳೆಯ ಮಾಡಿ ಸಂವರ್ಧನ
ರೈತರಿಗೆ ಅನ್ನದ ಮಾರ್ಗ ಕಲಿಸ್ಯಾನ;
ಉಳಿಗ ಮಾನ್ಯ ಮಾಡಿ ನಿರ್ನಾಮಾನ
ಭೂಮಿಯ ತಾ ಹಂಚಿ ಘನತೆಯ ಮೆರೆದಾನ!

ಪರಕೀಯರ ದಾಳಿ ಇಕ್ಕಿ ಮೆಟ್ಟಿದನ
ನೀರಾವರಿ ಯೋಜನೆ ಕಥಗೆತ್ತಿಕೊಂಡನ–
ಊರೂರಲ್ಲಿ ಕೆರೆಕಟ್ಟೆ ಮಾಡುತ್ತಾ ನಿರ್ಮಾಣ
ರೈತರ ಬವಣೆಗೆ ಸಾಂತ್ವನ ಹೇಳಿದನ
ನೀರಿನಾಗೆ ಹುದುಗ್ಯಾನ ಬೆಳೆಯಾಗಿ ಅರಳ್ಯಾನ
ನಮ್ಮ ಮೈಸೂರ ಹುಲಿಯಾದ ಟಿಪ್ಪುಸುಲ್ತಾನ!

ಸಸಿಗಳ ನಡೆಸಿದನ ಪರಿಸರ ಉಳಿಸಿದನ
ಅವರಿವರ ಕಿರುಕುಳ ಹತ್ತಿಕ್ಕ್ಯಾನ!
ಜೀತ ಪದ್ಧತಿಗೆ ಕೊಕ್ಕು ಕೊಟ್ಟಾನ

ಮಕ್ಕಳ ಮಾರಾಟಾನ ಬಹಿಷ್ಕರಿಸ್ಯಾನ
ಕಾರ್ಖಾನೆಗಳಿಗೆ ಚಾಲನೆ ಕೊಟ್ಟಾನ
ನಮ್ಮ ಟಿಪ್ಪುಸುಲ್ತಾನ ಅಪರಂಜಿ ಚಿನ್ನ!

ಸ್ವಾತಂತ್ರ್ಯದ ಕಹಳೆಯ ಮೊಳಗಿಸಿದನ
ಕತ್ತರಿಸಿ ಹಾಕಿದನ ಮನು ಸಂವಿಧಾನ!

ಆಂಗ್ಲರ ವಿರುದ್ಧ ಸಿಡಿದೆದ್ದನಾ
ಹೋರಾಡಿ ಮಡಿದು ಹುತಾತ್ಮನಾದನ
ನಮ್ಮ ಟಿಪ್ಪುಸುಲ್ತಾನ ಜನಮನದಾಗೆ ಉಳಿದಾನ!

* * * *

## ನೌಕಾಯಾನ

ಮಣ್ಣಿನ ಮನುಜ ಬಾಳಿ ಬದುಕಲು
ಕೋಟಿ ಕೋಟಿ ಅಡೆತಡೆ,
ಎಲ್ಲ ಇಕ್ಕಿ ಮೆಟ್ಟಿ ಮುಂದೆ ಸಾಗಲು–
ವಿಜಯೋತ್ಸವದ ಬೆಳ್ಗೊಡೆ!

ನಿತ್ಯ ಸತ್ಯ ಇದ್ದೇ ಇದೆ ಕಿರಿಕಿರಿ ನೂರು
ಮುನ್ನುಗ್ಗುವವಗೆ ಇರದು ಯಾವುದೇ ತಕರಾರು,
ಎಲ್ಲದಕ್ಕೂ ಬೇಕೇ ಬೇಕು ಮನೋವೇಗ ಜೋರು
ಸಂಕಲ್ಪ ನಮಗೆ ಇದ್ದರೆ ಯಶಸ್ಸಿನ ತೇರು!

ಬಾಳು ಕಡಲು ಎಂದಮೇಲೆ ಅಲೆಗಳು ಸಾವಿರಾರು
ಕಾರ್ಯತತ್ಪರವಾದರೆ ಇದ್ದೇ ಇದೆ ಗುರಿ ಸೇರುವ ಕದಿರು
ಜೀಕುವ ನೌಕೆಗೆ ಕಡಲ ಕಿನಾರೆ ಹೊನ್ನಿನಮೇರು.

* * * *

## ನಿಸರ್ಗ ನಿಯತಿ

ಪ್ರೀತಿ ಮೂಡಿದ ಮೇಲೆ
ಮರೆಯಾಗದು,
ಭೀತಿ ತಲೆಹೊಕ್ಕ ಮೇಲೆ
ಆನಂದವಿರದು!

ಒಮ್ಮೆ ಅರಿತ ಮೇಲೆ–
ಗೊಂದಲ ಬಾರದು,
ಬಾಳು ಅರಿತ ಮೇಲೆ
ದುಗುಡವಿರದು!

ಪಯಣ ಹೊರಟ ಮೇಲೆ
ಭಂಗವೂ ತಪ್ಪದು,
ಆಸೆ ಹುಟ್ಟಿದ ಮೇಲೆ
ದುಃಖ ತೀರದು!

* * * *

# ವಸಂತ ಸಂಭ್ರಮ

ಕಣ್ಣೆರಡು ಸಾಲದು ವಸುಧೆ ವೈಭವ ನೋಡಲು
ಕಿವಿಯೆರಡು ಸಾಲದು ಕೋಗಿಲೆಗಾನ ಕೇಳಲು;
ಹೃನ್ಮನ ಕುಣಿದಿದೆ ವಸಂತನು ಬಂದಿರಲು
ಜಗವೇ ನಲಿದಿದೆ ಇಳೆ ಚೆಲುವ ಕಂಡಿರಲು!

ಹೊಂಗೆ ಮರದ ಟೊಂಗೆ ಟೊಂಗೆ ಹೂವಿನ ಗೊಂಚಲು
ಮಾಂದಳಿರ ಸಿರಿ ತೇರು ಭೂರಮಣಿ ನಗುತಿರಲು!
ನುಡಿಸಿವೆ ಜೇನ್ದುಂಬಿ ಗುಂಯ್‌ಗುಡುವ ಇನಿಕೊಳಲು
ಮೋಹಕವೋ ಈ ಧರೆಯು ಮಧುಮಾಸ ಬಂದಿರಲು!

ಉಕ್ಕಿಹುದೋ ಹೊಸ ಭಾವ ರಮ್ಯಕವಿ ಹೃದಯದೊಳು
ಸಿಕ್ಕಿಹುದೋ ಸಿರಿಸಮಯ ನಲ್ಲನಲ್ಲೆ ಪ್ರೇಮಿಸಲು;
ತೋರಿಹುದೋ ಜನಮನ ನಿಬ್ಬೆರಗ ನಿಲುವಿನೊಳು
ತೆರೆದಿಹುದೋ ಶೃಂಗಾರ ಋತುಮಾನ ಹರಿದಿರಲು!

ಬಿಡಿಸಿಹಳೋ ಭೂದೇವಿ ನವ್ಯ ಚಿತ್ರ ಇರವಿನೊಳು
ನುಡಿಸಿಹನೋ ಶ್ರೀವಸಂತ ಹೊಸರಾಗ ಅರಿವಿನೊಳು;
ತುಂಬಿಹುದೋ ಸಂಭ್ರಮವು ಪರ್ವಕಾಲ ಹಬ್ಬಿರಲು
ಮೂಡಿಹುದೋ ನವಗೀತ ಭಾವಚಿಲುಮೇ ಚಿಮ್ಮಿರಲು!

* * * *

## ಪ್ರಜ್ಞಾ ಪ್ರಗಾಥ

ತಳಮಳದ ತೆರೆ ತೆರೆ
ಅಪ್ಪಳಿಸಿ ಚಿತ್ತತಿರೆ
ಅಲ್ಲೋಲ ಕಲ್ಲೋಲವಾಯ್ತೋ
ಎದೆಕಡಲು ಗಲಿಬಿಲಿಗೊಂಡಿತೋ!

ಅತ್ತ ಸತ್ಯ ಸತ್ತು ಅಸತ್ಯ ರಾಜ್ಯವಾಳಿ
ಇತ್ತ ಧರ್ಮಗೋರಿ ಸೇರಿ ಅಧರ್ಮ ಎಲ್ಲೆಡೆ ಕೆರಳಿ
ಆಗಬಾರದ್ದೇ ಆಗಿ ಅನೀತಿ ಬೀಗಿ
ಹೃದಯ ಸಮುದ್ರ ಹುಚ್ಚೆದ್ದು ಹೋಯ್ತೋ!

ಯಾವ ಖೂಳರು ಹಗಲಿರುಳು
ಕತ್ತಲೆ ಕಂಬಿ ಎಣಿಸಬೇಕಿತ್ತೋ
ಅಂಥ ಭ್ರಷ್ಟರೇ ಕುರ್ಚಿಹಿಡಿದು
ದರ್ಬಾರು ಮಾಡಿರಲು ನೀಯತ್ತು ನಾಪತ್ತೆಯಾಯಿತೋ!

ಎಲ್ಲಿ ನೋಡಲು ಅಲ್ಲಿ ಅನೀತಿ ಹಿಗ್ಗಾ ಮುಗ್ಗಾ
ಎತ್ತ ಹೊರಳಲಿ ಹೊತ್ತ ಅನ್ಯಾಯದ ಮಾರ್ಗ
ಎಗ್ಗು ಮರೆತ ಜನರು ಸಿಗ್ಗು ತೊರೆದ ಜನರು
ಊರೂರಿನಲ್ಲೂ ಕೇರಿಕೇರಿಯಲ್ಲೂ
ಬೆಳೆಬೆಳೆದು ದಾಂಡಿಗರಾದರೋ
ಸತ್ಯವಂತರ ಕಾಡಿ ಕೊಂದರೋ
ಎಲ್ಲ ಕುಳಿತು ನೋಡಲು ಚಿತ್ರ ಹುತ್ತವಾಯ್ತೋ!

ಒಳ್ಳೆ ಮೌಲ್ಯಗಳೆಲ್ಲ ಮೂಲೆ ಮೂಲೆ ಸೇರಿ
ಕೆಟ್ಟ ನಡೆಗಳೇನೆ ಡೌಲು ಡಂಭ ತೋರಿ
ಅಕ್ರಮದ ವರಸೆ ತಾಂಡವನೃತ್ಯ ಮಾಡಿ
ಅನ್ಯಾಯ ಹಿಂಸೆ ಧರ್ಮಗಡಿಯ ದೂಡಿ
ಸ್ವಾರ್ಥಸಾಧಕರೇ ಕೊಬ್ಬಿ ಕೊಬ್ಬಿ ಮೆರೆದರೋ
ಅಕ್ರಮವಾಗಿಯೇನೆ ಎಲ್ಲ ಗಾದಿ ಹಿಡಿದರೋ

ಅವರ ಆಟಾಟೋಪ ಅರ್ತಿ ಪೂರ್ತಿ ನುಂಗಿ
ಅವರ ಗರ್ವದರ್ಪ ಮಾನವತೆ ಜಜ್ಜಿ
ಸುತ್ತ ಮುತ್ತ ರಾಕ್ಷಸ ಪಡೆಗಳೋ
ಕೆಟ್ಟ ನಡುತೆ ಹಿಂಡು ದಂಡುಗಳೋ!

ಹೇಳುವವರೂ ಇಲ್ಲ ಕೇಳುವವರೂ ಇಲ್ಲ
ಬರೀ ಬಾಯಿದ್ದವರೇ ಬದುಕಿ ಮೆರೆದಿಹರಲ್ಲಾ
ಸದ್ಗೃಹಸ್ಥರೆಲ್ಲಾ ಕೋಮಲ ಕಪಿಲೆಗಳಾಗಿ
ನಿಜಸಜ್ಜನರೆಲ್ಲಾ ಜಿಂಕೆ ಮರಿಗಳಾಗಿ
ವಿದ್ಯಾವಂತರೆಲ್ಲಾ ಬಿಲದ ಮೊಲಗಳಾಗಿ
ಕುರ್ಚಿಕುರ್ಚಿಯಲ್ಲೂ ಕತ್ತೆ ಕಿರುಬಗಳು ಅರುಚಿ ನಿಂತವೋ
ಕಛೇರಿ ಕಛೇರಿಯಲ್ಲೂ ಹುಲಿ ಸಿಂಹಗಳೇ ಅಬ್ಬರಿಸಿ ಮೆರೆದವೋ
ಜಾಣ ಚಿಟ್ಟೆಗಳನ್ನ ಕೇಳುವರಿಲ್ಲ, ಸುತ್ತ ಕಾಡುಕೋಣಗಳೇ ಎಲ್ಲಾ
ಗುಳ್ಳೆನರಿಗಳು ಹೆಚ್ಚಿ ಅಸಲಿ ಚಿಗರೆಗಳೆಲ್ಲಾ ನೊಂದವೋ
ಈ ಧರಿತ್ರಿಗಿನ್ನೆಂಥ ಅಂದವೋ
ಪ್ರಜ್ಞಾಹೀನ ಜನತೆ ನೊಂದವೋ!

* * * *

## ಸ್ವಾಭಿಮಾನ ಮೊಳಗಲಿ

ಮೊಳಗಲಿ ಮೊಳಗಲಿ ಸ್ವಾಭಿಮಾನ ಮೊಳಗಲಿ
ಮನ ಕನ್ನಡ, ಮನೆ ಕನ್ನಡ, ಮಾತು ಕನ್ನಡವಾಗಲಿ
ಅನ್ಯಭಾಷಾಜನರೆಲ್ಲರೂ ಕನ್ನಡವನು ಕಲಿಯಲಿ
ಕನ್ನಡಿಗರು ಬೇರಜನಕೆ ಕನ್ನಡವನು ಕಲಿಸಲಿ.

ಮಲಗಿದೆಲ್ಲ ಕನ್ನಡಜನ ಮೇಲೆದ್ದು ನಿಲ್ಲಲಿ
ನಮ್ಮೆಲ್ಲರ ಕೆಲಸಗಳಲಿ ಕನ್ನಡತನ ಮೆರೆಯಲಿ,
ಈ ನೆಲದಲಿ ಕನ್ನಡವೇ ಆಡಳಿತಭಾಷೆ ಆಗಲಿ
ನಲ್ಮೆ ಕನ್ನಡ ಮಾಧ್ಯಮದಲ್ಲಿ ಕನ್ನಡ ಮಕ್ಕಳು ಕಲಿಯಲಿ

ನಮ್ಮ ಜನರ ಕೈಗಳಲ್ಲಿ ಕನ್ನಡ ಪತ್ರಿಕೆ ಹೊಳೆಯಲಿ
ಚಿತ್ರಮಂದಿರದಿ ಕನ್ನಡ ಚಿತ್ರ ಮುನ್ನಡೆಯ ಕಾಣಲಿ,
ಕನ್ನಡ ಚಿಂತನ ಕನ್ನಡ ಮಂಥನ ವಿಶ್ವವ್ಯಾಪಿಯಾಗಲಿ
ಕನ್ನಡದುಳಿವಿಗೆ ಜನಾಂದೋಲನ ಯಶಸ್ಸನ್ನೇ ಪಡೆಯಲಿ.

* * * *

## ಬಿತ್ತಿದಂತೆ ಬೆಳೆ

ಇಟ್ಟ ಹೆಜ್ಜೆಯನ್ನು ಎಂದೂ ಹಿಂದೆಗೆಯದಿರು
ಕೊಟ್ಟ ಮಾತು ನಡೆಸಿ ನೀನು ಹಿರಿಮೆಯ ತೋರು!

ಬಿಟ್ಟಿ ದುಡಿಯ ಹೋದರೆ ಅಲ್ಲಿ ನಿನ್ನತನ ಹಗುರು
ಕಷ್ಟ ಪಟ್ಟು ಕೆಲಸ ಮಾಡಿ ಪಡೆಯೋ ಹೆಸರು

ದಿಟ್ಟ ನಿಲುವು ಯಾವತ್ತೂ ಕೀರ್ತಿಯ ಕದಿರು
ಸೊಟ್ಟ ನಡೆಗೆ ಬೆಲೆ ಇರದು ಮೈಮೇಲೆ ಕೆಸರು
ಉಟ್ಟ ಬಟ್ಟೆ ತೋರುತಿರಲಿ ನಿನ್ನ ಸರಳತನ
ಗಟ್ಟಿ ಚಿಂತನ ವ್ಯಕ್ತಿತ್ವಕೆ ಘನತೆ ಸೋಪಾನ

ಸುಟ್ಟ ಇಟ್ಟಿಗೆಯಂತೆ ನೀನು ಮಾಗುತ ಬದುಕು
ನೆಟ್ಟ ನಡೆಯೇ ಸ್ಫಟಿಕದಂತೆ ಬೆಳ್ಳಂ ಬೆಳಕು;

ಎತ್ತ ಹೋಗಲಿ ಚಿತ್ತ ಚಂಚಲ ಆಗದೆ ಇರು
ಬಿತ್ತಿದಂತೆ ಬೆಳೆಯೆಂಬುದು ತರುವುದು ಹೆಸರು.

* * *

## ಏನೇನೆಲ್ಲಾ ನಡೆದಿದೆ ಇಲ್ಲಿ.....!

ಈ ನಮ್ಮ ನಲ್ಮೆ ನಾಡೊಳಗೆ ಇಂದು
ಏನೆಲ್ಲಾ ನಡೆದಿಲ್ಲ ಹೇಳಿ

ಅನ್ಯಾಯದ ವಿರುದ್ಧ ಅಕ್ರಮದ ವಿರುದ್ಧ
ಅಸತ್ಯದ ವಿರುದ್ಧ ಅಧರ್ಮದ ವಿರುದ್ಧ
ಏಳಿ ಎಚ್ಚರಗೊಳ್ಳಿ
ಹಾಡು ಹಗಲಿನಲ್ಲೇ ಲಂಚ ಪಡೆದ ಓಜರು
ಅಂಕಪಟ್ಟಿಗಳ ತಿದ್ದಿ ತೀಡಿದರು

ನೋಟು ಎಣಿಸಿದ ವೈದ್ಯರು ಪೋಸ್ಟ್‌ಮಾರ್ಟಂ
ಸುಳ್ಳುವರದಿ ಬರೆದು ಧನ್ಯರು,
ಏನೇ ತಪ್ಪು ನಡೆದಿರಲಿ ಎಲ್ಲ ಅಳಿಸಿ ಹಾಕಿ
ಸತ್ಯ ತಿರುಚಿದರು ನ್ಯಾಯಪಾಲಕರು,

ಗೊತ್ತಿದ್ದೂ ಕೂಡ ಕಣ್ಣು ಮುಚ್ಚಿ ಹಾಡ
ಹಾಡಿದರು ಭ್ರಷ್ಟ ಗಾಯಕರು
ನಾಲ್ಕು ಕಾಸಿಗಾಗಿ ಘನತೆ ಮಾರಿಕೊಂಡರು
ಈ ದೇಶದ ಬುದ್ಧಿ ಜೀವಿಗಳು
ಉದ್ದುದ್ದ ಬರೆದು ರಾಜ್ಯ ಪ್ರಶಸ್ತಿ ಪಡೆದರು
ದೊಡ್ಡ ಪತ್ರಿಕೆ ಸುದ್ದಿ ಜೀವಿಗಳು

* * * *

## ಶ್ರೀಗುರು ಸನ್ನಿಧಿ

ಕಲ್ಪ ಕಲ್ಪಗಳೆನಿತು ಸಾಗಲಿ
ಸುಜ್ಞಾನ ಝರಿಯು ಹರಿಯಲಿ,

ಅಲ್ಪಮತಿಗಳ ಅಲ್ಪತನ ಅಳಿಯಲಿ
ತಲ್ಪವಾಗಲಿ ಸಂಸ್ಕೃತಿಯ ತವನಿಧಿ!

ಸ್ವಲ್ಪ ಮಾತ್ರವೇ ಸವಿದರೂ ಸಹ
ಸಾಹಿತ್ಯಾಮೃತ ಚೈತನ್ಯ ಜಲಧಿ,

ಬಿಳ್ಪು ಎಂದರೆ ಬಣ್ಣವಲ್ಲವೋ...
ಸಪ್ತ ವರ್ಣದ ಸಂಗಮ ಶ್ರೀನಿಧಿ

ಕೂರ್ಪು ಆರ್ಪಿರೆ ಬಾಳ ತಳಹದಿ
ಸತ್ಸಂಗದಲ್ಲಿದೆ ಶ್ರೀಗುರು ಸನ್ನಿಧಿ!

* * * *

# ನುಡಿ ನಮನ

ಸಿದ್ಧಯೋಗಿ ಶ್ರೀ ಸಿದ್ಧಾರೂಢರೇ
ಶರಣು ಶರಣು ಶರಣು
ನಿಮಗೆ ಕೋಟಿ ಶರಣು.

ಲೋಕ ಕಲ್ಯಾಣಕೆಂದು ಭೂಮಿಗೆ ಬಂದ
ಅವತಾರ ಪುರುಷರೇ ಶರಣು ಶರಣು,
ಪರಮ ವೈರಾಗ್ಯದ ಸಾಧನೆ ಸಿರಿ ಕಂಡ
ಆಧ್ಯಾತ್ಮ ಅಧ್ವರ್ಯುವೇ ಶರಣು ಶರಣು.

ಆತ್ಮ ಜ್ಞಾನ ಪಡೆದ ಅದ್ವೈತ ಸಿದ್ಧಾಂತಿ
ಅನುಪಮ ಅವಧೂತ ಶರಣು ಶರಣು,
ಅಂತಃಕರಣವು ಬತ್ತಲಾಗಲಿ ಎಂದ–
ಅಪ್ರಮೇಯ ಆರೂಢ ಶರಣು ಶರಣು.

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ–
ಚಳಕಾಪುರ ಸಂತ ಶರಣು ಶರಣು
ಕನ್ನಡ ನಾಡಿನ ಸಾಂಸ್ಕೃತಿಕ ಸಂಪನ್ನ
ಧರ್ಮದ ಸಿರಿ ಸೂರ್ಯ ಶರಣು ಶರಣು.

* * * *

## ದಾರಿದೀಪ

ತಿಮಿರ ಸಾಗರದಿ ದಿನವೂ ತೊಳಲಿರಲು
ಬೆಳಕ ತೋರುವರು ಗುರುಗಳು,
ಭವದ ಬಂಧನದಿ ನಿತ್ಯ ನರಳಿರಲು
ದಾರಿ ದೀಪ ನಮ್ಮ ಶ್ರೀಗಳು!

ಅಳಲ ಹೊಳೆಯಲ್ಲಿ ಪೂರಾ ಮುಳುಗಿರಲು
ಸಾಂತ್ವನವ ಮಾಡುವರು ಗುರುಗಳು,
ನೈರಾಶ್ಯದಗ್ನಿ ಕುಂಡದಲಿ ಬೆವರಿರಲು
ಕೈ ಹಿಡಿದು ನಡೆಸುವರು ಶ್ರೀಗಳು!

ರಾಗ ಭೋಗದಲಿ ದೈವ ಮರೆತಿರಲು
ಉಪದೇಶ ಮಾಡುವರು ಗುರುಗಳು
ದ್ವೇಷ ಅಸೂಯೆಯಲಿ ಧರ್ಮ ತೊರೆದಿರಲು
ಮೋಕ್ಷ ಮಾರ್ಗ ತಿಳಿಸುವರು ಶ್ರೀಗಳು!

* * * *

## ಸೂರ್ಯೋದಯ

ಕೂಲಿ ಕಾಳುಗಳೆಲ್ಲ ಥೈಲಿ ಥೈಲಿಗಳಾಗಿ–
ಬೇಲಿ ದಾಟುವ ಮುನ್ನ ಸೂರ್ಯೋದಯ,

ಶಾಲೆ ಶಾಲೆಗಳೆಲ್ಲ ನೋಟು ಮಾಲೆಗಳಾಗಿ–
ಮೂಟೆ ಕಟ್ಟುವ ಸಮಯ ಸೂರ್ಯೋದಯ!

ಕುರ್ಚಿ ಕುರ್ಚಿಗಳಲ್ಲಿ ಇಲಿ ಹೆಗ್ಗಣವಾಗಿ
ಹುದ್ದೆಸಿದ್ಧಿಗೆ ಮುಂಚೆ ಸೂರ್ಯೋದಯ–

ಹಳ್ಳಿ ಹಳ್ಳಿಗಳಲ್ಲಿ ಅಳಲು ಬಿರು ಹೊಳೆಯಾಗಿ
ಕೆರೆ ಕೋಡಿ ಬೀಳುವ ಮೊದಲ ಸೂರ್ಯೋದಯ!

ಸಿಟಿಯ ಕವಿದ ಹಾದರದ ರತಿವಾಟ ಯುವಜನಕೆ ಅಡ್ಡೆಯಾಗಿ
ತೊಗಲ ವ್ಯಾಪಾರ ರೌದ್ರವಾಗುವ ವೇಳೆ ಸೂರ್ಯೋದಯ,

ಅಕ್ರಮವೇ ಸಕ್ರಮವಾಗಿ ಅನ್ಯಾಯ ನ್ಯಾಯವಾಗಿ
ಅಸತ್ಯವೇ ಸತ್ಯವಾಗಿ ಅಧರ್ಮವೇ ಧರ್ಮವಾಗಿ ಸೂರ್ಯೋದಯ!

ಅಪಮೌಲ್ಯ ಮೌಲ್ಯವಾಗಿ ಬೆಳೆ ಬೆಳೆದು ಹಿಮಾಲಯವಾಗಿ
ಅನೀತಿಯೇ ನೀತಿಯಾಗಿ ಹರಿಹರಿದು ಗಂಗೆಯಾಗಿ
ಯುವ ಜನರು ನವನವೀನವಾಗಿ ಪೂರ್ವದಲಿ ಅಪೂರ್ವ
ಸೂರ್ಯೋದಯ

ಭವದೊಳಗೆ ದಿವತೆರೆದು ಆಧುನಿಕತೆ ನೆವವಾಗಿ
ಸತ್ಸಂಗ ಸದಾಚಾರ ಸತ್ಪಥ ಉತ್ಪಾತವಾಗಿ–ನಾಡ ಹೃದಯ
ಚರಿತ್ರೆಯ ಬಿಳಿಹಾಳೆ ಚಿತ್ತಾಗಿ ನಗುವಾಗ ಸೂರ್ಯೋದಯ !

* * * *

## ಕೆಂಪೇಗೌಡರ ಗುಣಗಾನ

ಜನುಮ ದಿನವು ಜನುಮ ದನವು
ಶುಭದ ಕ್ಷಣವು ಶುಭದ ಕ್ಷಣವು
ನಾಡ ಪ್ರಭು ಗೌಡರಿಗೆ ಜನುಮ ದಿನವು ಇಂದು!
ಶುಭದ ದಿನವು ಶುಭದ ದಿನವು
ಧರ್ಮ ಪ್ರಭು ಗಂಡುಗಲಿಗೆ ಜನುಮ ದಿನವು ಇಂದು!

ಬೆಂಗಳೂರು ನಗರ ಕಟ್ಟಿದ ಕೆಂಪೇಗೌಡ
ಸರ್ವೋತ್ಕೃಷ್ಟ ಸಂಪದ್ಭರಿತ ಕೆಂಪೇಗೌಡ;
ಸೊಂಟಕಟ್ಟಿ ನಿಂತ ಭಂಟ ಕೆಂಪೇಗೌಡ
ಸಮರಸಿಂಹ ಶೂರಧೀರ ಕೆಂಪೇಗೌಡ;

ಭೈರವ ನಾಣ್ಯ ಟಂಕಿಸಿದಾ ಪ್ರಜಾವತ್ಸಲ
ರಾಜ ತಂತ್ರ ಕಲಿತು ಬೆಳೆದ ಕೆಂಪ ಭೂಪಾಲ
ಜನಮನದಲಿ ನೆಲೆ ನಿಂತ ಕೆಂಪೇಗೌಡ

ಜನುಮ ದಿನವು ಜನುಮ ದಿನವು
ಶುಭದ ಕ್ಷಣವು ಶುಭದ ಕ್ಷಣವು

ಕೆರೆಗಳನ್ನು ಕಟ್ಟಿಸಿದಂಥ ಕೆಂಪೇಗೌಡ
ಕೋಟೆಬಾಗಿಲ ನಿಲ್ಲಿಸಿದಂಥ ಕೆಂಪೇಗೌಡ
ಧರ್ಮದೇಗುಲ ನಿರ್ಮಿಸಿದಂಥ ಕೆಂಪೇಗೌಡ
ನಾಲ್ಕು ಗೋಪುರ ರೂಪಿಸಿದಂಥ ಕೆಂಪೇಗೌಡ

ಜನಾನುರಾಗಿ ಕಲಿಗಳ-ಕಲಿ
ನಗರ ನಿರ್ಮಾತೃ ಗಂಡುಗಲಿ
ನಾಡಪ್ರೇಮಿ ಅರಿರಾಯ ಪಾಳೆಯಗಾರ
ಭೈರವಭಕ್ತ ಧರ್ಮಪ್ರಭು ಕೆಂಪೇಗೌಡ.

ಧರ್ಮ ಭೂಮಿ ಬೆಂಗಳೂರು
ನಗರ ಕಟ್ಟಿದ ಕೆಂಪೇಗೌಡ
ನಾಡ ಪ್ರಭೆಯ ನಿಪುಣರಿಗೆ ಜನುಮ ದಿನವು ಇಂದು;

ಪುಣ್ಯಭೂಮಿ ಬೆಂಗಳೂರು
ನಗರ ಕಟ್ಟಿದ ಕೆಂಪೇಗೌಡ
ಧರ್ಮಪ್ರಭು ಕಡುಗಲಿಗೆ ಜನುಮ ದಿನವು ಇಂದು!

* * * *

## ಉದಯ ರವಿ

ಎಲ್ಲಿ ಬಾನ ಹಕ್ಕಿಗಳ
ಮಧುರ ಇಂಚರದ
ಉದಯ ರಾಗದುಲಿವೋ...
ಅಲ್ಲಿ ಚೆಂದ ಚೆಂಬೆಳಕ
ಅರುಣ ಸಿರಿ ಹೊಳೆವ
ಬೆಟ್ಟದ ಮುಡಿಯ ಬೆಳಕೋ!

ಎಲ್ಲಿ ಕೋಮಲ ದಳ ತೆರೆದ
ಕಾಡ ಹೂವುಗಳ
ಸುಂದರ ಸುಂದರ ಚೆಲುವೋ....
ಅಲ್ಲಿ ದುಂಬಿ ದಂಡು ತಂದ
ಇಂಪಿನ ಸೊಂಪಿನ
ಸಂತೋಷ ಸಿರಿಯ ಮೇಳವೋ!

ಎಲ್ಲಿ ಮುದ್ದು ರಾಸುಗಳ
ಕೊರಳ ಗಂಟೆಗಳ
ಟಿಂಟಣಿ ಟಿಂಟಣಿ ಸ್ವರವೋ
ಅಲ್ಲಿ ಬಂಗಾರ ರಥವೇರಿ
ಸಿಂಗಾರ ಹೊಳೆ ಹರಿಸಿ
ಸೂರ್ಯಸ್ವಾಮಿ ಬರುವೋ....!

ಎಲ್ಲಿ ಮುಗ್ಧಮನ್ನೆಯರ
ಚೆಲುವ ರಂಗೋಲಿ
ಕುಶಲ ಮಾತುಗಳ ಬೆರಗೋ
ಅಲ್ಲಿ ಬೆಳ್ಳಿ ಬೆಳಕುತೆರೆದ
ಮಿನುಗಿ ಮಿಂಚಿನ

ಬೆಳಗು ಬೆಳಗಾದ ಬೆಡಗೋ!
ಬಾಂದಳ ಜಯಭೇರಿ ಘೋಷವೋ!
ಇಳೆಯ ಸಾವಿರದ ಕೋಷವೋ!!
ಜಗವೇ ಕಣ್ತೆರೆದ ಲೋಕವೋ!!!
ಧರೆಯೇ ಬೆರಗಾದ ನಾಕವೋ ಕಸತ!

## ಭಾರತ ಹುಣ್ಣಿಮೆ

ಬಂತು ಭಾರತ ಹುಣ್ಣಿಮೆ
ನಕ್ಕಳು ತಾಯಿ ಭೂರಮೆ।

ಎಲ್ಲಿ ಚೈತ್ರ ಚಿಲುಮೆ
ಅಲ್ಲಿ ಚೆಲುವಿನ ಹಿರಿಮೆ।

ಸರಿಸಿ ಎಲ್ಲ ಕಾಳಿಮೆ
ಬಾನ ತುಂಬ ಪೂರ್ಣಿಮೆ।

ಸೌಂದರ್ಯಕೆ ಏನು ಕಡಿಮೆ
ಕಣ್ಣಿದ್ದರೆ ಕಾಣು ಗರಿಮೆ।

ಹರ್ಷ ಹೊನಲು ಹುಣ್ಣಿಮೆ
ಹೊನ್ನ ಜೇನು ನಿಲುಮೆ।

ಮಾತು ಮೌನವಾದ ಪೆರ್ಮೆ
ಭಾರತ ಸಿರಿ ಹುಣ್ಣಿಮೆ

ಪ್ರಕೃತಿ ಮಾತೆ ತೇರೇರಿ ಮೇಲ್ಮೆ
ಕವಿಯ ಕಾವ್ಯ ಪೌರ್ಣಿಮೆ।

* * * *

## ದೇಶಾಭಿಮಾನದ ಹಾಡು

ಅಗಣಿತ ಜನ ಅಗಣಿತ ಮನ
ರೂಪಿಸಿದ ನಾಡು ನಮ್ಮದು
ಬೃಹತ್ ಭಾರತ ನಮ್ಮದು;

ಎಲ್ಲಿ ಹಿಮಗಿರಿಯು ನಿತ್ಯ ಸತ್ಯದಿಂದ ಹೊಳೆವುದೋ
ಅಲ್ಲಿ ನಲ್ಮೆ ಭರತ ಭೂಮಿ ಹಸಿ ಹಸಿರಲಿ ನಲಿವುದು;
ಎಲ್ಲಿ ಕನ್ಯಾಕುಮಾರಿ ದಿವ್ಯ ಸಂದೇಶವ ಸಾರುವುದೋ
ಅಲ್ಲಿ ಭಾರತೀಯ ಕಣ್ಮಣಿ ಧ್ವಜ ವಂದನೆ ಸಲ್ಲುವುದು

ಅನುಪಮ ನದಿ ಅನುಪಮ ನದ
ತಾಯಿ ಪಾದ ತೊಳೆವುದು
ಕೀರ್ತಿ ಕಿರೀಟ ಹೊಳೆವುದು

ಎಲ್ಲಿ ವಿಶ್ವಧರ್ಮ ಕ್ಷಣವೂ ಮಾನವೀಯತೆ ಮೆರೆವುದೋ
ಅಲ್ಲಿ ನಲ್ಮೆ ಭರತ ಭೂಮಿ ಜಗಕೆ ಹಿರಿಮೆ ತೋರುವುದೋ
ಅಲ್ಲಿ ಪ್ರೀತಿ ಭರತ ಮಾತೆ ಶಾಂತಿ ಮಂತ್ರ ಮೊರೆವುದು!

ಅಸದಳ ಸಿರಿ ಅಸದಳ ಪರಿ
ಸ್ವಾತಂತ್ರ್ಯ ದೀಪ ಬೆಳಗುವುದು
ಜಗದ ಗಮನ ಸೆಳೆವುದು!

* * * *

# ಆದರ್ಶ ಶಿಕ್ಷಕ

ಅವಿದ್ಯಾ ತಿಮಿರ ದೂರ ಮಾಡಿ
ವಿದ್ಯಾ ಬುದ್ಧಿ ಬೆಳಕ ನೀಡಿ,
ನಮ್ಮ ಬದುಕ ತಿದ್ದಿ ತೀಡಿ
ಜ್ಞಾನದ ಸಿರಿ
ಹಂಚುವ ರೂವಾರಿ
ನಮ್ಮ ನಲ್ಮೆ ಶಿಕ್ಷಕ!

ನ್ಯಾಯ ನೀತಿ ಧರ್ಮದ ತೋರಿ
ಸತ್ಯ ಶಾಂತಿ ಮಹಿಮೆ ಸಾರಿ
ಪ್ರೀತಿ ಸ್ನೇಹ ವಿಶ್ವಾಸದ ದಾರಿ–
ನಡೆಸುವ ದೀಪಧಾರಿ
ಮೌಲ್ಯಗಳ ಮೇರುಗಿರಿ
ನಮ್ಮ ನಲ್ಮೆ ಶಿಕ್ಷಕ !

ಶಿಕ್ಷಕ ಮಾನವ ಬಾಳ ಪ್ರದೀಪಕ
ಶಿಕ್ಷಕ ನಾಳೆಯ ರಾಷ್ಟ್ರ ನಿರ್ಮಾಪಕ
ಜ್ಞಾನ ನಿನ್ನಲ್ಲಿ ವ್ಯಾಪಕ
ಸನ್ನಡೆಯ ಉದ್ದೀಪಕ!

* * * *

## ಮೌನ ಸಾಕ್ಷಿ

ತುಂಬಿ ತುಳುಕಿಹರು ಸುತ್ತ ವಂಚಕರು
ನೆಮ್ಮದಿಯೇ ಇಲ್ಲ ಜನಕೆ
ಹೆಚ್ಚಿಕೊಂಡಿಹರು ಲಂಚ ಕೇಳುಗರು
ಏಳ್ಗೆಯಿಲ್ಲ ಸಮುದಾಯಕೆ

ಎಲ್ಲೇ ಇದ್ದರೂ ಸ್ವಾರ್ಥ ಸಾಧಕರು
ಹೆಗ್ಗಣಗಳಾಗಿ ಕೊಬ್ಬಿ
ನಿತ್ಯ ನಿತ್ಯವೂ ಮಾಂಸ ಭಕ್ಷಕರು
ಹಾದರದ ಮೈಯ ತಬ್ಬಿ.....

ಕುಡಿತಕ್ಕೆ ದಾಸರಾಗಿ ಹಿಗ್ಗಿ ಹೀರಿ
ಅನ್ಯಾಯ ನಗ್ನ ನೃತ್ಯ
ಕಾಯಕವು ಸೊರಗಿ ಹಮ್ಮೀರರಾಗಿ
ಸಮಾಧಿಯಾಯ್ತು ಸತ್ಯ!

ಈಗೀಗ ಎಲ್ಲೆಲ್ಲೂ ಇಲ್ಲ ನ್ಯಾಯ ನಿಷ್ಠೆ
ಅನಾಥವಾಯ್ತು ಧರ್ಮ,
ಎಲ್ಲ ಮೌನದಲಿ ಸಹಿಸಿ ನೋಡುತ್ತ
ಹಾಡುವುದು ಕವಿಯ ಕರ್ಮ

* * * *

## ಒಳಿತಿನಲಿ ಭಗವಂತ ಜೀವಂತ

ಇರಲಿ ಇರಲಿ ಒಳಿತಿನಲ್ಲಿ ಸದಾ ನಂಬಿಕೆ
ಆತ್ಮಸಾಕ್ಷಿ ಎದುರಿನಲ್ಲಿ ಇರಲಿ ಅಂಜಿಕೆ!

ಬೇಡ ಬೇಡ ಬೇಡ ನಿನಗೆ ಕೊಂಚವೂ ಅಪನಂಬಿಕೆ
ದೂರ ದೂರ ದೂರ ಮಾಡು ಮತ್ಸರದಾ–ಮಂಚಿಕೆ!
ನಲ್ಮೆ ಬಿತ್ತಿ ನಲ್ಮೆ ಬೆಳೆ; ನಲ್ಲತನವೇ ಹೆಗ್ಗಳಿಕೆ
ಒಳಿತು ಜನಕೆ ಒಳಿತನೆಸಗು–ಒಳಿತೇ ಅಮರ ಪೀಠಿಕೆ

ಬಯಸಬೇಡ ಒಂದೂ ಕೇಡ–ಬಿಡಬೇಡ ಒಳಿತಿನ ಜಾಡ
ನಮ್ಮ ದುಗಡಕೆ ನಾವೇ ಕಾರಣ–ಬೇರೆಯವರ ದೂರಬೇಡ
ನಿನ್ನ ಬಾಳಿಗೆ ನೀನೇ ಶಿಲ್ಪಿ–ಇರಲಿ ಸದ್ಬುದ್ಧಿ ಸಂಗಡ
ರಾಡಿ ಮಾಡಿದರೆ ನಿನ್ನ ಬದುಕೂ ರಾಡಿ ಆದೀತು ಬದುಕು ಬಗ್ಗಡ

ನಿಂದಿಸಿದವರನ್ನೂ ವಂದಿಸು ನೀನು, ಹೊಳೆವುದು ನಿನ್ನ ಜೀವನ
ಅನ್ಯರಿಗಾಗಿ ಮರುಗು ನೀನು, ಸೇವೆಯೇ ಬಾಳಿನ ಪರಮಾರ್ಚನ
ನಂಬು ನೀನು ದೈವವ, ನಂಬು ನೀನು ಆತ್ಮವ, ಮೂಡಲಿ ಒಳಿತಿನ ಕಲರವ
ಬಾಳೆಂಬುದೇ ಭಗವಂತ, ಭಗವಂತನೇ ಬಾಳು–ಸಾಗಲಿ ಜೀವಭಾವ.

* * * *

## ಪ್ರೀತಿ ಬಿತ್ತಿ; ಪ್ರೀತಿ ಬೆಳೆ

ಅವರಿವರು ಬಂದಾರೆಂದು ಕಾಯುತ್ತಾ ಕೂಡಬೇಡ
ಎಂದೆಂದೂ ನಿನ್ನ ಬದುಕ ನೀನೇ ನೋಡಾ!

ನೀನಿದ್ದಲ್ಲೇ ಇರುವನು, ಆ ಪರಮಾತ್ಮ ನಿನ್ನ ಸಂಗಡ
ಆ ಭಗವಂತನ ನೆನೆಯುತ್ತಾ, ನಿನ್ನ ಹಾಡು ಹಾಡ!

ನಿನ್ನೆಲ್ಲ ಅಳಲಿಗೂ, ನೀನೇ ತಾನೇ ಕಾರಣ?
ಬಯಸಿ ಬಯಸಿ ದುಃಖದ ಮಡು, ನಿನ್ನ ಜೀವನ!

ದ್ವೇಷವೇಕೆ ನಿನಗೆ ಬೇಕೋ, ಸುಮ್ಮನಿರೋ ಮನುಜಾ
ಪ್ರೀತಿ ಬಿತ್ತಿ ಪ್ರೀತಿ ಬೆಳೆಯೇ, ಅದುವೆ ಬಾಳ ಸಹಜ!

ಆಗು ಆಗು ಆಗು ನೀನು ಅನಸೂಯ ಹೃದಯ
ನಿರ್ಮಲವಿರೆ ಭಗವಂತನ ಅನುಗ್ರಹದ ವಿಜಯ;

ಸತ್ಕಾರ್ಯಕೆ ಸತ್ಫಲವಿದೆ, ಬೇಡ ನಿನಗೆ ಸಂಶಯ
ದುಷ್ಕಾರ್ಯಕೆ ದುರಂತವೇ ಫಲ, ಎಂದೂ ಅದು ಅಪಾಯ !

* * * *

## ಸತ್ಯ ಶೋಧ

ನೆಲೆಯಾಗಲಿ ನಲ್ಮೆ ನೆಲದ ಮೇಲೆ
ನಲಿವಾಗಲಿ ಇಳೆ ಎಲ್ಲಾ ವೇಳೆ!

ಅಂತರಂಗದಲ್ಲಿ ಕಣ್ಣು ಎಚ್ಚರಿದ್ದ ಮೇಲೆ–
ಜಾಗೃತ ಹಾದಿಯಲ್ಲಿ ಬಾಳು ಸುಗಮಲೀಲೆ,
ಏಳು ಬೀಳನು ದಾಟಿ ಮುನ್ನಡೆಯ ತೋರಿದಲ್ಲೇ
ಇದ್ದೇ ಇದೆ ಸಿಹಿ–ಕಹಿ ಬೇವು ಬೆಲ್ಲ ಬದುಕಲ್ಲೇ

ನರ್ತಿಸಲಿ ಶಾರದೆ ನಾಲಗೆಯ ಮೇಲೆ
ಸಾಹಿತ್ಯ ಸಂಗೀತ ಸಂತಸದ ಸಿರಿ ಕಲೆ;
ಮಿಥ್ಯವಾದ ಈ ಧರೆಯಲ್ಲೂ ಸತ್ಯದ ಗುಡಿ ಇದೆ
ಅಸಹ್ಯವಾದ ಹೋರಾಟದಲ್ಲೂ ಸಹ್ಯದ ಸೆರಗಿದೆ
ಎಲ್ಲಿ ಜ್ಞಾನದಾ ಸಂಸರ್ಗ ಅಲ್ಲಿ ಹೊಸತು ಮಾರ್ಗ
ಸತ್ಯ ಶೋಧದಲ್ಲೇನೆ ಆತ್ಮ ವಿಮರ್ಶೆಯ ಸ್ವರ್ಗ.

* * * *

# ಕರೆ

ನಮ್ಮ ನಡುವೆ ಬೆಳೆದು ನಿಂತ–
ಹಳೆಯ ಕೊಳೆಯ ತೊಳೆವ ಬನ್ನಿ;
ಜಾತಿ ಮತದ ಭೇದ ಮರೆತು–
ಮಾನವೀಯತೆ ಹರಿಸ ಬನ್ನಿ!

ನಮ್ಮ ಮನಸ ಕಿತ್ತು ತಿನ್ನುವ–
ವರ್ಗ ವರ್ಣ ಒಡೆದು ಬನ್ನಿ;
ನಮ್ಮ ಹೃದಯ ಕಲಕಿ ಮೆರೆವ–
ಕುಬ್ಜ ಭಾವ ಬಿಟ್ಟು ಬನ್ನಿ!

ಅತ್ತ ಇತ್ತ ನಿಂತು ನಗುವ–
ಭೋಗ ಬದುಕ ಮರೆತು ಬನ್ನಿ;
ಸುತ್ತ ಮುತ್ತ ಮುತ್ತಿ ಸೆಳೆವ–
ಐಹಿಕ ಸುಖವ ತೊರೆದು ಬನ್ನಿ!

ಸಮಾಜ ಶುದ್ಧಿ ಕಾರ್ಯಕ್ಕಾಗಿ–
ಯುವಜನತೆಯೇ ಮುಂದೆ ಬನ್ನಿ;
ಸತ್ಯ, ನಿಷ್ಠೆ, ಸ್ನೇಹ, ಪ್ರೀತಿ–
ಶ್ರದ್ಧಾ ಕಾರ್ಯ ಸಂಕಲ್ಪ ತನ್ನಿ!

* * * *

## ತಮ್ಮ ಬೆನ್ನು ತಮಗೆ ಕಾಣದು

ಯಾಕೆ ಹೀಗೆ ಆಡುತಾರೋ...
ಹುಸಿ ಪ್ರತಿಷ್ಠೆ ತೋರೋ ಜನರು?

ಇಲ್ಲ ಸಲ್ಲದ ಜಂಭವ ಮಾಡಿ
ಯಾಕೆ ಸುಮ್ಮನೆ ಬೀಗುತಾರೋ?

ತಾವೇ ಶ್ರೇಷ್ಠರೆಂದು ಕೊಂಡು
ಯಾಕೆ ಅನ್ಯರ ಕಡೆಗಣಿಸುತಾರೋ!

ಇನ್ನೊಬ್ಬರ ಬೆನ್ನು ಚೆನ್ನಿಲ್ಲವೆಂದು
ತಮ್ಮ ಗೂನು ತಾವು ಮರೆಯುತಾರೋ!

ಯಾಕೆ ಹೀಗೆ ಮಾಡುತಾರೋ
ಅಸಹಜದಲ್ಲೇ ಹೊರಳುತಾರೋ!

ಅವರ ಇವರ ಟೀಕಿಸಿಕೊಂಡು
ತಮ್ಮ ಹುಳುಕು ತಾವು ಬಚ್ಚಿಡತಾರೋ!

ಯಾಕೆ ಹೀಗೆ ನೋಡುತಾರೋ
ಇನ್ನೊಬ್ಬರ ಮಾತು ಎತ್ತಿ ಆಡುತಾರೋ!

* * * *

# ರೈತರ ರ್‍ಯಾಲಿ

ಊರೂರಿಂದ ಮನೆ ಮನೆಯಿಂದ
ರೈತರ ರ್‍ಯಾಲಿ ಬಂತು ಮೌನ ಸೀಳಿ!

ಸಹನೆಯ ಸಿರಿಯೇ ದಳ್ಳುರಿಯಾಗಿ
ಅನ್ಯಾಯ ಕಂಡು ಕಾಳ್ಗಿಚ್ಚಾಗಿ,
ಸಾವಿರದ ನೋವೆಲ್ಲಾ ಲಾವಾರಸವಾಗಿ
ಸಿಟ್ಟೆಲ್ಲಾ ಸ್ಫೋಟಿಸಿ ಜ್ವಾಲಾಮುಖಿಯಾಗಿ...
ರೈತರ ರ್‍ಯಾಲಿ ಬಂತು ಮೈಲಿ! ಮೈಲಿ!

ಅಕ್ರಮವ ಪ್ರತಿಭಟಿಸಿ ಗುಡುಗಂತೆ ಮೊಳಗಿ
ಅಧರ್ಮವ ಖಂಡಿಸಿ ಸಿಡಿಲಂತೆ ಎರಗಿ,
ಹಳ್ಳಿಯ ಹನಿ ಹನಿ ಹರಿದು ನದಿಯಾಗಿ
ಲಕ್ಷ ಲಕ್ಷ ಜನ ಮುನಿದು ಕುದಿವ ಕಡಲಾಗಿ....
ರೈತರ ರ್‍ಯಾಲಿ ಬಂತು ಮೌನ ಸೀಳಿ!

ಸ್ವಾಭಿಮಾನ ಸೆಲೆಯುಕ್ಕಿ ಸೆಡ್ಡು ಹೊಡೆದು ಸಾಗಿ
ನಾವೆಲ್ಲಾ ಒಂದೆಂಬ ಘನ ತತ್ವಕ್ಕಾಗಿ,
ಕುರುಡು ಆಳ್ವಿಕೆ ಕಣ್ಣ ತೆರೆಸೋ ಸಲುವಾಗಿ
ಮುಗಿಲು ಮುಟ್ಟೋ ಹಾಗೆ ಘರ್ಜನೆ ಕೂಗಿ....
ರೈತರ ರ್‍ಯಾಲಿಯಾಯ್ತು ಪ್ರತಿಭಟನಾ ಕಾಳಿ!

* * * *

## ಅರ್ಪಣೆ

ನಾ ನೆಟ್ಟ ಗಿಡದಲ್ಲಿ ಹೂ ಬಿಟ್ಟದೆ
ನೀ ಕೊಟ್ಟ ಹೂವಿದು, ನಿನಗರ್ಪಣೆ!

ನಾ ಇಟ್ಟ ಹಣವಿದು ಇಮ್ಮಡಿಸಿದೆ
ನೀ ಕೊಟ್ಟ ಈ ಧನ, ನಿನಗರ್ಪಣೆ!

ನಾ ಹಾಡೋ ಸ್ವರವೆಲ್ಲ ಹಾಡಾಗಿದೆ
ನೀ ನೀಡೋ ಪ್ರತಿಭೆಯು, ನಿನಗರ್ಪಣೆ
ನಾ ಕೇಳೋ ವರಗಳಿಗೆ 'ಅಸ್ತು; ನಿನ್ನದೇ
ನೀನಿರಲು ಶ್ರೇಯಸ್ಸು, ಶುಭದರ್ಪಣೆ!

ನೀ ಕೊಟ್ಟ ಈ ಕಣ್ಣು, ನೀ ಕೊಟ್ಟ ಈ ಮನವು
ಅರಿವಾಗಿ ವರವಾಗಿ ಸಸಿಯಾಗಿ ಫಲವಾಗಿ, ನಿನಗರ್ಪಣೆ
ನೀ ಕೊಟ್ಟ ಈಜಿಹ್ವೆ, ನೀ ಕೊಟ್ಟ ಈ ಹೃದಯ
ಸ್ಪಂದಿಸುತ ಪಲ್ಲವಿಸಿ ಗಂಧವಾಯಿತು ಬದುಕು, ನಿನಗರ್ಪಣೆ!

* * * *

# ಆತ್ಮಹತ್ಯೆ

ಮಣ್ಣಿನ ಮಕ್ಕಳ ನಿತ್ಯದ ಬವಣೆಗೆ
ಕೊನೆ ಎಂಬುದೇ ಇಲ್ಲ!
ಕಣ್ಣೀರಿನ ಹೊಳೆ ವಾಸ್ತವಹರಿವಿಗೆ
ಮುಗಿವೆಂಬುದೂ ಇಲ್ಲ!

ಅಕ್ಕರೆ ನೇಗಿಲ ಸತ್ಯದ ಉಳುಮೆಗೆ
ಹೊಟ್ಟೆ ತುಂಬಲೇ ಇಲ್ಲ;
ರೈತರೇ ನಾಡಿನ ಬೆನ್ನೆಲುಬೆಂಬ ಮಾತಿಗೆ
ಅರ್ಥದ ಹುರುಳಿಲ್ಲ!

ದುಡಿಯುವ ಕೈಗಳು ಪಡೆಯುವುದೇನನು?
ಸಾಲದ ಹಿರೆಯನ್ನು!
ದೇಶಕೆ ಅನ್ನವ ನೀಡುವ ಜೀವಿಯು ಪಡೆಯುವುದೇನನ್ನು?
ನಿರಾಸೆ ನೋವಿನ ಸಂಕಟ ಸಾವಿನ
ಆತ್ಮಹತ್ಯೆಯನ್ನು!

* * * *

## ಅರಿವಿನ ಹಡಗು

ತಿಮಿರವಿರೆ ಅಳುಕು, ಅರುಣ ಬರಲು ಬೆಳಕು
ಸ್ಪಂದವಿರೆ ಮನಸು, ಮಂದವಾಗಲು ಮುಗಿಸು....

ಕತ್ತಲ ಕಡಲ ಜೀಕಲು
ಬೇಕು ಬಂಗಾರ ಬೆಳಕು!
ಬಾಳಿನ ಹಾದಿ ಅರಿಯಲು
ಭಾವ, ಬುದ್ಧಿ, ಬೇಕು!
ಹೃದಯವಿರೆ ಜಗವು, ಅರಿತರೆ ಹಗುರ ನೊಗವು
ಅರಿವು ಮನಕೆ ಮುದವು, ಬದುಕಿಗದೇ ಹದವು

ನಿಶೆಯ ನದಿಯ ದಾಟಲು
ಬೇಕಯ್ಯ ಬೆಳಕ ಹಡಗು,
ಗುಡುಗು ಮಿಂಚು ತಿಳಿಯಲು
ಮನಕೆ ಸ್ಪಂದನ ಬೇಕು

ಸ್ಪಂದನ ಎಂಬುದು ಸಾಯಲು ಎಲ್ಲಕೂ ಕೊನೆ
ಭಾವ ಬುದ್ಧಿ ನದಿ ಕಡಲು ಉಕ್ಕಿದರೇನೆ ಬಾಳ ಕೆನೆ!
ಬೇಡ ಭೀತಿ ಅಳಲು ಬೇಕು ಜ್ಯೋತಿ ಹೊನಲು
ಜೀವನ ಪಥದಿ ನಡೆಯಲು ಮನಸೇ ಎಲ್ಲಕೂ ಮಿಗಿಲು

ಎಲ್ಲಿ ಮನಸು ಕ್ಷೇಮ
ಅಲ್ಲಿ ಬದುಕು ಆರಾಮ
ಎಲ್ಲೆಲ್ಲಿ ಚಿತ್ತ ಕ್ಷಯ
ಅಲ್ಲಿಲ್ಲ ಏನೂ ಅಭಯ!

* * * *

## ಕ್ರಾಂತಿ ಗೀತೆ

ನೊಂದು ಬೆಂದ ಜನರೇ ಏಳಿ
ಹೊಸ ಕ್ರಾಂತಿ-ಗೀತೆಯ ಹೇಳಿ!

ಎಲ್ಲಿ ತನಕ ಸಹನೆಯ ಲಾಲಿ?
ಶೋಷಣೆ ಸಹಿಸದೆ ಸಿಡಿದೇಳಿ!

ನಿಮ್ಮ ದೇಹದ ಕೆಂಪು ನೆತ್ತರು
ದಿಕ್ಕು ದಿಕ್ಕಿಗೆ ಹರಡಲಿ ಹೆಸರು;
ಶತ ಶತಮಾನ ಕಂಡ ಅವಗುಣ-
ಕಿತ್ತೆಸೆಯುತ ಹಾಡುವ ಹೊಸ ಗಾನ!

ಸಮುದಾಯ ಸಂಘಟನೆಯೇ ಸ್ಪಂದನ
ಒಂದಾಗಲು ಗೆಲುವಿನ ಕೇತನ;
ಹಾಡಿ ವಿಶ್ವದ ಚರಿತೆ ವಿನೂತನ
ವಿಚಾರ ಸ್ವಾತಂತ್ರ್ಯ ನಮಗೆ ಚೇತನ !

* * * *

## ವಿಶ್ವಶಾಂತಿಯೆಡೆಗೆ....

ಕೋಟಿ ಕೋಟಿ ಹಣತೆ ಹಚ್ಚುವ
ಬನ್ನಿ ಬನ್ನಿ ಬಾಳ ಗೆಳೆಯರೇ

ಸ್ನೇಹ ವಿಶ್ವಾಸದ ತೈಲ ತನ್ನಿ ಪ್ರೀತಿ ಹೆಂಗಳೆಯರೇ.....
ನಿರ್ಮತ್ಸರ ತೋರಿ ನೀವು ದ್ವೇಷಾಂಧಕಾರ ತೊರೆಯಿರಿ
ಸತ್ಸಂಗದಲ್ಲಿ ಬಾಳಿ ನೀವು ಮಾನವತೆಯ ಉಳಿಸಿರಿ;

ಕೋಟಿ ಕೋಟಿ ಹಣತೆ ಹೊತ್ತು
ಬನ್ನಿ ಬನ್ನಿ ಜಗದ ಜೀವಿಗಳೇ

ಕತ್ತಿ ಗುರಾಣಿ ಬಂದೂಕು ಸಿಡಿಮದ್ದು ಎಲ್ಲ ಅಸ್ತ್ರ ಬಿಸುಟು
ಕಂಗಳಲ್ಲಿ ಸಂಪ್ರೀತಿ ಸಂಬಂಧ ಸದ್ಧರ್ಮ ಕಾಂತಿ ನೆಟ್ಟು

ಎಲ್ಲ ಮಾನವ ಹುಟ್ಟು ಒಂದೇ ಎಂಬ ಪಟ್ಟು
ಒಂದೇ ಭೂಮಿ ಒಂದೇ ಭಾನು ಒಂದೇ ಮನುಕುಲ
ಎಂಬ ಸದ್ಭಾವ ತೊಟ್ಟು ಸಹನೆ ಶಾಂತಿ ಹೃನ್ಮನದಿ ಇಟ್ಟು
ಜಗಳ ರಗಳೆ ರಂಪಾಟ ಕಾದಾಟ ಕದನ ಕುತೂಹಲ ಬಿಟ್ಟು!

* * * *

## ಶುಭಾಶಯ ಗೀತೆ

ಮನಸಿನಲಿ ಮರೆವು ಅಡರುವ ಮುನ್ನ
ದೇಹದಲಿ ಬಲವು ನಶಿಸುವ ಮುನ್ನ–
ಜಿಹ್ವೆಯಲಿ ಪದವು ತೊದಲುವ ಮುನ್ನ

ಕಾಲಿನಲಿ ಹೆಜ್ಜೆ ನಡುಗುವ ಮುನ್ನ–
ಕಂಗಳಲಿ ನೋಟ ಕಂದುವ ಮುನ್ನ
ಕಿವಿಗಳಲಿ ಶಬ್ದ ಕೇಳದ ಮುನ್ನ–

ಮೂಡಲಿ ಬುದ್ಧಿ, ಉಕ್ಕಲಿ ಶಕ್ತಿ
ಹಾಡಲಿ ನಾಲಗೆ, ಸಾಗಲಿ ಪಯಣ
ಸನ್ನಡೆಯಿಂದಲೇ ಮುನ್ನಡೆ ಜೀವನ!

ಕಾಣಲಿ ದಿಟ್ಟಿ, ಸವಿಯಲಿ ಗೀತ–ಸಂಗೀತ
ಶ್ರೀಗುರುವೇ, ಕೊಟ್ಟರೆ ಉಂಟು ಅನುಗ್ರಹ
ಶಿವ ನಿಮ್ಮ ನಾಲಗೆಯಲಿ ಕೂತು ನುಡಿಸಲಿ ಶುಭವ!

* * * *

# ಸಮಾನತೆಯ ಸಂಕೇತ : ದೀಪಾವಳಿ

ಅಂಧಕಾರ ಅಸುರನಳಿವಿಗೆ ಮೂಡಿ ಬರಲಿ
ಝುಗ ಝುಗಿಸುವ ದೀಪಾವಳಿ,
ಭರವಸೆಯ ಬೆಳಕ ತರುವ ತೇಜಾವಳಿ
ಜಗದ ಜನರ ಕಣ್ತೆರೆಸುವ ಕಿರಣಾವಳಿ!

ವರ್ಗ ವರ್ಣ ಸರಿಸಿ ಮನುಕುಲ ಒಂದೆಂದು ಸಾರುವ
ಏಕತಾ ಸಂಕೇತ – ದೀಪಾವಳಿ,
ಪಕ್ಷಪಂಥ ದೂರಿರಿಸಿ ಸರ್ವರೂ ಸಮವೆಂದು ತೋರುವ
ಪ್ರಜ್ವಲಿಸುವ ಪ್ರತಿಭೆಯ ಸಿರಿಪ್ರಭಾವಳಿ!
ಜಡತೆಯ ಹೊಡೆದೋಡಿಸುವ ಲಾಸ್ಯಾವಳಿ
ದಿವದ ಬೆಳಕ ಭವಕೆ ತರುವ ದೀಪಾವಳಿ !

ಸುಪ್ತವಾದ ಕಲಾಸೆಲೆಯ ದೀಪ್ತವಾಗಿ ಪಲ್ಲವಿಸುವ
ಮನೆ ಮನೆಯ ಮನ ಮನದ ರಶ್ಮಿರಂಗವಲ್ಲಿ;
ತಿಮಿರ ಗರ್ಭ ಸೀಳಿ ಬರುವ ಚಿರಂತನ ಚೈತನ್ಯದ
ಬಹುಮುಖೀ ಬೆಳಕಿನ ತಿಳಿ–ಜ್ಞಾನವಲ್ಲಿ!

ಬಾಳಿನ ಗುರಿ ಬೆಳಕೆಂಬ ಧವಳಾಂಜಲಿ
ಗಗನದಲೂ ಚಿತ್ರಕಾವ್ಯ ಬರೆವ ಗೀತಾಂಜಲಿ!
ದೀಪಾವಳಿ.... ರಮ್ಯ...... ದೀಪಾವಳಿ
ದೀಪಾವಳಿ.... ಭವ್ಯ...... ದೀಪಾವಳಿ

* * * *

# ಒಲುಮೆ ಸಿರಿಯ ಕಂಡು

ಒಲುಮೆ ಸಿರಿಯ ಕಂಡು
ಬಯಕೆ ಸಿಹಿಯ ಉಂಡು
ಪ್ರೀತಿ ಮಾತಾಡಿದೆ
ಬಾಳು ರಂಗಾಗಿದೆ !

ಚೆಂದಾಗಿ ಕೂಡಿದ ಸುಂದರ ಸಮಯ ಕನಸಾಗಿದೆ
ಓಡೋಡಿ ನಲಿದ ಸೊಂಪಾದ ತಾಣವ ಮರೆತಾಗಿದೆ
ಮಾತಾಡದೆ
ಬಳಿಬಾರದೆ
ನನ್ನಿಂದ ನೀ ದೂರ ಹೋದೆ!

ನೂರಾರು ಜನ್ಮದ ಅನುಬಂಧ
ನಮ್ಮದು ಅರಿವಾಗದೆ?
ಒಂದಾಗಿ ಹಾಡಿದ ರಾಗದ
ಧಾಟಿಯು ನೆನಪಾಗದೆ?
ಬೇರಾಗದೆ
ದೂರಾಗದೆ
ನನ್ನನ್ನು ನೀ ಸೇರು ಇಂದೇ

* * * *

# ಆತ್ಮದ ಅರಗಿಣಿ

ಪ್ರೀತಿ ತನುವಲ್ಲಿಲ್ಲ; ಪ್ರೀತಿ ಹಣದಲ್ಲಿಲ್ಲ
ಪ್ರೀತಿ ಕಾರು ಬಂಗಲೆಯಲ್ಲಿಲ್ಲ!
ಪ್ರೀತಿ ಕುರ್ಚಿಯಲ್ಲಿಲ್ಲ; ಮಸಾಲೆ ಮಿರ್ಚಿಯಲ್ಲಿಲ್ಲ
ಮನದರ್ತಿಯೇ ಅರಳಿತಲ್ಲಾ–
ಹೃತ್ಪಕ್ಷಿಕರೆಯಿತಲ್ಲಾ!

ಕಣ್ಣು ಕಣ್ಣು ಕೂಡಿ, ಕನಸು ಮನಸ ಕಾಡಿ,
ಅಂತರಂಗ ಹಾಡಿ, ಒಲುಮೆ ಚಿಲುಮೆ ತೋಡಿ
ಪ್ರೀತಿ ಕಾರಂಜಿ ಚಿಮ್ಮಿತಲ್ಲಾ!
ನಿಲುವಿನಪರಂಜಿ ಹೊಳೆಯಿತಲ್ಲಾ !

ಆತ್ಮದರಗಿಣಿ ಕೂಗಿ, ಆಸೆ ಬಯಕೆ ಜಗ್ಗಿ
ಬಾಳು ನಂದನವಾಗಿ, ತ್ಯಾಗ ಚಂದನವಾಗಿ
ನಲ್ಮೆ ಜೀವನದಲ್ಲಿ ಸುಗ್ಗಿ
ಪ್ರೇಮಿ ಪ್ರಿಯೆಯ ಕೂಡಿದ ಹಿಗ್ಗಿ!

* * * *

## ಪ್ರೇಮ ಪರೀಕ್ಷೆ

ನಿನ್ನ ಕಂಡ ಗಳಿಗೆಯಲ್ಲೇ
ಪ್ರೇಮಾಕ್ಷರ ಕಲಿತೆ,
ನಿನ್ನ ಹಿಂದೆ ಮುಂದೆ ತಿರುಗಿ
ಪ್ರೇಮದ ಕಾಗುಣಿತ ಅರಿತೆ.

ಪಾರ್ಕಿನಲ್ಲಿ ಪಿಕ್‌ನಿಕ್‌ನಲ್ಲಿ
ಪ್ರೇಮದ ವ್ಯಾಕರಣ ತಿಳಿದು,
ಹೋಟೆಲಲ್ಲಿ, ಸಿನಿಮಾದಲ್ಲಿ
ಹೃದಯದ ಕಥೆಯ ಬರೆದು–
ಕನಸಿನಲ್ಲೂ ಮನಸಿನಲ್ಲೂ
ಪ್ರೇಮ ಪಾಠ ಗುನುಗಿಕೊಂಡೆ!

ರೀತಿ ನೀತಿ ಎಲ್ಲಾ ಮರೆತು
ಪ್ರೇಮದ ಅಧ್ಯಾಯ ಓದಿ,
ಆಟ ಊಟ ಎಲ್ಲಾ ಬಿಟ್ಟು
ಪ್ರೇಮಗೀತೆ ಗಟಿಮಾಡಿ–
ಹಗಲು ಇರುಳು ನಿನ್ನ ನೆನೆದು
ಪ್ರೇಮದಮರ ಕಾವ್ಯ ಬರೆದೆ!

ಅಪ್ಪ ಅಮ್ಮ ತನಿಖೆ ಮಾಡಿ
ಪ್ರೇಮದ ಜ್ವರ ಕಾಡಿ ಕಾಡಿ
ಜಾತಿ ಗೀತಿ ಕಂಡು ಕೇಳಿ
ಪ್ರೇಮ ಕಠಿಣ ಹಾದಿ ಸಾಗಿ–
ನಿನ್ನ ಮದುವೆಯಾದಂದೇ
ಪ್ರೇಮದ ಪರೀಕ್ಷೆ ಗೆದ್ದೆ!

* * * *

## ರಾಗದೊಳಗಿನ ರಾಗ

ಕೊಟ್ಟು ಪಡೆವಾತ ನೆಟ್ಟು ನಗುವಾಟ
ಬಿತ್ತಿ ಬೆಳೆವಾಟ ಪ್ರೀತಿಗೆ...
ಅಟ್ಟು ಉಣುವಾಟ ಬಿಟ್ಟು ಬೆಸೆವಾಟ
ತೊಟ್ಟು ಕಳೆವಾಟ ಪ್ರೇಮಿಗೆ!

ಅಗ್ನಿತೀರ್ಥದಲಿ ಅರ್ಘ್ಯ ಮೊಗೆದಷ್ಟು
ಅರ್ತಿ ಜಲವುಕ್ಕಿ ಅರ್ಪಣ,
ಇಚ್ಛೆ ಇಗುರಾಗಿ ಇಷ್ಟದಿನಿವಾತು
ಒಲುಮೆ ಉಬ್ಬುಬ್ಬಿ ಅರ್ಚನ!

ಅಪ್ಪಿ ಹಿಡಿದಷ್ಟು ಸುಪ್ತಸುರತಾಗ್ನಿ
ಸುಭಗ ಸಾರೂಪ್ಯ ಸಂಭವವಾಗಿ–
ಮುತ್ತಿ ಮಣಿದಷ್ಟು ಮದನ ಮತಿ ಮರೆಸಿ
ಮತ್ತಿನ ಮದವೇರಿ ಮಾರ್ದವವಾಗಿ–

ಋತುಮಾನ ಇಂಬಾಯ್ತು
ರತಿ ರಾಗ ರಸವಾಯ್ತು..
ಯಮಳ ಜೀವ ಏಕವಾಗಿ
ಯುಗಳ ಭಾವ ಐಕ್ಯವಾಗಿ..

ಪ್ರೇಮವೆಂಬ ಜಾದುಹೊಕ್ಕು
ಕಲ್ಪನೆಯ ಕಡಲಾಯ್ತು ಬದುಕು;
ಒಳಗಿನೊಳಗೆ ಪ್ರೀತಿ ಮೊರೆ ಮೊರೆದು
ರಾಗದೊಳಗಿನ ರಾಗ ರಂಗಾಯ್ತು!

* * * *

## ಪ್ರೇಮದ ಸುಗ್ಗಿ

ಎಂಥೋ ಸೆಳೆತ ಸೆಳೆದು
ಬೆರೆತೆ ನಾನು ನಿನ್ನ ಒಲಿದು,
ಅಂದಿನಿಂದ ರೋಮಾಂಚನ ಪ್ರೀತಿ–
ಬೆಳೆದು ನೀನಾದೆ ನನ್ನ ಸಂಗಾತಿ!

ಮುಗ್ಧ ಮುಖದಲಿ ಏನೋ ಉಲ್ಲಾಸ
ಸ್ನಿಗ್ಧ ಭಾವದಲಿ ಏನೋ ಸಂತಸ
ನಲ್ಮೆಯರಸಿ ಬೆರೆಸಿ ಸರಸ
ಹೊಳೆದು ಮಿಂಚಿತು ಬಾಳಕಳಸ!

ಸುಖ ದುಃಖದ ಸಹಿಸ ನಡೆದು
ಸಂಕಷ್ಟದಿ ಮತ್ತಷ್ಟು ಅರಿತು–
ನನಗೆ ನೀನು ಆಸರೆಯಾಗಿ
ಸವಿದೆವೊಟ್ಟಿಗೆ ಪ್ರೇಮದ ಸುಗ್ಗಿ!

* * * *

## ಅರಳಿತು ಅರ್ತಿಯ ಅರವಿಂದ

ಕಣ್ಣನೋಟ ಸಾರುತ್ತಿದೆ ಹೃದಯದ ಒಲವ
ಅಂಗ ಭಂಗಿ ತೋರುತ್ತಿದೆ ಪ್ರೀತಿಯ ಚೆಲುವ,
ಉಲಿವ ಮಾತು, ನಡೆವ ನಡಿಗೆ
ಸ್ನೇಹದ ಸವಿ ಸಂಗ
ಎಗ್ಗಿಲ್ಲದೆ ಮೆರೆಯುತ್ತಿದೆ ಒಳಗಿನೆಲ್ಲ ನಿಲುವ!

ಜನಸಂದಣಿ ಸಂತೆಯಲ್ಲೂ ಕಣ್ಣು ಬರೆದ ಕವನ
ಬಾಳ ಹಾದಿಯಲ್ಲಿ ಹರಿದ ಪ್ರೀತಿ ತೇರು ಕಾಣಾ
ಆಸೆ ಹಕ್ಕಿ ಉಕ್ಕಿ ಬಂದ
ಪ್ರೇಮದ ಸವಿ ಸ್ಪಂದ
ಅವಳು ನನ್ನ ಕೈ ಹಿಡಿಯಲು ಅರಳಿತು ಅರವಿಂದ.

ಬವಣೆ ಬಾಳ ಬೇವಿನಲ್ಲೂ ಪ್ರೀತಿ ಹಬ್ಬದ ಹುಗ್ಗಿ
ಬಂಜರಾದ ಭೂಮಿಯಲ್ಲಿ ಒಲುಮೆ ಸುಖದ ಸುಗ್ಗಿ
ಜಾತಿ ಗೀತಿ ಎಲ್ಲ ಬಿಟ್ಟು
ಮೇಲು ಕೀಳು ದೂರವಿಟ್ಟು
ಅವಳು ನನ್ನ ಕೈ ಹಿಡಿಯಲು ನಲ್ಮೆಯ ಮಕರಂದ !

* * * *

## ನೀನೆರೆ .. ಸ್ವರ್ಗ

ನೀನಿರದ ನನ್ನ ಬದುಕು
ತಂತಿ ಇರದ ವೀಣೆಯಂತೆ,
ಒಲವಿರದ ಬರಡು ಇರವು
ಸ್ವರವಿರದ ಗಾನದಂತೆ!

ನನ್ನ ನಲ್ಮೆ ಬಾಳಿಗೆ
ಮೂಲಾಧಾರ ನೀನೆ ಜಾಣೆ
ನನ್ನ ಜಂಜಾಟದ ನಡಿಗೆಗೆ
ನೀನೇ ಗತಿ, ಧೃತಿ–ನಿನ್ನಾಣೆ!

ಸಂಪ್ರೀತಿ ಕೊಡುವ ಸಂಗಾತಿ
ನಿನ್ನಿಂದ ನನ್ನ ಜೀವನಕೆ ಉಲ್ಲಾಸ
ನೀ ದೂರವಾದರೆ – ಅಸ್ತವ್ಯಸ್ತ ಮತಿ
ಮುಸುಕಾಗುವುದು ಬಾಳ ದೇಗುಲದ ಕಳಸ!

* * * *

## ಜೀವಂತ ಪ್ರೀತಿ

ಒಲವಿನ ಹೂಬನ ಬದುಕಲಿ ಅರಳಿಸಿ
ಮೌನವಾದೆ ಏಕೆ? – ಗೆಳತೀ
ಗಾನ ನಿಂತಿತೇಕೆ?

ಚಿಗುರದ ಕೊರಡಲಿ ಆಸೆಯ ಚಿಗುರಿಸಿ
ಬುಡವ ಕಡಿದಿಯೇಕೆ – ಗೆಳತೀ
ದುಗುಡ ಹರಿಯಿತೇಕೆ?

ನಿನ್ನಯ ಸ್ನೇಹವು ಜೀವನಕೆ ಉಸಿರು
ನೀನೇ ಗೆಲುವಿನ ಹಸಿ ಹಸಿ ಹಸಿರು
ದೂರ ಹೋದೆ ಏಕೆ? ಪ್ರೀತಿ
ಗೋರಿಯಾಯಿತೇಕೆ?

ನಿನ್ನ ಗೋರಿಯ ಪ್ರತಿ ಕಣದಲ್ಲೂ
ನನ್ನ ಜೀವ ಹುದುಗಿ–ಒಲುಮೆ
ಬೇರು ಬಿಟ್ಟ ತರುವು–ಎಂದಿಗೂ
ಜೀವಂತ ಪ್ರೀತಿ ಇರವು!

* * * *

## ಕಣ್ಣಿನ ಕಾಗುಣಿತ

ಕಣ್ಣಿನ ಕಾಗುಣಿತ ಕಲಿಸಿದ ಕನ್ನಿಕೆಯೇ
ಸನ್ನೆಯ ಮಾಡುತಲೀ ಬೆಳೆಸಿದೆ ಸಿಹಿ ಬಯಕೆ

ಪ್ರಾಯದ ಆಸೆಗಳು ಕೆಣಕುವ ಕೀಟಲೆ ಕಂಡಾಗ
ಮನಸಲಿ ಮೋಹದ ಮೃದಂಗ,
ಕಾಡುವ ನೆನಪುಗಳು ಅರಿಯದ ಪ್ರೀತಿಯ ತಂದಾಗ
ಕನಸಲಿ ಕಾಮನೆ ತರಂಗ!

ಈ ಸಕ್ಕರೆ ಮಾತಿನಿಂದ ಸನಿಹಕೆ ಸೆಳೆದವಳೇ
ಅಕ್ಕರೆ ಮೋಡಿಯಲಿ ಸೆಳೆವೆಯಾ ನಿನ್ನೆಡೆಗೆ!

ಸ್ನೇಹದ ದಾರಿಯಲಿ ನಡೆಯುತ ನಂಬಿಕೆ ಬಂದಾಗ
ಕಂಡೆನು ನಂಬಿಕೆ ಪತಂಗ
ತೀರದ ರಾಗದಲಿ ನಲಿಯುತ ಸಂಗಡ ನಿಂತಾಗ
ಮಿಂಚಿತು ಮೋಜಿನ ಪ್ರಸಂಗ!

* * * *

## ಹೃದಯ ಗೀತೆ

ಪ್ರೀತಿ ಹೂವಾಗಿದೆ
ಅರಳಿ ಕಣ್ತುಂಬಿದೆ
ಒಲಿದು ಒಡನಾಡಿದೆ... ನಲಿದಾಡಿದೆ
ಸಂತೋಷ ಭಾವವೇ
ಮೈದುಂಬಿ ಬಂದಿದೆ.. ಓಲಾಡಿದೆ!

ಭೂದೇವಿ ಕೂಗಿ.. ಬಾನಂಚು ಬಾಗಿ
ಬೆಡಗನ್ನು ತಂತು... ಸೌಂದರ್ಯ ತೂಗಿ
ತಂಗಾಳಿ ತೀಡಿ.. ತರುಲಾಸ್ಯವಾಡಿ
ಜಲಧಾರೆ ಕೂಡಿ.. ಸ್ವರಮೇಳ ಮೂಡಿ
ಚೆಲುವಾಗಿದೆ ಇಳೆಯು ಕೈಬೀಸಿದೆ
ಮನದಲ್ಲಿ ಆಸೆ ಮನೆ ಮಾಡಿದೆ
ಮಾತಾಡಿದೆ... ರಂಗಾಗಿದೆ.

ರೋಮಾಂಚ ತುಂಬಿ ಬಾನಾಡಿ ಹಾಡಿ
ಸಂಗೀತವಾಯ್ತು... ಇಂಚರವು ತೇಲಿ
ಶ್ರೀಗಂಧ ಕಂಪು... ಪರಿಮಳವ ನೀಡಿ
ಶೃಂಗಾರವಾಯ್ತು... ಗಿಡ ಬಳ್ಳಿ ಸೇರಿ
ಕಂಗೊಳಿಸಿದೆ ಕಾಡು ಕಣ್ಣಾಗಿದೆ
ಹೃದಯಕ್ಕೆ ಭಾಷೆ ಪಲ್ಲವಿಸಿದೆ
ಹಸಿರಾಗಿದೆ... ಉಸಿರಾಗಿದೆ!

* * * *

# ಸೊಬಗಿನ ಸನ್ನಿಧಿಯಲ್ಲಿ

ನಗೋ ಮುಖದ ಎಲೆ ಪೋರಿ–
ಕಾಣೆ ನಾನು ಇಂಥಾ ಚೆಲುವಾ,
ನನ್ನೀ ಹೃದಯ ಹೇಳುತಿದೆ–
ಎಲ್ಲೂ ಕಾಣೆ ಇಂಥಾ ಒಲವಾ–

ನನ್ನಾಸೆಗಳ ಒಂದೂ ಬಿಡದೆ–
ನಿನ್ನ ಬಳಿಯೇ ಹೇಳೋ ಬಯಕೆ;
ನನ್ನೀ ಹೃದಯ ಕೂಗಿ ಮೊರೆವ–
ಈ ಭಾವಗಳ ಹಾಡೋ ಬಯಕೆ.

ಎಲ್ಲಿ ನೀನು.. ಅಲ್ಲಿ ನಾನು,
ನೀ ಇರುವಲ್ಲೆ ನನ್ನೀ ಇರವು–
ಇಂಥಾ ಚೆಲುವಾ ಇಂಥಾ ಒಲವಾ
ಎಲ್ಲೂ ಕಾಣೆ ಇದು ನಿಜವು!

ಸರೋವರದ ಕನ್ನಡಿಯಲ್ಲಿ
ಬಾನಂಗಳದ ಕೋಲ್ಮಿಂಚಲ್ಲಿ..
ಸಂಗೀತ ಸಿರಿ ಗಂಗೆಯಲಿ
ಕಾಡಿಗೆಯಾ ಕಣ್ಣಂಚಲ್ಲಿ....

ಎಂದು ನಾನು... ನಿನ್ನ ಕಂಡೆ
ಅಂದೇ ನೀನು ನನ್ನ ಗೆದ್ದೆ;
ಇಂಥಾ ಚೆಲುವಾ ಇಂಥಾ ಒಲವಾ
ಎಲ್ಲೂ ಕಾಣೆ, ಓ! ನನ್ನೊಲವೇ

ಹೂ ಮಲ್ಲಿಗೆಯ ಹಾಸುತಲೀ
ಬೆಳ್ದಿಂಗಳನೇ ಹೊದಿಸುತಲೀ..

ಬಾನ್ಮಳೆಬಿಲ್ಲ ಮುಡಿಸುತಲೀ...
ನಾ ಕಾಯುವೆನು ನಿರೀಕ್ಷೆಯಲಿ;

ನಿನ್ನೀ ಚೆಲುವ, ನಿನ್ನೀ ಒಲವ...
ಈ ಜಗದೊಳಗೇ ಎಲ್ಲೂ ಕಾಣೆ!
ಇಂಥಾ ನುಡಿಯ, ಇಂಥಾ ನಡೆಯ....
ಬಾಳ ಗೆಳತೀ ಎಂದೂ ಕಾಣೆ!

## ಪ್ರೀತಿ : ಪರಸ್ಪರ

ಬಾಳದಾರಿ ನಡೆಯಲು ಪ್ರೀತಿ ಬಂಡಿ ಆಸರೆ
ಬಂಡಿ ಚಕ್ರಮುರಿದರೆ ದಾರಿ ಪೂರಾ ತೊಂದರೆ;

ನೇಸರು ಇರೆ ತಾವರೆ
ದುಂಬಿಗೆ ಸುಮ ಆಸರೆ,
ನಲ್ಲಗೆ ನಲ್ಲ ನೀನಿರೆ
ಪ್ರೇಮವೇ ಸಿಹಿ ಸಕ್ಕರೆ!

ಹೂವಿಂದ ದುಂಬಿ, ನದಿಯಿಂದ ಕಡಲು
ಒಂದಿರದೆ ಮತ್ತೊಂದಿಲ್ಲ?
ರವಿಯಿಂದ ಶಶಿಯು, ಶಶಿಯಿಂದ ಬೆಳಕು
ಬೆಳಕಿರದೆ ಬಾಳಿನ್ನೆಲ್ಲಿ?

ಜಗಳದಲಿ ಸಂಸಾರ ನರಕವಾಯಿತು
ಒಲವಿರದೆ ಸಂಬಂಧ ನಲುಗಿ ಹೋಯಿತು
ಪ್ರೇಮಾಂಶು ಒಂದಾಗೆ ರಾಗ ರಂಗೇನೆ!

ಗಂಡಿಂದ ಹೆಣ್ಣು, ಹೆಣ್ಣೇನೆ ಕಣ್ಣು
ಸಂಸಾರ ಹೂವೇನಲ್ಲಾ!
ನಿನ್ನಿಂದ ನಾನು, ನನ್ನಿಂದ ನೀನು
ಒಲವಿರಲು ನೋವೇನಿಲ್ಲಾ!

ಅರಿವಿರಲು ಒಡನಾಟ ಮಧುರವಾಯಿತು
ಮನಸುಗಳು ಬೆಸೆದಾಗ ಒಸಗೆ ನಡೆಯಿತು
ಸಂಗಾತಿ ನೀ ಬೆರೆಯೆ ಬದುಕು ಸ್ವರ್ಗಾನೆ!

* * * *

## ಆಕರ್ಷಣೆ

ಚೈತ್ರ ಕಂಡ ಭೂಮಿ ಹಾಗೆ
ನಿನ್ನ ಮುಖದ ಹೂ – ನಗೆ.

ಬಾಗಿ ಬಳುಕುವ ಬಳ್ಳಿಯ ಹಾಗೆ
ಮುಂಗುರುಳಿನ ಹೊಸ ಬಗೆ,
ಜಾಜಿ ಮಲ್ಲಿಗೆ ಹೊಳೆವ ಹಾಗೆ
ಕಣ್ಣ ಕಾಂತಿ ಬೆಳ್ಳಗೆ ನನ್ನ ಸೆಳೆಯಿತು ಒಮ್ಮೆಗೆ.

ರಾಜಹಂಸ ತೇಲಿದ ಹಾಗೆ
ಎಂಥ ಚೆಂದ ನಿನ್ನ ನಡಿಗೆ?
ಸೋಗೆ ನವಿಲ ನಾಟ್ಯದ ಹಾಗೆ
ನಿನ್ನ ಪಲುಕಿನ ಬಗೆ,
ನಿನ್ನ ಮಧುರ ಕಂಠ ಸಿರಿಯು–
ಕೋಗಿಲೆ ಕೂಗಿದ ಹಾಗೆ,

ಮೀನ ಕಣ್ಣಿನ ರೂಪಸಿ ಹೆಣ್ಣೆ
ನಿನ್ನ ಚೆಲುವು ನನ್ನನ್ನೇ
ಕರೆಯಿತಲ್ಲಾ... ಓ! ಜಾಣೆ!
ತೊಂಡೆಹಣ್ಣ ಕೆಂಪಿನ ಹಾಗೆ
ಸೊಗಸು ಬಣ್ಣ ನಿನ್ನ ತುಟಿಗೆ.

ಕಬ್ಬಿನ–ಜಲ್ಲೆ ಡೊಂಕಿನ ಹಾಗೆ
ಭಾವ ಬೆಡಗು ನಿನ್ನ ಹುಬ್ಬಿಗೆ,
ನಿನ್ನ ಹುಬ್ಬು ಕಾಣುವ ಪರಿಯೇ
ಕಾಮನ ಬಿಲ್ಲಿನ ಹಾಗೆ

ರಾಗ ರಂಗಿನ ಮೋಹಕ ಹೆಣ್ಣೆ
ನಿನ್ನ ಸೊಬಗು ನನ್ನನ್ನೇ–
ಕುಣಿಸಿತಲ್ಲ ಇಂದೇನೆ!

* * * *

## ತುಡಿತ–ಮಿಡಿತ

ನನ್ನೆದೆಯ ತುಡಿತವೇ ನೀನಾಗಿಹೆ
ನಿನ್ನೆದೆಯ ಬಡಿತವೇ ನಾನಾಗಿಹೆ

ಪ್ರಾಯದ ಕಾವ್ಯಕೆ
ಪ್ರೀತಿಯೇ ಅಕ್ಷರ
ಬಾಳಲ್ಲಿ ಎಲ್ಲ ನೀನೇನೆ
ಪ್ರೇಮದಾ.. ಕೋಗಿಲೆ.... ಕೂಗಿದೆ!

ನನ್ನೆಲ್ಲ ಪ್ರೀತಿ ಪ್ರೇಮದಲ್ಲೂ ನೀನೇ!
ನನ್ನೆಲ್ಲ ರೋಮ ರೋಮದಲ್ಲೂ ನೀನೇ
ಅಣು ಅಣು ತುಂಬ ನೀನೇ
ಕಣ ಕಣ ತುಂಬ ನೀನೇ
ನಾನಾಡೋ ಪ್ರತಿ ಮಾತು ಜೀವಂತ ನಿನ್ನದಾಗಿದೆ!

ನಿನ್ನೆಲ್ಲ ಜೀವ ಭಾವದಲ್ಲೂ ನಾನೇ
ನಿನ್ನೆಲ್ಲ ಆಸೆ ಕನಸಿನಲ್ಲೂ ನಾನೇ
ಹೂವಿನ ಕಂಪು ನೀನೇ
ನಾದದ ಇಂಪು ನೀನೇ
ನೀ ಬಂದು ನನ್ನ ಸೇರೆ ಪರಿಪೂರ್ಣ ನಾನಾಗುವೆ!

* * * *

## ಪ್ರೇಮಧಾರೆ

ನಲ್ಮೆ ನೋಟದ ಕಂಡು ಅನುರಾಗವು ಮೂಡಿ
ನನ್ನ ಜೀವನ ಸಿಂಧು ಹೊನಲಾಯ್ತು ಕೂಡಿ!

ನಿನ್ನ ನೋಡಿದ ಕ್ಷಣವು ಅಮೃತದಾ ಘಳಿಗೆ
ರಾಗ ರಥವನು ಏರಿ ಉಲ್ಲಾಸವೀ ಬಾಳಿಗೆ
ಜನ್ಮ ಜನ್ಮದಾ ನಂಟು ಎನಿಸಿಹುದು ನನಗೆ–
ಋತುಮಾನಗಳ ದಾಟಿ ಬೆಳಗಿಹುದು ಪ್ರೇಮದೀವಿಗೆ!

ಸ್ನೇಹಭಾವವು ಬೆರೆತು, ಮೂಡಿತು ಮೋಹ
ಮೋಹದಾಚೆಗೂ ಹರಿದು ಕಾಡಿತು ದಾಹ;
ದಾಹ ಎಲ್ಲವ ಮರೆತು ನಮ್ಮ ಪ್ರೇಮ ಅಮರ
ನಾವು ಅಳಿದರೂ ನಿಲ್ಲದು, ನಮ್ಮ ಪ್ರೀತಿ ಧಾರ!

ರತಿಯ ಮೀರಿದ ಶೃತಿಯ ಸೇರಿತು ಒಮ್ಮೆಗೆ
ಕಾಲ ಮಾಗಿದ ಮೇಲೆ ಕೂಡಿತು ಏಳಿಗೆ,
ಕಾಮದಾಚೆಯ ಪ್ರೇಮ ಬೆಳಗಿತು ಒಟ್ಟಿಗೆ
ಮೈತ್ರಿ ಮೀಟಿತು ಬದುಕ ಸಮರಸದ ದಿಟ್ಟಿಗೆ!

* * * *

# ಅರ್ತಿ ಹೊಲದ ಹಸಿರು

ನನ್ನ ಬಾಳಿನ ಭಾಗ್ಯ, ನೀನಾಗಿ ಬಂದೆ
ನನ್ನ ಮನಸಿನ ತುಂಬ ಕನಸನ್ನು ತಂದೆ

ನಿನ್ನ ಸ್ನೇಹದ ನದಿಯು ಹರಿದು ಚೆಲುವಾಗಿ
ಮೋಹ ಸಾಗರ ಮೊರೆದು, ತೇಲಿದೆ ಅಲೆಯಾಗಿ
ಕಾಲ ಚಕ್ರ ಉರುಳಿ ಮೋಹದಲೆ ಕರಗಿ
ನಲ್ಮೆ ಕಡಲು ತಿಳಿಯಾಯ್ತು, ಪ್ರೀತಿ ಮುತ್ತು ಬೆಳಗಿ!

ಪ್ರೇಮ ಬಾನಿನ ಮೇಘ ಮುಂಗಾರ್ಮಳೆಯಾಗಿ
ಹೃದಯ ಭೂಮಿಗೆ ಸುರಿದು, ನಲ್ಮೆ ಫಸಲಿನ ಸುಗ್ಗಿ
ನಿನ್ನ ಅಕ್ಕರೆ ಹಸಿರು ಪೈರಾಗಿ ತೊನೆದು ತೂಗಿ
ಅರ್ತಿ ಬಾಳಿನ ಹೊಲವು ಬೀಗುತಿದೆ ಹಿಗ್ಗಿ ಹಿಗ್ಗಿ

ನಿನ್ನ ನಗೆಯ ಚಿಲುಮೆ ಚಿಮ್ಮಿ ಹೂವಾಗಿ
ಪ್ರೇಮಾಂಬರ ಬೆಳಕಾಯ್ತು ಮಿಂಚಿ ಮಿನುಗಿ;
ಆತ್ಮಬಂಧದ ಬೆಸುಗೆ ದಿನವೂ ಘನವಾಗಿ
ಒಲುಮೆ ತೋರಿದೆ ಸ್ವರ್ಗ ಜ್ಯೋತಿ ಬೆಳಗಿ!

* * * *

# ನನ್ನ ಹೃದಯ ನಿನ್ನ ಬಿಡದು

ಬಾನ ಸೂರ್ಯ ದಿಕ್ಕು ತಪ್ಪಿ ಮೂಡಲು ಬಹುದು
ನನ್ನ ಹೃದಯ ನಿನ್ನ ಬಿಟ್ಟು ದೂರ ಹೋಗದು;
ತಂಪು ಚಂದ್ರ ಸುಡುವ ಕೆಂಡ ನೀಡಲು ಬಹುದು
ಎಂದೂ ನಿನಗೆ ನನ್ನ ನಲ್ಮೆ ಭೇದ ಬಗೆಯದು.

ಒಲುಮೆಗೆ ಯಾವುದೇ ಅಡೆತಡೆ ಬಂದರೂ
ಬದುಕಲಿ ಯಾವುದೇ ಕಡು ಕಹಿ ಕಂಡರೂ,
ಈ ಪ್ರೀತಿಯಿಂದ ನಾನು ನೀನು ಒಂದಾಗೋಣ
ಆಸೆ ಜೇನ ಹೀರಿ ಹೀರಿ ತೇಲಾಡೋಣ!

ಸವಿ ಸುಖ ಲೋಕದಾ ಬಯಕೆಯ ಬೇಡುತಾ
ಸರಸದ ರೀತಿಯಾ ನಗುವನು ಕಾಣುತ,
ಈ ಹಾದಿಯಲ್ಲಿ ಜೋಡಿಯಾಗಿ ಮುಂದೆ ಹೋಗುತ
ಬಾಳ ಕಡಲ ಜೀಕಿ ಜೀಕಿ ಈಜಾಡೋಣ!

ಕಮಲ ಕೂಡ ಜಲವ ಬಿಟ್ಟು ಬದುಕಲು ಬಹುದು
ನಿನ್ನ ನೆನಪು ನನ್ನ ತೊರೆದು ಇರಲು ಆಗದು:
ನಾನು ನೀನು ಬೇರೆ ಬೇರೆ ಬಾಳಲು ಬಹುದು
ನಿನ್ನ ನಾನು, ನನ್ನ ನೀನು – ಮರೆಯಲಾಗದು!

* * * *

# ಸಂಗಾತಿಗೆ

ಬಾಳೊಂದು ಬಂಗಾರ ತೀರ
ಸಂಗಾತಿ ನೀನಾಗು ಮಂದಾರ
ನೀ ನಗೆ ಬೀರಲು
ಸುಖ ಸಿರಿ ಗೊಂಚಲು
ಜಗವೆಲ್ಲಾ ಸುಂದರ
ಪ್ರೀತಿಯೇ ಜೀವನ.... ನಾಳಿನ ಚೇತನಾ!

ಹಾದಿ ತುಂಬ ಮುಳ್ಳೇನಿಲ್ಲಾ – ಇಲ್ಲಿ
ಹೂವು ಉಂಟು ಎಷ್ಟೊಂದೆಲ್ಲಾ!
ಕಣ್ತುಂಬಿ ನೀ ನೋಡು ಸೊಬಗನ್ನೆಲ್ಲಾ
ನನ್ನೊಲವೆ ನೀ ಹರಿಸು ಚೆಲುವನ್ನೆಲ್ಲಾ
ನೀ ಪ್ರೀತಿಯಾ ಸುಂದರ ಮಂದಿರ!

ಲೋಕ ಪೂರ ಕೆಡಕೇನಲ್ಲಾ – ಇಲ್ಲಿ
ಒಳಿತು ಉಂಟು ಏನೇನೆಲ್ಲಾ!
ರೋಮಾಂಚ ನೀ ಕಾಣು ಬದುಕೆಲ್ಲಾ
ನಿನ್ನಿಂದ ಆನಂದ ಹೊನಲೇ ಎಲ್ಲಾ
ನೀ ಎಂದಿಗೂ ಪ್ರೇಮದ ಸಾಗರ!

* * * *

## ರಾಗ ರಂಗಿನ ಹಾಡು

ರಾಗ ರಂಗು ಮೂಡಿ ಬಂತೋ ಕಣ್ಣಿನಾಗೆ
ನೂರೆಂಟು ಆಸೆ ತಂತೋ ಬಾಳಿನಾಗೆ!
ಮಾತು ಮೌನ ಮೀರಿ ಬೆಳೆದ ಸ್ನೇಹದಾಗೆ
ಅಂಗ ಸಂಗ ತೋರಿ ಹೊಳೆದ ಮೋಹದಾಗೆ
ಜೀವ ಭಾವ ಹೊಂದಿಕೊಂಡ ಪ್ರೀತಿಯಾಗೆ
ಏನೇನೋ ಕನಸು ಕಂಡೆ ಪ್ರೇಮದಾಗೆ
ಅಂಟು ನಂಟು ತುಂಬಿ ಬಂದ ಮೋಹದಾಗೆ
ನಾ ಒಂದಾಗಿ ಬೆರೆತೇ ಹಾಲು ಜೇನಿನಾಗೆ!

ಹೊಲದಾಗೆ ಬಾಗಿ ಬೀಗಿ ತೂಗಾಡೋ ಹೂವಂಗೆ ಕಂಡೆ ನೀನು
ಜೋರಾಗಿ ಹಾರಿ ಹಾರಿ ರಸ ಹೀರೋ ದುಂಬಿಯಂಗೆ ಬಂದೆ ನಾನು
ಬಳಿಗೆ ಬಂದು ಸೆರಗ ಸೆಳೆಯೋ ತಂಟೆಗೆ
ಮನಸು ತುಂಬಿಕೊಂಡು ಮೆರೆಯೋ... ಮೋಜಿಗೆ
ಸುಖದಾ ಸಿರಿ ತೋರಿ
ಮಿನುಗೋ ನಗೆ ಬೀರಿ
ತೋಳು ಚಾಚಿ ಮೆಲ್ಲಗೆ ಅಪ್ಪಿಕೊಂಡೆ
ಮುತ್ತನೊತ್ತಿ ತಪ್ಪದೆ ಒಪ್ಪಿಕೊಂಡೆ

ಚೆಲುವಾದ ಲೋಕದಾಗೆ ಸುಖವಾಗಿ ಕಲೆತಾಗ ಎಂಥ ಚೆಂದ
ಸಂತೋಷ ಹಾದಿಯಾಗೆ ಸೊಗಸಾಗಿ ನಡೆವಾಗ ಏನು ಅಂದ
ಬಿಡದೆ ನೀನು ನನ್ನ ಕರೆಯೋ ಧಾಟಿಗೆ
ದಿನವೂ ನಾನು ನಿನ್ನ ಅರಿಯೋ ರೀತಿಗೆ
ಒಲವೇ ಬಲೆ ಬೀಸಿ
ಒಸಗೇ ಹೂ ಹಾಸಿ
ಎಂದೂ ನಾನೂ ನಿನ್ನನ್ನೇ ಮೆಚ್ಚಿಕೊಂಡೆ
ಹಗಲಿರುಳು ಎನ್ನದೆ ನೆಚ್ಚಿಕೊಂಡೆ.

* * * *

## ಒಲವೆಂಬ ರಂಗು

ಒಲವೆಂಬ ಗುಂಗು ಎದೆಯೊಳಗೆ ನಿಂದು
ಬದುಕಲ್ಲಿ ಹೊಳೆದ ಸೂರ್ಯ,
ಅಂತರಂಗದ್ದಕ್ಕಿ ಚಿಲಿಪಿಲಿ ಉಲಿದು–
ಉತ್ಸಾಹ ಮೊರೆವ ತೂರ್ಯ!

ವ್ಯೋಮ ವ್ಯೋಮ ಅಲೆದು ಗ್ರಹತಾರೆ ಮಿಡಿದು
ಇಂದ್ರಚಾಪ ತೂಗಿ ತೊನೆದೆ,
ಪ್ರೇಮ ಗಂಗೆ ಮಿಂದು ಸಂಗಾತಿ ಸೆಳೆದು
ಯಕ್ಷ ಯಕ್ಷಿ ಭಾವ ಪಡೆದೆ!

ನಾನು ಪೋರನಾಗಿ ನೀನು ಪೋರಿಯಾಗಿ
ನಾವಾದೆವು ಕೃಷ್ಣರಾಧೆ!
ಸ್ವಪ್ನಗಿರಿಯ ಏರಿ ಪ್ರೀತಿ ಪವನ ಮೀರಿ
ಐಕ್ಯರಾದೆವು ನಾವು ಅಂದೇ.

ಹೆಣ್ಣು ಗಂಡು ಎಂಬುದ ಮರೆತು ರಾಸಲೀಲೆ
ರತಿಸುಖದ ರಮ್ಯಧಾರೆ
ಮನೆ ಮಠವ ದಾಟಿ ಮೀರಿ ಎಲ್ಲ ಎಲ್ಲೆ
ಸ್ವರ್ಗ ಸಾಮ್ರಾಜ್ಯ ಸೂರೆ!

* * * *

## ಅಯಸ್ಕಾಂತದ ಸುತ್ತ ......

ಯಾವ ಸಮ್ಮೋಹದಯಸ್ಕಾಂತ ನೀನು?
ಪ್ರೀತಿ ಸೂಜಿಗಲ್ಲಿಗೆ ಸಿಕ್ಕನೇ ನಾನು?

ಅರಿಯೆ ನಾನು... ಬೆರೆಯೆ ನೀನು
ಮೂಡಿದೆ ಬೇಗೆ ಬಾನಿನಲ್ಲಿ ಭಾನು;
ಸರಿತೆ ನೀನು.. ಒಡ್ಡು ನಾನು
ಗಾಳಿ ನೀನು.... ಬೆಲೂನು ನಾನು !

ಪ್ರೇಮಾಂಬರದಲ್ಲಿ ಆಸೆ ಚಂದ್ರಮನು
ನಲ್ಮೆ ಬೆಳುದಿಂಗಳನೇ ಸೂಸಿಹನು–
ಓ! ಒಲುಮೆ ಚಂದ್ರಿಕೆ ಗೂಡು ಕಟ್ಟೋಣವೇನು?
ನೀ "ಹ್ಞೂ" ಎಂದರೆ, ಇಲ್ಲವೆನ್ನಲಾರೆ ನಾನು!

ನಿನ್ನ ಒಂದು ಮಾತಿಗೆ ಅರಳುತ್ತೆ ನನ್ನ ಮನದ ಹದನು
ನಿನ್ನ ಕಣ್ಣ ಸನ್ನೆಗೆ ಸೋಲುತ್ತೆ ನನ್ನ ಬಯಕೆ ತನು!

* * * *

# ನಿನ್ನ ಕಂಡ ಕ್ಷಣದಿಂದ

ಬನಗಿರಿಯ ಸಿರಿಯಲ್ಲಿ ನಾ ನಿನ್ನ ನೋಡಿದೆ
ಅಂದಿನಿಂದ ಕನಸಲ್ಲಿ ನೀ ನನ್ನ ಕಾಡಿದೆ;

ನೀ ಎಲ್ಲಿರುವೆ ಎಂದೆಲ್ಲ
ಹುಡುಕಿಯೇ ಹುಡುಕಿದೆ
ಅನುಕ್ಷಣವೂ ಅನುದಿನವೂ
ನಿನ್ನಿರುವ ತಡಕಿದೆ!

ದಟ್ಟ ಇರುಗಳುಗಳಲ್ಲಿ ನಾ ಮಿಡುಕಿದೆ
ನಿನಗೆಂದೇ ಹಂಬಲಿಸಿ ಕೂಗಿ ಕರೆದೆ

ಕನವರಿಕೆ ದಾಹದಲಿ
ನಾ ಬಳಲಿದೆ
ನಿನ್ನ ಹುಡುಕಾಟದಲಿ
ನಾ ತೊಳಲಿದೆ
ಇಂದಲ್ಲ ನಾಳೆ ನೀ ಸಿಗುವೆಯೆಂದೇ
ಸಿಕ್ಕವನು ನನ್ನ ಕೆಳೆಯ ಪಡೆವೆಯೆಂದೇ

ನಾ ಕಾದೆ ನಾ ಕಾದೆ
ಒಳಗೊಳಗೇ ನಾ ಬೆಂದೆ

ಸಿಗಬಾರದೇ ಸಖಿ ಸಿಗಬಾರದೇ
ನಿನ್ನ ನೆನಪಲ್ಲೇ ಸುಖ ಸಿಹಿಯಾಗಿದೆ!

* * * *

## ಒಲವೇ ಬೆಡಗು

ಅಳೆಯಲಾರೆ ನಿನ್ನ ಅಳ ; ಒಲುಮೆ ಪರಿಯೇ ಪ್ರಬಲ
ರಾಗದಾಸೆ ರಂಜನೀಯ ; ಹೃದಯ ಭಾವ ನಿರ್ಮಲ!

ಎಂತು ನಾನು ನಿನ್ನ ಒಲಿದೆ? ಹೇಳಲರಿಯೆನು!
ಮಧುರ ಮಾತು ಸ್ನೇಹವಾಗಿ ಪ್ರೀತಿ ಉದಿಸಲು!

ಸೌಮ್ಯ ನಾನು; ಸೌಮ್ಯಿ ನೀನು – ಸ್ನೇಹ ಹಾಲು – ಜೇನು

ಎಲ್ಲಿ ಸ್ನೇಹ ಗಂಗೆಯಾಗಿ ತುಂಬಿ ಹರಿವುದೋ
ಅಲ್ಲಿ ನಲ್ಮೆ ದೋಣಿಯಾಗಿ ತೇಲಿ ಬರುವುದು;

ನೀನು ರಂಗು; ನನಗೆ ಗುಂಗು; ಬೇಕು ನನಗೆ ನಿನ್ನ ನಗು
ನನ್ನ ಕನಸು ಮನಸಿನಲ್ಲೂ ನಿನ್ನದೇ ಬೆಳಗು;

ನಿನ್ನ ಬೆಳಗಿನಲ್ಲಿ ನನ್ನ ಬಾಳು ಸೃಜನೆಯ ಸೊಬಗು
ಎಷ್ಟು ಹೇಳಲಿ ಅಷ್ಟೂ ಉಂಟು; ಒಲವೇ ಬೆಡಗು!

* * * *

## ನೀನಿಲ್ಲದೆ ಬದುಕಿಲ್ಲ!

ಹಗಲು ಇರುಳು ನಿನ್ನ ಬಗೆಗೇ
ನನ್ನ ಕುತೂಹಲ!

ಸ್ನೇಹದಿಂದ ಮಾತನಾಡಿ
ಈಗ ಮೋಹ ಜಾಲ!

ಹೃದಯ ತುಡಿವ ಪ್ರತಿ ತುಡಿಡದಲ್ಲಿ
ನಿನ್ನ ಹೆಸರ ತುಡಿತವಿದೆ;

ಮನಸು ಮಿಡಿವ ಪ್ರತಿ ಮಿಡಿತದಲ್ಲಿ
ನಿನ್ನ ನೆನಪ ಮಿಡಿತವಿದೆ!

ಅಲ್ಲಿ ನೀನು ಇಲ್ಲಿ ನಾನು ಇದ್ದರೆ ಏನು?
ನನ್ನೊಳಗೆ ಇದ್ದೀಯೆ ನೀನು.

ನಿನ್ನ ಒಳಗೂ ಹಾಗೆ ನಾನು ಇದ್ದೀನಿ ಏನು?
ನೀನಿಲ್ಲದೆ ಎಂದೂ ಬದುಕೆನು ನಾನು!

* * * *

# ಒಲವೇ ನಮ್ಮ ಸೀ ಹೂರಣ

ಅಂದು ಕೃಷ್ಣನು ಅಕ್ಕರೆ ಅರ್ಜುನನಿಗೆ
ತೋರಿದ ವಿಶ್ವರೂಪ ದರ್ಶನ!

ಇಂದು ಪ್ರೇಮಿಯೇ ನಿನ್ನ ಪ್ರೇಮಿಗೆ
ತೋರು ಬಾರೋ ಪ್ರೇಮ ರಿಂಗಣ

ಎಲ್ಲಿ ನೀನೋ ಅಲ್ಲಿ ನನ್ನ ಮನ
ಹೃದಯ ಸಂಗಮ ಕಾರಣ
ಎತ್ತ ಹೋದರೂ ಅತ್ತ ಬರುವೆನೋ
ನಿನ್ನ ಚಿತ್ತ ರಸದೌತಣ!

ಬಾರೋ ಪ್ರಿಯಕರ ಪ್ರೀತಿ ಶುಭಕರ
ನನಗೆ ನಿನ್ನ ನಲ್ಮೆ ಚಂದನ
ಒಲವೇ ಜೀವನ ಒಲವೇ ಪಾವನ
ಒಲವೇ ನಮಗೆ ಸೀ ಹೂರಣ!

* * * *

# ಪ್ರೇಮ ವೃಕ್ಷ

ಈ ಪ್ರೇಮ ಜ್ಯೋತಿ ಬೆಳಗೋ ರೀತಿ
ಯಾರು ಬಲ್ಲರೋ?
ತುಂಬಿ ತುಳುಕೋ ಹೃದಯ ಪ್ರಣತಿ
ಬಲ್ಲವರ್ಯಾರೋ?

ಯಾವ ಪುಣ್ಯ ಘಳಿಗೆಯಲ್ಲಿ ಪ್ರೀತಿ ಹೊತ್ತಿಕೊಂಡಿತು?
ಯಾವ ಸ್ವರ್ಣ ಸ್ವಪ್ನದಲ್ಲಿ ಮಿಂಚಿ ಮಿನುಗಿತು?
ಪ್ರೀತಿ ಕನಸ ಕನ್ಯೆಯೇನು?
ಹೃದಯ ಚನ್ನಿ ಒಲಿದಳೇನು?

ಯಾವ ಭಾವ ಬೀಜವಾಗಿ ಪ್ರೀತಿ ಅಂಕುರಿಸಿತು?
ಚಿತ್ತ ಭೂಮಿಯಲ್ಲಿ ಎಂದು ವೃಕ್ಷವಾಯಿತು?
ಪ್ರೇಮ ತರು ಕೊಂಬೆ ರೆಂಬೆ
ಹೂ–ಹೂವಿನ ಗೊಂಡೆ!
ಎಸಳೆಸಳಲಿ ನಿನ್ನ ಹೆಸರಿನ
ಅಕ್ಷರಕ್ಷರ ಕಂಡೆ!

* * * *

## ಪ್ರೇಮದೊಸಗೆ

ಯಾವ ಎಳೆ ನಿನ್ನ ಕಡೆಗೆ ನನ್ನ ಸೆಳೆಯಿತು?
ಹೊಳೆಯದೋ ಹೊಳೆಯದು, ನನ್ನ ಚಿಂತನೆ ಹೊಳೆಯದು!

ಯಾವ ಶಬ್ದ ನನ್ನ ಎದೆಯ ಕದವ ತೆರೆಯಿತು?
ತಿಳಿಯದೋ ತಿಳಿಯದು, ನನಗೊಂದೂ ತಿಳಿಯದು!

ಎಲ್ಲಿ ನಲ್ಮೆ – ನದಿ ಹರಿವುದೋ, ಅಲ್ಲಿ ಒಲುಮೆ ಕಡಲು!
ಎಲ್ಲಿ ಒಲವು ಸಹಜ ಭಾವ – ಅಲ್ಲಿ ರಮ್ಯ ಪ್ರೇಮ ಮಡಿಲು;

ಎಲ್ಲಿ ಸತ್ಯ ಮರೆಮಾಚದೋ, ಅಲ್ಲಿ ನಿತ್ಯ ಪ್ರೀತಿ ಒಸಗೆ
ಎಲ್ಲಿ ಪ್ರೀತಿ ಒಸಗೆಯಹುದೋ, ಅಲ್ಲಿ ಬಾಳ ಪ್ರೇಮ ಬೆಸುಗೆ!

ಸ್ನೇಹ ಬೆಸೆಯ ನನಗೆ ನೀನು
ಪ್ರೇಮ ಉದಿಸಿ ನಿನಗೆ ನಾನು!

* * * *

# ನಿನ್ನ ನೆನಪು

ನಾ ಕೋಣೆಯಲೇ ನಿನ್ನ ನೆನೆವೆ
ಆ ಏಕಾಂತದಲ್ಲೇ!
ನಿನ್ನ ನೆನೆದು ನಲಿ ನಲಿವೆ
ನಾ ಇದ್ದ ಜಾಗದಲ್ಲೇ!

ನಿನ್ನ ನೆನಪೇ ತಂಗಾಳಿ ಈ ವಿರಹ ಬೇಸಗೆಯಲ್ಲಿ
ನಾ ಇದ್ದಲ್ಲೇ ಬೃಂದಾವನ ಕಲ್ಪನೆ ರಾಸಲೀಲೆ!
ನಿನ್ನ ನೆನಪೇ ಹಾಲ್ಜೇನು ಈ ವಿರಹ ತಾಪದಲ್ಲಿ
ನಾ ಇರುವಲ್ಲೇ ಮೋಹನ ಮುರುಳಿ ಕನಸು ಕಡಲು ತೇಲೆ

ನಿನ್ನ ನೆನಪೇ ಹೂವಿನ ಮಳೆ ಈ ವಿರಹದಗ್ನಿಯಡಿಯಲ್ಲಿ
ನಾ ಇದ್ದಲ್ಲೇ ಹುಲ್ಲಾಗುವಲು ನಿನ್ನ ನೆನಪ ಜೊತೆಯಲೇ
ನಿನ್ನ ನೆನಪ ಬೆಳ್ದಿಂಗಳು ನೀನಿರದ ಕತ್ತಲಲ್ಲಿ
ನಾ ಇರುವಲ್ಲೇ ಚುಕ್ಕಿ ಸಂಭ್ರಮ ನಿನ್ನ ನೆನಪ ಸಂಗಮದಲ್ಲೇ

* * * *

## ನನ್ನ ಒಲುಮೆ ಭಾನು ನೀನು !

ನಿನಗೆ ಅಂದೇ ಒಲಿದೆ ನಾನು
ನನ್ನ ಪ್ರೇಮ ಪುರುಷ ನೀನು!
ನಿನ್ನ ದಿನವೂ ಬಯಸುವಾ–
ರಮ್ಯ ರಸನೆ ಪ್ರಕೃತಿ ನಾನು!

ನಿನ್ನ ರಾಗದ ನದಿ ಮಿಂದೆ ನಾನು
ನವ ತೋಷ ಪುಳಕ ತಂದೆ ನೀನು!

ಎಂದು ನನ್ನ ಹೃದಯ ಅರಿತೆ ನೀನು
ಅಂದೇ ಚಿಗುರಿತು ನನ್ನ ಕಾಮನೆ ಕಾನು!

ಎತ್ತ ನೀನು ಅತ್ತ ನಾನು
ನಮ್ಮ ಚಿತ್ತ ನಲ್ಮೆ ಜೇನು!
ನನಗೆ ನೀನು ನಿನಗೆ ನಾನು
ಹೊಳೆವ ಬಾಲ ಒಲುಮೆ ಭಾನು!

* * * *

## ಪ್ರೇಮದ ಸ್ಪಂದನ

ನೀ ಪುಟಿವ ಕಾರಂಜಿ, ನಾನಂತೂ ಮೌನ ಶಿಲೆ
ಸಾಗಿದೆ ನಮ್ಮ ಜೀವನ ಇದ್ದೂ ಇಲ್ಲದಂತೆ
ಸಮುದಾಯ ಸಾಗರದ ಬಿಂದುವಂತೆ!

ನಿನ್ನ ಉತ್ಸಾಹ ಕಂಡು ಬೆರಗಾಗಿಹೆನು ನಾನು
ನನ್ನ ಎದೆಯಂಗಳದಿ ನಿನ್ನ ಪ್ರೀತಿ ಜೇನು!

ನೀ ಭೂಮಿ ನಾ ಬಾನು ನಮ್ಮೊಲುಮೆ ಭಾಗ್ಯ ಭಾನು
ನೀ ಹಸಿರು ನಾ ಕಾನು ನಲ್ಮೆಯುಸಿರು ಚೆನ್ನು

ಎಲ್ಲಿಯವಳೋ ನೀನು, ಎಲ್ಲಿಯವನೋ ನಾನು
ಸದ್ದಿನಾ ಶಹರದಲಿ ಸಂಧಿಸಿದೆವು
ಪ್ರೇಮವನೇ ಬಾಳಿಗೆ ಹೊಂದಿಸಿದೆವು
ಬವಣೆ ಬೆಂಕಿಯನ್ನೇ ನಂದಿಸಿದೆವು
ಎಂದೆಂದೂ ಪ್ರೇಮಕ್ಕೆ ಸ್ಪಂದಿಸಿದೆವು!

* * * *

# ನಿನ್ನ ನಗೆ ಮಲ್ಲಿಗೆ

ನಿನ್ನ ಮಲ್ಲಿಗೆ – ನಗೆ ಲಾಸ್ಯದಲ್ಲಿ
ಜೊನ್ನ ಜೋತ್ಸ್ನೆ ತುಳುಕಿದೆ
ನಿನ್ನ ಪ್ರೀತಿಯ ಸಿರಿ ಪಲುಕಿನಲ್ಲಿ
ಗೀತ ಸಂಗೀತ ಪಲುಕಿದೆ!

ನಿನ್ನ ಮಧುರ ನುಡಿ ಒಡಲಿನಲ್ಲಿ
ಸ್ನೇಹಸರಿತೆ ಸೊಂಪಿದೆ!
ನಿನ್ನ ಅಧರ ಸಿಹಿ ನೆನಹಿನಲ್ಲಿ
ಅಮೃತ ನಿಧಿ ಕಂಪಿದೆ

ನಿನ್ನ ಕಣ್ಣ ಕುಡಿ ಮಿಂಚಲೀ
ಅಚ್ಚ ಅಕ್ಕರೆ ಬೆಳಕಿದೆ
ನಿನ್ನ ಹೆಜ್ಜೆ ಘಲಿ ಘಲಿರಲಿ
ಗೆಜ್ಜೆನಾದದಿಂಪಿದೆ!

ನಿನ್ನ ಮೈತ್ರಿ ತನಿ ತೆಕ್ಕೆಯಲ್ಲಿ
ಪ್ರೀತಿ ಉಕ್ಕುವ ಚಿಗುರಿದೆ
ನಿನ್ನ ಒಲುಮೆ ಸಂಗದಲ್ಲಿ
ಬಾಳ ಬೆಲ್ಲದ ಸವಿಯಿದೆ!

* * * *

# ರಮ್ಯ ರಾಗ

ಮನಸಾರೆ ನಾನಾಗೆ ನಿನ್ನ ಮೆಚ್ಚಿದೆ!
ಕನಸಲ್ಲೂ ನಿನ್ನನ್ನೇ ನಾನು ನೆನದೆ – ದಿನ ನಾನು ನಿನ್ನ ನೆನೆದೆ!
ಕನಸಲ್ಲೂ ಮನಸಲ್ಲೂ ನಿನ್ನ ನೆನೆದೆ!

ಕಣ್ಣಿನಲ್ಲಿ ನಿನ್ನ ರೂಪ ಕಿವಿಯಲ್ಲಿ ನಿನ್ನ ಮಾತು
ಅನುಕ್ಷಣವೂ ಅನುದಿನವೂ ಅಚ್ಚಾಗಿದೆ!
ಕೋಣೆಯಲೂ ನೀನೇನೇ – ಹಾದಿಯಲೂ ನೀನೇನೇ
ಎಂದೆಂದೂ ನಿನ್ನದೇನೆ ಹುಚ್ಚಾಗಿದೆ!

ಹಗಲಿನಲೂ ಇರುಳಿನಲೂ ಅನುಗಾಲ ನಾನು
ಅಡಿಗಡಿಗೂ ಎಡೆಬಿಡದೆ ಪ್ರೀತಿಸಿದೆ ಇನ್ನೂ!

ಮನಸಾರೆ ನಾನೇನೇ ನಿನ್ನ ಮೆಚ್ಚಿದೆ
ಎಂದೆಂದೂ ನಿನ್ನ ಮೇಲೆ ನನ್ನ ಹುಚ್ಚಿದೆ!
ದಶಕ ದಶಕಗಳೇ ಕಳೆದರೂ ನಿನ್ನ ಹುಚ್ಚಿದೆ

ಕಸ್ತೂರಿ ಕಂಪಂತೆ ಕೊಳಲಿನಾ ಇಂಪಂತೆ
ಹುಣ್ಣಿಮೆಯ ಸೊಂಪಂತೆ ನನ್ನ ಪ್ರೀತಿ
ಕಡಲೆಡೆಗೆ ನದಿಯಂತೆ ಹೂವೆಡೆಗೆ ದುಂಬಿಯಂತೆ
ಭುಮಿಯೆಡೆಗೆ ಬಾನಂತೆ ನನ್ನ ರೀತಿ

ಅಳುವಿನಲೂ ನಗುವಿನಲೂ ನೀನಿರುವೆ ಇನ್ನೂ
ಅಂತರಂಗ ತುಂಬೆಲ್ಲಾ ಪ್ರೇಮಿಸುವೆ ಎನ್ನು!
ಮನಸಾರೆ ನಾನೇನೇ ನಿನ್ನ ಮೆಚ್ಚಿದೆ ಮುಪ್ಪಿನಲೂ ತಪ್ಪದೆ ಪ್ರೀತಿ ಕಚ್ಚಿದೆ.

* * * *

## ಪ್ರೇಮ – ಕದಂಬ

ನೊಸಲ ಮೇಲೆ ಬೆವರ ಮಾಲೆ
ಕಣ್ಣ ಕೆಳಗೆ ಸುಕ್ಕು ಸುಕ್ಕು
ಬೆಲೆ ಕಟ್ಟದ ಕಾಲ ಲೀಲೆ!

ಮೇರೆ ಮೀರಿದ ದಾರಿ ತೋರಿದ
ಊರು ಕೇರಿ ಕೇರಿ ದಾಟಿದ, ಬವಣೆ ಬೆಟ್ಟ ಮೀಟಿದ
ಆಸೆ ಹದ್ದಾದ ಮೈ ದದ್ದಾದ ಆಕಾಂಕ್ಷೆ ಹದ!

ಮಿಥುನಕ್ಕೆ ಮಾತಿಲ್ಲ
ಸೋತ ಸೊಲ್ಲಿಲ್ಲ – ಬೇಲಿ ಬಂಕವಿಲ್ಲ
ಶಂಕೆ – ಅಂಕವಿಲ್ಲ – ಸ್ವೈರವೆಲ್ಲಾ!

ಎಲ್ಲಿ ಚುಂಬನ ಅಲಿಂಗನ
ಅಲ್ಲಿ ಸುಖದ ಸ್ವರ್ಗದ ಸಂಭ್ರಮದ ಮನ
ಮೈ ಹಗುರಾಗಿ ಹೂಬನ

ಕ್ಷಣ ಕ್ಷಣರಾಗ ರತಿಯಾದ
ಸ್ನೇಹ ಸತಿಯಾದ ರಾಸ ಅತಿಯಾದ
ಬಯಕೆ ಗತಿ ಪಡೆದ ಎಲ್ಲ ಮತಿ ಮರೆತ
ಸುರತಿ ಸುಗತಿ ಸುದತಿ ಮಿಂಚಿನ

ಮನ ಮೋಹನ ಚಂದ್ರಬಿಂಬ
ಆಲ್ಲಿಲ್ಲ ಡೌಲು ಡಂಬ
ಇರುವುದೆಲ್ಲಾ ಹುಂಬ ಮನುಜನ
ನಗ್ನನಿತಂಬ, ಕಾಮ ಪ್ರೇಮ ಕದಂಬ!

* * * *

## ಪ್ರೇಮಲಗ್ನ

ನುಡಿದೆ ನೀನು ಅಳಲ ಉಲಿತ
ಮಿಡಿದೆ ನಾನು ಹೃದಯ ಪೂರ್ತ–

ನಿನ್ನೆದ ಕೋಗಿಲೆ ಎಂದೂ ಇನಿದು
ನನ್ನ ಮನ ಮಾಮರ, ಎಂದೂ ಹೊಸದು!
ನೀ ಕುಕಿಲಾದರೆ ನಾ ತಳಿರು
ನನಗೆ ಹಸಿವಾದರೆ ನಿನ್ನ ಪ್ರೀತಿ ಮೊಸರು

ನಾ ಮನ್ಮಥನಲ್ಲ...
ನೀ ರತಿಯೇನಲ್ಲ...

ನಮ್ಮ ಮಿಲನವಂತೂ ಹೃದಯಕೆ ಹಬ್ಬ
ನಮ್ಮ ಪ್ರೀತಿ ಕಡಲಿಗೆ ಎಣೆಯಿರದ ಪ್ರೇಮ ಕಬ್ಬ–

ಯಾವ ಕ್ಷಣದ ಯಾವ ನೋಟ
ಪ್ರೀತಿಯೂಟ ಉಣಿಸಿತೋ

ಯಾವ ಮತ ಯಾವ ಭಾವ
ಪ್ರೀತಿ ಲಗ್ನ ಮಾಡಿತೋ

ಅರಿಯೆನು ನಾನು – ಬೆರೆತೆ ನೀನು
ನಮ್ಮ ಪ್ರೀತಿ ಎಂದೂ ಹಾಲು – ಜೇನು!

* * * *

# ಪ್ರೀತಿ ದೀಪ

ಕತ್ತಲೆ ಮುತ್ತಿದ ಹಾದಿಯಲ್ಲಿ
ನಿನ್ನ ಪ್ರೀತಿ – ದೀಪ
ಅಗಣಿತ ಬೆಡಗಿನ ಲೋಕ ಇದ್ದರೂ
ಇಷ್ಟ ನಿನ್ನ ರೂಪ!

ಬವಣೆ ಬೇಗೆಯಲಿ ಬೇಯುವಲ್ಲೂ
ನಿನ್ನ ಅರ್ತಿ ತಂಪು,
ಇಹದ ಮದುವೆಗೆ ಕಾಯುವಲ್ಲೂ
ನಿನ್ನ ಒಲುಮೆ ಕಂಪು.

ವಿರಹ ಪರ್ವ ಪರ್ವದಲ್ಲೂ
ನಿನ್ನ ಪ್ರೇಮ ಭಾಗ್ಯ
ಜನರ ಟೀಕೆ ಚುಚ್ಚಿದಲ್ಲೂ
ನಿನ್ನ ನಲ್ಮೆ ಸಹ್ಯ

ನಗರ ಗದ್ದಲ ಕಾಡುವಲ್ಲೂ
ನಿನ್ನ ಪ್ರೀತಿ ಶಾಂತಿ
ಯಂತ್ರ ತಂತ್ರ ಕಾಡಿನಲ್ಲೂ
ನಿನ್ನ ಕಣ್ಣೇ ಕಾಂತಿ!

* * * *

## ಬಾಳಿನ ಬೆಳಕು

ಯಾರೇ ಬರಲಿ ಏನೇ ಆಗಲಿ
ನನಗೆ ನೀನು ಬೇಕು,
ನೂರು ಜನರು ನೂರು ಅನ್ನಲಿ
ಪ್ರೀತಿ ಬಾಳ ಬೆಳಕು!

ನಿನ್ನ ಚೆಲುವ ಮುಂದೆ ಎಲ್ಲವೂ
ಶೂನ್ಯವೋ ಶೂನ್ಯವು
ನಿನ್ನ ನುಡಿಯ ಮಧುರ ಸ್ವರವು
ಕೋಗಿಲೆಯ ಉಲಿವು!

ನಿನ್ನ ನಡೆಯೇ ನವಿಲಿನ ನಾಟ್ಯವು
ಅದಕಿಲ್ಲ ಉಪಮೆ ಪದವು,
ನಿನ್ನ ಇರವದು ಅಪ್ಸರೆ ರೂಪವು
ಅದಕಿಲ್ಲ ಬೇರೆ ಪರ್ಯಾಯವು!

ನಿನ್ನ ಓಲೆ ಸ್ವರ್ಣಾಕ್ಷರಮಾಲೆ
ಅಲ್ಲಿ ಹೃದಯಚಿತ್ತಾರವು
ನಿನ್ನ ಕರೆಯು ಹುಣ್ಣಿಮೆಯ ಅಲೆ
ಅಲ್ಲಿ ರಮ್ಯಪ್ರೇಮ ದಿವ್ಯಾಂಬರವು

* * * *

## ಎಲ್ಲಿ ನೀನು – ಅಲ್ಲಿ ನಾನು

ನೀ ಬರುವ ದಾರಿಯಲ್ಲಿ
ನನ್ನ ಹೃದಯವನ್ನೆ ಹಾಸಿದೆ –
ನಿನ್ನ ಹೆಜ್ಜೆ ಹೆಜ್ಜೆಯಲ್ಲಿ
ನನ್ನ ಹೆಸರು ಬರೆದಿದೆ –

ಯಾರು ನೋಡಿ ನಕ್ಕರೇನು?
ನನ್ನ ಬಾಳ ಒಲವು ನೀನು
ಯಾರು ಯಾರು ಆಡಿಕೊಂಡರೇನು
ನನ್ನ ಪ್ರೇಮ ಸೂರ್ಯ ನೀನು

ಎಲ್ಲೆಲ್ಲಿ ನೀನು ಅಲ್ಲಲ್ಲಿ ನಾನು
ನಮ್ಮ ಒಲುಮೆ ಹಸಿರುಹೊನ್ನು
ಎತ್ತೆತ್ತ ನೀನು ಅತ್ತತ್ತ ನಾನು
ಹೊಂದಿಕೊಂಡು ಬಾಳುವೆ ನಾನು.

* * * *

# ಪ್ರೇಮ ಜೀವನ

ಅರಿವಿನೆಳೆಯ ತರುಲತೆಯಲಿ
ಚಿಂತನೆ ಸಿರಿ ಹೂ ಅರಳಿ
ಚಿರ ಚೆಲುವಿನ ಬಗೆ ಬಗೆಯಲಿ
ಬಾಳ ಮೋಹನ ಮುರಳಿ!

ಭಾವ ಬಂಧ ತಂದ ಗಾನ
ಹೃನ್ಮನಕೆಂದೂ ಚೇತನ!
ಸೊಬಗು ಸವಿದ ತನು ಮನ ದಿನ
ನಕ್ಕು ನಲಿದು ನರ್ತನ!

ಅಂಗ ಶೃಂಗ ಮಧು ಚುಂಬನ
ಹಾಲು–ಜೇನ ಸವಿಸದನ!
ರಾಸಲೀಲಾ ರಮ್ಯ ರಿಂಗಣ
ಪ್ರೇಮ ಜೀವನ ನಂದನ!

* * * *

## ಪ್ರೇಮಪರ್ವ

ಹರೆಯ ಬಂದಿರಲು ಪ್ರೇಮದ ಪರ್ವ
ಎಂದೆಂದೂ ಕಾಣದ್ದ ಕಂಡೆ ಅಪೂರ್ವ,
ಪ್ರೀತಿ ಮೂಡಿರಲು ತುಡಿವುದು ಜೀವ
ಅನುಕ್ಷಣ ಅನುದಿನ ಒಲುಮೆಯ ಭಾವ.

ನನ್ನ ಪೂಜೆಗೆ ನೀ ಆರಾಧ್ಯ ದೈವ
ನನ್ನ ಎದುರಲ್ಲಿ ನೀ ಸುಂದರ ಸತ್ಯ ಶಿವ,
ನಿನ್ನ ಮುಗುಳ್ನಗೆಗೆ ನನ್ನ ಜೀವ ಕಾಯುವ–
ಪರಿಯಲೇ ಅಡಗಿದೆ ಒಲವಿನ ಉತ್ಸವ!

ಎನಿತು ಅಗಲಿದರೂ ಬಯಸದೆ ಸನಿಹವ
ಬವಣೆ ಅಡರಿದರೂ ಹಾರೈಸುವೆ ಪ್ರೇಮವ;
ನಿನ್ನ ಜೊತೆ ಜೊತೆಗೆ ನಾನೆಂದು ಬಾಳುವ–
ಆಸೆಯಲಿ ಹುದುಗಿದೆ ನಿಜ ಪ್ರಣಯೋತ್ಸವ.

* * * *

## ಸ್ಫೂರ್ತಿಗೀತ

ಅನುದಿನ ಅನುಕ್ಷಣ ಒಲುಮೆಯ ನೀಡಿದೆ
ನೀನೇ ಪ್ರೀತಿಯ ಚಿಲುಮೆಯು!
ನೀನೇ ಬದುಕಿನ ಸ್ಫೂರ್ತಿಯು!
ನಡೆಯುತಾ... ನುಡಿಯುತ್ತಾ...
ಪ್ರೀತಿ ಗೀತೆಯ ಹಾಡಿದೆ!

ಮನವ ಅರಿತೆ... ತನುವ ಬೆರೆತೆ
ಒಲಿದು ನಲಿಯುತ.. ನಲಿದು ಕಲೆಯುತ
ಒಲವೇ ಪಾವನ ಜೀವನ!
ಹೃದಯ ತುಡಿದು ದಿನವೂ ಮಿಡಿದು
ಸ್ನೇಹ ಸಿರಿಯಲಿ... ಪ್ರೀತಿ ಝರಿಯಲಿ
ಮಿಂದು ಬಾಳಿದು ನೂತನ!
ನೀನೇ ಸ್ಫೂರ್ತಿಯ ಚೇತನ
ಪ್ರೀತಿ ಬಾಳಿನ ನಂದನ!

ಮನದ ಮನದ... ಮುದವ ತಿಳಿದ
ಒಲುಮೆ ಬೆಳೆಯುತ.. ಬದುಕ ತಿಳಿಯುತ
ಹೃದಯ ಆಯಿತು ನಂದನ!
ಸುಖದ ಸೆಲೆಯ... ದಿನವೂ ಸವಿದೆ
ಪಯಣ ನಡೆಸಿದೆ.. ಹಾದಿ ಸವೆಸಿದೆ
ಒಲವೇ ತಂದಿದೆ ಪ್ರೇರಣ!
ನೀನೇ ಸ್ಫೂರ್ತಿಯ ಚೇತನ
ಪ್ರೀತಿ ಬಾಳಿನ ನಂದನ!

* * * *

## ಬಾಳುವೆಯ ಮೇಳ

ಅಕ್ಕರೆ ಅರತಿ ದೀಪ ಬೆಳಗಿದೆ
ನಿನ್ನ ನಲ್ಮೆಯ ಕಣ್ಣಲಿ,
ಪ್ರೇಮ ಕೆಂಡವು ದಂಡಿ ಉರಿದಿದೆ
ಬವಣೆ ಕುಂಡದ ಒಡಲಲಿ!

ಘಳಿಗೆ ಘಳಿಗೆಯೂ ಪ್ರೀತಿ ಕಿರಣದ
ಹೃದಯ ಜ್ಯೋತಿಯ ಬೆಳಗುವೆ,
ಸ್ನೇಹ ನೋಟದ ವಿಶ್ವಾಸ ಮಿಲನಕೆ
ಒಲುಮೆ ಹಣತೆ ಮುಂದಾಗಿದೆ!

ನಂಬಿಕೆ ಊರಿನ ಬಾಳುವೆ ತೇರಿಗೆ
ಅನುರಾಗದ ಜನ ಜಾತ್ರೆ ನೆರೆದಿದೆ,
ಪ್ರೀತಿಯ ದೇವರು ಎದೆಯಲಿ ಹೊಳೆದಿರೆ
ಬಾಳಿನ ಮೇಳವೇ ಸಾಗುತಿದೆ.

* * * *

## ಪರಸ್ಪರ

ಬಲತ್ಕಾರದಲ್ಲಿಲ್ಲ ಒಲವಿನ ಸಂಬಂಧ
ಇದ್ದರೆ ಅದೂವೆ ಹೃದಯ ಹೃದಯದ ಅನುಬಂಧ!
ಬೀಳ ಬೇಡ ಓ ! ಮನುಜ
ಮೋಹ ಜಿಂಕೆಯ ಹಿಂದೆ;

ಅರಿವಿರದೆ ಬಿದ್ದರೆ ಎಚ್ಚೆತ್ತುಕೋ ಪ್ರಾಣಿ
ಒಲವೆಂಬುದು ಪರಸ್ಪರ ತಿಳಿ ನೀ ಇಂದೇ!
ಹಣದ ಅಸೆಗೆ ಜನರು ಆಮಿಷವ ತೋರುವರು
ಕಪಟ ನಾಟಕದಲ್ಲಿಲ್ಲ ಪ್ರೀತಿಯ ಕದಿರು

ಪ್ರೇಮವೆಂಬುದು ಒಮ್ಮೆ ಮೂಡಿಸಿರೆ ಬೇರು
ದಿನ ದಿನ ಕ್ಷಣ ಕ್ಷಣ ಹಸಿ ಹಸಿರು ಚಿಗುರು
ಒಲವಿಗೆ ಒಲವೊಂದೇ ಪರ್ಯಾಯ ಉಸಿರು
ತಿರುಗು ಮುರುಗಾದರೆ ಬೇರೊಣಗಿ ನಾರು

ಒಲಿದರೆ ಕಾಣೋ ಹೆಣ್ಣು ಅಮೃತದ ಕೀರು
ಹರಿವುದು ಒದುಕೊಳಗೆ ನಲ್ಮೆ ಜೀವನದ ತೇರು.

* * * *

## ಅಡ್ಡ ಗೋಡೆಗಳು

ನಮ್ಮ ಮಿಲನದ ದಿನಗಳು
ಕಣ್ಣು ತುಂಬಿದ ಕ್ಷಣಗಳು,
ಇಂದು ಬಿರುಕಿನ ಮನಗಳು
ಮನೆಯಲ್ಲೇ ಮೌನವ ಬಣಗಳು
ಎತ್ತ ಹೋದವು ಸೌಹಾರ್ದ ದಿನಗಳು?

ಅಕ್ಕರೆಯ ಅಪ್ಪುಗೆಯ ಕ್ಷಣಗಳು?
ಸ್ಪರ್ಶವಿಲ್ಲದ ಕೈಗಳು
ಆಹ್ಲಾದವಿಲ್ಲದ ನೋಟಗಳು;
ಎಲ್ಲ ಯಾಂತ್ರಿಕ ನಡೆಗಳು
ನಲ್ಮೆ ಇರದಾ ನುಡಿಗಳು!
ಮೂಲೆ ಮುಡುಕಿನ ವಸ್ತುಗಳೇನು?
ನಮ್ಮ ತುಡಿವ ಜೀವಗಳು?

ಗರ್ಭಗುಡಿಯ ಮೂರ್ತಿಯೇನು?
ಅಂಗಳದಿ ಕುಳಿತ ಹಿರಿಯರು?
ಬತ್ತಿದವೇ ನಗೆ ಅಲೆಗಳು?
ಸತ್ತವೇ ಸ್ನೇಹ ಸ್ವರಗಳು
ಅತ್ತವೆ ಆರ್ತ ಭಾವಗಳು ?

ಮುತ್ತಿದವೇ ಸ್ವಾರ್ಥ ವ್ಯೂಹಗಳು?
ಯಾಕೆ ಎದ್ದವೋ ಅಡ್ಡಗೋಡೆಗಳು?

* * * *

# ವಿದಾಯ

ಹೃದಯದ ಬಾಗಿಲಿಗೆ ಒಲವಿನ ಬಿಸಿ ಬೆಲ್ಲ ತಂದೆ
ಮುಚ್ಚಿದ ಕದದ ಹಿಂದೆ ಬಾಗಿಲ ತೆಗೆಯೊಲ್ಲವೆ ಪ್ರಮದೆ
ಕಾಯುತ್ತಾನಿಂತೆ, ಕ್ಷಣ ದಿನವಾಯ್ತು.... ಗಾಯ ಹುಣ್ಣಾಯ್ತು
ಹಣ್ಣಾಗಬೇಕಿತ್ತು ಒಲವು... ಕಣ್ಣಾಗಬೇಕಿತ್ತು ಒಲವು
ಹುಣ್ಣಾಗಿ ಮಣ್ಣಾಯ್ತು.. ಬದುಕೇ ಸಣ್ಣದಾಯ್ತು!

ಎತ್ತರಿಸಿದೆ ನೀನು ನಿನ್ನ ದನಿ
ತತ್ತರಿಸಿದ ನನ್ನ ಎದೆ ಬೋಗುಣಿ!
ಯಾಕಿಂತು ಹೈರಾಣಾಯ್ತ ನನ್ನ ಒಲವಿನ ಬನ?
ಏ ! ಆತ್ಮಸಖೀ... ಹಣದ ಝಣ ಝಣ ಮಾಡಿತೇ ಹೆಣ

ನಾ ಅಲೆಮಾರಿಯಾದೆ, ನೀ ಹೆಮ್ಮಾರಿಯಾದೆ
ನಾ ಗುರಿ ಇರದೇ ತೊಳಲಿದೆ, ನೀ ಗಹಗಹಿಸಿ ಸುಮ್ಮನಾದೆ
ಪ್ರೀತಿ ಬತ್ತಿದ ಮೇಲೆ ಬದುಕು ಶವ ಸಮಾನ
ಇಷ್ಟು ಬೇಗ ಮುಗಿಯಿತೇ ನನ್ನ ನಿನ್ನ ಒಲುಮೆಯ ಋಣ?

* * * *

## ವಿಷಾದ ಗೀತ

ಕದಡಿದ ಮನದಲಿ ಚದುರಿದ ಚಿತ್ರವು
ನೋವಿನ ಎದೆಯಲಿ ಒತ್ತಡ ಪಾತ್ರವು;
ತಮಟೆಯ ಬಾರಿಸಿದೆ
ಅಳಲಿನ – ತಮಟೆಯ ಬಾರಿಸಿದೆ!

ಹರಿದಿದೆ ಪರ ಪರ ಒಲವಿನ ಸೂತ್ರವು
ಮಿಟುಕಿದೆ ಅತ್ತಿತ್ತ ಯಮಳ ನೇತ್ರವು
ಕಹಳೆಯು ಮೊಳಗುತಿದೆ
ಅಗಲಿಕೆ–ಕಹಳೆಯು ಮೊಳಗುತಿದೆ!

ಮುಚ್ಚಿನ ಕದವು ಕಚ್ಚಿದೆ ಎದುರೇ
ನೆಚ್ಚಿದ ನೆಲವೇ ಕುಸಿದೆ, ಹೊತ್ತಾರೆ!
ಎಚ್ಚವಿದ್ದರೂ... ಬೆಚ್ಚಿದೆ ಬೆದರಿದೆ
ಎದ್ದ ಬಿರುಗಾಳಿಗೆ, ನಂಜು ಹೆಡೆ ಬಿಚ್ಚಿದೆ –
ಹೃದಯವು ನಡುಗುತಿದೆ
ಹಣ್ಣಾದ – ಹೃದಯವು ಒಡೆಯುತಿದೆ!

* * * *

# ಅನುರಾಗ ತೋಟದಲ್ಲಿ

ಅನುರಾಗ ತೋಟದಲ್ಲಿ ಹೂವಂತೆ ನಾನು
ಆ ಹೂವ ಕಾಣಬಯಸಿ ಕಾದಿರುವ ದುಂಬಿ ನೀನು
ಹೃದಯಾಂತರಾಳದ ಭಾವನೆಯ ಮೂಡಲು
ಇಂದೇನೋ ರಾಗೋಲ್ಲಾಸ
ನಾ ಕಂಡೆ ಸಿರಿ ಸಂತೋಷ!

ಸೂರ್ಯ ಮೂಡಲು ನಲಿವ ತಾವರೆ ಕಂಡು
ಲೋಕ ಮರೆಯುತ ಪ್ರೀತಿ ಪರವಶನಾದೆ
ಚೈತ್ರ ಸುಳಿಯಲು ಉಲಿವ ಕೋಗಿಲೆ ಕಂಡು
ಆಸೆ ಮೂಡುತಾ ಪ್ರೇಮ ರಂಜಿತನಾದೆ
ರೋಮಾಂಚ ತರುವ ಶೃಂಗಾರ ಭಾವ
ಎಲ್ಲ ನೆನಪಾಗಿ ನಾ ಹಾಡಿದೆ.

ಬಳ್ಳಿ ಮರವನು ತಬ್ಬಿ ಬೆಳೆವುದ ನೋಡಿ
ಬಾಹು ಬಂಧನ ಬಯಸಿ ಮೋಹಿತನಾದೆ
ಜೋಡಿ ಹಕ್ಕಿಯ ರಮ್ಯ ಪ್ರಣಯವ ನೋಡಿ
ನಾಳೆ ಬಾಳಿನ ನಲ್ಮೆ ಕನಸನು ಕಂಡೆ
ಶುಭಯೋಗ ಬರಲು ಸಂಬಂಧ ತರಲು
ನಿನ್ನ ಸಂಗಾತಿ ನಾನಾಗುವೆ.

* * * *

## ಅಭಿವಂದನೆ

ವಂದನೆ.. ವಂದನೆ.....
ಸಾವಿರ ವಂದನೆ....
ಸಾಧನೆ ತೋರಿದ ಜಾಣೆಗೆ
ಗೆಲುವಿನ ಬಂಗಾರಿಗೆ
ಸೊಬಗಿನ ಸಿಂಗಾರಿಗೆ
ವಂದನೆ.. ವಂದನೆ....

ನೀಲಾಂಬರದ ಬೆಳ್ದಿಂಗಳಿ
ತೇಲಾಡುತಿರೋ ಮಂದಾರ ಹೂ ನೀನೇ....
ಮೋಹಾಂಗನೇ ನೀನು
ಅಭಿಮಾನಿಯು ನಾನು
ಓ! ಶೋಭನೆ.. ನೀಳಾಂಕನೆ.. ಅಭಿವಂದನೆ..

ಕಾರ್ತೀಕ ಸಿರಿ ದೇವಾಲಯದಿ
ಓಲಾಡುತಿರೋ ದೀಪಾಂಜಲಿಯು ನೀನೇ
ಬೃಂದಾವನದ ಕಾರಂಜಿಯಲಿ
ನಲಿದಾಡುತಿರೋ ನೃತ್ಯಾಂಗನೆಯ ನೀನೇ...
ಸಿರಿಯೌವನೇ ನೀನು
ರಾಗಾಂಕಿತ ನಾನು
ಓ! ಶೋಭನೆ.... ಪ್ರೇಮಾಂಗನೆ... ಅಭಿವಂದನೆ....

* * * *

# ಮುಂಜಾನೆ ಮೂಡಿದ ಹಾಗೆ

ಮುಂಜಾನೆ ಮೂಡಿದ ಹಾಗೆ
ತಂಗಾಳಿ ತೀಡಿದ ಹಾಗೆ
ಹೊಂಬಾಳೆ ತೂಗಿದ ಹಾಗೆ
ಕೆಂದಾವರೆ ನೀನು ನನಗೆ

ಹಸಿರಾದ ಪ್ರೀತಿಯ ಕಂಡು
ಉಸಿರಾಗ ಬಂದೆನು ನಾನು
ಸಸಿಯಾದ ಸ್ನೇಹ ಮೋಹ
ಬಲು ಬೆಳೆದು ನಿಂತಿರಲು
ಓಡಿ ಬಂದೆ ಬಳಿಗೆ!

ಹೊಸದಾದ ಆಸೆಯ ತೋರಿ
ಶಶಿಯಂತೆ ಬೆಳಗುವೆ ನೀನು
ಚೆಲುವಾದ ಬಾಳ ಕಡಲಿನಲಿ
ಒಲಮೆ ದೋಣಿಯಲಿ
ತೇಲು ತನ್ನ ಜೊತೆಗೆ!

* * * *

## ಅನುರಾಗದ ಹಕ್ಕಿ

ಅನುರಾಗದ ಹಕ್ಕಿ ಕೂಗಿ
ಹಾರಾಡಿದೆ ಎಲ್ಲೆ ಮೀರಿ
ಸಂತೋಷದ ರೆಕ್ಕೆ ತೂಗಿ
ತೇಲಾಡಿದೆ ಬಾನಿಗೇರಿ.

ಸಂಗಾತಿ ಸನಿಹವ ಸೇರಿ
ದಾಂಪತ್ಯ ಸವಿಯನ್ನು ಹೀರಿ – ಮಧುರವಾಗಿ
ಹಾಲ್ಜೇನ ಹೊಳೆಯಲಿ ಮಿಂದು
ಮನಸಾರೆ ಸರಸವ ಕಂಡು
ಸುಖದ ಸುಗ್ಗಿ!...

ಬಡಲಾಳ ಒಲವನು ಬಯಸಿ
ಸಲ್ಲಾಪ ಕಾಮನೆ ಅರಸಿ – ಸಂಗ ಸಾಗಿ
ಒಂದಾಗಿ ಅಕ್ಕರೆ ಕಂಡು
ಸಂಸಾರ ಸುಧೆಯನು ಸವಿದು
ಮಿಲನ ಮಿನುಗಿ....

ಉತ್ತುಂಗ ಶೃಂಗವ ಸೇರಿ
ತಂಗಾಳಿ ತೆರೆಗಳ ಈಜಿ – ಮನಸು ಮಾಗಿ
ನೂರಾರು ಯೋಜನ ದಾರಿ
ಆವರಿಸಿ ಆಸೆಯ ಲಹರಿ
ಹೃದಯದ ಹಿಗ್ಗಿ....

* * * *

## ನಿನ್ನ ಸೊಗಸೇ ಸೊಗಸು

ಮಲ್ಲಿಗೆಯು ನೀನೇ
ಮಾಧುರಿಯು ನೀನೇ
ಮಂದಾರ ನೀನೇ
ಮಾಧುರ್ಯ ನೀನೇ
ಕಣ್ಣಿನಲಿ ನೀನೇ ತುಂಬಿ ಹುಚ್ಚಾದೆನೆ
ಹುಣ್ಣಿಮೆಯು ನೀನೇ
ಹೊಂಬಿಸಿಲು ನೀನೇ
ನಿನ್ನ ಅಗಲದೆ ಎಂದೆಂದೂ ನಾ ಬರುವೆನೆ!

ಎಳೆ–ಮೀನಿನಂತೆ ನಿನ್ನ ಕಣ್ಣು
ತೊಂಡೆ ಹಣ್ಣು ನಿನ್ನ ತುಟಿಯು
ಕಾಮನ ಬಿಲ್ಲಂತೆ ನಿನ್ನ ಹುಬ್ಬು
ನೈದಿಲೆ ನಗುವಂತೆ ನಿನ್ನ ಮುಖವು
ನೀಳವೇಣಿ ಹರಿದಾಡಿ–ಜಲಧಾರೆ ಇಳಿದಂತೆ
ನಿನ್ನ ಚೆಲುವೇ ಚೆಲುವು–ರೂಪಸಿ ನೀನು!

ನೀನು ನಗಲು ತಾರೆ ಬೆಳಗಿ
ನೀನು ಮುನಿಯೆ ಹೂವು ನಾಚಿ
ನಿನ್ನೆಲ್ಲಾ ನಡೆ ಕಂಡು ಹಂಸ ಪುಳಕ
ನಿನ್ನ ರೂಪ ಕಂಡು ಆ ಚಂದ್ರನೂ ಹೆದರಿ
ನಿನ್ನ ಸೊಗಸೇ ಸೊಗಸು–ಊರ್ವಶಿ ನೀನು!

* * * *

## ದಿಬ್ಬಣದ ಹಾಡು

ಆಸೆ ಹೊಳೆಯೆ ಉಕ್ಕಿ ಹರಿದೈತೆ
ಬಾಳ ದೋಣಿ ತೇಲಿ ಸಾಗೈತೆ
ಹೊಸ ಕನಸು ಮೂಡಿ ಬಂದೈತೆ
ಪ್ರೀತಿ ಹಕ್ಕಿ ರೆಕ್ಕೆಯಿಕ್ಕಿ ಹಾರೈತೆ!

ಉಪ್ಪರಿಗೆ ಮನೆ ಮುಂದೆ ಚಪ್ಪರವ ಹಾಕೈತೆ
ಅಂಗಳದ ಹೊಂಬಾಳೆ ಹೂವು ನಗುತ್ತೈತೆ
ಎಲ್ಲೆಲ್ಲೂ ಹಸಿ ಹಸಿರು ತೋರಣವೇ ತೂಗೈತೆ
ಮುತ್ತೈದೆ ಮನ್ನೆಯರ ಶಾಸ್ತ್ರ ನಡೆದೈತೆ

ಈ ಜೀವ ಜುಮ್ಮೆಂದು ಹಾಡೈತೆ
ಈ ಭಾವ ನೂರಾಗಿ ಮಿಂಚೈತೆ!

ಬೀಗರೆಲ್ಲಾ ಬರುವಾಗ ವಾಲಗವ ಊದೈತೆ
ಮಂಗಳದ ಕಂಕಣದಾ ಭಾಗ್ಯಾ ಬಯಸೈತೆ
ಹರಿವಾಣ ತುಂಬೆಲ್ಲಾ ಎಲೆ ಅಡಿಕೆ ತುಳುಕೈತೆ
ಮುತ್ತಿನಾ ಹಸೆಮಣೆಗೆ ಹೆಣ್ಣ ಕರೆದೈತೆ

ಕಣ್ಣಾಗೆ ಸಂತೋಷ ಹೊಳೆದೈತೆ
ಮನದಾಗೆ ಸಂಬಂಧ ಬೆಸೆದೈತೆ!

* * * *

# ವಿರಹದ ಹಕ್ಕಿ

ಪ್ರೀತಿ ಹಕ್ಕಿ ಹಾಡದೆ ಮೌನವಾಯಿತೇಕೆ?
ರೆಕ್ಕೆ ಬಿಚ್ಚಿ ಹಾರದೆ ವ್ರತವ ಹಿಡಿಯಿತೇಕೆ?
ಇಳೆಗೆ ಬೆಡಗು ಬಂದರೂ ರಾಗ ಮೂಡದೆ
ನಗುವ ಲೋಕ ಕರೆದರೂ ತೋಷ ಕಾಣದೆ

ಪ್ರೀತಿ ಹಕ್ಕಿ ನಲಿಯದೆ ಮುರುಚಿ ಕುಲಿತಿತೇಕೆ?
ರೆಕ್ಕೆ ಬಿಚ್ಚಿ ಹಾರದೆ ಒಂಟಿಯಾಯಿತೇಕೆ?
ಹಸಿರು ಕಾಡು ನುಡಿದರೂ ಟೊಂಗೆ ಟೊಂಗೆ ಮೀಟದೆ
ಹರಿವ ಜಲವು ಮೊರೆದರೂ ಅಲೆ ಅಲೆಯಲಿ ಈಜದೆ

ಉಲಿವ ಹಕ್ಕಿ ಒಮ್ಮೆಗೇ ತೆಪ್ಪಗಾಯಿತೇಕೆ?
ಹೃದಯದ ಹಕ್ಕಿ ಕಮ್ಮಗೆ ಮೋರೆ ಊದಿಸಿತೇತಕೆ?
ಬಿರಿದ ಹೂವು ತೂಗಿದರೂ ಬಳಿಗೆ ಬಂದು ಕೂರದೆ
ತನಿಯ ತೆನೆಯು ತೊರೆದರೂ ಅಕ್ಕ ಪಕ್ಕ ಸುಳಿಯದೆ

ಹಸಿದ ಹಕ್ಕಿ ಕೂಗದೆ ತಪಸಿಯಾಯಿತೇಕೆ?
ಬೆಸೆದ ಹಕ್ಕಿ ಸಂಗವ ದೂರ ಮಾಡಿತೇತಕೆ?

ವಿರಹ ಮಾಗಿ ಮುಗಿದರೆ ಚೈತ್ರ ಮರಳಿ ಬಾರದೇ?
ಹೊರಗೆ ಚಳಿಯು ಕೊರೆದರೂ ಒಳಗೆ ಬಯಕೆ ಕಾಡದೇ
ಹೇಮಂತ ಕಳೆಯೆ ವಸಂತದಾ ಮಾವು ತಳಿರ ಕಾಣದೆ
ಆಸೆ ಒಡಲು ಕೂಗಲು ನಲ್ಮೆ ಕೋಗಿಲೆ ಹಾಡದೇ?

* * * *

## ಮಧುರಗಾನ

ಕೊಳಲು ನೀನಿರೆ
ದನಿಯ ನಾನಿರೆ
ನಮ್ಮೊಲುಮೆ ಆಲಾಪ ರಾಗ ತಾನವು!
ಸ್ವರ ಸ್ವರವೂ ಬೆರೆತಿರಲು
ಮಧುಮಧುರ ಗಾನವು!

ಚೈತ್ರವು ನೀನು–ವಸುಧೆಯು ನಾನು
ಚೈತ್ರವು ಬರಲು–ವಸುಧೆಗೆ ಬೆಡಗು
ಕಲ್ಪನೆ ನೀನು–ವಾಸ್ತವ ನಾನು
ಕಲ್ಪನೆ ಇರಲು–ಸೃಜನೆಗೆ ಸೊಬಗು
ಹೂವಲ್ಲೂ ನೀನೇ–ಮಾವಲ್ಲೂ ನೀನೇ
ಹಣ್ಣಲ್ಲೂ ನೀನೇ–ಕಣ್ಣಲ್ಲೂ ನೀನೇ
ಸ್ವರ ಸ್ವರವೂ ಬೆರೆತಿರಲು ಮಧುರ ಗಾನವು!

ನೈದಿಲೆ ನೀನು ಚಂದಿರ ನಾನು
ಚಂದ್ರನು ಮೂಡಲು ನೈದಿಲೆ ನಗುವು
ಕುಂಚವು ನೀನು–ಬಣ್ಣವು ನಾನು
ಚಿತ್ರವು ಮೂಡಲು–ಸಂಗಮ ಚೆನ್ನು
ಜೀವಕ್ಕೆ ಜೀವ–ಭಾವಕ್ಕೆ ಭಾವ
ರಾಗಕ್ಕೆ ರಾಗ–ತಾನಕ್ಕೆ ತಾನ
ಸ್ವರ ಸ್ವರವೂ ಬೆರೆತಿರಲು ಮಧುರ ಗಾನವು!

* * * *

# ನಿನ್ನ ರೂಪ ಪ್ರತಿರೂಪ

ನಮ್ಮೂರ ದೇಗುಲದಲ್ಲಿ ನಿನ್ನ ಪ್ರತಿರೂಪ ಕಂಡೆ
ಮಹಾಲಕ್ಷ್ಮಿ ಚೆಲುವಿನಲ್ಲೂ ನಿನ್ನನ್ನೇ ನಾನು ಕಂಡೆ
ಹೊಂದಳಿರ ಕೊನರಿನಲ್ಲಿ ನಿನ್ನ ಅಧರ ಕೆಂಪು ಕಂಡೆ
ತಂಬೆಲರ ತಂಪಿನಲ್ಲಿ ನಿನ್ನ ಕೇಶ ಪಲುಕು ಕಂಡೆ

ಕಾಜಾಣ ಕೂಗಿನಲ್ಲಿ ನಿನ್ನ ಮಾತಿನ ಇಂಪು ಕಂಡೆ
ಕೆಂದಾವರೆ ಹೂವಿನಲ್ಲಿ ನಿನ್ನ ಮುಖದ ಹೊಳಪು ಕಂಡೆ
ನೀಲ್ಗಡಲ ತೆರೆಗಳಲ್ಲಿ ನಿನ್ನ ಸೆರಗ ತುಳುಕು ಕಂಡೆ
ಚಂದಿರನ ಕಾಂತಿಯಲ್ಲಿ ನಿನ್ನ ನಗೆಯ ಬೆಳಕ ಕಂಡೆ

ಅರಸಂಜೆ ಚಲನೆಯಲ್ಲಿ ನಿನ್ನ ನಡಿಗೆ ಒನಪು ಕಂಡೆ
ಹೊಂಬಾಳೆ ಪಲುಕಿನಲ್ಲಿ ನಿನ್ನ ಹೆಜ್ಜೆ ಲಾಸ್ಯ ಕಂಡೆ
ಬಾಳಿನಾ ಹೊನಲಿನಲ್ಲೂ ನಿನ್ನ ನಲ್ಮೆ ದೋಣಿ ಕಂಡೆ
ಗೋಳಿನಾ ಇರವಿನಲ್ಲೂ ನಿನ್ನ ಜಾಣ್ಮೆ ಗೆಲುವು ಕಂಡೆ.

* * * *

## ಕರೆದಿದೆ ನಿನ್ನ ದನಿ

ಮಧುಬನದ ಜಾಡಿನಲಿ
ಮಾಮರದ ಬೀಡಿನಲಿ
ಕಂಡೆ ನಾ ನಿನ್ನ ಕೊರಳು;

ಮಾಗಿ ಮುಂಜಾನೆಯಲಿ
ಮೋಹ ತಂಗಾಳಿಯಲಿ
ಹರಡಿದೆ ಪ್ರೀತಿ–ನೆರಳು!

ಹೊಂಗೆಯ ತಂಪಿನಲಿ
ಕೇದಗೆ ಕಂಪಿನಲಿ
ಕರೆದಿದೆ ನಿನ್ನ ದನಿಯು;

ಕೋಗಿಲೆಯ ಕೂಗಿನಲಿ
ಸಂಮ್ಮೋಹ ಗುಂಗಿನಲಿ
ತಿಳಿದಿದೆ ನಲ್ಮೆಸವಿಯು

ಹೂವಿನಾ ದಂಡೆಯಲಿ
ದುಂಬಿಯಾ ಹಿಂಡಿನಲಿ
ಬರೆದಿದೆ ನಿನ್ನ ನೆನಪು

ಹೊಂಬಾಳೆ ತೂಗಿನಲಿ
ಸೂಲಂಗಿ ಬಾಗಿನಲಿ
ಮೆರೆದಿದೆ ನಿನ್ನ ನೆನಪು !

* * * *

## ಸ್ವಪ್ನ ಸುಖ

ಹೊಸ ಹರೆಯ ಮೂಡಿ ದಿನ ಮದನ ಕಾಡಿ
ನಡೆ ನುಡಿಗೆ ಬೆಡಗು ಬಂತು;

ಕಣ್ಣ ನೋಟದಲ್ಲಿ ಬಣ್ಣ ಮಾತಿನಲ್ಲಿ
ಆಸೆ ಮನಸು ಕನಸು ತಂತು!

ಹಾದಿ ಬೀದಿಯಲ್ಲಿ ಶಾಲೆ ಸಭೆಗಳಲ್ಲಿ
ಸಂಗಾತಿಗಳಾಗಿ ಹುಡುಕಿ –
ಸಂತೆ ಪರಿಷೆಯಲ್ಲಿ... ಬಸ್ಸು ರೈಲಿನಲ್ಲಿ
ಸವಿ ಸ್ನೇಹಕಾಗಿ ಮಿಡುಕಿ....

ಮನ ಒಪ್ಪೋ ಹೆಣ್ಣ ಹುಡುಕಾಡಿ ಚೆನ್ನೆ
ದಣಿ ದಣಿದು ನಾನು ಸೋತೆ
ಸ್ನೇಹ ಸಂಗ ಸಿಗದೆ ಸುಖ ಕೂಡಿ ಬರದೆ
ಸಖಿಗಾಗಿ ದಾರಿ ಅಲೆದೆ!

ಅಲೆದಲೆದು ಬೆಂದು ಒಳಗೊಳಗೇ ನೊಂದು
ನೀರಡಿಸಿ ತಿರುಗುತಿರಲು
ಕಾಡು ಮೇಡ ನಡುವೆ ಗುಡಿಸಲನು ಕಂಡು
ಕೇಳಿಸಿತು ಗಾನ ಹೊನಲು –

ರಾಗ ರಸಿಕನಾಗಿ ಹಾಡು ಕೇಳುತಿರಲು
ನುಡಿವಾಕೆ ಕಂಡು ಒಲಿದು –
ಪ್ರೀತಿ ಮೂಡಿ ಮೆರೆದು ನಾ ಚುಂಬಿಸಿರಲು
ಎಚ್ಚರಾಯ್ತು ಕನಸು ಒಡೆದು!

* * * *

## ನಮ್ಮೂರ ಮಂದಾರ ಹೂವೇ

ನಮ್ಮೂರ ಮಂದಾರ ಹೂವೇ
ನನ್ನೊಲುಮೆ ಬಾಂದಳದ ಚೆಲುವೇ
ಬಳಿ ಬಂದು ಬಾಳನ್ನು ಬೆಳಗು–ನನ್ನ
ಬರಿದಾದ ಮನದಲ್ಲಿ ಮಿನುಗು!

ಕಣ್ಣಲ್ಲೇ ಕರೆದು
ಹೊಂಗನಸ ತೆರೆದು
ಸಂಗಾತಿ–ಸಂಪ್ರೀತಿ–ಸೆಳೆದೆ
ಅನುರಾಗ ಹೊಳೆದು
ಅನುಬಂಧ ಬೆಳೆದು
ಸಮ್ಮೋಹ–ಸಂಬಂಧ–ಮಿಡಿದೆ
ಮೂಡಿದಾ–ಪ್ರೇಮದಾ–ಸೊಗಸಾದ ಕಾರಂಜಿ ಬಿರಿದೆ.

ಒಡನಾಟ ಮೆರೆದು
ಒಡಲಾಳ ಮೊರೆದು
ಒಡನಾಡಿ–ಬಾಂಧವ್ಯ–ಕಂಡೆ
ಋತುಮಾನ ಮೀರಿ
ಹೊಸಗಾನ ತೋರಿ
ಹಿತವಾದ ಮಾಧುರ್ಯ ಮಿಂದೆ
ತೀರದಾ–ಮೋಹದಾ–ಇನಿದಾದ ಆನಂದ ತಂದೆ.

* * * *

## ಆಸೆ ಒಸಗೆ

ಹೂ ತೋಟದ ಹಾದಿಯಾಗೆ
ಊರಿನಾಚೆ ತೋಪಿನಾಗೆ
ತಂಗಾಳಿಯು ಬೀಸಿದ್ದಾಂಗೆ
ಹೊಂಬಾಳೆಯು ತೂಗಿದ್ದಾಂಗೆ
ನಿನ್ನ ಪ್ರೀತಿ ನೆನಪು ತಂದಿತೋ
ನಿಂತಲ್ಲೇ ಕನಸು ಕಂಡಿತೋ
ಬಾಳುವಾಸೆ ಮತ್ತೆ ಉಕ್ಕಿ ಬಂದಿತೋ

ಮಾರಿ ಹಬ್ಬ ಮಾಡುವಾಗ ದಾರಿ ತಪ್ಪಿ ನಡೆದೆನೆಂದು
ಕೋಪಗೊಂಡು ಕೊಂಕನಾಡಿ ಸ್ನೇಹ ಕದಡಿತೋ;
ಬೆಂದು ಹೋದ ಗದ್ದೆಯಾಗೆ ಹೊಸ ಪೈರು ಚಿಗುರಿದ್ದಾಂಗೆ
ದಂಡಿ ದಂಡಿ ಆಸೆ ಹುಟ್ಟಿ ಹಸಿರು ಮೂಡಿತೋ

ಘಾಟಿ ಜಾತ್ರೆ ಕೂಡಿದಾಗ ನಿನಗೆ ಎರಡು ಬಗೆದೆನೆಂದು
ಶಾಪ ಹಾಕಿ ದೂರವಾಗಿ ಮನಸು ಒಡೆಯಿತೋ;
ಬತ್ತಿ ಹೋದ ಹಳ್ಳದಾಗೆ ಮತ್ತೆ ನೀರು ಬಂದ ಹಾಗೆ
ಕೊಂಚ ಕೊಂಚ ಮೋಹವುಕ್ಕಿ ಒಸಗೆ ಕರೆಯಿತೋ.

* * * *

## ಪ್ರೀತಿ ರತಿ

ಎನಿತೆನಿತೋ ಚಿಂತಿಸಿದರೂ ಅರಿಯಲಾರೆ ಇನ್ನು ನಾನು
ಮೊದಲ ಬಾರಿ ಒಲುಮೆ ಕುಸುಮ ಅರಳಿ ಬಂದ ಪರಿಯನು

ಯಾವ ಗಾಳಿ ತೀಡಿ ರಾಗ ಮೂಡಿ ಮನಸು ನಾಟಿತೋ
ಎಂದು ನಲ್ಮೆ ಪೂರ ಹರಿದು ರತಿಯ ಸೆಲೆಯ ಮೀಟಿತೋ!

ಸಾವಿರದಾ ಪ್ರೀತಿ ಚಿಗುರು ರೂಪು ರಂಗಿನ ಹಸಿರ ನಗಿಸಿ
ನೋವಿರದಾ ದಾರಿಯಲ್ಲಿ ಕಾಮನೆಯ ಬಳ್ಳಿ ಬೆಳೆಸಿ
ಭಾವದುಸಿರ ಪಾತಿಯಲ್ಲಿ ನಿತ್ಯ ನಿಷ್ಠೆ ಜಲವ ಸುರಿಸಿ
ಕಿಲ ಕಿಲ ಸಿರಿ ಪ್ರೇಮಲತೆಯು ತೂಗಾಡಿತೋ ಹೃದಯ ಬೆರಸಿ

ಮೌನ ಬನದ ತುಂಬ ಮಾತು ಮಿಂಚಾಯಿತೋ ಸಂಚರಿಸಿ
ಲಲ್ಲೆ ಸರಸದ ಇಂದ್ರಚಾಪ ಮೆರೆದಾಯಿತೋ ವಿಸ್ತರಿಸಿ
ತೋಳಕ್ಕೆ ಮಿಲನ ಸುರತ ಮತ್ತೆ ಮತ್ತೆ ಚಿತ್ತ ಸುಖಿಸಿ
ಉಕ್ಕಿ ಬಂತೋ ಮಿಲನ ಸುರತ ಮತ್ತೆ ಮತ್ತೆ ಗತ್ತ ಮೆರೆಸಿ
ಮಿಕ್ಕ ಕಲೆಯಿತೋ ಲೆಕ್ಕವಿರದೆ ಸ್ನೇಹ–ಗಂಗಾಲಹರಿ ಹರಿಸಿ

ಒಳ್ಳೆ ಗಳಿಗೆ ಗಲ್ಲ ಮೀಟಿ ಒಲವಿನೆಲ್ಲ ಬೆಲ್ಲ ಹಣಿಸಿ
ಕಣ್ಣ ಬಿಂಬದಲ್ಲೂ ತುಂಟ ಕೀಟಲೆಯ ಮಧು ಕುಣಿಸಿ
ಹಗಲು ಇರುಳ ಬೇಟದಲ್ಲಿ ಒಡಲ ತಾಪಸುಧೆಯ ಮಣಿಸಿ
ಕರುಳ ಕೊರಳ ಕೂಟದಲ್ಲೂ ಸ್ಥಿರವಾಯಿತೋ ಬಂಧ ಬೆರಸಿ

* * * *

## ವಿರಹ–ಸಹರಾ

ನೀನು ದೂರ ಹೋದಷ್ಟು
ಪ್ರೀತಿ ಆಳ ಕಂಡಿದೆ!
ವಿರಹ–ಸಹರಾ ಬೆಳೆದಷ್ಟೂ
ನೋವು ಬೆಂಕಿಕಾರಿದೆ!

ಎಷ್ಟು ಕಣ್ಣು ಕರೆದರೂ
ನಿನ್ನ ಬೆಳಕು ಕಾಣದೆ,
ಆಸೆ ಹೊತ್ತಿ ಉರಿದರೂ
ನಲ್ಮೆ ನಿನ್ನೇ ನೆನೆದಿದೆ.

ಜೀವಕಿಲ್ಲ ಹೂ–ಹಗುರ
ನಿನ್ನ ಸಂಗವಿಲ್ಲದೆ
ನಡಿಗೆಗಿಲ್ಲ ಲಾಸ್ಯ ಮುಕುರ
ಪ್ರೇಮಿ ತೆಕ್ಕೆ ಬೀಳದೆ

ನಿನ್ನ ಒಲುಮೆ ಅಯಸ್ಕಾಂತ
ನನ್ನ ಹೃದಯ ಸೆಳೆದಿದೆ
ನಿನ್ನ ಮಾತು ಮಂದಹಾಸ
ನನ್ನ ಮನಸ ಕಸಿದಿದೆ!

ನಮ್ಮ ಮಿಲನ ಸೇತುವೆ
ಮತ್ತೆ ಹೊಂದಿ ಕೂಡದೇ?
ಮೈತ್ರಿ ಪಯಣದೋಟವೇ
ನಿನ್ನ ಬರವ ಮೇಲಿದೆ.

ಮುಗಿದ ಇರುಳ ಹೆಗಲಿಗೆ
ನಲ್ಲ ಅಳುವ ಕೂಗಿದೆ;
ಬರುವ ಬೈಗು ಬೆಸಗೆಗೆ
ಕೂರ್ಮ ಅಂಕಿತ ಹಾಕಿದೆ!

* * * *

## ಮಾತಾಡೇ... ನೀರೆ

ಮಾತಾಡೇ... ನೀರೆ.... ಮಾತಾಡೇ
ಮನಸಾರೆ ನಿನ್ನ ನಾನು ಒಲಿದಾಗ
ಪ್ರೀತಿ ತಂದಾಗ
ಬರಬಾರದೇ–ಬಳಿಗೇ–ಬರಬಾರದೇ?

ಸುಮ್ಮನೆ ಇದ್ದರೂ ಕೆಣಕುತ ಬಂದು
ಬಿಮ್ಮನೆ ಕುಳಿತರೂ ಬಳಸುತ ನಿಂದು
ಒಡನಾಡ ಬಂದೋಳು ನೀನಲ್ಲವೇ?

ಹರೆಯದ ಸಿರಿ ಮಿಂಚಿ ಮೆರೆವಾಗ
ಹುರುಪಿನ ಸಿಹಿ ಹಂಚಿ ಹರಿವಾಗ.....

ಹುಣ್ಣಿಮೆ ಮೂಡಲು ಕಣ್ಣೆವೆ ಕರೆದು
ತಣ್ಣನೆ ಹೊತ್ತಲಿ ನಲ್ಮೆಯ ಮಿಡಿದು
ಜೊತೆಯಾಗಿ ಬೆರೆತೋಳು ನೀನಲ್ಲವೇ

ಒಸಗೆಯ ಬಿಸಿ ತಾಕಿ ನಗುವಾಗ
ಬೆಸುಗೆಯ ಸುಖ ಸಾರ ಸಿಗುವಾಗ...
ಮಾತಾಡೇ.. ನೀರೇ... ಮಾತಾಡೆ!

* * * *

## ವಿಶ್ವಾಸ ವರ್ಷ

ನಿನ್ನ ಕಣ್ಣಲಿ ರಾಗ ಕೂಗಿದೆ
ದಿವ್ಯ ಬಾಗಿನ ಕೇಳಿದೆ
ಒಳಗೆ ಭಾವನೆ ಗಂಗೆ ಹರಿದಿದೆ
ಕಾಮನೆಯ ಹೆಡೆ ತೆರೆದಿದೆ!

ಆಸೆ ಹುಚ್ಚಿಗೆ ಅಂಕೆ ತಪ್ಪಿದೆ
ನಲ್ಮೆ–ರಿಂಗಣ ತಿರುಗಿದೆ
ಹುತ್ತ ಕಟ್ಟಿದ ಚಿತ್ತದೊಳಗೆ
ಬಯಕೆ ನಾಗರ ಬೆಚ್ಚಿದೆ!

ಮಿಲನ ಸಾವಿರ ರೀತಿ ನಡೆದು
ಪ್ರೀತಿ ಹಂದರ ಹೆಣೆದಿದೆ
ಮೈತ್ರಿ ಚಪ್ಪರದಾಚೆ ಒಲವು
ನಗ್ನ ಕಳಶವ ಹೊಳೆಸಿದೆ

ದೀಪ್ತವಾಗಿಹ ತವಕದೊಡಲಿಗೆ
ನೀತಿ ಸಿಡಿಲು ಎರಗಿದೆ
ತೃಷೆಯು ತೀರದ ವಾಂಛೆ ಮಡಿಲಿಗೆ
ಅಳಲ ಕಡಲೇ ನುಗ್ಗಿದೆ!

ಎತ್ತ ಹೋದರೂ ಮುತ್ತಿಕೊಳ್ಳುವ
ಭೀತಿ ಮುಗಿಲಿನ ಬಂಡಿಗೆ
ಒಲುಮೆ ಚಿಮ್ಮುವ ಧೈರ್ಯ ಬಿತ್ತುವ
ವಿಸ್ವಾಸ ವರ್ಷವೇ ಸುರಿದಿದೆ!

* * * *

## ಸವಿ ನೆನಪೇ ನನ್ನ ಕಾಡಿದೆ

ಈ ವಿರಹ ಕಡಲಾಗಿದೆ – ನೀನಿರದೆ
ಇನಿದಾದ ಸನಿಹ ಸಿಗದೆ
ಸವಿ ನೆನಪೇ ಸಿಹಿಯಾಗಿದೆ;
ಎಂದೆಂದೂ ಹಸಿರಾದ ಹೊನಲಾಗಿ ಹರಿದಿದೆ!

ಕೂಡಿದ ಹಸಿ ಕನಸು ಬಾಡದ ಸುಮವಾಗಿ
ಬದುಕಲ್ಲಿ ನಗೆ ಅರಳಿ ಆಸೆಯ ಬಗೆ ಕೆರಳಿ
ಈ ನೊಂದ ಜೀವಕ್ಕೆ ಮಳೆಬಿಲ್ಲು ನೀನಾದೆ
ರಂಗಾದ ಸೆಳೆಯಾದೆ; ತಂಪಾದ ನೆಲೆಯಾದೆ
ಸವಿ ನೆನಪೇ ನನ್ನ ಕಾಡಿದೆ
ಎಂದೆಂದೂ–ಹಸಿರಾದ ಹೊನಲಾಗಿ ಹರಿದಿದೆ!

ಪ್ರೀತಿಯ ಸಿರಿ ವೀಣೆ ಮೀಟಿದೆ ಈ ಹೃದಯ
ನಿಂತಲ್ಲಿ ಕುಂತಲ್ಲಿ ನೆನೆದಿದೆ ನಿನ್ನ ದೆಸೆಯ
ಬಯಕೆಯ ಕಾಜಾಣ ನಿನಗಾಗಿ ಕೂಗಿದೆ....
ಮೂಡಿದ ಅನುರಾಗ ಸುಖ ಭೋಗ ಬೇಡಿದೆ
ಸವಿ ನೆನಪೇ ನನ್ನ ಕಾಡಿದೆ
ಎಂದೆಂದೂ ಹಸಿರಾದ ಹೊನಲು ಹರಿದಿದೆ!

* * * *

# ಪ್ರೇಮೋನ್ಮಾದ

ಯಾವತ್ತು ನಿನ್ನ ಕಂಡು ಬೆನ್ನ ಬಿದ್ದೆನೋ
ಆ ಹೊತ್ತೇ ಪ್ರೀತಿ ರಂಗು ಕಂಡೆನು!

ನಿನ್ನಲ್ಲಿ ಹಂಸದ ನಡೆಯ ಕಂಡು
ನಾರಿ ರೂಪದ ಹಂಸ ಹಿಡಿಯಲು ಹೋದೆನು;
ನಿನ್ನಲ್ಲಿ ಚಂದ್ರನ ಸೊಬಗ ಕಂಡು
ಚಂದ್ರಕಾಂತಿಯ ಬೆಡಗ ಹಿಡಿಯಲು ಹೋದೆನು!

ನಿನ್ನಲ್ಲಿ ಕೋಗಿಲೆ ಸ್ವರವ ಕಂಡು
ಭೂಮಿ ಮೇಲಿನ ಕೋಗಿಲೆ ಹಿಡಿಯಲು ಹೋದೆನು,
ನಿನ್ನಲ್ಲಿ ಸಾಗರದೊಲವ ಕಂಡು
ಜೀವ ಭಾವದ ಅಲೆಯ ಹಿಡಿಯಲು ಹೋದೆನು!

ನಿನ್ನಲ್ಲಿ ಅಪರಂಜಿ ಗುಣವ ಕಂಡು
ಹೆಣ್ಣ ಮನಸಿನ ಚಿನ್ನ ಪಡೆಯಲು ಹೋದೆನು;
ನಿನ್ನಲ್ಲಿ ಮೀನಿನ ಕಣ್ಣು ಕಂಡು
ಹೆಣ್ಣೆಂಬ ಮೀನು ಸಿಗದೆ ಹುಚ್ಚಾಗಿ ಹೋದೆನು!

* * * *

## ಮೈತ್ರಿ–ದಿವ್ಯ

ನಿನ್ನ ಹೊರತು ಬದುಕು ಶೂನ್ಯ
ನನ್ನ ನಲ್ಮೆ ನಿನಗೆ ಮಾನ್ಯ ;
ಪ್ರೀತಿ ಪಯಣ ನಮ್ಮ ಭಾಗ್ಯ
ಕಣ್ಣ ಕರೆಯೇ ಪ್ರೇಮ ಕಾವ್ಯ !

ಆಸೆ ಹಾದಿ ಎಂದೂ ರಮ್ಯ
ರಾಗ ರಂಗು ಮಿಂದು ನವ್ಯ
ಹೂವು ಗಂಧ ಸೇರಿ ಭವ್ಯ
ಸ್ನೇಹ ಮೋಹ ಬಾಳ ಸತ್ಯ

ನಾನು ನೀನು ಬೆರೆಯೆ ನಿತ್ಯ
ಬೇರೆ ದಾರಿ ಬರಿಯ ಮಿಥ್ಯ
ಕೂಡಿ ಹಾಡಿ ನಗೆಯ ಮಧ್ಯ
ಮಾತು ತಂದು ಮೈತ್ರಿ–ದಿವ್ಯ

* * * *

## ಪ್ರೇಮ ಸಿಂಧು

ಕುಡಿ ನೋಟದಲ್ಲಿ ಕಡು ಮೋಹ ಚೆಲ್ಲಿ
ನಡು ಹಾದಿ ನಿಂತ ಹುಡುಗೀ

ಒಣಗಿ ಕೊರಡಾದ ಬರಡು ಬದಿಕಿಗೇ
ಜೀವಕೊಟ್ಟೆ ಬೆಡಗಿ–ಹೂವಿನ
ಬಾಣ ಬಿಟ್ಟೆ ತುಡುಗಿ.....

ಗಂಡಾಗಿ ಕೂಡ ಕಂಡಿರಲೇ ಇಲ್ಲ
ಈ ಸೆಲೆವ ರಾಗ ಜಾಲ
ಮಂಡಾಗಿ ಹೋದ ಬಂಡ ಬಾಳಿಗೆಲ್ಲ
ನೀ ರಂಗು ತಂದೆಯೆಲ್ಲಾ – ಪ್ರೀತಿಯ
ಗುಂಗು ಹಿಡಿಯಿತಲ್ಲಾ...

ಹಸಿ ಆಸೆಯಲ್ಲೊ ಬಿಸಿ ಭಾಷೆಯಲ್ಲೊ
ಹೊಸ ಸ್ನೇಹ ಗಂಗೆ ಹರಿದು

ಬಿರು ಬೇಗೆಯಲ್ಲೊ ನಲ್ಮೆ ಸೋಗೆ ನವಿಲು
ಕುಣಿ ಕುಣಿದು ಮೋದ ಬಿಂದು–ಪ್ರೇಮದ
ಸಿಂಧುವಾಯ್ತು ಇಂದು!

* * * *

## ಮಂದಾರದ ಮೊರೆ

ಮನದ ಮಂದಾರದಲಿ
ಪ್ರೀತಿ ಮಧು ತುಂಬಿರಲು
ಮುತ್ತನೀಂಟುವ ದುಂಬಿ ನೀ ಬಾರೋ...

ಹಿಂಜರಿತ ನಿನಗೇಕೆ?
ಆಹ್ವಾನ ನಾ ಕೊಡುವೆ,
ನಿನಗಾಗಿ ಕಾದಿರುವೆ ಪ್ರೇಮ ಭ್ರಮರ ಬಾರೋ....

ಹಗಲಿರುಳು ಜಡತನದಲಿ
ಮಕರಂದ ಕಾಯ್ದಿಟ್ಟಿರುವೆ,
ಸೂರ್ಯನ ಸಂಗಡವೇ–
ನೀ ಹಾರಿ ಬರುವೆ ಎಂದು–
ನಲ್ಮೆ ಜೇನನು ತುಂಬಿ
ಅಧರವನು ಮೀಸಲಿಟ್ಟಿರುವೆ
ಒಲುಮೆ ಹನಿ ಹೀರಲಿಕ್ಕೆ ಪ್ರೇಮ–ತುಂಬಿ ನೀ ಬಾರೋ!

ನೆಲದಾಯಿ ಅಕ್ಕರೆಯುಂಡು
ಪಲ್ಲವಿಸಿ ನಾ ನಗುತಿರುವೆ, ನಿನ್ನ ಸಂಗ ಸಿಗಬಹುದೆಂದು
ನಿರೀಕ್ಷೆಯ ನೋಂಪಿಯಲಿರುವೆ–
ನನ್ನಿರವಿಗೆ ಬೆಲೆ ಬರಲೆಂದೇ
ಸಿಂಗಾರಗೊಂಡು ಕಾಯುತಿರುವೆ;
ಮಧುರ ಮಧು ಸವಿಯಲೆಂದೇ ಮಧುಕರನೇ ನೀ ಬಾರೋ!

* * * *

## ಜನುಮ ಜನುಮದ ಕೆಳೆ

ಋತುರಂಗು ತೂಗಿ ತೂಗಿ
ಬಾನಾಡಿ ಕೂಗಿ ಕೂಗಿ
ಮನದಾಸೆ ಬಾಗಿ ಬೀಗಿ
ಚೆಲುವಾಗಿದೆ–ಗೆಲುವಾಗಿದೆ!

ಚೆಲುವಿನ ಹೂವಾಗಿ ಅರಳುತಲಿ
ರತಿಯ ರೂಪ ಸಿರಿ ನೀನು
ಸೊಗಸಿನ ಕಣ್ಣಾಗಿ ಹೊಳೆಯುತಲಿ
ಮಿನುಗು ಮಿಂಚಿನಲಿ ನೀನು;
ಹೊಸ ಉಡುಗೆಯಲಿ ಹಸಿರಾದೆ ನೀ–
ನನ್ನ ಕನಸಿನಲಿ ಉಸಿರಾದೆ ನೀ–
ನನ್ನ ಸೆಳೆದು ನಿಂತ ಬೆಡಗೀ...
ಚೆಲುವಾಗಿದೆ–ಗೆಲುವಾಗಿದೆ!

* * * *

## ಅರ್ತಿಗೀತ

ನನ್ನ ನಿನ್ನ ಮಿಲನದಲಿ
ಜೀವ ರಾಗ ಮಿಡಿದಿದೆ,
ನಿತ್ಯ ನಿತ್ಯ ಅರಿವಿನಲಿ
ಒಲುಮೆ ಹೊನಲೇ ಹರಿದಿದೆ!

ಹೆಜ್ಜೆ ಹೆಜ್ಜೆಗೆ ಹೂವು ಚೆಲ್ಲಿ–
ಹೃದಯವೆಲ್ಲ ಅರಳಿದೆ,
ಘಳಿಗೆ ಘಳಿಗೆ ಪ್ರೀತಿ ಉಕ್ಕಿ
ಸಂತೋಷವೇ ತುಳುಕಿದೆ!

ಪಕ್ಷಿಗಾನ ಕೇಳಿ ಕೇಳಿ
ನಲ್ಮೆ ಮಾತು ಉಳಿದಿದೆ,
ಹಳ್ಳ ಕೊಳ್ಳ ತುಂಬಿ ತುಳುಕಿ
ಭಾವ ಕಡಲು ಮೊರೆದಿದೆ!

ಯಕ್ಷಿ ಯಕ್ಷಿ ಕಥೆಯ ಓದಿ
ಪ್ರೇಮ ಸ್ಪಂದನ ಹೆಚ್ಚಿದೆ
ಮುಕ್ತ ಪ್ರಕೃತಿ ಕಂಡು ಕಂಡು
ಅರ್ತಿಗೀತ ಹುಟ್ಟಿದೆ !

* * * *

# ಪ್ರೇಮವೇ ಸಿರಿ ದೀವಿಗೆ

ಕೂಡಿ ಆಡಿ ಕೂಡಿ ಬೆಳೆದು ಸ್ನೇಹವಾಯಿತು
ಸ್ನೇಹ ಮಾಗಿ ಮನಸು ಕಲೆತು ಪ್ರೀತಿಯಾಯಿತು;
ಹೃದಯದ ಬಂಧ ಬೆಸೆಯುತ
ದಿನ ದಿನ ನಾವು ಬೆರೆಯುತ
ನಲ್ಮೆ.. ಕಂಡು... ಉಂಡು.... ಇಂದು... ಏನೋ
ಜೀವನ ಹೂವಿನ ಹಾಸಿಗೆ
ಪ್ರೇಮವೇ ಸಿರಿ ದೀವಿಗೆ

ಆಟಪಾಠದಲ್ಲಿ ನೀ ಜೊತೆಗೆ ಸೇರಲು
ಮಾತು ಮೌನದಲ್ಲಿ ಹೊಸ ರಂಗು ತೋರಲು–
ಏಳು–ಬೀಳಿನಲ್ಲಿ ನೀ ನನ್ನ ಅರಿಯಲು
ನೋವು ನಲಿವಿನಲ್ಲೂ ಸಮಪಾಲುಗೊಳ್ಳಲು–
ಕಣ್ಣು ಕಣ್ಣು ಮೀಟಿ ಅನುರಾಗ ಕಂಡಿದೆ
ಪ್ರೇಮ ಜೇನು ಈಂಟಿ ಮಾಧುರ್ಯ ತುಂಬಿದೆ,
ಸ್ವಪ್ನಲೋಕದಲ್ಲಿ ನವ ನೌಕೆ ತೇಲಿದೆ!

ಹಕ್ಕಿಯಂತೆ ನಾವು ಎಲ್ಲೆಲ್ಲೋ ಹಾರುತ
ಆಸೆ ಬಾನ ತುಂಬ ಮೈಮರೆತು ಹಾಡುತ–
ತೋಳ ತೆಕ್ಕೆಯಲ್ಲಿ ರೋಮಾಂಚ ಕಾಣುತ
ನಿತ್ಯ ನಿತ್ಯ ಅರಿತು ಸಂಬಂಧ ಸೆಳೆಯುತ
ಹೆಜ್ಜೆ ಹೆಜ್ಜೆ ಸೇರಿ ಶೃಂಗಾರ ಮಿಂಚಿದೆ
ನನ್ನ ನಿನ್ನ ಬದುಕೇ ಬಂಗಾರವಾಗಿದೆ
ರಮ್ಯಗಾನ ಮೂಡಿ ಸಂತೋಷ ಕಂಡಿದೆ!

* * * *

## ಚುಕ್ಕಾಣಿಯಿರದ ಹಡಗು

ತಲೆ ತಿರುಕ ನಾನಾಗಿ ವಿರಾಮವಿರದ ನಿಟ್ಟುಸಿರು
ಕನಸುಣಿಯು ನೀನಾಗಿ ಹಂಬಲಿಕೆಯ ಸ್ವಪ್ನ ತೇರು
ರೀತಿ ರಿವಾಜಿರದ ಅಲೆಮಾರಿಗೆಲ್ಲಿ ಶಿಸ್ತಿನ ಬದುಕು?
ಪ್ರೀತಿ ಪ್ರೇಮದ ಅಮಲಿನಲ್ಲಿ ಅಭಿಲಾಷೆ ನಿನ್ನ ಪಲುಕು

ವ್ಯವಸ್ಥೆಯಿರದ ನನ್ನ ಬಾಳಿಗೆ ನಿನ್ನ ಪ್ರೇಮ ಗಾರುಡಿ ಹೊಕ್ಕು
ತಲ್ಲಣಗೊಂಡಿದೆ ಹೃದಯ ಮತ್ತಷ್ಟು... ಕನಸಲ್ಲೂ ಸಿಕ್ಕು!
ದಂಗೆಯೇಳದ ನೀನು ಮರೆಯಲಾರೆ ನಿನ್ನ ತಂದೆ ತಾಯನ್ನು
ಉನ್ಮಾದಗೊಂಡ ನಿನ್ನ ಹೃದಯ ಚಿಮ್ಮಿದೆ ನಲ್ಮೆ ಕಾರಂಜಿಯನ್ನು

ವಾಗ್ದಾನಗಳಲ್ಲಿ ನಂಬಿಕೆಯಿರದ ನಾನು ಕೊಡಲಾರೆ ಹುಸಿಭರವಸೆ
ನಿನ್ನ ಪ್ರೇಮೋತ್ಸಾಹ ಸ್ವರ್ಣಮಹಲಿನಲಿ ನಲಿದು ಕೊನರಿದೆ ನಿನ್ನಾಸೆ
ಎಂದೆಂದೂ ಚುಕ್ಕಾಣಿಯಿರದ ಹಡಗು ನಾನೆಂದು ನೀನೇಕೆ ಅರಿಯೇ
ಚುಕ್ಕಾಣಿ ನೀನಾದರೆ ಮಾತ್ರ ನಮ್ಮೊಲುಮೆ ಊರ್ಜಿತ ಪ್ರಿಯೆ.

* * * *

# ಅಮೃತ ಬಳ್ಳಿ

ಪ್ರೀತಿಯ ಬೇರನು ಚಿವುಟಲಾಗದು
ಆಗದು ಆಗದು ದೂರಾಗಲಾಗದು,
ಒಲಿದಿಹ ಹೃದಯವ ಕಡಿಯುವುದಾಗದು
ಬೆರೆತಂಥ ಜೀವ ಬೇರಾಗದು!

ಕೀಳಲು ಬಹುದೇನೋ, ಮನಸು ಮಾಡಿದರೆ–
ಕಡಲಾಳದೊಳಗಿನ ಮೂಲವನ್ನೇ!
ಕಿತ್ತು ಹಾಕಲಾಗದು ಏನೆಲ್ಲ ಮಾಡಿದರೂ...
ಅಂತರಂಗದಲ್ಲಿ ಹಬ್ಬಿದ ಅಮೃತ ಬಳ್ಳಿಯನ್ನೇ!

ಬಗೆಯಲು ಬಹುದೇನೋ, ಶೋಧನೆಗೆ ಇಳಿದರೆ
ಬಾಂದಳದೊಳಗಿಹ ಗ್ರಹತಾರೆ ಬಳಗವನ್ನೇ–
ಬಗೆದು ಸಿಗಿಯಲಾಗದು, ಎಷ್ಟೆಲ್ಲಾ ಶ್ರಮಿಸಿದರೂ
ಹೃದಯದಲಿ ಮೊಳೆತ ಪ್ರೇಮಾಂಕುರವನ್ನೇ!

ಜಟಿಲದಲೂ ಜಟಿಲ ನಲ್ಮೆಯ ಮರೆಯುವುದು
ಮರೆಯ ಹೋದಷ್ಟೂ ನೆನಪೇ ಹೆಚ್ಚಾಗುವುದು ;
ಗಂಡು ಹೆಣ್ಣಿನಲಿ ಜಿಗಿತ ಪ್ರೀತಿಯ ಹಿರಿಮೆ–
ಕವಿ ಎಷ್ಟೇ ಹಾಡಿದರೂ, ಅದು ಕೂಡ ಕಡಿಮೆ!

* * * *

## ಪ್ರೇಮದ ತೇರು

ಪ್ರೀತಿ ಭಾವನೆ ಕಣ್ಣಲ್ಲಿ ಕಾಣುತಿದೆ
ಆಸೆ ಕಾಮನೆ ನನ್ನಲ್ಲಿ ಮೂಡುತಿದೆ
ಹೃದಯ ಹೂವು ಅರಳಿ
ಪ್ರಣಯ ದುಂಬಿ ಕೆರಳಿ
ಜೀವ ಹಿಗ್ಗಿ ನಲಿಯುತಿದೆ!

ರಾಗ ರತಿಯಾಗಿ ರಂಗು ರಂಜಿಸಿದೆ
ಸ್ನೇಹ ಅತಿಯಾಗಿ ಸನಿಹ ಸೆಳೆಯುತಿದೆ;
ಮಾತು ಮಿಂಚಾಗಿ ಮಿನುಗಿ ಹೊಳೆಯುತಿದೆ
ಸರಸ ಶೃಂಗಾರ ಬಯಕೆ ಕರೆಯಿತಿದೆ.

ಮನದ ಮಂದಾರ ಹೂವು ತೂಗುತಿದೆ
ಒಲವಲಿ ಕೂಡಿ ಬಯಕೆಯೂ ಮೂಡಿ
ಹರುಷವ ನೀಡಿ ಕನಸಲೂ ಹಾಡಿ
ಪ್ರೇಮದ ತೇರು ಹರಿದಿದೆ ಇಂದೇ!

* * * *

## ಅರುಣರಾಗ

ನಡೆದಾಡೋ ಕಾಮನ ಬಿಲ್ಲೆ
ಹರಿದಾಡೋ ಮುಗಿಲಿನ ಮಿಂಚೇ
ತುಳುಕಾಡೋ ಬಾನಿನ ಚೆಲುವೇ
ಬುವಿಗಿಳಿದಾ ಹುಣ್ಣಿಮೆ ಹೊನಲೇ
ನೀನೆಂದಿಗೂ ನನ್ನ ಬಾಳಿಗೆ ಆನಂದದಾ
ಅರುಣರಾಗ,, ಅರುಣರಾಗ... ಅರುಣರಾಗ

ಮೀನಿನಾ ನಯನ
ಹವಳದಾ ತುಟಿಯ
ಪಡೆದಿಹಾ ರೂಪಸೀ...
ಸಂಪಿಗೆ ಮೂಗು
ಕಬ್ಬಿನ ಹುಬ್ಬು
ಹೊಂದಿದಾ ಷೋಡಶಿ
ನಿನ್ನ ನೋಡಿ–ಪ್ರೀತಿ ಮೂಡಿ ಆಸೆ ಚಿಮ್ಮಿ ಹೊಮ್ಮಿದೆ
ನೀನೆಂದಿಗೂ... ನನ್ನ ಬಾಳಿಗೆ ಆನಂದದಾ ಅರುಣರಾಗ

ದಂತದಾ ಮೈಯ
ಮಲ್ಲಿಗೆ ನಗೆಯ
ಅಂದದಾ ಊರ್ವಶಿ...
ಮೇಘದಾ ಕುರುಳ
ಕೋಗಿಲೆ ಕಂಠ
ಗಳಿಸಿದಾ ಪ್ರೇಯಸಿ
ನಿನ್ನ ರೂಪು ಕಣ್ಣ ತುಂಬಿ ಸ್ನೇಹ ಸಂಗ ಬೇಡಿದೆ
ನೀನೆಂದಿಗೂ ನನ್ನ ಬಾಳಿಗೆ ಆನಂದದಾ–ಅರುಣರಾಗ

* * * *

## ಚಿತ್ತ – ಚೋರಿ

ಏ ! ಚಿತ್ತ – ಚೋರಿ
ನೀ ನನ್ನ ಪ್ರೀತಿ ಪೋರಿ,
ನಿನ್ನಿಂದ ನಾ ಕಂಡೆ–
ಸಂತೋಷ ಲಹರಿ!

ನೀ ನಡೆದಾಡಲು ಹರಿದಂತೆ ಹೊನಲು
ನೀ ಮಾತಾಡಲು ಉಲಿದಂತೆ ಕೊಳಲು;

ನೀ ನಗೆ ಬೀರಲು ಉಕ್ಕಿತು ಶೃಂಗಾರ ಕಡಲು
ನೀ ಬಳಿ ಸುಳಿಯಲು ದಕ್ಕಿತು ಸ್ವರ್ಗದ ಮಡಿಲು!

ನೀ ಹೆಜ್ಜೆ ಇಡಲು ಕುಣಿದಂತೆ ನವಿಲು
ನೀ ಮುತ್ತ ಕೊಡಲು ಸುರಿದಂತೆ ಮುಗಿಲು;

ನೀ ಕೊಟ್ಟ ಬದುಕು ಅಪ್ಪಟ ಬಂಗಾರವಾಗಲು
ನೀನಿತ್ತ ಸಿರಿಯು ನಲ್ಮೆಯ ಸಖ್ಯದ ಗೊಂಚಲು!

ನನ್ನ ನಿನ್ನ ನಡುವೆ ಒಲುಮೆ ಹೂ ಅರಳಲು
ಬಾಳಲ್ಲಿ ತೆರೆದಿದೆ ಭಾಗ್ಯದ ಹೊಸ ಬಾಗಿಲು;

ಕಣ್ಣ ಕಣ್ಣ ನಡುವೆ ಹರಿದಿದೆ ಪ್ರೀತಿ ತಡಸಲು
ಮೀಯಿಸಲೆಂದೆಂದೂ ಹೀಗೆಯೇ ರಾಗಧಾರೆ ತಂಪೊಳು!

* * * *

# ಪ್ರತೀಕ್ಷೆ

ಜಾತಕದಂತೆ ಕಾದಿದೆ ನಾನು
ನೀ ಮಳೆಯಾಗಿ ಬಾರದೇನು?

ಮರುಭೂಮಿಯಲ್ಲಿ ಕಾರಂಜಿಯಂತೆ
ಬರಿದಾದ ಮನಕೆ ನೀ ತಂಪು ತರುವೆ!
ಸ್ನೇಹವ ತೋರುವೆ
ಸಲುಗೆಯ ನೀಡುವೆ
ನಿನ್ನ ಮಿಲನಕೆಂದೇ ನಾ ದಾರಿ ಕಾದಿಹೆ–
ಅರಳುವ ಹೂವಂತೆ ನೀ ಮೂಡಿ ಬರಬಾರದೇ?

ಬರಡಾದ ವನಕೆ ಚೈತ್ರ ಬಂದಂತೆ
ಕಣ್ಮುಂದೆ ಬಂದು ಚೆಲುವಾಗಿ ನಿಲ್ಲುವೆ!
ಮನಸೂ ಕೂಗಿದೆ
ಹೃದಯವೂ ತುಡಿದಿದೆ
ನಿನ್ನ ಸನಿಹಕೆಂದೇ ಹಂಬಲಿಸಿ ಕಾದಿಹೆ–
ಮೂಡುವ ನೇಸರದಂತೆ ನೀ ಬೆಳಕ ತರಬಾರದೇ?

* * * *

## ವಿರಹ ಗೀತ

ಈ ಜೀವನ ಏಕೋ ಬೇಸರ
ಏಕಾಂಗಿ ನಾನಾದೆನೋ!
ಕನಸು ಒಡೆದು – ನಾ ನೊಂದೆನೋ!

ಬಾನಿರದೆ ಬುವಿಯೆಲ್ಲಿದೆ?
ನೀನಿರದೆ ನಗೆಯೆಲ್ಲಿದೆ?
ಶೃತಿಯಿರದೆ ಹಾಡೆಲ್ಲಿದೆ?
ನೀ ಬರದೆ ಬದುಕೆಲ್ಲಿದೆ?

ದುಂಬಿ ಹೂವ ಬಿಡದು
ವಿರಹ ಸಂಗ ಕೊಡದು,
ನಾನು–ನೀನು–ದೂರ ಇರಲಾಗದು!

ರವಿಯಿರದೆ ಬೆಳಕೆಲ್ಲಿದೆ?
ನೀ ಸಿಗದೆ ಸುಖವೆಲ್ಲಿದೆ?
ನದಿಯಿರದೆ ಕಡಲೆಲ್ಲಿದೆ?
ನೀ ನರದೆ ನಲಿವೆಲ್ಲಿದೆ?

ಬಳ್ಳಿ ಮರವ ಬಿಡದು
ಪ್ರೀತಿ ಅಗಲಿ ನಗದು
ನೀನು–ನಾನು–ದೂರ ಇರಲಾಗದು!

* * * *

## ಪ್ರೀತಿ ಬದುಕೇ ಸಲಿಲ!

ಯಕ್ಷನು ನಾನಲ್ಲ
ಯಕ್ಷಿಯು ನೀನಲ್ಲ
ಆದರೂ ಒಲಿದೆವೆಲ್ಲಾ

ದಿವಿಜೆಯು ನೀನಲ್ಲ
ದಿವಿಜನೂ ನಾನಲ್ಲ
ನಮ್ಮ ಪ್ರೇಮ ಕಡಿಮೆಯಿಲ್ಲಾ!

ಯಕ್ಷಲೋಕ ದಿವಿಜ ನಾಕ
ನಮಗೆ ಗೊತ್ತೇ ಇಲ್ಲಾ!
ಭೂಮಿಯಂತೆ ಬಾನಿನಂತೆ
ಯಾರೂ ಶಾಶ್ವತರಲ್ಲಾ!

ನಮ್ಮ ನಾಕ ಪ್ರೇಮ ಲೋಕ
ಅದಕೇ ಅಳಿವೇ ಇಲ್ಲಾ!
ಪ್ರೀತಿ ಉದಕ ಕೊನೆಯ ತನಕ
ಹರಿವ ಬದುಕೇ ಸಲಿಲ!

* * * *

## ಪ್ರೇಮಾಗ್ನಿಯ ಸ್ವರ್ಗ

ಯಾರು ಎಷ್ಟೇ ಹೇಳಿದರು
ಕವಿಯು ಎಷ್ಟೇ ಹಾಡಿದರೂ
ಪ್ರೇಮ ಎಂಬುದೇ ನಿಗೂಢ
ಪ್ರೇಮಿ ಹೃದಯ ಅಗ್ನಿಕುಂಡ!

ಕಣ್ಣಿನೊಳಗೆ ಹುಟ್ಟಿದ ಕಿಚ್ಚು
ಅಚ್ಚು ಮೆಚ್ಚು ಹೆಚ್ಚುತಾ ಹುಚ್ಚು
ನೆಚ್ಚು ಕಚ್ಚಿ ಬೇರಿಳಿಯುತ್ತಾ
ಬಯಕೆ ಬಿಚ್ಚಿ ಒಲುಮೆಯ ಹುತ್ತ!

ನೋಟ ಮಾತು ಸ್ನೇಹದ ಸುತ್ತಾ
ಮತ್ತೆ ಮತ್ತೆ ಬೆಸೆ ಬೆಸೆಯುತ್ತಾ
ಇರುವ ಜಗವ ಮರೆವ ಮೊರೆತ
ಸ್ವಪ್ನ ಲೋಕ ಹತ್ತಿರಾಗುತ್ತಾ!

ಒಂದು ಜೀವ ಇನ್ನೊಂದನರಸಿ
ಪ್ರೀತಿ ಪ್ರಾಣ ಬದುಕ ಮೇಳೈಸಿ
ಪ್ರೇಮಿಗಳು ಐಕ್ಯವಾಗಿ
ನಲ್ಮೆ ನೆಲೆಗೆ ಸಗ್ಗದ ಸುಗ್ಗಿ!

* * * *

## ತುಂಬು ಜವ್ವನದ ತರುಣಿ

ಎಲೆ, ತುಂಬು ಜವ್ವನದ ನವ ತರುಣಿ
ನೀನೇ ಸೌಂದರ್ಯದ ಗಣಿ
ನಿನ್ನ ಮೈಯಲ್ಲಿ ಹರಿದಿದೆಯೇನೆ?
ಮುತ್ತು ರತ್ನದ ನೀರ ಹನಿ?

ರಂಭೆ ಮೇನಕೆಯರೆಲ್ಲ ಇದ್ದುದಾದರೆ
ಈ ಧರೆಗೆ ನೀನೆ ಮುಗಿಲಿನಪ್ಸರೆ!
ನಿನ್ನ ಕಣ್ಣಲ್ಲಿ ಉಂಟೇನೆ?
ಮಿಂಚಿನ ಗೊಂಚಲಾ ತೆನೆ?

ಚಂದ್ರತಾರೆ ನಿರಂತರ ಹೊಳೆವುದಾದರೆ
ನನ್ನ ಪಾಲಿಗೆ ನೀನೇ ಜೊನ್ನಿನಾ ಪೆರೆ;
ನಿನ್ನ ಮುಖದಲ್ಲೇ ಉಂಟೇನೆ?
ಮಿರಿಮಿರಿ ಕೆಂದಾವರೆ ಮನೆ?

ಕಾವ್ಯಶಿಲ್ಪ ಚಿತ್ರವೆಲ್ಲ ಉಳಿವುದಾದರೆ
ಹೆಣ್ಣ ಬೆಡಗು ರಸಿಕನಿಗೆ ಸ್ಫೂರ್ತಿಯ ಧಾರೆ
ನಿನ್ನ ಇರುವೆಲ್ಲೇ ಕಂಡೆನೇ
ಪ್ರಕೃತಿ ರತಿಯನ್ನೇ!

* * * *

## ಕಾವ್ಯಕನ್ಯೆ

ತಾವರೆ ಮುಖದ ಮಲ್ಲಿಗೆ ನಗೆಯ
ಮೀನಿನ ಕಣ್ಣವಳೇ

ಹಾವಿನ ಜಡೆಯ ತೊಂಡೆ ತುಟಿಯ
ಸಂಪಿಗೆ ಮೂಗವಳೇ

ಕಿತ್ತಾಳೆ ಕೆನ್ನೆಯ ದಾಳಿಂಬೆ ದಂತದ
ಬಾದಾಮಿ ಗಲ್ಲದವಳೇ

ನಿನ್ನಯ ರೂಪಕೆ ನಾ ಬೆರಗಾದೆ
ಎಲ್ಲಿಂದ ನೀ ಬಂದೆ?

ಬಳ್ಳಿಯ ನಡುವಿನ ಚಕೋತ ಸ್ತನಗಳು–
ಮಾಟದಿ ರತಿಯಾದೆ

ಹೂವಿನ ಉಡುಗೆ ಹಂಸದ ನಡೆಗೆ
ನಾನೂ ಮರುಳಾದೆ!

ನಿನ್ನಯ ಚೆಲುವನು ಬಣ್ಣಿಸ ಹೊರಟು
ಅರಿಯದೆ ಕವಿಯಾದೆ!

* * * *

## ಅನುರಾಗ ಕೋಗಿಲೆ

ಗಂಡು : ಅನುರಾಗ ಕೋಗೀಲೆಯಾಗಿ ಬಾರೆ ನನ್ನ ಬಾಳಿಗೆ
ನೀ... ಬಾರೆ ನನ್ನ ಬಾಳಿಗೆ
ಅನುಪಮ ಹರೆಯವೇ ಆಸೆ ಹೊತ್ತು ಬಂದಿದೆ
–ರಮ್ಯ ರಂಗು ತಂದಿದೆ!

ಹೆಣ್ಣು : ಚೆಲುವಾದ ಚೈತ್ರವಾಗಿ ಬಾರೋ ನನ್ನ ಬಾಳಿಗೆ
ನೀ .. ಬಾರೆ ನನ್ನ ಬಾಳಿಗೆ
ಅನುಪಮ ಹರೆಯವೇ ಆಸೆ ಹೊತ್ತು ಬಂದಿದೆ
–ರಮ್ಯ ರಂಗು ತಂದಿದೆ!

ಗಂಡು : ಮನಸಿನ ಮನದಲಿ ಭಾವನೆ ಹೂಗಳರಳೀ
ಕಾಮನೆ ಕಂಪನೇ ಹರಡುತಿದೆ;
ಕನಸಿನ ಸುಮ ಕಂಡು ಸ್ನೇಹದ ದುಂಬಿ ಬಂದು
ಮೋಹದಾ ಮಿಲನವಾ ಬೇಡುತಿದೆ;
ಪ್ರೇಮಿಸಲು ಕೂಡಿದೆ ಕಾಲ ....
ಸಾಕ್ಷಿ ಹೇಳಿದೆ ಬಾಂದಳ!

ಹೆಣ್ಣು : ಬಯಕೆಯ ಮಾಮರ ಸುಂದರ ಚಿಗುರಿನಿಂದಾ
ಕಣ್ಮನ ಸೆಳೆಯತಾ ಮೆರಯುತಿದೆ ;
ಬದುಕಿನ ಮಡಿಲಿನ ತಂಪಿನ ಗಾಳಿಯ ಬೀಸಿ
ಒಲುಮೆಯ ಹರಸುತಾ ಮೊರೆಯುತಿದೆ;
ಪ್ರೇಮಿಸಲು ಕೂಡಿದೆ ಕಾಲ....
ಸಾಕ್ಷಿ ಹೇಳಿದೆ ಬಾಂದಳ !

* * * *

# ಒಂದು ಯುಗಳ ಗೀತೆ

ಹೆಣ್ಣು : ಹೂವು ಗಂಧ ಬೆರೆತಂತೆ ನಾವೆಂದೂ ಬೆರೆತು
ಹಾಲು ಜೇನು ಕಲೆತಂತೆ ಒಂದಾಗಿ ಕಲೆತು

ಗಂಡು : ತಾಳ ಮೇಳ ನುಡಿದಂತೆ ಜೊತೆಯಾಗಿ ನುಡಿದು
ಸೂರ್ಯ ಚಂದ್ರ ಹೊಳೆವಂತೆ ಬಾಳಲ್ಲಿ ಹೊಳೆದು

ಹೆಣ್ಣು : ಹಾರಾಡೋ ಹಕ್ಕಿಯಾಗಿ
ತೇಲಾಡೋ ಚುಕ್ಕಿಯಾಗಿ

ಗಂಡು : ಪ್ರೀತಿ ಲೋಕಕ್ಕೆ ಹೋಗೋಣ
ನಾವು ಬಾನ ಬೆಳ್ಳಕ್ಕಿ ಆಗೋಣ!

ಹೆಣ್ಣು : ಮನದಾಗೆ ಆಸೆ ಉಕ್ಕಿ ಮೈಪುಳಕ ಕಂಡಾಗ
ಬಗಲಾಗೆ ಸಂಗ ಸಿಕ್ಕಿ ಕಣ್ತುಂಬಿ ಬಂದಾಗ
ನೋವೆಲ್ಲಾ ಮರೆತು
ನಲಿವಿಂದ ಅರಿತು
ಮೂರ್ಹೊತ್ತೂ ಚೆಂದಾಗಿ ಸಂತೋಷ ಕಂಡುಕೊಂಡು
ಪ್ರೀತಿ ಲೋಕಕ್ಕೆ ಹೋಗೋಣ
ನಾವು ಬಾನ ಬೆಳ್ಳಕ್ಕಿ ಆಗೋಣ!

ಗಂಡು : ಬದುಕ್ನಾಗೆ ನಾನು ನಿನ್ನ ನಂಬ್ಕೊಂಡೇ ಬರುವಾಗ
ಕನಸ್ನಾಗೂ ನೀನು ನನ್ನ ಹಚ್ಕೊಂಡೇ ಇರುವಾಗ
ಕೈಗೆ ಕೈ ಹಿಡಿದು
ಬಿಡದ್ಹಂಗೆ ನಡೆದು
ಈ ಜೀವ ಈ ಭಾವ ಎಂದೆಂದೂ ಹೊಂದಿಕೊಂಡು
ಪ್ರೀತಿ ಲೋಕಕ್ಕೆ ಹೋಗೋಣ
ನಾವು .. ಬಾನ ಬೆಳ್ಳಕ್ಕಿ ಆಗೋಣ!

* * * *

## ಒಲವೆಂಬುದೇ ಚೆಲುವು

ಹೂವು ಗಂಧ ಸೇರಿದಂತೆ ನನ್ನ ನಿನ್ನ ಒಲವು
ನೋವು ನಲಿವು ಹಾದಿ ತುಂಬ ಒಲವೆಂಬುದೇ ಚೆಲುವು!

ಬೇವು ಬೆಳೆದ ಬಾಳಿನಲ್ಲಿ ಮಾವು ಮಲ್ಲಿಗೆ ಚೆಲ್ಲಿತು ಒಲವು
ಬೇಗೆ ಬಿಸಿಲ ಬಾನಿನಲ್ಲಿ ಚಂದ್ರತಾರೆ ಹೊಳೆಸಿತು ಒಲವು;
ಕುದಿವ ಕಡಲ ಈಜುವಲ್ಲಿ ಸ್ನೇಹ ನೌಕೆ ನಡೆಸಿತು ಒಲವು
ಒಂಟಿಯಾಗಿ ನಡೆಯುವ ನನಗೆ ನಲ್ಮೆ ನಂಟಾಯಿತು ಒಲವು

ಹಸಿವ ಮೊರೆವ ಒಡಲಿಗೆ ಎಂದೂ ಹಾಲು ಸಕ್ಕರೆ ನೀಡಿತು ಒಲವು
ಕನಸೇ ಇರದ ಮನಸಿನ ಮನೆಗೆ ಇಂದ್ರಚಾಪ ತೋರಿತು ಒಲವು
ಬಂಧುವಿರದ ಬಾಹುವಿಗೆಂದೂ ನಾಗಬಂಧವಾಯಿತು ಒಲವು
ಏಕಾಂತ ಬೇಸರ ನೀಗಿ ಮಧುರ ನಾದ ಮೀಟಿತು ಒಲವು

ಒಣಗಿ ನಿಂತ ದೇಹ ವೃಕ್ಷಕೆ ಪತ್ರ ಪುಷ್ಪವಾಯಿತು ಒಲವು
ಬತ್ತಿ ಹೋದ ಭಾವ ಚಿಲುಮೆಗೆ ರಾಗ ಜಲಧಿ ತುಂಬಿತು ಒಲವು
ಬೆಂದ ಬಿರಿದ ಹೃದಯ ಬುವಿಗೆ ಪ್ರೀತಿ ಗಂಗೆ ಹರಿಸಿತು ಒಲವು
ಮರುಭೂಮಿಯಾದ ಬದುಕನು ನಂದನ ಮಾಡಿತು ಒಲವು.

* * * *

# ನಿನ್ನ ನಗೆ ಮಲ್ಲಿಗೆ ಅರಳಿ

ನಿನ್ನ ನಗೆ ಮಲ್ಲಿಗೆ ಅರಳಿ ಮಾಲೆಯಾಯ್ತು ಪ್ರೀತಿ
ನಿನಗೆಂದೇ ಬದಲಾಯ್ತು ನನ್ನ ಬಾಳ ರೀತಿ !

ನನ್ನೆದೆಯ ಗುಹೆಯಲ್ಲಿ ದೀಪ ಹಚ್ಚಿದ ಹುಡಗಿ
ನಿನ್ನಿಂದ ಬೆಳಕಾಯ್ತು ನಲ್ಮೆ ಜ್ಯೋತಿ ಬೆಳಗಿ–
ನೀ ಬರೆದ ಪತ್ರದಲಿ ಕಂಡೆ ಪ್ರೀತಿ ಹೃದಯ
ಒಂದೊಂದೂ ಮಾತಿನಲೂ ಸವಿದೆ ಪ್ರೇಮ ಪರಿಯ!

ಬರೆದು ಹುಚ್ಚು ಭಾಷೆಯಲ್ಲಿ ಒಲವೇ ತುಂಬಿದೆ
ನಿನ್ನ ನೆಚ್ಚು ಹೇಳುವಲ್ಲಿ ಗುಣವೇ ಕಂಡಿದೆ...
ಮೊದಲಿನಿಂದ ಕೊನೆಯ ತನಕ ಪ್ರೀತಿ ಬಂದಿದೆ
ಪ್ರೀತಿಯೆಂದೂ ಪ್ರೀತಿಯನ್ನೇ ಬಿತ್ತಿ ಬೆಳೆದಿದೆ!

* * * *

# ಹೆಜ್ಜೆ ಗುರುತು

ಗೊಬ್ಬರ ತುಂಬಿದ ಕೈ ಬರೆದ
ಮಣ್ಣಿನ ಹಾಡು ನನ್ನದು,
ಸಗಣಿ ಮೆತ್ತಿದ ಬೆರಳು ಹಿಡಿದ
ಗ್ರಾಮೀಣ ಲೇಖನಿ ನನ್ನದು !

ಬೆವರು ಸುರಿಸಿ ಕಷ್ಟದಿ ದುಡಿದ
ನೆಲದ ಪದ ನನ್ನದು–
ಮುದ್ದೆ ಸೊಪ್ಪಿನ ಸಾರು ಕಂಡ
ರೈತರ ಮುದ ನನ್ನದು!

ಕೋರಿ ಬಟ್ಟೆ ತುಂಡು ತೊಟ್ಟ
ಒರಟು ದೇಹ ನನ್ನದು
ಒಡೆದ ಕಾಲು ನೆತ್ತರ ಸುರಿಸೋ
ಹೆಜ್ಜೆ ಗುರುತು ನನ್ನದು!

ಬಿಸಿಲೇ ಇರಲಿ ಮಳೆಯೇ ಬರಲಿ
ದುಡಿಯೋ ಕಾಯಕ ನನ್ನದು,
ಅವರ ಇವರ ಕೈಯೊಡ್ಡಿ ಬೇಡದ
ಸ್ವಂತ ಬದುಕು ನನ್ನದು!

ಮಣ್ಣಿನ ಬದುಕು ನನ್ನದು
ಅಪ್ಪಟ ಬದುಕು ನನ್ನದು
ನಲ್ಮೆಯ ಬದುಕು ನನ್ನದು
ತಾಳ್ಮೆಯ ಬದುಕೂ ನನ್ನದು !

* * * *

## ಕೆಂಪಣ್ಣನ ವೈಖರಿ

ಜವಾನ ಕೆಂಪಣ್ಣ ಬಣ್ಣದಲಿ ಕಪ್ಪಣ್ಣ
ಆದರೂ ಕಪ್ಪಲ್ಲ ಅವನ ಮನಸು
ಎಂದೂ ಕಂಡಿಲ್ಲ ಮಾತಲ್ಲಿ ಹೊಲಸು

ಜವಾನ ಕೆಂಪಣ್ಣ ನೋಡೋಕೆ ಬಲು ಸಣ್ಣ
ಅದರೂ ತೋರಿಸಿಲ್ಲ ಸಣ್ಣತನ ಎಂದೆಂದೂ....
ಹರಿಬಿಟ್ಟಿಲ್ಲ ನಾಲಗೆಯ ಬಲು ಮುಂದು –

ಕೆಂಪಣ್ಣ ಜವಾನ
ಅಭಿರುಚಿಯಲ್ಲಂತೂ ಸಾಕ್ಷಾತ್ ದಿವಾನ
ಠಾಕು ಠೀಕು ಅವನ ಧಿರಿಸು
ನಡೆಯಷ್ಟೇ ನುಡಿಯೂ ಸೊಗಸು.....

ಸೂರ್ಯ ಹುಟ್ಟುವುದು ತಡವಾಗಬಹುದು
ಕಛೇರಿ ಬಾಗಿಲು ತೆಗೆಯುವುದು ತಡವಾಗಿಲ್ಲ ಎಂದೂ!
ಸಾಹೇಬರಿಗೆ ಅವನಂತೂ ಶ್ರೀರಾಮ ಭಂಟ
ಸಾಹೇಬರನ್ನ ಕಾಣೋಕೆ ಬಂದೋರಿಗೆಲ್ಲ ನಂಬಿಕೆಯ ನೆಂಟ

ಆಗೋದಿಲ್ಲ.... ಅಂದೋನಲ್ಲ ಯಾವುದೇ ಕೆಲಸಾನು
ಎಷ್ಟು ಹೊತ್ತಾದರೂ ತಂದು ಕೊಟ್ಟಾನು ತಿಂಡಿ, ಕಾಫೀನೂ !
ಮೀಟಿಂಗ್ ಇರಲಿ ಫಂಕ್ಷನ್ ಇರಲಿ
ಎಲ್ಲಾ ಕಡೆಗೂ ಇರಲೇ ಬೇಕು ಅವನ ಸೇವೆ
ಸೇವೆಗೂ ಮೀರಿದ ಸರಾಸರಿ ಮಜೂರಿ....

ರೋಗ ರುಜಿನ ಬಂದದ್ದಿಲ್ಲ ನಮ್ಮ ಕೆಂಪಣ್ಣನಿಗೆ
ಬಂದಿದ್ದರೂ ತಪ್ಪಿದ್ದಿಲ್ಲ ಅವನ ಹಾಜರಿ ಸರ್ಕಾರಿ ಕಛೇರಿಗೆ
ಕೆಂಪಣ್ಣನಂತೂ, ಎಲ್ಲಾ ಸರಿ, ಎಲ್ಲಾದರಲ್ಲೂ ಸರಿ
ಆದರೆ ಅವನ ಹತ್ತಿರ ಸಾಲ ಪಡೆದೋರಿಗೆ ಮಾತ್ರ ದುಬಾರಿ !

(ವಸೂಲಿಯಲ್ಲಂತೂ ಅವನದು ಥೇಟ್ ನಕ್ಷತ್ರಿನದೇ ವೈಖರಿ!)

ಜವಾನ ಕೆಂಪಣ್ಣ ಹೊರಗೆಲ್ಲಾ ಚೆನ್ನ
ಹಚ್ಚಿಕೊಂಡರೆ ಹಾಕುತ್ತಾನೆ ಗುನ್ನ!
ಹೊರನೋಟಕ್ಕೆ ಬಲುಸಂಪನ್ನ
ಒಳಗೆ ನೀವು ಬಗೆದು ನೋಡಿದರೆ
ಮೀರಿಸುತ್ತಾನೆ ಮಂತ್ರಿಗಳನ್ನ !
ತೋರಿಸುತ್ತಾನೆ ತಂತ್ರಗಳನ್ನ!

ಅಂತಿಂಥವನಲ್ಲ ಕೆಂಪಣ್ಣ
ನಂಬಿದರೆ ಮಾತ್ರ ಕಪ್ಪಣ್ಣ

* * * *

## ಕಟ್ಟಿಟ್ಟ ಬುತ್ತಿ

ಮಾಯಾವಾಯಿತ್ತೇ ಬನಗಳ ಬೆಡಗು?
ನಾಶವಾಯಿತೇ ಹೂಗಳ ಸೊಬಗು?

ಹಸಿರು ವನಸಿರಿ ಹಾಳಾಗಿ
ದಟ್ಟ ಕಾಡುಗಳು ಬೀಳಾಗಿ
ಬರಡಾಯಿತೇ ಪಚ್ಚೆಯ ಒಡಲು?
ಬರಿದಾಯಿತೇ ತಾಯಿಯ ಮಡಿಲು?

ಭೂಮಿಯ ಮೇಗಡೆ ವಿಪಿನಗಳಿರದೆ
ಬಾನಲಿ ಬಣ ಬಣ, ಮೇಘಗಳಿರೆ –
ಬಂಜರಾಯಿತೇ ಪ್ರಕೃತಿ ಸಿರಿಯು?

ಕಾಡಿರೆ ನಾಡು ಸಗ್ಗದ ಬೀಡು
ಕಾಡುಗಳಳಿಯಲು ಸುಡುಗಾಡು –
ಕಾಡಿರೆ ಮಳೆಯು ಚೆಲುವಿನ ಇಳೆಯು
ಮಳೆಯಿರೆ ಬೆಳೆಯು ಬದುಕಿನ ನಗೆಯು :

ಮನುಜನ ಕಾಡಿದೆ ಧನ ಪಿಶಾಚಿ
ದಿನ ದಿನ ಕೊಡಲಿಯು ಮರ ಗಿಡ ಕೊಚ್ಚಿ
ಇಂಗಿದೆ ವನ್ಯಶ್ರೀ ಸಂಪದ ಬತ್ತಿ
ಕಟ್ಟಿದೆ ತಾಯಿ ಶಾಪದ ಬುತ್ತಿ!

* * * *

## ಮುಖವಾಡದವರು

ಬಂದರೋ ಬಂದರು ಮುಖವಾಡದವರು ಬಂದರು
ಆಸೆ ಆಮಿಷ ತೋರುವ ಖಾದಿ ಜನರು ಬಂದರು,
ನೊಂದು ಬೆಂದ ಜನರ ಕಡೆಗೆ ಬಣ್ಣದ ಮಂದಿ ಬಂದರು
ಅವರನಿವರ ಆಡಿಕೊಂಡು, ತಾವು ಒಳ್ಳೆಯವರೆಂದರು;

ಭರ್ಜರಿ ಕಾರು ಇರುವ ಇವರು ಕಾಲ್ನಡಿಗೆಯಲ್ಲಿ ಬಂದರು
ಭವ್ಯ ಬಂಗಲೆ ಇರುವ ಇವರು ಗುಡಿಸಲೆಡೆಗೆ ನಿಂತರು
ಕುರ್ಚಿಯಲ್ಲೇ ಮೆರೆವ ಇವರು ಕೈಜೋಡಿಸಿ ನಿಂತರು
ಸಾವಿರ ಸುಳ್ಳು ಹೇಳಿ ಇವರು ಮತ್ತೆ ಮತವ ಬೇಡಿದರು!

ಬೆಣ್ಣೆ ಮಾತಿನಲ್ಲೇ ಇವರು ಮನೆಗಳನ್ನು ಕಟ್ಟುವವರು
ನಯಗಾರಿಕೆಯಲ್ಲೇ ಇವರು ನಲ್ಲಿಗಳನ್ನು ಹಾಕುವವರು,
ಎಲ್ಲ.. ಎಲ್ಲ ನೀಡುವೆವೆಂದು ನೀವು ನಮ್ಮನ್ನು ಆರಿಸಿ ಎಂದು
ನಾವು ನಿಮ್ಮವರೇ ಎಂದು ಅಂದು ಮೆಲ್ಲಗೆ ಮತ ಯಾಚಿಸುವವರು

ಸೂರಿರದ ಕಡೆ ನಾವು ಒದ್ದಾಡುವಾಗ ಎಲ್ಲಿದ್ದರು ಈ ಮಹನೀಯರು?
ನೀರಿರದೆ ನಾವು ಗುದ್ದಾಡುವಾಗ ಎಲ್ಲಿದ್ದರು ಈ ಗಣ್ಯರು?
ಮೂಲಭೂತಗಳು ಇಲ್ಲದಾಗ ಎಲ್ಲಿದ್ದರು ಈ ಮುಖಂಡರು?
ದೀಪವಿರದೆ ಎಡವುವಾಗ ಹೋಗಿದ್ದರೆಲ್ಲಿ ಈ ಜನನಾಯಕರು?

ಆಕಾಶಕೂ ಏಣಿ ಹಾಕೋ ಈ ಕಳ್ಳ ಖದೀಮರು
ನಮ್ಮನ್ನು ಜ್ಞಾಪಿಸಿಕೊಳ್ಳದ ಇವರು ಧುತ್ತೆಂದೆಲ್ಲಿಂದ ಬಂದರು?
ಇನ್ನು ಅನ್ನ ಬಟ್ಟೆ ವಸತಿ ಎಲ್ಲ ನಿಮಗೆ ಸಿಗುವುದೆನ್ನುವ ಇವರು –
ಆರಿಸಿ ಕಳುಹಿಸೆ ಮತ್ತೈದು ವರುಷ ಖಂಡಿತಾ ನಮ್ಮನ್ನು ನೋಡರು !

* * * *

## ಅನಾಥರು

ತಂದೆಯ ಯಾರೆಂದು
ತಾಯಿಯು ಯಾರೆಂದು
ತಿಳಿಯರು ಈ ಹುಡುಗರು
ಮನೆಯೆಂದರೇನೆಂದು
ಪ್ರೀತಿಯೆಂದರೇನೆಂದು
ಅರಿಯರು ಈ ತುಡುಗರು;

ಓದಂದರೇನೆಂದು ಬಹವೆಂದರೇನೆಂದು
ವಿಚಾರಿಸರು ಈ ಮುಗ್ಧರು
ಅಂತಸ್ತು ಏನೆಂದು ದೌಲತ್ತು ಏನೆಂದು
ವಿಮರ್ಶಿಸರು ಈ ಬಡವರು;

ಬೀದಿಯೇ ಮನೆಯೆಂದು ಸಿಕ್ಕಿದ್ದ ಉಂಡುತಿಂದು
ಎಲ್ಲೆಂದರಲ್ಲಿ ಬಾಳುವರು ಇವರು,
ಅವರಿವರು ಕೊಟ್ಟದ್ದೇ ಪರಮಾನ್ನ ಎಂದು
ಚಿಂದಿಯ ತೊಟ್ಟರೂ ನಲಿಯುವರು;

ನೂರೆಂಟು ರೀತಿಯಲ್ಲಿ ಬದುಕಲು ಹೆಣಗಾಡಿ
ರೋಗರುಜಿನದಲ್ಲೇ ನರಳುವರು,
ಮಳೆಯಲ್ಲಿ ಕೆಸರಲ್ಲಿ ಉರಿಯುವ ಬಿಸಿಲಲ್ಲಿ
ಜಾಗ ಇದ್ದಲ್ಲೇ ಹೊರಳುವರು ;

ಅಪ್ಪನಿಲ್ಲದೆ ಅಮ್ಮನಿಲ್ಲದೆ
ಯಾವುದೇ ವಿಳಾಸವಿಲ್ಲದೆ
ಏಗುತ್ತ ಬಾಗುತ್ತ ನಡೆಯುವರು
ಹೊಟ್ಟೆಪಾಡಿಗೆ ತಾವು ಉಸಿರಿರುವತನಕ ಒದ್ದಾಡುವವರು
ಮಾಡಬಾರದ್ದೆಲ್ಲವನ್ನೂ ಮಾಡುವರು.

* * * *

## ನಗ್ನ ಸತ್ಯ

ಜಾತಿ ಧರ್ಮ ಪಕ್ಷ ನೋಡಿ
ಇದ್ದ ಊರ ವಿಭಾಗಮಾಡಿ–
ಚುನಾವಣೆಯ ಹುರುಡಿನಲ್ಲಿ
ಒಣಪ್ರತಿಷ್ಠೆ ಕುರುಡಿನಲ್ಲಿ –

ರಾಜಕೀಯ ದುಷ್ಟ ಹುಚ್ಚಿಗೆ
ಒಳಿತಿಗಿಂತ ಕೆಡಕು ಹೆಚ್ಚಿಗೆ !

ಬವಣೆ ಜನರ ಎದೆಯ ಮೇಲೆ
ಹಣ ಬಿತ್ತಿ ಬೆಳೆದ ಹುಸಿ ಬಾವುಟ,
ಹುಂಬ ಆಯ್ಕೆ ಮಂದಿ ಎದುರು
ಕೊಟ್ಟು ಪಡೆವ ಪಟ್ಟು ಹಿಡಿವ ಅವುಟ !

ಸತ್ಯ ಹೇಳಿ ಬಾಳ್ವರಿಲ್ಲ
ಗೆದ್ದರೂ ಸತ್ಯಹೇಳ್ವರಿಲ್ಲ

ಅಧಿಕಾರ ಸಿಕ್ಕರೂ ತಾಳ್ಮೆಯಿಲ್ಲ
ತಿನ್ನದ ಜನಕೆ ಏಳ್ಗೆಯಿಲ್ಲ –
ಎಂದು ತಿಂದು ತೇಗಿ ದೇಶವೆಲ್ಲ
ಸಾಲದ ಹೊರೆಯಲಿ ನರಳಿಹುದಲ್ಲ!

* * * *

## ಪರಿಸರ ಗೀತೆ

ಅನ್ನ ತಿನ್ನುವ ಮಣ್ಣಿನ ಮಗನೇ ನೀನು?
ಬನ್ನ ಬಂದಿದೆ ಕಾಡಿಗೆ ನೋಡಿರುವೆಯೇನು?
ಬೋಳು ಬೋಳಾಗಿಹುದು ಕಾಡಿನ ಒಡಲು ;
ಬಾಳಿ ಬದುಕಬೇಕಿದ್ದರೆ, ಗಿಡ ನೆಡು ಮೊದಲು !

ಕಣ್ಣಿರುವ ಮಣ್ಣಿನ ಮಗನೇ ನೀನು ?
ಶೂನ್ಯವಾಗಿದೆ ಬನವೆಲ್ಲ ನೋಡಿದಿಯೇನು ?
ಕಡಿದು ಕಡಿದು ಕಾಡೆಲ್ಲ ಬಂಜರಾಯ್ತು ಪರಿಸರ
ನಗುತ ನಗುತ ನೀನೀರಲು, ಬೆಳೆಸು ನೀ ಗಿಡಮರ !

ಬುದ್ದಿಯಿರುವ ಮಣ್ಣಿನ ಮಗನೇ ನೀನು ?
ನಾಶವಾಗಿದೆ ಬೆಟ್ಟ ಗುಡ್ಡ ನೋಡಿಹೇಯೇನು ?
ಸೂರೆಯಾಯ್ತು ಕಾನನ, ಎಲ್ಲಿ ಹೋಯ್ತು ಪಕ್ಷಿ ಇಂಚರ ?
ಕೊಲ್ಲಬೇಡ ಹಕ್ಕಿ ಪಕ್ಕಿ... ಪ್ರಾಣಿಗಳಿರಲಿ ಸುಂದರ !

* * * *

## ಹಾಡು – ಪಾಡು

ಬರಿದೇ ಬವಣೆ ಪಲ್ಲವಿಯಾದ –
ದುಗುಡ ಹಾಡನೊರೆದು
ತೂಗುಯ್ಯಾಲೆ ಚರಣವಾದ –
ಮುಗಿಯದ ಪಾಡು ನನ್ನದು !

ಒಂದಿದ್ದರೆ ಮತ್ತೊಂದಿರದ –
ಕೊರಗಿನ ಸ್ವರ ಉಸಿರಾಗಿ,
ಇಂದಿದ್ದರೆ ನಾಳೆ ಇರದ –
ಅತಂತ್ರ ಗತಿಯ ಜಿಂದಗಿ !

ಮೂಲಭೂತ ಅಗತ್ಯವಿರುದ
ಹಸಿದ ಒಡಲು ಸಿಡಿಲಾಗಿ,
ರೊಟ್ಟಿ, ಬಟ್ಟೆ, ಸೂರು – ಎಂಬುದು
ಪಡೆವುದೇನೆ ದುರುಗ – ಮುರುಗಿ !

ಸರ್ಕಾರವೆನಿತೋ ಬಂದು ಹೋದರೂ
ಉದ್ಧಾರವಿಲ್ಲ ಬಡವಗೆ,
ಭರವಸೆ–ನದಿ ಹರಿದು ಬಂದರೂ
ಸಹಜ ಬಂಜರು ಇರವಿಗೆ

ತೊಡರಿನ ಚಕ್ರ ತಿರುಗಿದರೂ
ಅಭಯ ಹಸ್ತ ಹೊಳೆದರೂ.....
ಅರಳಲಿಲ್ಲ ಬಾಳ ಕಮಲ
ಕೆಸರಿನಲ್ಲೇ ಇದ್ದರೂ !

* * * *

## ಕರುಳಿದ್ದವರ ಕಡೆ ಕೂಗು

ಬವಣೆ ಬೆಂಕಿಯ ಈ ಮಣ್ಣಿನ ಮೇಲೆ
ಮುಖಾಮುಖಿ ಎದುರಿಸಿದ್ದು....
ಹಗಲು ಇರುಳು ಕೊತ ಕೊತ ಕುದ್ದು ಬೆಂದದ್ದು
ಹಸಿ ಹಸಿಯಾಗಿ

ಪದ್ಯವಾಗಿ ಅಕ್ಷರಕ್ಷರದಲ್ಲಿ
ನೆತ್ತರಿನ ರೂಪದಲ್ಲೇ ಹರಿದದ್ದು
ಹಲವು ಹನ್ನೊಂದು !

ನಕ್ಕದ್ದಕ್ಕಿನ್ನ ಹೆಚ್ಚಾಗಿ ಉಪವಾಸವಿದ್ದದ್ದು
ಉಂಡದ್ದಕ್ಕಿನ್ನ ಮಿಗಿಲಾಗಿ ಅತ್ತದ್ದು
ಉಟ್ಟು ತೊಟ್ಟದ್ದಕ್ಕಿನ್ನ ಉಡದೆ ತೊಡದೆ
ಸೊಣಕಲು ದೇಹಗಳಲ್ಲಿ
ಎಡೆಬಿಡದೆ ಕಷ್ಟಗಳಲ್ಲಿ ಸುಟ್ಟೂ ಸುಟ್ಟೂ

ಸುಟ್ಟ ಇಟ್ಟಿಗೆಯಂತೆ ಗಟ್ಟಿಯಾದದ್ದು
ರಾಗ ಕಾಣಬೇಕಾದದ್ದು ರಂಕಲಿಗೆ ಸಿಕ್ಕಿದ್ದು
ಭೋಗ ಅರಸುವ ಮುನ್ನ ರೋಗ ತಾಕಿದ್ದು

ಅನಿಷ್ಟ ಹಾದಿಯ  ಕೊಚ್ಚೆಯಲ್ಲೂ
ಎದೆಗುಂದದೆ ಸುಮ್ಮ ಸುಮ್ಮನೆ ರಚ್ಚೆಮಾಡದೆ
ನೇರ ದಾರಿ ಹಿಡಿದದ್ದು.... ಒಟ್ಟೊಟ್ಟಾಗಿ
ದಟ್ಟ ದಟ್ಟವಾಗಿ ನನ್ನ ನುಡಿಯಲ್ಲಿ
ಇಣುಕ ಹೊರಟಿದೆ......

ಕಣ್ಣಿದ್ದವರ
ಕುರಳಿದ್ದವರ
ಗಮನ ಸೆಳೆಯ ಬಯಸಿದೆ
ಮಾನವೀಯ ಹೃದಯ ಅರಸಿದೆ !

ರಗಳೆ ರಂಕಲಿನ ಬೆಂಕಿಯ ಮೇಲೆ
ಕಟ್ಟಿಗೆಯಾಗಿ ಉರಿದದದ್ದು
ಇಟ್ಟಿಗೆಯಾಗಿ ಬೆಂದದ್ದು
ತಟ್ಟೆಯಂತೆ ಹೊಟ್ಟೆ ತೆಳ್ಳಗಾದದ್ದು

ಕವಿಗೆ ವಸ್ತುವಾಗಿ
ಕಲೆಗಾರಗೆ ಚಿತ್ರವಾಗಿ
ಸಂಗೀತಗಾರನಿಗೆ ಅಳಲ ಆಲಾಪವಾಗಿ

ಎಲ್ಲರ ಗಮನ ಸೆಳೆದದ್ದಷ್ಟೇ ಗೊತ್ತು !
ಇನ್ನು ಉದ್ಧಾರದ ಕಥೆ ಎಲ್ಲಿಂದ ಬಂತು !

* * * *

## ಉರುಳಿನ ಮೇಲುರುಳು

ನಗರ ಹೃದಯದ ಮೇಲೆ
ಬುಳ ಬುಳ ಹರಿವ ಕಾಲುಗಳು –
ಸಾವಿರ ಸಾವಿರ
ರೈಲುಗಾಲಿಗಳಂತೆ ನಿರಂತರ ಉರುಳು

ಸರ ಸರ ಸರಿದು
ಇಲಿಯ ಬಿಲಗಳಂಥ ಮನೆಗಳ ಸೇರಿ
ಕೀ ಕೊಟ್ಟ ಯಂತ್ರದಂತೆ
ಉಂಡು ತಿಂದು ಮುದುಡಿ ಮಲಗಿ
ವ್ಯಥೆಯ ನೆನಸೋ ಬವಣೆ ಬಿರಿಸೋ
ರತಿಯ ಕನಸೋ ಯಾತನೆ ತುರುಸೋ....

ಅಂತೂ ಇರುಳ ದೂಡಿ ಹಗಲು ಕಣ್ತೆರೆಯಲು
ಬಲವಂತ ಎದ್ದು
ತುದಿಗಾಲ ಮೇಲ್ನಿಂತು
ನಿತ್ಯಕರ್ಮಗಳ ಮುಗಿಸಿ

ಮತ್ತದೇ ಸಳ ಸಳ ಹರಿಯುವ
ದುಡಿಮೆಗೆ ಹೆಗಲೊಡ್ಡುವ
ತುತ್ತಿಗಾಗಿ ಹೋರಾಟದ ಹಾದಿ ಹಿಡಿಯುವ
ಸಾವಿರ ಸಾವಿರ ಹೆಜ್ಜೆ ಸವೆಸುವ
ಉರುಳಿನ ಮೇಲುರುಳು !

* * * *

## ಆದರ್ಶ ರಹಿತ ನಾಡು

ವರ್ಗ ರಹಿತ ನಾಡು
ನೆಮ್ಮದಿಯ ಬೀಡು
ಅದರ್ಶ ಅದುವೆ ಕಾಣೋ ! ಸಮಾನತೆಯ ನೀನು ಮಾಣೋ !

ವರ್ಣ ರಹಿತ ಪ್ರೀತಿ
ಮಾನವತೆ ರೀತಿ
ಅದನರಿತು ಮನುಜ ಬಾಳೊ ! ಇಲ್ಲದಿದ್ದರೆ ಎಲ್ಲ ಹಾಳೋ !

ಯಾಕೋ ಭೇದ ಭಾವ ಬುದ್ಧಿ ?
ನೋಡಿ ಕಲಿಯೋ ಸೂರ್ಯ ಪರಿಧಿ
ಅವಗಿಲ್ಲ ತಾರತಮ್ಯ – ಅನುಕರಿಸೋ ನೀನು ರವಿಯ ;

ಇರಲಿರಲಿ ಮೌಲ್ಯ ಹಾದಿ
ಶುದ್ಧ ನಡತೆ ಬಾಳ ಸಿದ್ಧಿ
ನಿಷ್ಠೆ ಬಿಡದೆ ನೀನು ನಡೆಯೆ – ನಾಗರಿಕ ನಿಯತ್ತು ಅದುವೆ !

ಜಾತಿಜ ಗೋಡೆ ಕುಟ್ಟಿ ಕೆಡವೋ
ಸತ್ಯ ನ್ಯಾಯ ಶ್ರೇಷ್ಠ ಇರವೋ
ಕುಬ್ಜತನವ ತೊರೆದು ಬದುಕೋ – ಸ್ನೇಹ ತತ್ವ ಶಾಂತಿ ಬೆಳಕೋ
ಸಂಕುಚಿತ ಬುದ್ಧಿ ಕೆಡುಕೋ
ಬಾವಿ ಕಪ್ಪೆಯಾಗಬೇಡವೋ
ಭ್ರಾತೃ ಪ್ರೇಮ ಹಾಲು–ಜೇನೋ... ವಿಶ್ವಮಾನವನಾಗೋ ನೀನು !

* * * *

## ಯಾರಿಗೆ ಹಬ್ಬ ?

ಕಾಲ ಚಕ್ರ ಉರುಳಿದಂತೆ
ಹಬ್ಬ ಬಂತು ಎಂದಿನಂತೆ –
ಹಬ್ಬ ಸಂಭ್ರಮ ತಂದರೂ
ಒಳಗೆಲ್ಲೋ ಅಳಲಿನ ಒಗರು ;

ಸುತ್ತೆಲ್ಲ ಹರುಷ ಕಂಡರೂ
ಕೊರಗುತ್ತಿದ್ದಾರೆ ಅನಾಥರು !
ಗಿಡ ಮರ ತೊಟ್ಟಿವೆ ಚೈತ್ರದ ಉಡುಗೆ
ಗರೀಬರಿಗೆಲ್ಲಿದೆ ಬಟ್ಟೆಯು ಮೈಗೆ ?

ಮಾವಿನ ಮರದಲಿ ಕೋಗಿಲೆ ಕೂಗಿದರೂ
ಓಣಿಗಳಲ್ಲಿ ಅಳುತಿವೆ ದಲಿತರ ಮಕ್ಕಳು !
ಶ್ರೀಮಂತ ಮನೆಗಳಿಗೆ ಹಬ್ಬದ ಸುಣ್ಣ ಬಣ್ಣ
ಬಡವರ ಗುಡಿಸಲಲಿ ಬನ್ನದ ಗುನ್ನ !

ದೇವರ ಗುಡಿಯಲಿ ಪೂಜೆ ಪುನಸ್ಕಾರ
ಕೊಂಪೆಗಳಲ್ಲಿ ಅನ್ನಕ್ಕೆ ಹಾಹಾಕಾರ
ಹಬ್ಬದಾಚರಣೆಯೇ ಸಿರಿವಂತರ ಪಾಲಿಗೆ
ತಾಪತ್ರಯ ಬವಣೆ–ಸಾಮಾನ್ಯರ ಬಾಳಿಗೆ ;

* * * *

## ಪಂಚ ನದಿಗಳ ನಾಡಿನಲ್ಲಿ

ಎಲ್ಲಿ ನೆತ್ತರಿನ ನದಿ ಎಗ್ಗಿರದೆ ಹರಿವುದೋ
ಅಲ್ಲಿ ಮಾನ್ಯತೆಗೇ ಗೋರಿ ಕಟ್ಟದಿಹುದೇ?

ಎಲ್ಲಿ ವೈಷಮ್ಯ ಬೇಲಿ ಯದ್ವಾತದ್ವಾ ಬೆಳೆವುದೋ
ಅಲ್ಲಿ ನಂಜಿನ ಮುಳ್ಳುಕಂಟಿ ಮೊಳೆಯದಿಹುದೇ ?

ಎಲ್ಲಿ ಅತೃಪ್ತಿ ಹೊಗೆ ಒಳಗೊಳಗೆ ಸುಳಿವುದೋ
ಅಲ್ಲಿ ಅಕೃತ್ಯದಗ್ನಿಕುಂಡ ಉರಿಯದಿಹುದೇ?

ಎಲ್ಲಿ ಅಧರ್ಮಹೊಂಡ ತುಂಬಿಕೊಂಡು ಮಲೆವುದೋ ?
ಅಲ್ಲಿ ಅನ್ಯಾಯ ಹುಳಿತು ವಿಷಕ್ರಿಮಿ ಹುಟ್ಟದಿಹುದೇ?

ಅಮಾಯಕರ ಜೀವಹತ್ಯೆ ಹಾಡು ಹಗಲೇ ನಡೆದರೂ
ಕುರುಡಾದುವೇಕೆ ಕಂಗಳು ? ಬರಡಾದುವೇಕೆ ದಾಹದಲ್ಲಿ ?

ಗುರುನಾನಕ್ ಹುಟ್ಟಿದ ನಾಡು ಕಗ್ಗೊಲೆಗಳ ಕೂಪದಲ್ಲಿ
ಜಾತಿ ಮತದ ಭೇದದಲ್ಲಿ ಮರೆವುದೇಕೆ ದಾಹದಲ್ಲಿ?

ಪಂಚನದೀ ನಾಡಿನಲ್ಲಿ ಕಂಡೆ ನಾ ಹಾಲಹಲದೋಕುಳಿ
ಹಿರಿಮೆ ಹೊಳೆದ ಚರಿತ್ರೆಯೆಲ್ಲಾ ಚಿತ್ತಾಯಿತೇಕೆ ಪ್ರತಿ ಪುಟದಲಿ ?

* * * *

## ಬೆಂಕಿ ಭುಗಿಲು

ರಾಗಿ ಜೋಳ ತುತ್ತು ಹಡೆದ
ಸ್ನೇಹ ಮುದ ನನ್ನದು,
ಹರಿದ ಬಟ್ಟೆ ಹೃದಯ ಮಿಡಿದ
ಅಳಲ ಗತಿ ನನ್ನದು !

ಒಡೆದ ಪಾದ ರಕ್ತ ಹರಿದ
ಒರಟು ಹಾಡು ನನ್ನದು,

ಬೆಳಗಿನಲ್ಲೂ, ಕತ್ತಲಾದ
ಅರಿವೆ ತೊಟ್ಟೂ ಬತ್ತಲಾದ....

ನಾಡಿದ್ದೂ ನೆಲವೇ ಇರದ
ದಣಿಯಿದ್ದೂ ದೂರವಾದ...
ಅನಾಥ ಗೀತ ನನ್ನದು !

ಶ್ರಮದ ಸುರಿದು ಸುಕ್ಕು ಸುಕ್ಕಾದ
ಜನಪದ ಹದ ನನ್ನದು
ನಾಳೆ ಹೇಗೋ ಏನೋ ಎನ್ನುವ
ತಲ್ಲಣದ ನಾದ ನನ್ನದು.

* * * *

## ಕೂಗಿದೆ ಕರುಳ ಅಳಲು

ನಿಗಿ ನಿಗಿ ನಗು ನಗುತಲಿದೆ
ಗಿಜಿ ಗಿಜಿ ತಲೆಗಳ ಪರಿಷೆಯಿದೆ

ಸಿಡಿ ಸಿಡಿ ಬದುಕಿನ ಭಂಗವಿದೆ
ಆರೆ ಕೊರೆ ಜೋಪಡಿ ಸಂಗವಿದೆ

ಮುರುಕಲು ಮನೆಗಳೂ ಹರುಕಲು
ಜುಗುಗಳು ಬದಿಗೆ ಬಲು –
ನೋಯುವ ಹೃದಯಗಳು

ಮುಲು ಮುಲು ಮುಲುಕುತ್ತವೆ
ಹಗಲು ಇರುಳು
ತಡಿಕೆಗಳೊಗಿನ ತುಡಿತಗಳು !

ತಿದಿಯೊತ್ತುವ ತವಕದಲ್ಲಿ – ಬೀದಿ
ಬದಿ ನಿಂತು ಹರಾಜಿಗಿಟ್ಟವೆ ತನಿ ಶೀಲಗಳು
ಕೊನೆಗೂ ತುಂಬವು ಹಿಟ್ಟಿನ ಚೀಲಗಳು
ಆದರೂ ಸರಿಯವು ಜುಟ್ಟಿನ ಮಲ್ಲಿಗೆ ಹೂವುಗಳು

ದಟ್ಟಿಸಿ ಕೂಗಿದೆ ಕರುಳಿನ ಅಳಲು !

* * * *

# ಜಾಗೃತಿ ಗಾನ

ಎಲ್ಲಿತನಕ ನೋಡ್ಕೊಂಡಿರೋದು ಮೊಸಳೆ ಕಣ್ಣೀರು ನಾಟಕ ?
ನಾವು ನೀವೂ ಎಚ್ಚರಾದರೆ... ಬದಲಾವಣೆಯ ಹೊಸ ಅಂಕ !

ಎಲ್ಲಿತನಕ ಸಹಿಸಕೊಂಡಿರೋದು ಶೋಷಣೆ ಮಂದಿ ಮುಠ್ಠಾಳತನ ?
ನಾವೂ ನೀವು ಎದ್ದು ನಿಂತರೆ ಕಪಿ – ಮುಷ್ಠಿಯ ಉಚ್ಚಾಟನ !

ದೀನ ಜನರ ಹೆಸರಲ್ಲಿ ಡೌಲುಮಾಡಿ ತೂರಾಡಿ
ರಾಶೀ ರಾಶಿ ಕಾನೂನು ತಂದು ಹೇರಿ ಬಾಯ್ಮಾಡಿ
ಪಾಳೆಗಾರರಂತೆಯೇ ವೇಷ ಹಾಕಿ ಹಾರಾಡಿ
ಸಾವಿರಾರು ಹೋರಾಟ ಉಸಿರ ಹೀರಿ ರಥ – ದೂಡಿ
ಪ್ರಜಾಸತ್ತೆ ಕೊಲ್ಲುವಂಥ ರಾಜಕಾರಿಣಿ ನಂಬಬೇಡಿ !

ಕಾಳಸಂತೆ ನೆಲೆಯಲ್ಲಿ ಷಾಮಿಲಾಗಿ ಜೋರಾಗಿ
ಬೀಳುಬಿದ್ದ ದೇಶ ಮರೆತು ಕಪ್ಪು ಹಣವ ಕೂಡ್ಹಾಕಿ
ಭ್ರಷ್ಟರಾಗಿ ದುಷ್ಟರಾಗಿ ಪಟ್ಟ ಏರಿ ಜೋಕಾಗಿ
ಕೊಟ್ಟ ಮಾತ ಚಟ್ಟಕಟ್ಟಿ ನಾಡ ನುಂಗಿ ನಂಜಾಗಿ
ಪ್ರಜಾತಂತ್ರ ಕೊಲ್ಲುವಂಥ ರಾಜಕಾರಣಿ ನಂಬಬೇಡಿ !

* * * *

## ಹಿಡಿ ಕೂಳಿಗಾಗಿ !

ಎತ್ತ ತಿರುಗಿದರೂ ಮುತ್ತಿ ಮೊರೆಯುತಿವೆ
ಚಿತ್ತ ಇರಿವ ಕೂಗು ;
ಬಿದ್ದು ಬೀದಿಯಲ್ಲಿ ಬಿಕ್ಕೆ ಬೇಡುತಿವೆ
ಹಿಡಿ ಕೂಳಿಗಾಗಿ ಕೊರಗು !

ಕತ್ತಲೆಯ ಕೂಪ ಬಿತ್ತಿದ್ದು ಪಾಪ
ಉರಿದದ್ದು ಶೀಲ ದೀಪ
ಹುತ್ತ ಕಟ್ಟುತ್ತ ಅಳಲ ಕುಟ್ಟುತ್ತಾ ತಾಪ –
ತೆತ್ತ ಬೆಲೆ... ಕುರೂಪ !...

ದಿನಗೂಲಿ ಮಾಡಿ ಕ್ಷಣ ಕ್ಷಣವ ದೂಡಿ
ಬದುಕೆಲ್ಲ ಬವಣೆ ಕೋಡಿ !
ಅಸೆಯ ಬಂಡಿ ಕಳಚಲು ಕೊಂಡಿ
ಹಳಿತಪ್ಪಿ ಚಿಂತೆ – ಬೇಡಿ ;

ಕಷ್ಟಗಳ ರಗಡ, ರಂಪಗಳ ದುಗುಡ
ಮಾಡಿವೆ ಅಗ್ನಿಕುಂಡ
ಜಡ್ಡಾದ ಜಾಡ ಗೊಡ್ಡದ ಪಾಡ
ಕಕ್ಕಿವೆ ದಲಿತ ಹಾಡ.

* * * *

## ಮೌಲ್ಯ ಗಾನ

ಸದ್ಗುಣದ ಸೂರ್ಯ ಉರಿದಾಗಲೇನೆ
ವ್ಯಕ್ತಿತ್ವಕ್ಕೆ ಉಂಟು ಮೌಲ್ಯ ;
ಮಾನವನ ನಡೆಯು ಶಿಥಿಲಾದರೇನೆ
ಬದುಕಲ್ಲಿ ನಿಂದೆ ಲಭ್ಯ !

ವಿಶ್ವಾಸ ಕರುಣೆ ಪ್ರೀತಿ ಇದ್ದರೇನೆ
ಜೀವನದ ಹೂವು ರಮ್ಯ –
ಅಡೆತಡೆ ಬವಣೆ ರಂಕಲಿದ್ದರೇನೆ
ಕಂಡೀತು ಅಗ್ನಿದಿವ್ಯ !

ನೀಯತ್ತು ಮರೆತು ನಾವ್ ನಡೆದರೇನೆ
ಅಹಿತಗಳ ಕ್ರೂರ ಕ್ರೌರ್ಯ,
ಸತ್ಪಥದ ಹಾದಿ ನಾವ್ ತುಳಿದರೇನೆ
ಶುಭ ಫಲದ ಸಿಹಿಯು ಲಭ್ಯ !

ಅಕ್ಕರೆಯ ಬೇಲಿ ಒಳಗಿದ್ದರೇನೆ
ಸಮುದಾಯ ಸ್ನೇಹ ಸೃಜನ !
ಧಿಕ್ಕರಿಸಿ ನಾವು ಗೂಳಿಯಾದರೇನೆ
ನಮ್ಮ ಮಾನ ನಮಗೆ ಊನ

* * * *

## ವಿರೋಧಾಭಾಸ

ಬಣ್ಣಲೇಪಿತ ತುಟಿಗಳ ಬೋಳು ಮಾತುಗಳ ಕೇಳಿ
ಮೆರುಗು ಮೆತ್ತಿದ ಮನೆಗಳ ವಿಕೃತ ನೆಲೆಗಳ ಕಂಡು
ದೀಪ ಹಚ್ಚಿದ ಗುಡಿಯ ಕರಾಳ ನಾಟಕ ನೋಡಿ
ಕೀರ್ತಿಗಳಿಸಿದ ಜನರ ಕೆಟ್ಟ ಚಾರಿತ್ರ್ಯ ತಿಳಿದು
ಸಿಂಗಾರ ಸುಂದರಿಯರ ಭ್ರಷ್ಟ ನಡವಳಿಕೆಯ ನೆನೆದು
ಅಕ್ರೋಶ ಬಂತು –
ಎದ್ದು ಎಗರಾಡಲಿಲ್ಲ..... ಜುಗುಪ್ಸೆಯಾಯ್ತು !

ಶಿಕ್ಷಣದ ಹೆಸರಲ್ಲಿ ವ್ಯಾಪಾರ ಮಾಡುವ
ಕಲೆಯ ರಂಗದಲ್ಲಿ ವಿಷ ಬಲೆ ಹೆಣೆಯುವ
ವಿಪರ್ಯಾಸದಿಂದ ತಪ್ತನಾದೆ....!

ಯಾರನ್ನೂ ಅರಿಯಲಾಗದೆ
ಎನನ್ನೂ ಸಿಗಿಯಲಾಗದೆ
ಬದುಕಿನ ಅಣಕ ಪೂರಾ ಮೊಗೆಯಲಾಗದೆ
ಎಂಥ ನಾಡು ನನ್ನದೆಂದು ಒಳಗೊಳಗೇ ಬೆಂದೆ !

ವೈದ್ಯ ಕಟುಕನಾದದ್ದ ವಿದ್ಯಾರ್ಥಿ ಕುಟುಕನಾದದ್ದ
ಅಧ್ಯಾಪಕ ಪುಢಾರಿಯಾದದ್ದ ರಾಜಕಾರಿಣಿ ಕದೀಮನಾದದ್ದ
ಕಣ್ಣಾರೆ ದಿಟ್ಟಿಸಿ ಕುಬ್ಜನಾದೆ...!

ಸ್ವರ್ಗವೆನ್ನುವನುದು ಇರುವುದಾದರೆ... ಅದು ಇಲ್ಲಿದೆ, ಇಲ್ಲೇ ಇದೆ
ಎಂದ ಕವಿ – ಲೇಖಕನಿಗೆ ಧಿಕ್ಕಾರ ಕೂಗಿ ಮಲಗಿದೆ...!

ಭಾರತೀಯನಾದದರಿಂದ ಸೊಗಸಾಗಿ ನಿದ್ದೆ ಹೊಡೆದೆ.

* * * *

## ಬಡತನದ ರಕ್ಷಕರು

ಯಾಚಕರಿವರು ಚಿಂತಿತರು
ಒಪ್ಪತ್ತೂಟಕೂ ವಂಚಿತರು
ಅದೃಷ್ಟವಿರದ ಬೀದಿಗರು
ಅನ್ನಕ್ಕಲೆವ ಹಾದಿಗರು ;

ದಿಕ್ಕುದೆಸೆಯೇ ಇರದವರು
ಕಂಡ ಕಂಡಲ್ಲಿ ಕೈಯೊಡ್ಡುವವರು,
ಚಳಿ ಮಳೆಯೆನ್ನದೆ ಬಳಲುವರು
ತುತ್ತು ಹಿಟ್ಟಿಗೆ ಅಂಗಲಾಚುವರು –

ಎಂಥ ಕೆಲಸಕ್ಕೂ ಸೈ ಎನ್ನುವರು
ಮಾತಿಗೆ ಮುಂಚೆ ಬೇಡುವರು
ಹರಕು ಚಿಂದಿಗಳ ತೊಟ್ಟಿಹರು
ತೊಟ್ಟಿಯ ಬಳಿಯೂ ಕಣ್ಣಿತ್ತಿಹರು ;

ಲೋಕವೇ ಮನೆಯೆಂದು ತಿಳಿದವರು
ಅಂಜದೆ ಅಳುಕದೆ ನಡೆದವರು,
ಕೊಟ್ಟರೆ ನಮಸ್ಕಾರ ಮಾಡುವರು
ಕೊಡದಿರೆ ಮುಂದೆ ಹೋಗುವರು...

ಅಂದರೂ ಅನ್ನಿಸಿಕೊಳ್ಳುವರು
ಬೆಂದರೂ ತಾಳಿಕೊಳ್ಳುವರು,
ಭಿಕ್ಷುಕರು ಇವರು ಭಿಕ್ಷುಕರು
ಬಡತನದ ಹಿರಿಮೆ ರಕ್ಷಕರು !

* * * *

## ಕೂಲಿಗಳ ಪಾಡು

ಇಂದು ಇಲ್ಲಿ ನಾಳೆ ಎಲ್ಲೋ
ಗೊತ್ತು ಗುರಿಯು ನಮಗೆ ಇಲ್ಲೋ
ಕೂಲಿ ಜನಗಳು – ನಾವು ಕೂಲಿ ಜನಗಳು

ರಟ್ಟೆ ಮುರಿಯ ದುಡಿದರೂ
ಹಾಸಲಿಲ್ಲ ಹೊದೆಯಲಿಲ್ಲ –
ರೋಗ ಕಿತ್ತು ತಿಂದರೂ
ದುಡಿಯದೆ ಬೇರೆ ದಾರಿಯಿಲ್ಲ...
ಕೂಲಿ ಜನಗಳು – ನಾವು – ಕೂಲಿ ಜನಗಳು

ಕಲ್ಲೋ ಮರಳೋ ಇಟ್ಟಿಗೆಯೋ
ಹೊರದೆ ಹಿಟ್ಟು ಹುಟ್ಟುವುದಿಲ್ಲ
ಕಾಲು ಸೋತರೂ ಬೊಬ್ಬೆ ಬಂದರೂ
ವಿರಾಮವಾಗಿ ಕೂಡುವಂತಿಲ್ಲ
ಕೂಲಿ ಜನಗಳು – ನಾವೂ ಕೂಲಿ ಜನಗಳು

ಎಳೆ ಮಕ್ಕಳು ಅತ್ತರೂನು
ಬಂಧು ಬಳಗ ಸತ್ತರೂನು
ದುಡಿಮೆ ಯಂತ್ರ ನಿಲ್ಲುವಂತಿಲ್ಲ
ಬಿಡುವನೆಂದೂ ಪಡೆವಂತಿಲ್ಲ
ಕೂಲಿ ಜನಗಳು – ನಾವು – ಕೂಲಿ ಜನಗಳು

* * * *

## ಬಂತೇಕೋ ಯುಗಾದಿ ?

ಕಷ್ಟದಲ್ಲಿ ನೊಂದ
ದುರ್ಬಲರ ಬದುಕ
ಹಂಗಿಸಲು ಮತ್ತೆ
ಬಂತೇಕೋ ಮತ್ತೆ
ಬಂತೇಕೋ ಯುಗಾದಿ ?
ಹೊಂಚಬೇಕು ಕವುದಿ !

ನೆಮ್ಮದಿಯೇ ಇರದ
ಎದೆಗುದಿಯ ಜನರ
ಅಣಕಿಸಲು ಮತ್ತೆ
ಬಂತೇಕೋ ಯುಗಾದಿ ?
ಮುಗಿದಿಲ್ಲಾ ತಗಾದಿ !

ತಿಂಗಳಿನ ಎಣಿಕೆ
ಸಂಬಳದ ಅಂಕೆ
ಕಣ್ಣನ್ನು ಕುಕ್ಕಲಿಕ್ಕೆ
ಬಂತೇಕೋ ಯುಗಾದಿ?
ಕನಸೆಲ್ಲಾ ಚಿಂದಿ ಚಿಂದಿ !

ಹೊಸ ತೆರಿಗೆ ಕುಣಿಕೆ
ಎಸೆಯುತ್ತಾ ಬಂತೇ –
ಬವಣೆ ಕಣಕ ನಾದಿ ?
ಬೇವು – ಬೆಲ್ಲ ಕೆಳದಿ
ಆಸೆಗಳೆಲ್ಲಾ ಸಮಾಧಿ !

* * * *

# ಸಿಟಿಯ ದೈತ್ಯ ಕಟಿ

ಎಲ್ಲೆಲ್ಲಿ ಹೆಜ್ಜೆ ಹಾಕಿದರೂ
ಎತ್ತೆತ್ತ ಅಟ್ಟಿದರೂ
ಪತ್ತೆಯಾಗಲಿಲ್ಲ ನನಗೆ ಸಿಟಿಯ ದೈತ್ಯ ಕಟಿ !

ಅಂಕೆ ಸಂಖ್ಯೆಗಳ ನಕ್ಷೆಯ ದಾಟಿ
ಮಹಲು ಗುಡಿಸಲುಗಳ ಅಂಗಳ ಮೀಟಿ

ಹೇಗೆ ಹೇಗೋ ಅರಸಿ ಮರುಗಿದರೂ
ಹಗಲು ಇರುಳ ಸೋಸಿ ಸೊರಗಿದರೂ
ಸುಳಿವೇ ಸಿಗಲಿಲ್ಲ ನಗರ ನಾಗರನ ಕ್ರೂರ ತುಟಿ !

ರಾಜಮಾರ್ಗದಬದಿಗೆ ಗಗನಚುಂಬಿ ಭವನ
ಹೊಸ ಬಡಾವಣೆ ತುದಿಗೂ ಕೊಂಪಿವಾಸಿ ಜನ ;

ಉತ್ತರಕೆ ಉಲ್ಲಾಸದುದ್ಯಾನವನ
ಕಾರಂಜಿ ಕಣ
ದಕ್ಷಿಣಕೆ ಚರಂಡಿ ಬದಿ ಹಸಿವಿಂದ ಕಂಗೆಟ್ಟ ದೀನ ವ್ಯಸನ

ಒಂದೆಡೆ ದಿಕ್ಕೆಟ್ಟ ಕೂಲಿಗಣ ......
ಮತ್ತೊಂದೆಡೆ ಹುಚ್ಚೆದ್ದ ಸಿರಿವಂತ ಬಣ

ಮುಖ್ಯ ವೃತ್ತಗಳಲ್ಲಿ ರಕ್ಷಕರ ಪಡೆ
ಕಿರಿದು ಓಣಿಗಳಲ್ಲಿ ಸುಡು ಸುಡು ಸೂರ್ಯನೆದುರಲ್ಲೇ...
ಲೂಟಿ, ದರೋಡೆ !

* * * *

## ಕಲಾಸಿಪಾಳ್ಯ

ಕಲಾಸಿಪಾಳ್ಯದಲ್ಲಿ ವಿಶೇಷ ಕೊಳೆಗೇ ನಿಜವಾದ ಪ್ರಾತಿನಿಧ್ಯ
ನಿತ್ಯವೂ ಹುಟ್ಟಿಕೊಳ್ಳುತ್ತಿಲ್ಲಿ ವಿಧ ವಿಧ ಮಾಲಿನ್ಯ
ಇಲ್ಲಿನ ಕುಪ್ಪೆ ಕುಪ್ಪೆ ಕಸವೂ ಪಡೆಯುತ್ತೆ ಚಾರಿತ್ರಿಕ ಮಾನ್ಯ !

ಜಗದಲ್ಲಿ ಎಲ್ಲೂ ಕಾಣದ ಕಂಪಿಲ್ಲಿ
ಗಂಧ ಹಡೆದು ಮಿಡಿಯುತ್ತೆ ನಾಗರಿಕರ ಹೃದಯ ನಾವೀನ್ಯ ;

ಅರೇಬಿಯಾದಲ್ಲೂ ಸಿಗದಂಥ ಈ ಸುಗಂಧ, ಸಂಶೋಧಕರಿಗೆ –
ಸವಾಲೆಸೆದು ಪಾವನ ಪರಿಮಳದ ತೌರೆನಿಸಿ ನಿವಾಸಿಗಳಿಗೆ
ಸಕಲ ರೋಗಜನ್ಯ ಪವಿತ್ರ ಕೊಂಪೆಯಾಗಿದೆ

ಇಲ್ಲಿಗೆ ವಲಸೆ ಸರ್ವೇಸಾಮಾನ್ಯ, ಸಂಸ್ಕೃತಿಯೂ ಆಮದಾಗಿ ಕ್ಷೇತ್ರ –
ಧನ್ಯ ವಿಜ್ಞಾನಿಗಳಲ್ಲಿ ಬೀಡು ಬಿಟ್ಟು ಪರಿಸರ ಬಗೆದು ನೋಡಿದರೆ
ಬ್ರಹ್ಮಾಂಡದ ಅತ್ಯದ್ಭುತ ಮಾಹಿತಿಗಳನ್ನೂ ನಾಚಿಸುತ್ತೆ ಇಲ್ಲಿನ ಐತಿಹ್ಯ

ತರಹೆವಾರಿ ತಲೆಗಳ ರಖಂವಾರಿ ತರಲೆಗಳ
ಅಗಣಿತ ಉಗುಳಗಳ ಅಸಂಖ್ಯ ಮಲಮೂತ್ರಗಳ
ಅದ್ವಿತೀಯ ಬಾಲ ವಿನ್ಯಾಸಗಳ ಅನುಪಮ ಪುಟ್ಟಪಥಗಳ
ಅತೀತ ವಾಸ್ತವ್ಯಗಳ – ಪೂಜನೀಯ – ತಂಗುದಾಣಗಳ
ಕಾಣದವರಿಲ್ಲ ಶಿವ !

ತಾ ಹುಟ್ಟಿದಂದಿನಿಂದ ಕೆಟ್ಟು ನಿಂತ
ಇಲ್ಲಿನ ಗೋಪುರದ ಗಡಿಯಾರ ಇಡೀ ಪ್ರದೇಶಕ್ಕೆ ಭವ್ಯ ಸಂಕೇತ !

ಕಲಾಸಿಪಾಳ್ಯದ ರಸ್ತೆಗಳಿಗೆ ಆಧುನಿಕ ದೇವದಾಸಿಯರ ಬೆಡಗಿದೆ
ಇಲ್ಲಿನಸ್ತವ್ಯಸ್ತ ಶ್ರೇಷ್ಠ ತಾಣಗಳಿಗೆ ಈಚಲ ತನಿವಾಸನೆ ಸೆರಗಿದೆ
ಖರೆ ಹೇಳಬೇಕೆಂದರೆ,
ನಮ್ಮ ಕಲ್ಯಾಣನಗರಿಗೇ ಇದು ಚಿರಂತನ ಒಗರಾಗಿದೆ.

ಎನಿತೆನಿತೋ ಸರ್ಕಾರ ಬಂದು ಹೋಗಿವೆ
ಯಾರ್‍ಯಾರದೋ ದರ್ಬಾರು ದಿವಿನಾಗಿ ಸಾಗಿದೆ
ಕಲಾಸಿಪಾಳ್ಯ ಮಾತ್ರ ಹೀಗೇ ಇದೆ !

ಇಂಥ ಜಗತ್ಪ್ರಸಿದ್ಧ ತಾಣ ಬೇರೆಲ್ಲೂ ಇಲ್ಲ
ಎಂಥ ರೂವಾರಿಯೂ ಇದನು ಬದಲಿಸಲಾಗಿಲ್ಲ

ಇಲ್ಲಿ ಒಮ್ಮೆ ಬಂದು ಹೋದರೆ ಸಾಕು
ನಿಮ್ಮ ಆರೋಗ್ಯಕ್ಕೆ ಕಾಯಕಲ್ಪ ಮಾಡಲೇಬೇಕು !

ಇದರ ಮುಂದೆ ಯಾವ ನರಕವೂ ಇಲ್ಲ
ಇದರ ಮುಂದೆ ಯಾವ ರೌರವವೂ ಇಲ್ಲ
ಇಲ್ಲಿದ್ದವರಿಗೆಲ್ಲ ಕಾರಾಗೃಹ ಶಿಕ್ಷೆಬೇಕೇ ಇಲ್ಲ
ಇಲ್ಲಿ ಬಾಳಿ ಬದುಕಿದವ – ಜಗತ್ತಿನಲ್ಲಿ
ಎಲ್ಲಿ ಬೇಕಾದರೂ ಬದುಕಬಲ್ಲ !

* * * *

## ಕಾಲೇಜ್ ಕ್ಯಾಂಪಸ್ಸಿನಲ್ಲಿ.....

ಕಾಲೇಜಿನ ಮೈದಾನದಲ್ಲಿ
ಹರೆಯದ ಕುದುರೆಗಳು ಕೆನೆಯುತ್ತಿವೆ
ಬಣ್ಣದ ಚಿಟ್ಟೆಗಳು ಮಿನುಗುತ್ತಿವೆ ;

ಕಾಲೇಜಿನ ಕಾರ್ಯಾಲಯದಲ್ಲಿ
ಯೋಜನೆ ಹಾವುಗಳು ಹರಿಯುತ್ತಿವೆ
ಚುರುಕಿನ ಮೈಕುಗಳು ಅರಚುತ್ತಿವೆ ;

ಕಾಲೇಜಿನ ಗ್ರಂಥಾಲಯದಲ್ಲಿ
ಮುಗ್ಗಲ ವಿಚಾರಗಳು ಕೊಳೆಯುತ್ತಿವೆ
ಗಾಜಿನ ಕಪಾಟುಗಳು ಹೊಳೆಯುತ್ತಿವೆ ;

ಕಾಲೇಜಿನ ಹೆಬ್ಬಾಗಿಲಲ್ಲಿ
ತೊಂಡು ಗೂಳಿಗಳು ತಿರುಗುತ್ತಿವೆ
ಕೋಮಲ ಕಪಿಲೆಗಳು ಅಳಲುತ್ತಿವೆ;

ಕಾಲೇಜಿನ ಮೂತ್ರಾಲಯಗಳಲ್ಲಿ
ಹೊಸ ಹೊಸ ಸುಭಾಷಿತ ಹುಟ್ಟುತ್ತಿವೆ !
ನಮ್ಮ ಸಂಸ್ಕೃತಿ ಇತಿಹಾಸ ಕುಟ್ಟುತ್ತಿವೆ !

* * * *

## ದೀವಳಿಗೆ ಮೂಡುವುದೆಂದಿಗೆ

ಅಸಂಖ್ಯ ಹತಾಶ ಪೇಲವ ಮಂದಿಗೆ
ದೀವಳಿಗೆ ಮೂಡುವುದೆಂದಿಗೆ ?

ಅನಾದಿ ಕಾಲದ ಮೂಲದಿಂದಲೂ –
ಅವಿಚಾರಗಳೇ ಹೆಡೆ ಎತ್ತಿ ಬೀಗಿರಲು
ಅಗಣಿತ ಮೌಢ್ಯಗಳಿಗೇ ಮಣೆಯ ಹಾಕಿರಲು

ವ್ಯಕ್ತಿಪೂಜೆಗೇ ಮಹಾಜನತೆ ಮಾರು ಹೋಗಿರಲು
ಜರ್ಜರವಾಗಿಹ ಮುಗ್ಧರ ಪಾಲಿಗೆ
ಹೊಸ ದೀವಳಿಗೆ ಮೂಡುವುದೆಂದಿಗೆ ?

ಕತ್ತಲೆದೆಗೆ ನವ ಮತಾಪ ಹಚ್ಚುತ
ದೈನಂದಿನ ನಡಿಗೆಗೆ ವಿಚಾರದ ಗತ್ತ ಬಿತ್ತುತ್ತಾ
ಸುಲಿಗೆ ಸರಮಾಲೆಗೆ ಪೂರ್ಣವಿರಾಮ ಹಾಕುತ
ಮತೀಯ ಲಾಸ್ಯಕೆ ಬಿರುನೇಣು ಕಾಣಿಸುತ
ಲಕ್ಷ ಲಕ್ಷ ಬೆಳ್ಗಿರಣಗಳೊಂದಿಗೆ
ಶುಭ ದೀವಳಿಗೆ ಮೂಡುವುದೆಂದಿಗೆ ?

* * * *

## ಚುನಾವಣೆ

ಬಂತು ಚುನಾವಣೆ
ತಂತು ಶುಭ ಚಿಂತನೆ !

ಮೌಲ್ಯವಂತರಿಗಲ್ಲ ಕಾಣೋ
ಈ ಚುನಾವಣೆ
ಕಪ್ಪು ಬಿಳುಪು ಮಾಡೋರಿಗೇನೆ
ಈ ಚುನಾವಣೆ !

ತತ್ವ ಬಿಟ್ಟು ಪಕ್ಷಾಂತರ ನೆಟ್ಟ
ಈ ಚುನಾವಣೆ
ಹಣ, ಹೆಂಡದ ದೌಲತ್ತೇನೆ
ಈ ಚುನಾವಣೆ !

ಅಮೂಲ್ಯ ಮತವ ಮಾರಿಕೊಂಡೋನು
ಎಂಥಾ ಪ್ರಜೇನೇ ?
ಮತವ ಹಣಕೆ ಕೊಂಡಕೊಳ್ಳೋನು
ಅವನೆಂಥಾ ನೇತಾರನೇ ?

* * * *

## ಜೀತ ಜೀವಿ

ಹೊಟ್ಟೆಗೆ ಬಟ್ಟೆಗೆ ಪಾಡು ಪಟ್ಟಿದ್ದೆ
ದುಡ್ಡಿಗೆ ಜೀವದ ಒತ್ತೆ ಇಟ್ಟಿದ್ದೆ
ಹಲ್ಲಿನ ಸುಭದ್ರ ಕೋಟೆಯ ಒಳಗೆ –
ಹದ್ದುಬಸ್ತಿನಲ್ಲೇ ನಾಲಗೆ ಕಟಿದ್ದೆ !

ಹಾಡು ಹಗಲಲಿ ಎದುರು ಎದುರೇ –
ಮೆರೆದರು ಪುಂಡರು ಕಚ್ಚೆಯ ಕೊಳಕರು,
ಎಲ್ಲರ ಮರೆಸಿ ಕೆಲ ವರುಷಗಳಲ್ಲೆ –
ಗೋಲ್‌ಮಾಲ್ ಮಾಡಿ ಪುಂಡರು ಮೆರೆದರು !

ಜೀತದ ದುಡಿಮೆಯ ಬೇಲಿಯ ಒಳಗೆ
ಹಗಲಿರುಳೆನ್ನದೆ ನಾ ದುಡಿದಿದ್ದೆ

ಮಹಡಿಯ ಮೇಲೆ ಮಹಡಿಯ ಕಟ್ಟಿ
ಕಾರು ಬಾರಲಿ ಕೊಬ್ಬುತ ಪುಂಡರು
ಆಡಬಾರದ ಆಟಗಳಾಡಿ
ಮಾಡಬಾರದ ಕೃತ್ಯವ ಮಾಡಿ....

ಓಟಿಗೆ ನಿಂತು ಮೋಸಗಳಲ್ಲಿ
ಗೆದ್ದು ಬಂದು ಹಿಡಿದರು ಗದ್ದುಗೆಯನ್ನ !

ಎಲ್ಲವ ನೋಡುತ ನಾ ಮೌನದಲ್ಲಿ
ದುಡುಯುತ್ತಿದ್ದೆ ನಾ ಹೊಟ್ಟೆಗಾಗಿ
ಹೆಣಗುತ್ತಿದ್ದೆ ನಾ ಬದುಕಿಗಾಗಿ
ಮೆರೆದರು ಪುಂಡರು ಹಮ್ಮೀರರಾಗಿ !

* * * *

## ನುಂಗಾಸುರನ ನಂಜು

ಎಲ್ಲೆಲ್ಲೂ ನಗ್ನ ನುಂಗಾಸುರ –
ತಿಂದು ತೇಗುವುದೇ ಅವನ ದರ್ಬಾರ !

ಚೋಟಾ ಸಹಿಗಿಂತಿಷ್ಟು
ಪೂರಾ ಸಹಿಗಿಂತಿಷ್ಟು
ಲಂಚಾವತಾರ ನೇರ

ಇಲ್ಲಿ ಇಷ್ಟು ಅಲ್ಲಿ ಅಷ್ಟು
ವರ್ಷ ವರ್ಷ ದುಬಾರಿ ರೇಟು
ಅವನ ಮಂಚಾವತಾರವೂ... ಬೊಂಬಾಟು !

ಕೆಲಸ ಬೇಕೆಂದಾಗ ಕೊಡಬೇಕು ಕಪ್ಪ – ಕಾಣಿಕೆ
ವರ್ಗಾ ವರ್ಗಿಗೂ ಎಣಿಕೆ – ಕುಣಿಕೆ,
ನೌಕರಿ ಬೇಕೆನು ನಿಮಗೆ ?
ಕೇಳಿದರೆ ಸಾಕು ಅವರ ಮನೆ ಅಡಿಗೆಯವಗೆ !

ನೂರೆಂಟು ಗುಣಾಕಾರ, ಏನೇನೋ ಲೆಕ್ಕಾಚಾರ
ಅವನ ಬಳಿ ನುಡಿ ಮುತ್ತಿನ ಮಹಾಪೂರ

ರಾಜ್ಯ ಗೊತ್ತು, ಕೇಂದ್ರ ಗೊತ್ತು
ಸಿ.ಎಂ. ಏನು ! ಪಿ.ಎಂ. ಏನು ?
ಎಲ್ಲರನ್ನೂ ಬಲ್ಲ ಅವನು
ಸೊಂಡಿಲಿಯಿಂತಿದ್ದವನು ಮುಂದೆ ಹೆಗ್ಗಣವಾದವನು
ಈಗ ಮೀರಿಸಿದ್ದಾನೆ ಸ್ವಾಮಿ, ಸಾಗರದ ತಿಮಿಂಗಿಲವನ್ನೂ !

* * * *

## ಎಂಥವರಯ್ಯಾ ಇವರು ಎಂಥವರು ?

ಎಂಥವರಯ್ಯಾ ಇವರು ಎಂಥವರು ?
ಸಭೆ ಸಮಾರಂಭಗಳಿಗೆ ತಡವಾಗಿ ಬರುವರು ?
ವಿಷಯವನ್ನೇ ಬಿಟ್ಟು ಬೇರೆಲ್ಲ ನುಡಿವರು !
ಮಾತಾಡಿದ ಕೂಡಲೇ ವೇದಿಕೆ ಬಿಟ್ಟಿಳಿವರು...

ಎಂಥವರಯ್ಯಾ ಇವರು ಎಂಥವರು ?
ಕಿಂಚಿತ್ತೂ ಪ್ರಜೆಗಳ ಗಮನಿಸದವರು !
ತಮ್ಮ ಲೋಕದಲ್ಲೇ ತಾವು ವಿಹರಿಸುವವರು
ಸ್ವಾರ್ಥಕ್ಕಾಗಿ ಜನಹಿತವ ಮರೆತಂಥವರು ?

ಎಂಥವರಯ್ಯಾ ಇವರು ಎಂಥವರು ?

ಹಿಡಿಸಿದವರ ಹಿಗ್ಗಾಮುಗ್ಗಾ ಹೊಗಳುವವರು –
ಟೀಕೆಗಳನ್ನು ಸ್ವೀಕರಿಸದೆ ತೆಗಳುವವರು !
ಗದ್ದುಗೆಗೇ ಬೆಂಕವನ್ನು ಬೆಸೆದಂಥವರು...
ಎಂಥವರಯ್ಯಾ ಇವರು ಎಂಥವರು ?

ತಮ್ಮ ಹೆಸರಲಿ ಆಸ್ತಿಗಳ ನೊಂದಣಿಸದವರು –
ಅವರಿವರ ಹೆಸರಿಲ್ಲಿ ಭೂಮಿ ನುಂಗಿದವರು
ಮೂರೊತ್ತು ವಿಮಾನಗಳಲ್ಲೇ ಹಾರುವವರು !
ಎಂಥವರಯ್ಯಾ ಇವರು ಎಂಥವರು ?

ಬಡಜನರ ಬವಣೆ ಬನ್ನ ಅರಿಯದವರು ?
ಕೇಂದ್ರದ ಕೈ ಎದುರಲ್ಲಿ ಯಾಚಿಸುವವರು !
ಮಣ್ಣಿನ ಮಕ್ಕಳ ಬಗೆಗೇ ಯೋಚಿಸದವರು
ಎಂಥವರಯ್ಯಾ ಇವರು ಎಂಥವರು ?

* * * *

## ಸಮಾನತಾ ಸಂಕುಲ ?

ಸಹನಾ ಭವತ್ತು
ಸಹನೌ ಭುನಕ್ತು
ಸಹವೀರ್ಯಂ ಕರವಾವಹೈ
ಎಂದು ಹೇಳಿದ ನಾಡಿನಲ್ಲೇ –
ಅಸಮಾನತೆ ದಳ್ಳುರಿ – ಜ್ವಾಲೆ !

ಮೊಳಗಬೇಕೀಗ ವೈಚಾರಿಕ ರಣಕಹಳೆ
ಎಲ್ಲಿ ಸಮಾನತೆಯಿಲ್ಲ... ಅಲ್ಲಿ ಸಹಮಾನವ
ಆಗಿದ್ದಾನೆ ಕೊಚ್ಚೆ ಹುಳ !

ಜೀವಿ ಜೀವಿಗಳಲ್ಲಿ ಏಕಿಲ್ಲ....
ಸಮಾನ ಧರ್ಮ ಸಂಕುಲ ?

ವ್ಯಕ್ತಿ ವ್ಯಕ್ತಿಯ ಮಧ್ಯೆ
ಜಾತಿ ಅಂತಸ್ತು
ಧನ ದೌಲತ್ತು
ಅಧಿಕಾರ ಅಹಂ ಕಿಮ್ಮತ್ತು

ಉಬ್ಬುಬ್ಬಿ ಅಸ್ತವ್ಯಸ್ತ ಸಮಾಜ
ರೋಗಗ್ರಸ್ತ –
ಸಮುದಾಯಕ್ಕೆ ಬೇಕೀಗ ನಿಜ
ಸಮಾಜವಾದೀ ಸೂರ್ಯತೇಜ !

* * * *

## ಆಧುನಿಕ ದರ್ಬಾರು

ತಕ್ಕು ನರಿಗಳ ಸಂಚಿನ ಸಂತೆಯಲ್ಲಿ
ಗೂಬೆಗಳ ಗಾಯನ
ಹಂದಿಗಳ ಸೌಂದರ್ಯ ಸ್ಪರ್ಧೆಯಲ್ಲೀ
ಎಮ್ಮೆಗಳ ತೀರ್ಪು.....

ಹೆಡ್ಡರ ಮೇಳಕ್ಕೆ ಹುಚ್ಚನ ಅಧ್ಯಕ್ಷತೆ
ಇದು ಇಂದಿನ ರಾಜಕೀಯ !

ರಾಷ್ಟ್ರ ದೇಗುಲಕ್ಕೆ
ರಾಷ್ಟ್ರಾಭಿಮಾನ ದೈವ,
ನಾಡ ಗುಡಿಗೆ
ಭಕ್ತಿ ತಳಿರು ತೋರಣ ;

ಹೋಲ್ಡಾಲು ಸರ್ಕಾರಗಳಲ್ಲಿ
ಸೂಟ್ಕೇಸ್‌ದೇ ಸಾಮ್ರಾಜ್ಯ.

ಖದೀಮ ಕೀಳಗಳ ಕಲಾಪದಲ್ಲಿ
ಮುಂಗಸಿಯದೇ ಅದಿಪತ್ಯ....

ಎಲ್ಲೆಡೆ ಹಸುವಿನಂಥ
ಹಿಂದೆ ಬಂದರೆ ಒದೆಯದ
ಮುಂದೆ ಬಂದರೆ ಹಾಯದ
ಹಸುವಿನಂಥ ಮುಗ್ಧ ಪ್ರಜೆ
ಅಸಹಾಯಕ ಮೂಕ ಪ್ರೇಕ್ಷಕ
ಏಕೆಂದರೆ... ಅಯ್ಯಾ ಭಾರತೀಯ
ಇದು ಪ್ರಜಾರಾಜ್ಯ !

* * * *

# ಮೈತ್ರಿ ಗೀತ

ಸಾವಿರ ಸಾವಿರ ದೇವರ ಗುಡಿಗಳು
ಪೂಜೆಯೇ ಇಲ್ಲದೆ ಒಣಗಿರಲು –
ಹೊರಟರು ನಮ್ಮಯ ಧರ್ಮದ ತರುಣರು
ಹೊಸ ಹೊಸ ಗುಡಿಯನು ನಿರ್ಮಿಸಲು !

ಹುಟ್ಟುತ್ತ ನಾವೆಲ್ಲ ಬರಲಿಲ್ಲ ಇಲ್ಲಿಗೆ
ಜಾತಿಯ ಪಟ್ಟಿಯ ಕಟ್ಟಿಕೊಂಡು,
ಬಂದ ಮೇಲೆ ಇಲ್ಲಿ ಅವನಿವನೆನ್ನುತ
ಮತಿಯನ್ನೇ ಮರೆತೆವು ಕಚ್ಚಾಡಿಕೊಂಡು ;

ರಾಮನ ದೇಗುಲ ಕಟ್ಟಲು ಹೋಗಿ
ರಾವಣರಾಗುವುದೇನು ಚೆಂದ ?
ರಾಮ ರಹೀಮ ಎಲ್ಲಾ ಒಂದೇ
ಮಾನವರಾದರೆ ಮೈತ್ರಿ ಬಂಧ !

* * * *

## ಕ್ರಾಂತಿ ಗೀತೆ

ನೊಂದು ಬೆಂದ ಜನರೇ ಏಳಿ
ಹೊಸ ಕ್ರಾಂತಿ–ಗೀತೆಯನ್ನು ಹೇಳಿ !

ಎಲ್ಲಿ ತನಕ ಸಹನೆಯ ಲಾಲಿ ?
ಶೋಷಣೆ ಸಹಿಸದೇ ಸಿಡಿದೇಳಿ !

ನಿಮ್ಮ ದೇಹದ ಕೆಂಪು ನೆತ್ತರು
ದಿಕ್ಕು ದಿಕ್ಕಿಗೆ ಹರಡಲಿ ಹೆಸರು ;
ಶತ ಶತಮಾನ ಕಂಡ ಅವಗುಣ –
ಕಿತ್ತೆಸೆಯುತ ಹಾಡುವ ಹೊಸಗಾನ !

ಸಮುದಾಯ ಸಂಘಟನೆಯೇ ಸ್ಪಂದನ
ಒಂದಾಗಲು ಗೆಲುವಿನ ಕೇತನ ;
ಹಾಡಿ ವಿಶ್ವದ ಚರಿತೆ ವಿನೂತನ
ವಿಚಾರ ಸ್ವಾತಂತ್ರ್ಯ ನಮಗೆ ಚೇತನ !

* * * *

## ಅಂಬೇಡ್ಕರ್ ಅವರಿಗೆ

ವಂದನೆ.. ವಂದನೆ... ನಿನಗೆ... ವಂದನೆ
ಅಂಬೇಡ್ಕರ್ ಮಹನೀಯನೇ ನಿನಗೆ ವಂದನೆ :

ವಂದನೆ... ವಂದನೆ... ನಿನಗೆ.. ವಂದನೆ
ದಲಿತ ಜನಕೆ ಬೆಳಕನಿತ್ತ ಭಾಗ್ಯದಾತನೇ !
ಸಂವಿಧಾನ ಕೊಡುಗೆ ಕೊಟ್ಟ ಪ್ರತಿಭಾವಂತನೇ

ಜಾತಿ ಭೂತ ಮೆಟ್ಟಿ ನಿಂತ ಜನನಾಯಕನೇ
ಮಣ್ಣಿನಿಂದ ಎದ್ದು ಬಂದ ದೇಶ ಭಕ್ತನೇ...
ವಂದನೆ..... ವಂದನೆ..... ನಿನಗೆ.... ವಂದನೆ
ಅಂಬೇಡ್ಕರ್ ಮಹನೀಯನೇ ನಿನಗೆ..... ವಂದನೆ

ಬವಣೆ ಬೆಂಕಿ ಬೇಗೆಯಲ್ಲಿ ಅರಳಿ ನಿಂತವನೇ
ಲಕ್ಷ ಲಕ್ಷ ದಲಿತ ಜನರ ಮೇಲೆತ್ತಿದವನೇ
ವಂದನೆ... ವಂದನೆ.... ನಿನಗೆ.... ವಂದನೆ
ಅಂಬೇಡ್ಕರ್ ಮಹನೀಯನೇ ನಿನಗೆ ವಂದನೆ :

ಶೋಷಣೆಗಳ ತುಳಿತದಿಂದ ಸಿಡಿದು ನಿಂತವನೇ
ನಿದ್ದೆ ಹೋದ ಮನಗಳನ್ನು ಎಚ್ಚರಿಸಿದವನೇ
ವಂದನೆ.... ವಂದನೆ.... ನಿನಗೆ... ವಂದನೆ
ಅಂಬೇಡ್ಕರ್ ಮಹನೀಯನೇ ನಿನಗೆ ವಂದನೆ.

* * * *

## ನೋವಿನ ನದಿ

ನಾಡು ನಿನ್ನೆಯದಲ್ಲ
ನಾಡು ಇಂದಿನದಲ್ಲ
ನಾಡು ಎಂದೆಂದಿನಿಂದಲೂ ಬೆಳೆದು ಬಂದದ್ದೋ
ಕನ್ನಡ ಜನರ ಬಾಳ ಬೆಳಗಿದ್ದೋ

ಯುಗ ಯುಗಳಿಂದ
ನಲ್ಮೆ ನಾಡ ಮಣ್ಣು
ರಾಗಿ ಜೋಳ ಭತ್ತ ಕೊಟ್ಟಿತೋ
ಜನರುದರ ಸಾಕಿ ಸಲಹಿತೋ
ನಷ್ಟ–ಸುಖಕ್ಕೆ ಸಾಕ್ಷಿ ಹೇಳಿತೋ !

ರಾಜರೇನಿತೋ ಇಲ್ಲಿ
ತೇಜ ಮೆರೆಸಿ ರಾಜ್ಯ ರಥವ ಹರಿಸಿ ಮೆರೆದರೋ
ಶ್ರೀ ಸಾಮಾನ್ಯರಿಲ್ಲಿ
ಬವಣೆ ಬದುಕಿನಲ್ಲಿ
ಅಳಲ ಹೊಳೆಯಲಿ ಮಿಂದು ನಲುಗಿದರೋ !

ಲೆಕ್ಕವಿರದ ಕಾವ್ಯ
ದುಃಖ ಬಿಕ್ಕಿ ಬಿಕ್ಕಿ
ನೋವ ನದಿಯ ದಿನವೂ ಹರಿದವೋ !

* * * *

## ಪ್ರೀತಿ ಕೊಟ್ಟು ಪ್ರೀತಿ ಪಡೆಯೋ !

ಬಾಳೋದೇನೆ ನಾಲ್ಕು ಕಾಲ
ಈರ್ಷೆ–ದ್ವೇಷ, ಬೆಂಕಿ–ಬೇಗೆ, ವಿರಸ ಯಾಕೋ ?
ಮನಸಿನಾಗೆ ಕಪಟ ಯಾಕೋ ?
ಪ್ರೀತಿ–ಸ್ನೇಹ, ಎಲ್ಲ ಬಿಟ್ಟು–ಜಗಳ ಯಾಕೋ ?
ಸಹಜವಾಗಿ ನುಡಿದು ನಡೆದು ಹಾದಿ ಸಾಗೋ
ಮನುಜಾ... ಹಾದಿ ಸಾಗೋ...

ಯಾರೂ ಇಲ್ಲಿ ಸ್ಥಿರವಲ್ಲಾ ಮಾನವ ಸೂರ್ಯ ಚಂದ್ರನಲ್ಲ !
ಮೋಹ ದಾಹ ಬೆಳಕಲ್ಲಾ ಭೇದ ಭಾವ ಬದುಕಲ್ಲಾ !
ಸುತ್ತ ಮುತ್ತ ಪ್ರಕೃತಿ ನೋಡೋ
ಹಕ್ಕಿಯಂತೆ ಎಂದೂ ಹಾಡೋ..
ಮಾವು ಬಿತ್ತಿ ಮಾವು ಬೆಳೆಯೋ
ಪ್ರೀತಿಕೊಟ್ಟು ಪ್ರೀತಿ ಪಡೆಯೋ...
ಗಂಗೆ ಹಾಂಗೆ ಹರಿಯೋ
ಹಾಲಿನ್ಹಾಂಗೆ ಹೊಳೆಯೋ

ಉಚ್ಚ–ನೀಚ ಒಳ್ಳೆಯದಲ್ಲಾ ನಲ್ಮೆ ನಂಟು ಕಳ್ಳಿಯೂ ಅಲ್ಲಾ!
ಜಾತಿ ಭೀತಿ ಬೇಕಾಗಿಲ್ಲಾ ಪ್ರೀತಿ ಮುಂದೆ ಬೇರೇನಿಲ್ಲಾ !
ಕಣ್ಣು ಬಿಟ್ಟು ಜಗವ ಕಾಣೋ
ಮನಸಿನಂತೆ ಬದುಕಿ ಬಾಳೋ...
ಕೂಡಿ ಉಂಡು ಕೂಡಿ ನಲಿಯೋ
ಕೂಡಿ ಆಡಿ ಕೂಡಿ ಬೆರೆಯೋ
ಮಾನವರೊಂದೇ ಎಂದೋ ತಿಳಿಯೋ
ಮಾನವನಾಗಿ ಬೆಳೆಯೋ !

* * * *

# ನಮ್ಮ ನಾಡಿನ ಹಿರಿಮೆಯ ಹಾಡು

ನಾಡು ನಿನ್ನೆಯದ್ದಲ್ಲ
ನಾಡು ಇಂದಿನದ್ದಲ್ಲ
ನಾಡು–ಎಂದೆಂದಿನಿಂದಲೂ ಬೆಳೆದು ಬಂದದ್ದೋ
ಕನ್ನಡ ಜನರ ಬಾಳು ಬೆಳಗಿದ್ದೋ...!

ಯುಗ ಯುಗಗಳಿಂದ
ನಾಡ ನೆಲದ ಬಂಧ
ರಾಗಿ ಜೋಳ ಭತ್ತ ಕೊಟ್ಟಿತೋ
ಚೈತನ್ಯ–ಇಲ್ಲಿ–ಹುಟ್ಟಿತೋ!
ಸಂಸ್ಕೃತಿ–ನಮ್ಮನ್ನು–ಕಟ್ಟಿತೋ!

ಎನಿತೆನಿತೋ ರಾಜರು
ನಮ್ಮನ್ನು ಆಳಿದರು...!
ನಾಡ ತೇಜ ಮೆರೆಸಿ
ರಾಜ್ಯ ರಥವ ಹರಿಸಿ
ಗುಡಿ ಕಟ್ಟಿ ಬಿಟ್ಟು ಹೋದರೋ
ಕನ್ನಡತನವ ನೆಟ್ಟು ಹೋದರೋ !

ಲೆಕ್ಕ ವಿರದ ಕಾವ್ಯ
ದುಃಖ ಬಿಕ್ಕಿ ರಮ್ಯ

ನೋವಿನ ನದಿಯೇ ಇಲ್ಲಿ ಹರಿಯಿತೋ
ಒಳಗಿಂದ ಚೆಲುವು ಸುರಿಯಿತೋ
ನಮ್ಮತನದ ಹಿರಿಮೆ ಮೆರೆಯಿತೋ !

ಹಳ್ಳಿ ಹಳ್ಳಿಯಲ್ಲಿ ಜನಮನದ ಲಾಲಿ
ಸಾಹಿತ್ಯ ಸೊಗಡ ಸಿರಿಯನ್ನು ಚೆಲ್ಲಿ...
ಒಡಲಾಳದಿಂದ ಪದಪದವೂ ಉಕ್ಕಿ
ಗೀತ ಗಂಗೆಯಾಗಿ ಸಾಗಿತೋ
ಜೀವ ಭಾವವಾಗಿ ತೂಗಿತೋ!

ಸ್ವಾತಂತ್ರ್ಯ ಒಂದು ಸಂಕೋಲೆ ಕಡಿದು
ಅರ್ಧ ಶತಮಾನ ಕಳೆದು ಹೋದರೂ...

ದೀನ ದಲಿತರಲ್ಲಿ ದುಗುಡದ ಕಡಲು
ಹಟ್ಟಿ ಜನರ ಮಡಿಲ ಖಾಲಿ ಖಾಲಿ ಒಡಲು !

ಬವಣೆ ಬದುಕಿನಲ್ಲಿ ನಾಳೆ ನಿರೀಕ್ಷೆಯಲ್ಲಿ
ಆಶಾ ಕಿರಣದಲ್ಲಿ ನಮ್ಮ ಕನಸ ಚೆಲ್ಲಿ
ಮಣ್ಣ ಮಕ್ಕಳ ಉಸಿರು ನಲುಗಿತೋ
ಪಾಡು ಪಟ್ಟವರ ಆತ್ಮ ನರಳಿತ್ತೋ !

ಊರೂರು ಮೊರೆದು ಭಾವನೆಯು ತೆರೆದು
ಮಾತು ಮಾತು ಮಥಿಸಿ ಸಂಕಷ್ಟ ದಹಿಸಿ
ಕೂಲಿನಾಲಿ ಮಾಡಿ ಕಾರ್ಮಿಕರು ಹಾಡಿ
ಕೋಟಿ ಕೋಟಿ ಗೀತ ಮೊಳಗಿತೋ !

ನೀತಿ ನೀಯತ್ತು ಬಿಡದೆ ಪ್ರೀತಿ ಗಮ್ಮತ್ತಿನಿಂದೇ
ಹರಕು ಗುಡಿಸಲಲ್ಲೂ ಮುರುಕು ಮಡಕೆಯಲ್ಲೂ
ಕಪ್ಪು ಜನರ ಕೆಂಪು ಕಾವ್ಯ
ಅಸಮಾನ್ಯ ಹೃದಯ ಭಾಷ್ಯ !

ಸೂರ್ಯ ಮೂಡಿದಂತೆ, ಹೂವು ಅರಳಿದಂತೆ...
ಗಾಳಿ ಬೀಸಿದಂತೆ, ಚಿಲುಮೆ ಉಕ್ಕಿದಂತೆ...
ನದಿ ಧುಮುಕಿದಂತೆ, ಗುಡುಗು ಗುಡುಗಿದಂತೆ
ಹೊಸ ಸಹಸ್ರಮಾನಕ್ಕೆ ವೈಚಾರಿಕ ಗೀತೆ–

ಬರೆವ ಕವಿಯ ನೋಡೋ
ಮೈದುಂಬಿ ನೀನು ಹಾಡೋ !
ಹಾಡೋ ಕವಿಯೇ ಹಾಡೋ
ಯುಗ ಯುಗದ ಹಾಡ ಹಾಡೋ !

* * * *

## ಮಾಗಿದಾಗ...

ಸುಖದ ಸುಪ್ಪತ್ತಿಗೆಯಲ್ಲಿ ಓಲಾಡ ಬೇಕಾದವನು
ತೇಲಾಡಬೇಕಾದವನು ಹಾರಾಡಬೇಕಾದವನು
ಹೋರಾಡಿದೆ ಮೂಲಭೂತ ಅಗತ್ಯಗಳಿಗೆ–

ಕೊಡುಗೈ ದೊರೆಯಾಗಿ ಮೆರೆಯಬೇಕಾದವನು
ಹೊಸ ಶಕೆ ತೆರೆಯಬೇಕಾದವನು
ಇತಿಹಾಸ ಬರೆಯ ಬೇಕಾದವನು

ಯಾಚಕನಾಗೆ ಅನ್ಯರ ಮುಂದೆ
ಕನಿಷ್ಟನಾದೆ ಶ್ರೇಷ್ಠರ ಮುಂದೆ
ತರಗೆಲೆಯಾದೆ ತುಂಬು ಘನತೆಯ ಮುಂದೆ !

ಇಂದು ಪೈಸೆ ಇಲ್ಲ ಜೇಬಿನಲ್ಲಿ
ವರಮಾನವಿಲ್ಲ ಯಾವುದೇ ಬಾಬಿನಲ್ಲಿ
ನೀರಿಲ್ಲ ಶಕ್ತಿ ಸಂಚಯದ ಕೆರೆ ತೂಬಿನಲ್ಲಿ
ಒಂದಾಗಲೂ ಇಲ್ಲ ಮಾಬಿನಲ್ಲಿ
ಬೀಗಲಿಲ್ಲ ಬಂಗಾರದ ಡಾಬಿನಲ್ಲಿ
ಮಾಗಿದ್ದೇನೆ ನೈರಾಶ್ಯದ ಅಗ್ನಿಕುಂಡದ ಅನುಭವದ ಕುಲುಮೆಯಲ್ಲಿ

* * * *

## ಅಂದಚೆಂದದ ಬಗೆ ಬಗೆ

ಎಂಥೆಂಥ ಋತುಗಳು ಬಂದು ಹೋದರೂ
ಇಂಥ ಋತು ಇನ್ನಿಲ್ಲವೋ–ವಸಂತ–ಬಂದಬಗೆಚೆಂದವೋ !

ಬೆಂದ ಅವನಿ ತಾಯ್ಗೆ ಚಂದನ ಲೇಪಿಸಿ
ಮೌನಿ ಅಳಿ ಗಿಳಿಗಳಿಗೆ ಮಾತು ಕಲಿಸಿ
ಒಣಗಿನಿಂತ ತರುಗಿಡದ ಒಡಲಿಗೆ ಹೂಗೊಂಚಲಿರಿಸಿ
ನಿದ್ದೆ ಹೊಡೆದ ಪರಪುಟ್ಟನ ತಟ್ಟಿ ಎಚ್ಚರಿಸಿ
ವಸಂತ ಬಂದ ಬಗೆ ಬಗೆ ಚೆಂದವೋ !

ಸುಮ್ಮನಿದ್ದ ನಲ್ಲ–ನಲ್ಲೆಗೆ ಅನುರಾಗ ಕಲಿಸಿ
ಮಂಕಾಗಿದ್ದ ನೇಸರಿಗೆ ತೇಜಸಿರಿಯನ್ನು ಉಣಿಸಿ
ಹಳ್ಳಿ ಹಳ್ಳಿಗೆ ಹಬ್ಬ ಮಾಡೋ ಸ್ವರ್ಗಾನೇ ಇಲ್ಲಿಗೇನೆ ಇಳಿಸಿ...
ವಸಂತ ಬಂದ ಬಗೆ ಬಗೆ ಅಂದವೋ !

* * * *

# ಕನ್ನಡ ರಾಜ್ಯೋತ್ಸವ

ಕನ್ನಡ ನಾಡಿನಲ್ಲೇ ಕನ್ನಡಕೆ ಕಿಮ್ಮತ್ತಲ್ಲ !
ನಾವು ಗುಡುಗುತ್ತೀವಿ ಊರಲ್ಲೆಲ್ಲಾ
ಸುಮ್ಮನೆ ಸಿಡುಕತ್ತೀವಿ ಬಹಳ ! ಬಹಳ !

ಮನೆ ಫಲಕ ಇಂಗ್ಲೀಷು, ಬೀದಿ ಫಲಕ ಇಂಗ್ಲೀಷು
ಆಚರಿಸುತ್ತೀವಿ ರಾಜ್ಯೋತ್ಸವ ಎಲ್ಲಾ !
ನಮ್ಮ ಸಹಿಯೂ ಇಂಗ್ಲೀಷು, ಅಭಿರುಚಿಯೂ ಇಂಗ್ಲೀಷು
ನಾವು ಅಪ್ಪಟ ಕನ್ನಡಿಗರೆಲ್ಲಾ !

ನಮ್ಮ ಮಕ್ಕಳಿಗೆ ಇಂಗ್ಲೀಷ್, ಕಾನ್ವೆಂಟಿನ ಇಂಗ್ಲೀಷ್
ನಮಗಿಹುದು ಕನ್ನಡ ಮೂಲ !
ಅನ್ಯ ಭಾಷೆ ನಮ್ಮ ಬಾಲ !

ನಮ್ಮ ಡ್ರೆಸ್ಸು ವಿದೇಶದ್ದು, ನಮ್ಮ ಸ್ಟೈಲು ವಿದೇಶದ್ದು
ನಮ್ಮ ಕನ್ನಡ ನೆಲವೋ ಉಜ್ವಲ
ನಮ್ಮ, ಮಾತು ಕತೆಯೂ ಆಂಗ್ಲ !

ನೀವು ಎಲ್ಲೇ ಹುಡುಕಿ, ಮನೆ ಎಲ್ಲಾ ತಡಕಿ–
ಪೂರಾ ಫಾರಿನ್ನಮಯವೇ ಎಲ್ಲಾ
ಅಲ್ಲಿ ಕನ್ನಡ ಮಾತ್ರ ಇಲ್ಲಾ !

ನಮ್ಮ ರಾಜ್ಯೋತ್ಸವ ಪ್ರೀತಿ ಧವಳ
ನಮ್ಮ ನಾಡ ಪ್ರೇಮ ಬಹಳ

ನೀನು ಕಂ ಮ್ಯಾನ್ ಇಲ್ಲಿ, ನೀನು ಗೋ ಮ್ಯಾನ್ ಅಲ್ಲಿ
ನಾವು ಷೋ ಮ್ಯಾನ್ ಕನ್ನಡದಲ್ಲಿ
ರಾಜ್ಯೋತ್ಸವ ಮಾತ್ರ ಜೋರು ಇಲ್ಲಿ

ಅನ್ಯರು ಮೆರೆಯೋದೆ ನಮ್ಮ ನಾಡಲ್ಲಿ
ನಾವು ಬದುಕಿದ್ದೇ ಭಾಗ್ಯ ಇಲ್ಲಿ !

* * * *

## ಚಂಡಮಾರುತ

ಕುಂಭಕೋಣ ಮಾಡಿತ್ತು ಚಂಡಮಾರುತ
ಲಕ್ಷ್ಮಣ ರೇಖೆ ದಾಟಿತ್ತು ಬಿರುಮಳೆ ಚಚ್ಚುತ್ತಾ....
ಕತ್ತಿಮಸೆದು ಸಿಡಿಯಿತು ಸಿಡಿಲು ಕೆರಳುತಾ...
ಕಹಳೆಯೂದಿ ಮೊರೆಯಿತು ಜಲಪ್ರಳುವಾಗುತಾ...
ಜಗ ನಡುಗಿತು ಗಡಗಡ ಭೂಕಂಪ ಸಾರುತಾ..
ಹೆಣ ಹೆಣ ಹೆಣರಾಶಿಯೇ ದೈವ ಜಗದ ದ್ವೇಷಿಯೇ?
ತೊರೆಯೇರಿತು ತೆರಯುಕ್ಕಿತು
ಅಲೆ ಅಲೆ ಭೋರ್ಗರೆಯುತಾ
ಬೆಚ್ಚಿತು ಇಳೆ ಅದುರಿತ ನೆಲೆ
ಚೆದುರಿತು ನೆಚ್ಚು ಕಾರ್ಮಳೆ ಹುಚ್ಚು

ಉತ್ಸಾಹದ ಕತೆ ಮುಗಿಯಿತು
ಉಸಿರ್ಗಟ್ಟಿದ ವ್ಯಥೆ ಜಡಿಯಿತು
ಮಳೆ ಮಳೆ ಮಳೆ ಜಡಿಯಿತು
ಕ್ಷಣ ಕ್ಷಣ ಭುವಿ ಬಿರಿಯಿತು
ನಿರಾಶೆ ಸಹಿಯ ಹಾಕಿತು
ಬದುಕಿದ ಜನ ಕೊರಗಿತು
ಭರವಸೆ ಬೆಳಕಿನ ಪ್ರಗತಿ ಚರಿತ್ರೆ ಸತ್ತಿತು !

* * * *

## ವಸಂತೋತ್ಸವ

ನಮ್ಮ ಸಂಸ್ಕೃತಿ ಆಲದ ಮರ
ಅಲ್ಲಿ ಯುಗಾದಿ ಸಂಭ್ರಮ ಸಡಗರ;

ಬವಣೆ ಇದ್ದದ್ದೇ ಇತಿಶ್ರೀ ಹಾಡು
ಹಬ್ಬದಾಚರಣೆ ಮಾಡೋದ ನೋಡು!

ಭಂಗ ಬಡತನ ಎಲ್ಲಿಲ್ಲ ಹೇಳು?
ಶ್ರೀರಾಮನವಮಿ ಬಂದೀತು ತಾಳು–

ಕೋಸುಂಬರಿ ತಿಂದು ಪಾನಕ ಕುಡಿ
ವಸಂತ್ಸೋತ್ಸವ ಕಾಣು, ನಡಿ !

ಅಂತರಂಗದ ಪದವ ಹರಿಸು
ಮಯೂರ ನೀನಾಗಿ ಮುಕ್ತ ನರ್ತಿಸಿ !

ಎಲ್ಲಿ ಹೃನ್ಮನ ವಿಶಾಲವಾಯ್ತೋ
ಅಲ್ಲಿ ಹಬ್ಬ ನಡೆದಂತಾಯ್ತು !

* * * *

## ಪ್ರೀತಿಯ ಮೂಲ

ಪ್ರೀತಿ ಹಿರಿದು ಎಂದು ಹೇಳುವುದು ಸುಲಭ
ಪ್ರೀತಿಸುವುದೇ ಕಷ್ಟ
ಕಾಮಿಸುವುದೇ ಇಷ್ಟ
ಪ್ರೇಮ ಕಾಮದ ಮರ್ಮ ಅರಿತವರೇ ದುರ್ಲಭ.

ಪ್ರೀತಿಯಲ್ಲಿ ನಿಸ್ವಾರ್ಥ ನೀಲಿಮಾ ಗಗನವಿದೆ
ಅದನು ಹೊರತು ಪಡಿಸೆ ಸ್ವಾರ್ಥವಿದೆ,
ಪ್ರೀತಿಯಲ್ಲಿ ತ್ಯಾಗದಾ ಹೆಗ್ಗಡಲೂ ತುಂಬಿದೆ
ಅದನೇ ಮರೆತರೆ ಪ್ರೀತಿ ಇನ್ನೆಲ್ಲಿದೆ !

ಪ್ರೀತಿ ಚಂದನ ಕಾಣೋ ಪ್ರೀತಿ ರಿಂಗಣ ಕಾಣೋ
ಪ್ರೀತಿ ಪರಸ್ಪರ ವಿನಿಮಯ ಕಾಣೋ
ನೀ ಕೊಡದೆ ಅದು ಸಿಗದು, ನಿರೀಕ್ಷೆಯೇನೀತಿಯೇನೊ !
ನಿನ್ನ ನೀ ಸುಟ್ಟುಕೋ ಅಲ್ಲಿದೆ ಪ್ರೀತಿ ಹುಟ್ಟು !
ಕಂಡುಕೊ ನೀನು !

* * * *

## ಪುನರುತ್ಥಾನ ಪ್ರಗಾಥ

ಯಾರೂ ಸರಿಪಡಿಸಲಾಗದ ವಿಕ್ಷಿಪ್ತ ರೀತಿ
ಜಗತ್ತು ಕೆಟ್ಟು ಹೋಗಿತ್ತು,
ಎಲ್ಲ ಬಂಧ ಹಳಸಿ ಎಲ್ಲ ತಾಣ ಹೊಲಸಾಗಿ ಅಧ್ವಾನವಾಗಿ
ಹೊಸತು ಹುಟ್ಟು ಬೇಕಿತ್ತು !

ಯಾವ ಕಡೆ ನೋಡಲಿ ಆ ಕಡೆ ಹಿಂಸೆ
ಸುತ್ತ ತುಂಬಿ ತುಳುಕುತ್ತಿತ್ತು...
ಧರೆಯು ಹೊತ್ತಿ ಉರಿಯುತಿತ್ತು !
ನುಡಿಯಲ್ಲಿ ಸಟೆಯು ನಡೆಯಲ್ಲಿ ವಂಚನೆ
ಆಚಾರವಿರದೆ ವಿಚಾರವೂ ಮೂಡದೆ
ನರ ಮಾನವರೆಲ್ಲ ಭ್ರಷ್ಟರಾದ ಕಾಲ
ಅನೀತಿ ಅಧರ್ಮ ಅನ್ಯಾಯದ ಬಾಲ

ಅವ್ಯಕ್ತನೂ ರೋಸಿ ಹೋಗಿದ್ದ
ಯುಗಧರ್ಮ ಗಾಸಿ ಅಗಿದ್ದ !
ಹುಟ್ಟು ಪವಿತ್ರವಿತ್ತು
ವಿಕಾಶ ವ್ರತದಲ್ಲಿತ್ತು
ಎಲ್ಲ ಕ್ರಮದಲ್ಲಿತ್ತು
ನಿಯಮ ಬೇಲಿ ಇತ್ತು
ನರನು ಹಕ್ಕಿಯಾಗ ಹೊರಟ
ಬೇಲಿ ಜಿಗಿಯ ಹೊರಟ
ಧರ್ಮ–ಮಾರ್ಗ ಮರೆಯ ಹೊರಟ
ಅನಾಚಾರ ತಾಂಡವವಾಡ ತೊಡಗಿತು !

* * * *

## ಒಗ್ಗಟ್ಟಿನಲ್ಲಿ ಬಲ

ಒಂದೇ ತಾಯಿಯ ಮಕ್ಕಳು ನಾವು
ಬೇರಾಗಿ ಹೋದರೆ ಅಂದೇ ಸಾವು !

ಮಹಾಭಾರತದ ಕಥೆಯನು ತಿಳಿದೂ
ಕಚ್ಚಾಡಿಕೊಂಡರೇ ನೋವಿನ ಸಿಂಧು !

ನಾವೂ–ನೀವೂ ಎಂದೆಂದೂ ಒಂದೇ
ರವಿ ಶಶಿ ಇರುವನಕ ಕರ್ನಾಟಕ ಒಂದೇ !

ಒಗ್ಗಟ್ಟಿನಲ್ಲಿರೆ ಅದೇ ನಮ್ಮ ಬಲವು
ಅಖಂಡ ಕರ್ನಾಟಕ ಅದೇ ನಮ್ಮ ನಿಲುವು !

ಹರಿದು ಹಂಚಿಹೋದರೆ ಬದುಕೆಲ್ಲ ನೋವು
ಒಂದಾಗಿ ಬಾಳಿದರೆ ಕನ್ನಡದ ಗೆಲವು !

ಎತ್ತು ಏರಿಗೆಳೆಯೆ, ಕೋಣ ನೀರಿಗೆಳೆಯೆ
ಎಲ್ಲಾದರೂ ಬದುಕು ಚೆಂದವೇನು ?

ಕೂಡಿ ಬಾಳಿ ಕೂಡಿ ನಲಿದು
ಕೂಡಿ ಉಂಡು ಬೆಳೆದರೆ
ಅಂದೇ ಕರ್ನಾಟಕ ಒಂದೆಂಬ ಚಹರೆ !

ಎಂದೂ ಕನ್ನಡಿಗರು ಒಂದಾಗಿ ಬದುಕಿರೆ
ಅನ್ಯ ಜನರಿಂದ ಆಗದು ತೊಂದರೆ.

* * * *

## ಶ್ರಮಿಕ ತಪಸ್ವಿ

ಕೋಟಿ ಬವಣೆ ಬದುಕಲಿ ಬಂದರೂ
ಬಿಡಲಾರೆ ನಾನು ನನ್ನ ಗುರಿ,
ದಿನವೂ ನಿರಾಸೆ ಪರಿ ಅಡರಿ ಮುತ್ತಿದರೂ
ಸಾಗುವೆನು ನಾನು ನನ್ನ ದಾರಿ !

ನಿಂತ ನೆಲವೇ ಕೆಳಗೆ ಕುಸಿದು ಹೋದರೂ
ಅಂಜಲಾರೆ ಎಂದೂ ನಾನು;
ತಲೆಯ ಮೇಲೆ ಬಾನು ಕಳಚಿಬಿದ್ದರೂ
ನನ್ನ ಕಾಯಕ ನನ್ನ ದೇವರು !

ಯಾರು ಏನೇ ಅಂದರೂ, ನಿತ್ಯ ಕಹಿಯ ಉಂಡರೂ
ನನ್ನ ಪಯಣ ನನಗೆ ಖುಷಿಯು
ದುಡಿಮೆಯೇ ಸ್ವರ್ಗ, ದುಡಿಮೆಯೇ ಮಾರ್ಗ
ನಾ ಶ್ರಮಿಸಿ ಬಾಳೋ ಋಷಿಯು !

ಈಟಿ ಭರ್ಜಿ ಮೈ ಚುಚ್ಚಿದರೂ
ಸರಿಯಲಾರೆ ಹಿಂದಕೆ ಎಂದೂ ಹೆದರಿ ;
ಪೋಟಿ ಸಾವಿರ ಎದುರೇ ಆದರೂ
ದಾಟಿ ಹೋಗುವೆನು ಅರಸಿ ಗುರಿ !

ಮೇಟಿ ಬದುಕಿಗೆ ಹರಿಸಿ ಬೆವರು
ಹೋರಾಡಿದೆ ಜೀವ ಪ್ರೀತಿಯ ತೋರಿ,
ಘಾಟಿಯಾಗಿಯೇ ಸೆಣೆಸಿ ಉಸಿರು
ಬಾಳಿ ಬದುಕುವುದೇ ಶ್ರಮಿಕನ ಹೆಸರು !

* * * *

## ಎಲ್ಲಾ ಅವನ ದಯೆ !

ಅಂಧಕಾರದಲ್ಲಿ ಯಾರೂ ಬದುಕಲಾಗದು
ಬೆಳಕಿದ್ದರೆ ಬಾಳು ಎಂಬುದು ಸತ್ಯವೇ ಅಹುದು ;

"ಬೆಳಕು ಬರಲಿ" ಎಂದ ದೇವ
ಬೆಳಕಾಯಿತು ಭವ!
ಬೆಳಕಿಗೆ ಹಗಲೆಂದ ದೇವ
ಇರುಳಿಗೆ ತಿಮಿರು ಸ್ವಭಾವ!

ಅಂಬರ ಮೂಡಲಿ ಎಂದ ದೇವ
ಗಗನ ಮೂಡಿ ಆಯ್ತು ದಿವ;
ಭವಿಯೇ ಪಲ್ಲವಿಸು ಎಂದ ದೇವ
ವಸುಧೆಗೆ ಬಂತು ಜೀವ!

ಜಲವೆಲ್ಲ ಒಟ್ಟಾಗಲಿ ಎಂದ ದೇವ
ಸಾಗರ ಕೂಡಿ ಪ್ರಭವ
ತರುಲತೆ ಹಬ್ಬಲಿ ಎಂದ ದೇವ
ಕಾನನ ಬೆಳೆದು ವಿಭವ!

ದೈವ ಇದ್ದರೆ ಈ ಜಗವೇ ಎಲ್ಲಾ
ದೇವರಿಲ್ಲದೆ ಇಲ್ಲಿ ಏನೂ ಇಲ್ಲಾ !

* * * *

## ದೀವಳಿಗೆಯ ಹಾಡು

ಅನುದಿನ ಮನ ಮಿಡಿದಿದೆ
ಬೆಳಕಿನ ಪ್ರಭೆಗೆ
ಅನುಕ್ಷಣ ತನು ನುಡಿದಿದೆ
ಕಿರಣದ ಕಡೆಗೆ
ಹೊಂಗಿರಣದ ಎಡೆಗೆ!

ತಂದ ಬಸಿರ ಬಗೆಯವಲ್ಲಿ
ಅಜ್ಞಾನ ತಿಮಿರ ತೆಗೆಯುವಲ್ಲಿ–

ಅಕ್ಷರಕ್ಷರ ಜ್ಯೋತಿರ್ದೀಪ ಹೊಂಬೆಳಕನು ಚೆಲ್ಲುವಲ್ಲಿ
ಬರೆಯಲಿ ದೀವಳಿಗೆಯ ದೇದೀಪ್ಯಮಾನ ರಂಗವಲ್ಲಿ;

ಮೌಢ್ಯವೆಂಬ ಮಾರಿಯನ್ನು ರಶ್ಮಿರಾಜ ದೂರ ಮಾಡಲಿ
ದಾರಿದ್ರ್ಯ ನಿಜ ಶೃಂಖಲೆ ಚೂರು ಚೂರಾಗಲಿ ಬೆಳಕಿನಲ್ಲಿ–

ಮನೆ ಮನೆಯಲಿ ಹಣತೆ ಸಾಲು ಬೆಳ್ಳಂಬೆಳಗು ಬೆಳಗಲಿ
ಮನ ಮನದಲಿ ಹೊಸವಿಚಾರ ನಿರಂತರವೂ ಮಿನುಗಲಿ.

ದ್ವೇಷದ ಖಡ್ಗ ಖಡ್ಗದಾರ್ಪು ಮೂಲೆಯಲ್ಲಿ ಅಡಗಲಿ
ಪ್ರೀತಿಯ ಸಿರಿ ಜ್ಯೋತಿರ್ಮಾಲೆ ದೇಶ ವಿದೇಶ ಹರಡಲಿ;

ತಾರತಮ್ಯದ ಉಕ್ಕಿನ ಪರದೆ ತುಂಡು ತುಂಡಾಗಲಿ ಒಮ್ಮೆಗೆ
ತಿಳಿಬೆಳಕಿನ ಸಿರಿ ಪ್ರತಿಫಲಿಸಲಿ ನಿತ್ಯ ನಿತ್ಯ ಜಗದೊಳಗೆ–

ವರ್ಗ ವರ್ಣ ಭೇದ ಭಾವ ಪೂರಾ ಅಳಿದು ಹೋಗಲಿ
ಮೂಡಲಿ ಹೊಸತು ದೀವಳಿಗೆ ನಮ್ಮ ನಿಮ್ಮ ಬಾಳಲಿ...

ಸ್ನೇಹ ಪ್ರೀತಿ ವಿಶ್ವಾಸ ಜ್ಯೋತಿ ಮತ್ತೆ ಮತ್ತೆ ಪ್ರಜ್ವಲಿಸಲಿ
ಎಲ್ಲೆಲ್ಲೂ ಅಡಿಗಡಿಗೆ ಪಲ್ಲವಿಸಲಿ ಬೆಳಕಿನ ಸಿರಿ ರಂಗವಲ್ಲಿ !

* * * *

# ಗುರಿ

ಎಲ್ಲ ನದಿಯ ಗುರಿಯು ಒಂದೇ
ಕಡಲ ಸೇರುವುದು
ಎಲ್ಲ ಬದುಕ ಸಿರಿಯು ಒಂದೇ
ಸುಖವಾಗಿರುವುದು !

ಎಲ್ಲ ಕೆಲಸ ಮೂಲ ಒಂದೇ
ದುಡಿಮೆ ಮಾಡುವುದು
ಎಲ್ಲ ದುಡಿಮೆ ಬೆಲೆಯ ಒಂದೇ
ನೆಮ್ಮದಿ ಕಾಣುವುದು

ಬೀಳೋ ಮಳೆಯ ಗುರಿಯೊಂದೇ
ಬುವಿಯ ಕೂಡುವುದು
ಬುವಿ ನಗುವ ಪರಿಯೊಂದೇ
ಬೆಳೆಯ ಕೊಡುವುದು !

* * * *

## ಜೀವನ ಸಂಗ್ರಾಮ

ಪ್ರೇಮದಲ್ಲಿ ಸ್ವರ್ಗವಿದೆ
ಪ್ರೇಮ ಪ್ರೇಮ ಪ್ರೇಮವೆನಲು ನಗು
ಪ್ರೇಮ ಪಲ್ಲವಿ ನಾಜೂಕು
ಪ್ರೇಮ ವ್ಯಕ್ತಿ, ವ್ಯಕ್ತಿಯ ನಡುವೆ
ಎಂದೆಂದೂ ಹೊಂದಿಸುತ್ತೆ;

ಕಾಮದಲ್ಲಿ ನರಕವಿದೆ
ಕಾಮ ಕಾಮವೆಂದು ಹಾತೊರೆಯಲು ಅಳು
ಕಾಮ ಸಂಗ ಸಹವಾಸ ಒರಟು
ಕಾಮ ಬದುಕು ಬದುಕಗಳನ್ನೇ
ಕ್ರಮ ಕ್ರಮೇಣ ನಂದಿಸುತ್ತೆ !

ಪ್ರೇಮದಲ್ಲಿ ಆರಾಮವಿದೆ
ಕಾಮದಲ್ಲಿ ವಿರಾಮವಿದೆ
ಪ್ರೇಮ ಕಾಮದ ಮೈತ್ರಿಯಲ್ಲೂ
ಜೀವನ ಸಂಗ್ರಾಮವಿದೆ !

* * * *

# ನಿರಾಕರಣೆ

ತುಂಡು ಲಂಗದ ಹುಡುಗಿ
ಕಂಡ=
ಮೊಂಡು ಮನಸಿನ ತುಡುಗ
ನೀ ಬೆಡಗಿ ಎಂದ
ನೀ ಸೊಬಗಿ ಅಂದ
ನೀನೇ ನನ್ನ ಸಂಗಾತಿ
ಅಂಗೀಕರಿಸೆಂದ !

ಬಂಡಿಗಟ್ಟಲೆ ಮಾತು ಕೇಳಿದ
ತುಡುಗಿ ಹೇಳಿದ್ದೇ ಒಂದು ಚೆಂದ:
"ಓ ! ಬೆಡಗ
ನಿನ್ನ ಹಾಯಿ ಹಡಗ
ನನ್ನ ಕಡೆ ತರಬೇಡ
ನಾ ಒಲ್ಲೆ ನಿನ್ನ
ನಾ ಒಲ್ಲೆ ನಿನ್ನ !
ನಿನಗಿದೋ ನನ್ನ ನಿರಾಕರಣೆ ಕಾಗದ"!

* * * *

# ಅಪೂರ್ವ ಫಲಶೃತಿ

ಅರಿಯದ ಚೇತನ ಅನುದಿನ ನಮ್ಮನ್ನು
ಮುಂದಕೆ ನಡೆಸುತಿದೆ,
ಬರೆಯದ ಬಾಳಿನ ಸುವರ್ಣ ಪುಟವನು
ಅನುಕ್ಷಣ ಬರೆಯುತಿದೆ !

ದೂರದ ಬಾನಿನ ಬೆಳ್ಳಿಯ ಬೆಳಕೊಂದು
ದಾರಿಯ ತೋರುತಿದೆ
ಸುಂದರ ಸ್ವಪ್ನದ ಅಪೂರ್ವ ಮಿಂಚೊಂದು
ಹತ್ತಿರ ಕರೆಯುತಿದೆ !

ಊಹಿಸಲಾಗದ ಅನನ್ಯ ಕೈಯೊಂದು
ಬಾಗಿಲ ತೆರೆಯುತಿದೆ
ಎಲ್ಲಿಯದೋ ಬಂಧ ಎಂದಿನದೋ ಸ್ನೇಹ
ಫಲಶೃತಿ ನೀಡುತಿದೆ!

* * * *

## ಬಾನ ಸೂರ್ಯ

ದಿನ ದಿನ ಬಂದೇ ಬರುವ–
ಬಾನಲಿ ಸೂರ್ಯ,
ಕ್ಷಣ ಕ್ಷಣ ಮಾಡತ ಇರುವ
ತನ್ನಯ ಕಾರ್ಯ !

ಆಕಾಶ ತುಂಬ ಮೋಡಗಳೆಲ್ಲ–
ಕೋಟೆ ಕಟ್ಟಿದರೂ,
ಎಲ್ಲೆಲ್ಲೂ ಕತ್ತಲೆ ಬಹಳ
ಹಬ್ಬಿ ತಬ್ಬಿದರೂ..,

ದಿನ ದಿನ ಬಂದೇ ಬರುವ
ಬಾನಲಿ ಸೂರ್ಯ!

ಹಗಲು ಇರುಳು ಮರೆಸೋ ಹಾಗೆ–
ಮಳೆಯೇ ಸುರಿದರೂ
ಸುತ್ತಮುತ್ತ ಬೇಳಕೇ ಪೂರಾ
ಬತ್ತಿಹೋದರೂ..
ದಿನ ದಿನ ಬಂದೇ ಬರುವ
ಬಾನಲಿ ಸೂರ್ಯ
ಕ್ಷಣ ಕ್ಷಣ ಮಾಡುತ ಇರುವ
ತನ್ನಯ ಕಾರ್ಯ !

* * * *

# ಸಂಬಂಧಗಳು

ಬಾಡುತ್ತವೆ ಪೂಜೆಗಿಟ್ಟ
ನಳ ನಳಿಸುವ ಹೂವು–
ಒಡೆಯುತ್ತವೆ ಜೋಡಿಸಿಟ್ಟ
ಕುಸುರು ಕಲಾ ಮಡಕೆಗಳು,
ಕೆಟ್ಟು ನಿಲ್ಲುತ್ತವೆ ಕೀ ಕೊಟ್ಟ
ಕರಾರುವಾಕ್ ಯಂತ್ರಗಳು–
ಬಣ್ಣಗೆಡುತ್ತವೆ ಅಂದ ಚೆಂದದ
ಸಿಂಗಾರಗೊಂಡ ಗೋಡೆಗಳು,
ನಿಲ್ಲುತ್ತವೆ ಗಡಿಯಾರಗಳು
ಕೊಳೆಯುತ್ತವೆ ಕಾಯಿಗಳು
ಹಳಸುತ್ತವೆ ತಿಂಡಿಗಳು
ದೂರಾಗುತ್ತವೆ ಮಕ್ಕಳು
ಸರಿಯುತ್ತವೆ ದಿನಗಳು !

* * * *

## ಬಾಳಿನ ಬೆಳಕು

ನನ್ನ ಗೀತೆ ಹಾಲು–ಜೇನು
ರಸಿಕ ಜನಕೆ ಭೂಮಿ–ಭಾನು!
ಪದ ಪದವೂ ರಂಗಿನ ಹೂವು
ಸವಿನ ಮನಕೆ ಇರದು ನೋವು!
ನನ್ನ ಗೀತೆ ದುಡಿಮೆ ಬೆವರು
ಸೃಜನಶೀಲತೆ ನಿತ್ಯ ಹಸಿರು;
ಸಾಲು ಸಾಲೂ ವಾಗರ್ಥ ತೊಟ್ಟಿಲು
ಅಭಿಮಾನಿ ಜನರ ಹೃದಯ ಮುಟ್ಟಲು!
ನನ್ನ ಗೀತೆ ಕಾಮನ ಬಿಲ್ಲು
ಆನಂದ ಕೊಡುವ ರಮ್ಯತೆ ಮಡಿಲು'
ಪಲ್ಲವಿಯಲ್ಲೇ ಭಾವದ ಹೊನಲು
ಚರಣ ಚರಣದಲ್ಲೂ ಕಾವ್ಯ ಕಡಲು!
ನನ್ನ ಗೀತೆ ಸಾಂತ್ವನದೊಸಗೆ
ಕಂಬನಿ ಒರೆಸುವ ಕಲೆಯ ಬಗೆ;
ಸ್ಫೂರ್ತಿಯ ಕೊಡುವುದು ಮನಸಿಗೆ
ಬೆಳಕಾಗುವುದು ಭವಿಯ ಬಾಳಿಗೆ!

* * * *

## ರೈತಾಪಿಗಳ ರಾಗ–ತಾಳ

ಬಂಗಾರ ಭೂಮಿ ನಮ್ಮದೇನೇ!
ಈ ಬಂಗಾರ ಭೂಮಿ ನಮ್ಮದೇನೇ!
ಜೀವ ನದಿ ಹರಿವ, ಜನತೆ ಒಲವಿರುವ, ಬೆವರ ಬೆಳೆ ತೆಗೆವ
ಪುಣ್ಯ ತಾಣವೇನೆ!
ವ್ಯೋಮದೊಡಲಿಂದ, ತಂಪು ಮಳೆಯಾಗಿ, ಇಳೆಗೆ ವರವಾಗಿ
ವರ್ಷ ಸುರಿಯೆ ಜೇನೇ
ಭುವಿಗೆ ಸುಗ್ಗಿ ಹೊನ್ನೇ!
ಹಗಲು ಇರುಳೆನದೆ, ಶ್ರಮದ ಸುಧೆ ಸುರಿಸಿ, ಕೃಷಿಯ ವರ ಇರಿಸಿ
ಗೆಯ್ಮೆ ಮಾಡಿದರೇನೆ
ಕಣದ ರಾಶಿ ಶಾನೆ;
ನಂಬಿ ನೆಲದಾಯಿ, ಮೊಸರು ಕೈಬಾಯಿ, ಹಿಗ್ಗಿ ಹೂ ಮೈಯಿ
ನಲಿವು ಮೇಳವೇನೆ
ಬಾಳು ರಾಗತಾಳವೇನೆ;
ಗಂಟೆ ಸ್ವರವು ಟಿಂಟಿಣಿಯೇನೆ
ರೈತಾಪಿಗೆ ಇರವು ರಂಗೇನೇ

* * * *

## ಪ್ರೀತಿ: ವಿಶ್ವರೂಪಿ

ಎಲ್ಲಿ ಹಿರಿಯರ ಬಗೆಗೆ
ಅಭಿಮಾನವಿಹುದೋ–
ಅಲ್ಲಿಹುದು ಅನಂತ ಪ್ರೀತಿ
ಹೃನ್ಮನವ ಭಾವ ರೀತಿ;
ಎಲ್ಲಿ ವ್ಯಕ್ತಿಯ ಬಗೆಗೆ
ಗೌರವವು ಇಹುದೋ–
ಅಲ್ಲಿ ಪೂಜನೀಯ ಪ್ರೀತಿ
ಅದು ಅಂತರಂಗ ಪ್ರಣತಿ!
ಎಲ್ಲಿ ಜೀವದ ಬಗೆಗೆ
ಅಕ್ಕರೆಯು ಇಹುದೋ
ಅಲ್ಲಿ ಅದ್ವಿತೀಯ ಅರ್ತಿ
ಅದು ಚಿರಂತನ ಜ್ಯೋತಿ!
ಎಲ್ಲಿ ಸಾಧನೆ ಬಗೆಗೆ
ಮೆಚ್ಚುಗೆಯು ಬಹುದೋ
ಅಲ್ಲಿ ಹಸಿರೋ ಹಸಿರು ಪ್ರೀತಿ
ಅದು ವಿಶ್ವರೂಪಿ ಪ್ರಕೃತಿ

* * * *

# ಭಯೋತ್ಪಾದಕರು

ಎಲ್ಲರನ್ನೂ ಗುಮಾನಿ ಕಣ್ಣುಗಳಿಂದಲೇ–
ನೋಡುವ ಕಾಲ ಇದು,
ಮಾರುಕಟ್ಟೆ, ಹೋಟೆಲು, ಬೀದಿ
ಪಾರ್ಕು, ಸಂತೆ, ಬಸ್ ಸ್ಟ್ಯಾಂಡ್ ಎಲ್ಲ ಕಡೆ
ನಿಮ್ಮ ಬದಿಯಲ್ಲಿ ನಿಂತವರನ್ನೂ
ಗುಮಾನಿಯಿಂದ ಅಳೆಯುವ ಕಾಲ ಇದು–
ನಾನು ನೀನು ಅವನು ಇವನು
ಅವಳು ಇವಳು ಒಟ್ಟಾರೆ ಜನ ಬದುಕಬೇಕಲ್ಲ!

ಪತ್ರಿಕೆಗಳಲ್ಲಿ ವಿವಿಧ ವಾಹಿನಿಗಳಲ್ಲಿ
ಎಲ್ಲ ಮಾಧ್ಯಮಗಳಲ್ಲಿ ಒಂದೇ ಸುದ್ದಿ....
ಬಾಂಬ್ ಸ್ಫೋಟ! ಥೂ ಯಾಕೆ ಬಂತು ಇಂಥ ಅನಿಷ್ಟ ?
ಜಗತ್ತಿಗೆ ಜಗತ್ತು ಕಾಣುತ್ತಿದೆ ದುರದೃಷ್ಟ

ಸತ್ತವನು ನತದೃಷ್ಟ ! ಕೊಂದವನು ಪಾಪಿಷ್ಟ !
ಎಲ್ಲಿ ಅಡಗಿದೆಯೋ ಬಿನ್ ಲ್ಯಾಡೆನ್ ಸಂತಾನ
ಬೀದಿಯಲ್ಲಿ ಚೀಲ ಕಂಡರೆ ಜೋಪಾನ
ಭಯೋತ್ಪಾದನೆ ತಿನ್ನುವುದೇ ಅಮಾಯರಕನ್ನ
ಸಿಡಿದೀತು ಬಾಂಬು ಜೋಪಾನ ! ಜೋಪಾನ ! ಜೋಪಾನ !

* * * *

# ಪಯಣ

ಯಾರೂ ಅರಿಯರು ಬಾಳಿನ ಪಯಣ
ಏಳು–ಬೀಳಿನ ಪಯಣವೇ ಜೀವನ!
ನಾನೂ–ನೀನೂ... ನೀನು–ನಾನು
ಅರಿಯುತ ನಡೆದರೆ, ಕಹಿಯನು ಮರೆತರ–
ಅದುವೇ ಮೋಹನ
ಅದುವೇ ಚೇತನ!
ಎಂದೂ ತಿಳಿಯಲಾಗದು, ಇರವಿನ ಪರಿಯ–
ಪ್ರಕೃತಿಗೆ ಪುರುಷನ ಒಸಗೆಯೇ ಸನಿಯ!
ಬೆಳಗಿಂದ ಬೈಗಿನ ತನಕವೂ ದುಡಿಮೆ
ದುಡಿಮೆಯ ನಡುವೆಯೂ ಸಾಗಲಿ ಒಲುಮೆ!
ಬಯಸದೆ ಬಂದರೆ.. ಎಲ್ಲವೂ ಭಾಗ್ಯ!
ಭೂಮಿಗೆ ಕಳೆದರೆ ಮುಂಗಾರು ಮೂಡದೇ?
ಜಾತಕ ಪಕ್ಷಿಗೆ ವರ್ಷ–ಹರ್ಷ ತಾರದೇ?

* * * *

## ಅಕಳಂಕ ಪ್ರೀತಿ

ಹೀಗೆ ನೀ ತುಟಿ ಬಿಚ್ಚದೆ–
ಯಾಕೆ ಪ್ರೀತಿ ನೆಲ ಕಚ್ಚಿದೆ?
ನಿನ್ನಲ್ಲಿ ಒಳ ಒಲವಿಲ್ಲದೆ–
ನನ್ನಲ್ಲಿ ಅರ್ತಿ ಒಲವೆಲ್ಲಿದೆ?
ಕಣ್ಣಲ್ಲಿ ಕೊಂಕು ಬೀಗದೆ–
ಅಕ್ಕರೆಯಿರೆ ಮನಸು ಬಾಗದೇ?
ಮಾತಲ್ಲಿ ನಲ್ಮೆ ತುಂಬದೆ–
ಎದೆಯಲ್ಲಿ ಒಲುಮೆ ಜಲವೆಲ್ಲಿದೆ?
ಹಾತೊರೆಯಬೇಡವೇ ಪ್ರೀತಿಗೆ?
ಕಾತರವೇ ಇಲ್ಲದೆ ಪ್ರೇಮವೆಲ್ಲಿದೆ?
ಹೃದಯ ವೈಶಾಲ್ಯವಿದ್ದರೆ
ಮಾಡುವುದು ಅಕಳಂಕ ಅಕ್ಕರೆ!
ನೀ ಇರುವೆ ನನ್ನ ಹೃನ್ಮನದಲ್ಲಿ
ಅರಿವಿದ್ದರೆ ತೆರೆದುಕೋ ಮನದಲಿ
ಒಲವಿದ್ದರೆ ಕರೆದುಕೋ ಬಾಳಲಿ !

* * * *

# ದೇವಿ ಪ್ರಗಾಥ

ಒಂದು ಊರಿನಾಗೆ–ಸಣ್ಣ ಕೇರಿಯಾಗೆ
ಕಣ್ಣು ತುಂಬೋ ಹುಡುಗಿ ಇದ್ದಳೋ!
ಚಿನ್ನದಂಥ ಬೆಡಗಿ ಇದ್ದಳೋ!
ಆ ಬೆಡಗಿ ಬ್ರಾಹ್ಮಣ ಕನ್ಯೆಯೋ
ಮಂಗಳಾಂಗಿ ಮುಗ್ಧ ಮನ್ನೆಯೋ!
ಒಮ್ಮೆ ಸೇದೋ ಬಾವಿಯಿಂದ ಬೆಡಗಿ ನೀರು ಹೊತ್ತು ಬರಲು–
ಕಂಡಳೊಬ್ಬ ಹುಡುಗನನ್ನು ಅವನು ಕುಸಿದು ಬಿದ್ದು ಇರಲು–
ಹೃದಯ ಕರಗಿ ಹೋಗುತಿರಲು
ಮನಸು ತಿರುಗಿ ಬಾಡುತಿರಲು
ಉಪಚಾರ ಮಾಡಿದಳ್ಹುಡುಗೀ... ಪೂರಾ ಪ್ರೀತಿ
ತೋರಿದಳ್ಹುಡುಗೀ.
ಅವನು ಮಾದಿಗರ್ಹುಡುಗ–ಇವಳು ಬ್ರಾಹ್ಮಣ ಹುಡುಗಿ
ಅವರು ಪ್ರೀತಿಗೆ ಮಾರು ಹೋದರೋ
ತಂದೆ ಮದುವೆಯನ್ನೂ ಮಾಡಿದರೋ!
ಹುಡುಗ ಬ್ರಾಹ್ಮಣ ತಾನು ಎಂದನೋ
ಸಕಲ ವಿದ್ಯೆಯನು ಅವನು ಕಲಿತನೋ!
ದಲಿತ ಹುಡುಗ ಗಂಡನಾಗೀ, ಬ್ರಾಹ್ಮಣ ಬೆಡಗಿ ಹೆಂಡತಿಯಾಗಿ
ಸಂಸಾರ ನಡೆಸೋವಾಗ–ಹುಡುಗನ ತಾಯಿ ಬಂದಳು ಅಲ್ಲಿಗೆ–
ಹುಡುಗ ತಾಯಿಗೆ ಕಥೆಯ ಹೇಳಿದ
ನೀನು "ಮೂಗಿ" ಆಗಿರು ಎಂದ !
ಕಾಲ ಚಕ್ರ ಉರುಳುತಿತ್ತ.. ದಿನ ಹೀಗೆ ಸಾಗುತ್ತಿತ್ತು!
ಅತ್ತೆಗೆ ಸೊಸೆಯ ಸೇವೆ, ಮಗನಿಗೆ ಒಳಗೆ ಭಯವೇ...
ನಿತ್ಯ ನಾಟಕ ನಡೆಯುತಿಹುದೋ
ಸತ್ಯ ಬಯಲಾದರೆ ಏನೋ ಎಂಥದೋ
ಸೊಸೆ ಅತ್ತೆಯ ಮಾತಿಗೆಳೆದಳೋ
ಅತ್ತೆ ಮರೆತು ಬಾಯಿ ಬಿಟ್ಟಳೋ!
ನಮ್ಮ ದನದ ಮಾಂಸದ ಮುಂದೆ, ನಿನ್ನ ಅನ್ನ ಸಾರೇನು ಚೆಂದ?
ಸೊಸೆ ಅತ್ತೆಯ ಮಾತನು ಕೇಳಿ, ರಾಣ ರಂಪ ಆಯ್ತೋ ಗೆಳೆಯ?

ಯಾರು ಹೇಳಿ ನೀವು ಈಗ!
ಏನಿದೆಲ್ಲಾ ತಿಪ್ಪರಲಾಗ!
ಸೊಸೆ ಚಂಡಿ ಚಾಮುಂಡಿಯಾದಳೋ ರುದ್ರ ತಾಂಡವ ಮಾಡಿ
ನಿಂತಳೋ !
ನೀನು ಹಾಳಾಗಿ ಹೋಗೋ, ವಿದ್ಯೆ ಮರೆತು ಹೋಗೋ
ಇಲ್ಲಿಂದ ತೊಲಗಿ ಹೋಗೋ
ಕೋಣನಾಗಿ ಹುಟ್ಟು ಹೋಗೋ
ನಾ ದಂಡಿನ ಮಾರಮ್ಮನಾಗಿ ಅವತಾರವೆತ್ತಿ ಬರುವೆನೋ!
ನೀ ಮಾರಿ ಕೋಣನಾಗಿ ಬಲಿಯಾಗಿ ಸತ್ತು ಹೋಗ್ತೀಯೋ!
ನಿನ್ನ ಕೈಯಿ ನನ್ನ ಬಾಯಾಗೋ
ನನ್ನ ಶಾಪ ಫಲಸೇ ಫಲಿಸ್ತದೋ
ಹೀಗೆ ಕ್ರೂರ ಶಾಪವೇ ಬಂತೋ ದಾರುಣದ ಕಥೆಯೆ ಆಯ್ತೋ!

* * * *

# ವಿಶ್ವ ಮಾನ್ಯ ಸರ್.ಎಂ. ವಿಶ್ವೇಶ್ವರಯ್ಯ

ಅಪರೂಪದ ಬುದ್ಧಿಯ
ಅಸಾಮಾನ್ಯ ಸಿದ್ಧಿಯ
ಸರ್. ಎಂ. ವಿಶ್ವೇಶ್ವರಯ್ಯ
ನಾಡು ನಿಮ್ಮಿಂದ ಬೆಳಕಾಯಿತಯ್ಯ!
ಅಮೂಲ್ಯ ಪ್ರತಿಭೆಯ
ಶಿಸ್ತಿನ ಮಹನೀಯ
ಸರ್ ಎಂ. ವಿಶ್ವೇಶ್ವರಯ್ಯ
ಮುಖ್ಯ ಪ್ರಗತಿಯ ಕಂಡಿತಯ್ಯ ರಾಜ್ಯ
ಅಪೂರ್ವ ಕಲ್ಪನೆಯ
ಅನನ್ಯ ಶಕ್ತಿಯ
ಸರ್. ಎಂ. ವಿಶ್ವೇಶ್ವರಯ್ಯ
ನೀವು ಮಾಡಿದಿರಿ ಅಭಿವೃದ್ಧಿ ಕಾರ್ಯ
ಕಟ್ಟಿ ಕನ್ನಂಬಾಡಿಯ
ಸಂಚಯಿಸಿ ಕಾವೇರಿಯ
ನಮ್ಮ ರೈತರ ಸಮುದಾಯ
(ಕಾಪಾಡಿದ) ಸಹೃದಯ
ಸರ್.ಎಂ. ವಿಶ್ವೇಶ್ವರಯ್ಯ
ನಾ ಕೊಂಡಾಡುವೆ
ನಿಮ್ಮಯ ಕೀರ್ತಿಯ!
ಸ್ಥಾಪಿಸಿ ಕಾರ್ಖಾನೆಯ
ಮೂಡಿಸಿದೆ ಭರವಸೆಯ
ಯಂತ್ರೋದ್ಯಮ ಅಭ್ಯುದಯ
ಸಾಧಿಸಿ ಮುನ್ನಡೆಯ
ಬರೆದ ಹೊತಿನ ಚರಿತೆಯ
ತೋರಿದಿರಿ ನಾಡ ಹಿರಿಮೆಯ
ಸರ್.ಎಂ. ವಿಶ್ವೇಶ್ವರಯ್ಯ
ನೀವಾದಿರಿ ಎಂದೆಂದೂ ವಿಶ್ವಮಾನ್ಯ
ದಿವಾನರಾಗಿ ದುಡಿದು

ಬೆವರ ಧಾರೆ ಸುರಿದು
ತೆರೆದಿರಿ ಹೊಸತು ಹಾದಿಯ
ಸರ್. ಎಂ. ವಿಶ್ವೇಶ್ವರಯ್ಯ
ನಾ ಕೊಂಡಾಡುವೆ ನಿಮ್ಮ ಕೀರ್ತಿಯ
ನೀವು ನೀಡಿದಿರಿ ನಮಗೆ ಸ್ಫೂರ್ತಿಯ!

* * * *

## ಸ್ವಾಮೀಜಿ ಸಂದೇಶ

ಜನ್ಮಕೊಟ್ಟ ನಾಡನು–
ಮೊದಲು ನೀನು ಪ್ರೀತಿಸು,
ನೀನು ಬದುಕಿದಷ್ಟೂ ದಿನವೂ–
ತಾಯಿಯ ಆರಾಧಿಸು.

ರೋಗ ರುಜಿನ ಬಂದವರನು–
ಬಿಡದೆ ಸೇವೆ ಮಾಡಿ ಸಲಹು;
ದೀನರನ್ನು ದಲಿತರನ್ನು
ಕೈ ಹಿಡಿದು ಮುನ್ನಡೆಸು.

ಎಲ್ಲ ವರ್ಗ ವರ್ಣಗಳನೂ
ಹೃದಯ ಪೂರ್ವಕ ಪ್ರೀತಿಸು
ಭೇದ ಭಾವ ಎಂಬುದ ಮರೆತು
ಸ್ನೇಹ ವಿಶ್ವಾಸ ತೋರಿಸು

ಸ್ವಾರ್ಥ ತೊರೆದು ಸೇವೆ ಮೆರೆದು
ಮಾನವೀಯತೆ ಪ್ರಕಟಿಸು,
ಅಲೆವ ಮನವ ನೀ ಪಳಗಿಸು
ಬ್ರಹ್ಮಚರ್ಯವ ಪಾಲಿಸು.

ಕೆಟ್ಟ ಹಾದಿಗಿಳಿಯದೆ ನೀನು
ಒಳ್ಳೆ ಚರಿತೆಯಲಿ ನೀನು
ನಿನ್ನ ಹೆಸರ ಸ್ಥಿರಗೊಳಿಸು

* * * *

# ಜಾರು

ಅಗಣಿತ ಬುದ್ಧಿ ಇದ್ದರೂ
ಮತ್ತೆ ಮತ್ತೆ ಮೋಸ ಹೋದೆ
ಥಳಕು ಬಳಕು ಕಣ್ಣಾರೆ ಕಂಡರೂ
ಹೇಗೋ ಏನೋ ಮಾರು ಹೋದೆ !

ನೀನು ನನ್ನ ಹೀರಿದೆ
ನಾನು ಬದುಕಲು ಹೋರಾಡಿದೆ
ನೀನು ನನ್ನ ಹಿಂಡಿದೆ
ನಾನು ಉಳಿಯಲು ಒಡೆದಾಡಿದೆ
ಎಲ್ಲ ಕಡೆ ನೀನೇ ಗೆದ್ದೆ
ನಾ ಲಂಪಟನಾಗಿ ಬಿದ್ದೆ!

* * * *

## ಬದ್ಧತೆ

ಮೋಹದ ಮನಸಿನ ಮಾದಕ ಬಯಕೆಗೆ
ಕೊನೆಯೆನ್ನುವುದಿಲ್ಲ,

ದಾಹದ ತನುವಿನ ಆಸೆಯ ಒರತೆಗೆ
ಮೊದಲೆಂಬುದೂ ಇಲ್ಲ–

ಸ್ನೇಹದ ಬದುಕಿನ ನಲ್ಮೆಯ ಶರಧಿಗೆ
ನದಿ ಇಲ್ಲದೆ ಇಲ್ಲ,

ತಾಳ್ಮೆಯ ಇರವಿನ ತೀರದ ಅರಿವಿಗೆ
ಗುರಿ ಇರದೆಯೂ ಇಲ್ಲ!

ಪ್ರೀತಿಯ ಬಾಳಿನ ಅರಿಯದ ಬಂಧಕೆ
ಮುಗಿವೆಂಬುದೂ ಇಲ್ಲ

ಧರ್ಮದ ನಡತೆಯ ಬದ್ಧತೆ ಬದುಕಿಗೆ
ಕ್ಷೋಭೆಯ ಅಬ್ಬರವಿಲ್ಲ!

* * * *

## ವೈಭವರೂಪಿ : ವಸುಂಧರೆ

ಸ್ವರೂಪಿ ಶ್ಯಾಮಲೆ, ಪುಷ್ಪರೂಪಿ ಕೋಮಲೆ
ವಸಂತನಿಗೊಲಿದಳು;

ಸೃಷ್ಟಿರೂಪಿ ಸಿರಿ ಇಳೆ, ದೃಷ್ಟಿರೂಪಿ ಶಾಂತಲೆ
ಋತುರಂಗಲಿ ನಲಿದಳು!

ವೃಕ್ಷರೂಪಿ ಶಕುಂತಲೆ, ಪಕ್ಷಿಮಧುರೆ ಶ್ರೀ ವಿಮಲೆ
ಹೂಮೇಳ ತೆರೆದಳು;

ಪರ್ಣರೂಪಿ ಅಸದಳೆ, ಪೂರ್ಣರೂಪಿ ಸದಮಲೆ
ನವಕವಿತೆ ಬರೆದಳು!

ದೃಶ್ಯರೂಪಿ ಚಿತ್ಕಳೆ, ರಮ್ಯರೂಪಿ ರಸೋಜ್ವಲೆ
ಜಗಕೆ ಹೊಸತು ನೀಡಿದಳು

ನವ್ಯರೂಪಿ ನಿರ್ಮಲೆ, ಭವ್ಯರೂಪಿ ಶುಭ ಬಕುಳೆ
ಚೈತ್ರ ಗೀತೆ ಹಾಡಿದಳು !

* * * *

# ನಿಜವ ಹುಡುಕು

ಜಡತೆ ಎಂಬುದು ಎಂದೂ ಹಿಂದಕೆ ಸೆಳೆವುದು
ಜತನವೋ ಈ ಮನುಜಾ....!

ಜಯವನು ಪಡೆಯಲು ಜಂಜಡ ತೊರೆವುದು
ದುಡಿಯುತಿರು ಸಹಜಾ!

ಜಾಗೃತವಾಗಿರೆ ಸರಿ–ದಾರಿ ಕಾಂಬುದು
ಪಯಣವ ತೊರೆಯದಿರು,

ಕಾಯಕ ನಿನಗಿರೆ ಗೆಲವೂ ಸಿಗುವುದು
ಬೆವರನು ನೀ ಸುರಿಸು!
ವಿಜಯವ ನೀ ಗಳಿಸು!
ಜಾತನಾದೆ ನೀನು, ಜಗವೇ ಕಲಿಸುವುವು
ಜಾಗರೂಕ ನೀನಾಗಿರು !

ಜಿಗುಟು ಗುಣವಿರಲು ಬದುಕೇ ಕೊಳೆವುದು
ಜಿಬರು ತೆಗೆದು ನೀ ಜೀವಿಸು
ಜೀವಾಳ ಕಂಡು ನಿಜವ ಅರಸು!

* * * *

# ಕಣ್ಣಿಗೆ ಕಾಣದ ಸೃಷ್ಟಿಯ ಬೇರು

ಬಾನಿಗೆ ಬೆಡಗನು ಇತ್ತವಾರಾರೋ...?
ಬಯಲಿಗೆ ಬೆರಗನು ಇತ್ತವರಾರೋ....?

ಕಾಡಿಗೆ ಒಡಲನೂ
ನಾಡಿಗೆ ಮಡಿಲನೂ
ಇತ್ತವರಾರೋ...? ಇತ್ತವರಾರೋ.....?

ಮಣ್ಣಿಗೆ ಕಣ್ಣನು ಇತ್ತವರಾರೋ......?
ಕಣ್ಣಿಗೆ ದಿಟ್ಟಿಯ ಇತ್ತವರಾರೋ.....?

ಹಕ್ಕಿಗೆ ಉಲಿವನೂ
ಚುಕ್ಕಿಗೆ ಮಿನುಗನೂ
ಇತ್ತವರಾರೋ.....? ಇತ್ತವರಾರೋ.....?

ಕಣ್ಣಿಗೆ ಸೃಷ್ಟಿಯ ಶ್ರೀಗುರು
ಬಣ್ಣನೆಗೆಟುಕದ ರೂವಾರಿ ದೇವರು

ಹೊನಲಿಗೆ ಹರಿವನು ಇತ್ತವರಾರೋ
ತಳಿರಿಗೆ ಚೆಲುವನು ಇತ್ತವರಾರೋ

ಸೂರ್ಯಗೆ ಬೆಳಕನೂ
ಚಂದ್ರಗೆ ಕದಿರನೂ
ಇತ್ತವರಾರೋ....? ಇತ್ತವರಾರೋ.....?

ಕಣದಲಿ ಅಣುವೂ
ಅಣುವಲಿ ಬಲವೂ,

ಮನದಲಿ ಒಲವೂ
ಒಲವಲಿ ನಲಿವೂ.......

ಕೊಟ್ಟವ ಕಣ್ಣಿಗೆ ಕಾಣದ ದೇವರು
ಸೃಷ್ಟಿಯ ಗುಟ್ಟಿನ ಪುಷ್ಟಿಯೇ ದೇವರು

ದೇವರೇ ನಿಜ ಕವಿ, ನಾವೇ ರಸಿಕರು
ಸೃಷ್ಟಿಯೇ ಕಲ್ಪತರು ಮನುಜರೇ ಭಕ್ಷಕರು

ಎಲ್ಲಕೂ ಮೂಲವೇ ಕಾಣದ ದೇವರು
ಅಗಣಿತ ಸೃಜನೆಯ ರಚಿಸುವ ಶ್ರೀಗುರು!

* * * *

## ಬಂಜೆ

ಅಮ್ಮನಾಗುವುದು ಅಮೃತ ಘಳಿಗೆ
ಹೆಣ್ಣಿಗೆ
ಅಂದಿನಿಂದಲೇ ಅವಳ ಬಾಳಿಗೆ
ತಾಯ್ತನದ ದೀವಳಿಗೆ;

ಬಂಜೆಯಾದರೆ ಸಮಾಜದ ಕಣ್ಣಿಗೆ
ಬರಡುತನ ಭೂಮಿಗೆ
ಯಮಯಾತನೆ ದೇವಿಗೆ!

ತಿರಸ್ಕಾರ ದೃಷ್ಟಿ–ಗಂಡನ ಮನೆಯವರಿಗೆ
ಮುಗಿಯದ ದುಃಖ... ಅಡಿಗಡಿಗೆ,
ಕೊರಗಿನೆದೆಗೂಡು.... ನಾರೀಮಣಿಗೆ!

ಹೊನ್ನಿದ್ದರೇನು? ಚೆನ್ನಿದ್ದರೇನು?
ಬೆಲೆ ಇದೆಯೇ ಗೊಡ್ಡು ಹಸುವಿಗೆ?
ಬರೆಯದ ಚರಿತೆ ಮಾತೆಯಲ್ಲದ ಮಡಿಲಿಗೆ!

* * * *

# ಅಭಿವ್ಯಕ್ತಿ

ಅಂತರಾಳದಾಳದೊಳಗೆ ಹುದುಗಿದೆ ಸಿರಿ ಪ್ರತಿಭೆ
ಕ್ಷಣಕ್ಷಣವೂ ಹೊರ ಬರಲು ತಹತಹಿಸಿದೆ ಸೃಜನ ಪ್ರಭೆ;

ಅವಕಾಶ ಸಿಕ್ಕ ಘಳಿಗೆ ಚಿಮ್ಮುವುದು ಒಳ ಬುಗ್ಗೆ
ಸಾಮರ್ಥ್ಯ ಇರುವಷ್ಟೂ ಎತ್ತರೆತ್ತರ ಜಿಗಿದೇ ಒಮ್ಮೆಗೇ–
ಪಲ್ಲವಿಸಿ, ಮೆಲ್ಲ ಮೆಲ್ಲಗೆ ಪಡೆವುದಾಕಾರ, ಬಗೆ!

ಒಮ್ಮೆ ಕಂಡರೆ ಪಾತ್ರ, ಗಟ್ಟಿಯಾಗುತ ಸೂತ್ರ....
ದಿಟ್ಟ ಹರಿಸುತ ನೇತ್ರ, ಪಡೆಯುತ್ತ ನಿಜಚಿತ್ರ–
ಹೆಕ್ಕುತ್ತಾ ಒಳತಂತ್ರ, ಧ್ವನಿಸುತ್ತಾ ಯಶೋಮಂತ್ರ
ಬಂಧವಾಗುವುದೇನೆ ಬದುಕಿ ಬಾಳ್ವುದು ಜೀವಂತ!

* * * *

## ಭೇಟಿ

ನಿನ್ನ ಮೊಗ ನನಗೆ ಒಲಿದು
ನಿನ್ನ ದಿಟ್ಟಿ ನನ್ನ ಕರೆದು–
ಹೃದಯ ಉಬ್ಬಿದೆ, ಕಳೆಯ ತಬ್ಬಿದೆ!

ಮನವ ಸೆಳೆದ ಚೆಲುವ
ಎಲೆ ಎಲೆಯ ಮೇಲೆ ಬರೆದೆ
ಹಳದಿ ಬಣ್ಣವ–
ತುಳುಕಿಸಿದೆ ನಲಿವಿನ
ಬೆಳಕಿನ ಒಲವ

ಮುಗಿಲಲಿ ಮೆಲ್ಲಗೆ ಓಡುವ ಮೋಡ
ಶ್ಯಾಮಲ ಶ್ಯಾಮಲ ಬಣ್ಣದ ಬಿಂಬ
ಕೋಮಲ ಕೋಮಲ ಪ್ರೇಮವೇ ತುಂಬ!

ತಂಗಾಳಿ ತಂದಿದೆ ಅಮೃತವರ್ಷಿಣಿ
ತನುಮನ ಕುಣಿಸಿದೆ ಹನಿ ಹನಿ
ಬೆಳಗಿನ ರಶ್ಮಿಯ ರಂಗಿನ ಪುಳಕ
ಪ್ರಾಣಕೆ ಚೇತನ ತಂದಿದೆ ಬೆಳಕ!

* * * *

# ಸಾಮರಸ್ಯ

ಪುಲಕವಿರದ ಬಾಳೇತಕೆ?
ರಮ್ಯ ಸ್ಪರ್ಶ ಬದುಕಿಗೆ ಚೇತನ ತರಲಿ!
ಸಂಭ್ರಮವಿರದ ದಿನವೇತಕೆ?
ರಾಗಸಂಭ್ರಮ ಜೀವನದಲ್ಲಿ ಉಲ್ಲಾಸ ತುಂಬಲಿ!

ಮುಗ್ಧತೆ ಇರದ ಮನವೇತಕೆ?
ಜಗವ ನೋಡುವ ಕುತೂಹಲ ಬರಲಿ!
ಆಲಂಗಿಸದ ತನುವೇತಕೆ!
ಹೊಸ ಹೊಸ ವಿಚಾರ ನಮ್ಮನ್ನು ತಬ್ಬಿಕೊಳ್ಳಲಿ!

ಕರ್ಮವಿರದ ಇರವೇತಕೆ?
ಧರ್ಮವಿರದ ಇಳೆಯೇತಕೆ?
ವಸುಧೆಯೊಳಗೆ ಧರ್ಮ–ಕರ್ಮ ಸಾಮರಸ್ಯ ಮೂಡಲಿ !

* * * *

## ಚೈತನ್ಯಾಮೃತ

ಸ್ನೇಹವೆಂಬುದು ಮಧುರ, ಆತ್ಮೀಯತೆಯ ಆಗರ;
ಎಲ್ಲಿ ಸ್ನೇಹವೋ ಅಲ್ಲಿ ಮಾತು ಮೃದುವು...
ನಡೆ ಹಿತವು, ಬಗೆ ಹದವು, ಬಯಕೆ ಮುದವು!
ಸ್ನೇಹಕ್ಕೆ ಬೇಕಿಲ್ಲ ಮುನ್ನುಡಿ, ಹಿನ್ನುಡಿ, ಬೆನ್ನುಡಿ...
ಅಪೂರ್ವ ಮೈತ್ರಿಯಲ್ಲಿದೆ, ಹೃದಯದ ಕನ್ನಡಿ!

ಸ್ನೇಹ ಎತ್ತೆತ್ತ ಸಾಗಿದರೂ ಅತ್ತತ್ತ
ಚಿತ್ರ ಸೆಳೆಯುತ್ತಾ... ಬೆಳೆಯುತ್ತಾ... ಉಳಿಯುತ್ತಾ
ಹಾಡುವುದು ನಲಿಯುತ್ತಾ! ಹಾತೋರೆವುದು ಸ್ನೇಹಿಯತ್ತ!
ಅದಕ್ಕೇ ಇರಬೇಕು ಸ್ನೇಹ ಚೈತನ್ಯಾಮೃತ!
ಜೀವನದಲ್ಲಿ ಸ್ನೇಹ ಜೀವಂತ, ಅನುಕ್ಷಣ ಸ್ಪಂದಿತ
ಅನುದಿನ ಸಂವರ್ಧಿತ
ಸ್ನೇಹವೆಂದೂ ಜೀವಂತ!

* * * *

## ಸವಾಲು

ವೇದ ಕಾಲೀನ ನಾಡಿನಲ್ಲಿ
ನಾರಿ ಕುಲಕೆ ಗೌರವ ಸ್ಥಾನ
ಸಮಯದ ಗಾಲಿ ಉರುಳಿ ಉರುಳಿ
ದುಃಖಿನಿ ನಾರಿಗೆ ನಿರಾಶಾಗಾನ!

ಈ ಕಲಿಗಾಲದ ವಿಷಮತೆಯಲ್ಲಿ
ನಾರಿಯ ಕುಲಕೆ ಕಷ್ಟದ ಜೀವನ
ದಿನ ದಿನ ಸರಿಯಲು ಕ್ಲೇಶಗಳಲ್ಲಿ
ನಲ್ಮೆಯ ನಾರಿಗೆ ಶತಶತ ಅಪಮಾನ!

ನೂರು ನೈರಾಶ್ಯದ ಮುಗಿಯದ ಮೌಢ್ಯ
ನಾರಿಯ ಬಾಳಿನ ಹಾದಿಯೇ ಮುಳ್ಳು
ತೀವ್ರ ದಾರಿದ್ರ್ಯದ ಅನುಪಮ ದೈನ್ಯ
ಇಂದಿನ ನಾರಿಗೆ ಪಯಣ ಪಡಿಪಾಟಲು!

ಹೊಮ್ಮಿತೆ ನಾರಿಯಲದ ಪ್ರತಿಭಾ ಮಿಂಚು?
ಶಕ್ತಿ ಕುಲಕೆ ಇರಲಿರಲಿ ಅಸಾಧಾರಣ ನೆಚ್ಚು
ಬರುವ ಅಡ್ಡಿ ಆತಂಕ ಎದುರಿಸೆ ಎಲ್ಲರಿಗೂ ಮೆಚ್ಚು!

* * * *

## ವಿಪರ್ಯಾಸ

ನೆಲದಲಿ ಜನಿಸಿದ ಮಾನವ
ಬಾನಲಿ ಹಾರುವ
ಕನಸಲಿ ಅಲೆಯುವ–
ನೀರಲಿ ಈಜುವ
ಪಾತಾಕಳೆ ಇಳಿಯುವ....
ಮಲೆಗಳ ಏರುವ
ಹೊಳೆಗಳ ದಾಟುವ–
ನಿಜಕ್ಕೂ ನಿಜ
ಸಾಗರ ಬಗೆಯುವ
ತೈಲವ ತೆಗೆಯುವ....
ಭೂಮಿಯ ಸಿಗಿಯುವ
ಖನಿಜವ ಪಡೆಯುವ–
ಸಾಹಸ ಅವನಿಗೆ ಅತಿ ಸಹಜ
ಆಗಲಿಲ್ಲ ಇನ್ನೂ ನಿಜ ಮನುಜ!

* * * *

## ಯಹೂದಿಗಳ ನಾಡಿನಲ್ಲಿ

ಸಾಹಸಿಗಳಿವರು ಸದಾ ಯುದ್ಧ ಸನ್ನದ್ಧ
ಹೋರಾಟದಲಿ ನಿತ್ಯ ಪ್ರಬುದ್ಧ;

ಮರುಧರೆ ನಂದನವನ ಮಾಡುವಲಿ
ಇವರು ಬದ್ಧ, ಸಂಪೂರ್ಣಸಿದ್ಧ–
ಬಳಸಿ ತಂತ್ರಜ್ಞಾನ ಇರಿಸಿ ಕಾರ್ಯಧ್ಯಾನ
ಅಳವಡಿಸಿ ನೂತನ ಆಲೋಚನ
ಗಳಿಸಿದರು ಒಂದಕ್ಕೆ ಹತ್ತನ್ನ!
ಈ ಯಹೂದಿ ಜನ...
ಬೆವರ ಸುರಿಸಿದ ದಿನ,
ಸುಣ್ಣಕಲ್ಲು ಭೂಮಿಯನ್ನ
ಬಂಗಾರ ಮಾಡಿ ಪೂರ್ಣ
ಫಲವಂತಿಕೆಯ ಕಂಡರು ಜತನ
ದುಡಿಮೆ ಫಲ ಉಂಡರು ಕ್ಷಣ ಕ್ಷಣ....
ಈಗ ಮಾಡಿದ್ದಾರೆ ನಾಡನ್ನು ಸಂಪನ್ನ
ಕಟೆದಿದ್ದಾರೆ ಅಡಿಗಡಿಗೆ ಚೆಲುವನ್ನ!

ಎಲ್ಲಿ ಕರ್ತವ್ಯ ಸದಾ ನಿಮಗ್ನ
ಅಲ್ಲಿ ಅಮೃತ ಸಿರಿ ಸದನ
ಎಲ್ಲೆಲ್ಲಿ ವಿನೂತನ ಆಲೋಚನ
ಅಲ್ಲಲ್ಲಿ ಹೊಸ ಕಾಣ್ಕೆ ಹೊಸ ಸಂಶೋಧನ
ಹೊಸತಿನ ಅನಾವರಣ....
ಯಹೂದಿಗಳ ನಾಡಿನಲಿ ಕ್ರಮ
ಕ್ರಮವಾಗಿ ವಿಕ್ರಮ ತೆರೆದು
ದುಡಿಮೆಗೆ ಕೀರ್ತಿ ಕಿರೀಟದ ಹೊಂಬಣ್ಣ!
ಅಧ್ಯಯನ ಮಾಡಿ ಹರಿಸಿದರೆ ಗಮನ
ನಾಡಹಿರಿಮೆ ಗರಿಮೆಗೆ ನವಲೇಪನ!

* * * *

## ಬದುಕು ಭೂಮಿಗೆ ಭಾರವಾಗದ ಹಾಗೆ

ಹುಟ್ಟುವಾಗ ಏನೋ ತಂದೇ?
ಹೋಗುವಾಗ ಏನೋ ಒಯ್ಯೆ?
ಎಲ್ಲಾ ಗಳಿಸೀ.... ಅರೆ.... ಎಲ್ಲಾ ಉಳಿಸಿ
ಯಾರಿಗೂ ನೀನು ಬೇಡವಾದೆ
ನೀರ ಮೇಲಿನ ಗುಳ್ಳೆಯಂಗೇನೆ ನಾಕು ದಿನಾನೋ ಬದುಕು

ಕೋಟಿ ಕೋಟಿ ಹಣ ಕೂಡಿಡುತಾ
ಆಸ್ತಿ ಅಂತಸ್ತು ಪೇರಿಸುತಾ
ಕಾರು ಬಂಗಲೆ ಡೌಲಿನಲೀ ಮೆರೆಯಾ ಬ್ಯಾಡವೋ
ತಿಪ್ಪೆ ಮೇಲಿನಾ ಅಣಬೆಯಂಗೆ
ಬಾಳಿ ಬದುಕಲು ಏನು ಬಂತೋ
ಕಾಡು ಮಲ್ಲಿಗೆ ಕಂಪಿನ್ಹಾಂಗೆ ನೆನಪ ಬಿಟ್ಹೋಗೋ
ಮಾಗಿ ಕಾಲದಾ ಮಂಜಿನಹಾಂಗೇ
ನಾಕು ಕ್ಷಣಾನೋ ಬದುಕು
ಹಮ್ಮು ಬಿಮ್ಮಿಂದ ಊರಿನಲೀ
ಠಕ್ಕ ಠಕ್ಕಿಯಾ ಆಟದಲೀ
ಗೋಲ್‌ಮಾಲ್ ಮಾಡುತ ಸೊಕ್ಕಿನಲಿ ನಡೆಯಾಬ್ಯಾಡವೋ
ಬಿಸಿಲಾ ಕುದುರೆಯಾ ಏರಿಹೋಗೀ
ಭ್ರಮೆಯ ನಂಬಿದರೆ ತರವಲ್ಲೋ
ತುಂಬೆ ಹೂವಿನಂಗೆ ಇಳೆಯಾಗೆ ಹಾದೀ ನಡೆಯೋ
ಬಿಲ್ವಪತ್ರೆಯ್ಹಂಗೆ ಸಾರ್ಥಕವಾಗಿ
ಲೋಕದಾಗೆ ನೀ ಬದುಕು

* * * *

# ಮೊರೆ

ಕೇಳಿಸದೇತಕೆ ನನ್ನ ಮೊರೆಯ?
ಆಲಿಸ ಬಾರದೇ ದಯಾಮಯಾ?

ದಶಕ ದಶಕದ ಅಳಲಿದು ದೊರೆಯೇ
ಉಳಿವುದು ಹೇಗೆ ನೀ ನನ್ನ ತೊರೆಯೆ?

ಅಂತರಾಳದ ನೋವಿದು ನಿಜವು
ನಾ ನಂಬಿದೆನೋ ನಿನ್ನಯ ಧ್ವಜವು!

ಸ್ಪಂದಿಸೋ ದೇವಾ
ಕಾಯೋ ಜೀವಾ...!

ನರಳಿಹೆ ಹೊರಳಿಹೆ ಕೆರಳಿಹೆ ಬದುಕಲಿ
ಬೆಂದಿಹೆ ಕುಂದಿಹೆ ನಂದುವ ಕ್ಷಣದಲಿ

ಬದುಕಿಸೋ ಭಗವಾನ್
ಕರುಣಿಸೋ ಜೀವವನ್ !

* * * *

## ಅತಿ–ಗತಿ

ಭೂಮಿ ಹಸಿರಾಗಿತ್ತು ಸಂಪದ ಉಸಿರಾಗಿತ್ತು
ಕಡಲು ಶಾಂತವಾಗಿತ್ತು ಬದುಕು ನಡೆದೇ ಇತ್ತು –
ಸಂಸ್ಕೃತಿ ಜೀವಂತವಿತ್ತು
ಇತಿಹಾಸ ಧವಳವಿತ್ತು !

ಒಬ್ಬ ಮಾನವನಾಗ ಯೋಚಿಸಿದ ಇಂತು:–
ಈ ನೆಲದ ಒಳಗ ಏನೆಲ್ಲಾ ಇಹುದು–
"ಇದು ಅಗೆದು ನಾನು ಕುಬೇರನಾಗಬಹುದು"
ಎಂದು ಅನಿಸಿದ ದಿನವೇ ನೆಲ ಅಗೆಯ ಹೋದ
ಒಳ ಬಗೆಯ ಹೋದ; ಆಸೆ ಬಲೆಯ ಹೆಣೆದ
ದುರಾಸೆ ವ್ಯಕ್ತಿ ಆದ–ಹಣದ ಮಿಣಿಯ ಹೊಸೆದ
ಆಗ ಇಳೆಯು ನಲುಗಿತು
ಚರಿತ್ರೆ ಕಪ್ಪಾಗಿ ಹೋಯ್ತು!

ಧರಣಿ ಬಿರಿದು ಹೋಯ್ತು ಬಿಸಿಲು ಉರಿದು ಹೋಯ್ತು
ಗುಡ್ಡ ಬೋಳಾಯ್ತು ಮರಮರ ಮರೆಯಾಯ್ತು
ಅವನಿ ಪ್ರಪಾತವಾಯ್ತು ಹಾದಿ ಧೂಳೀ ಆಯ್ತು

ಜನರ ಆರೋಗ್ಯ ಹಾಳಾಗಿ ಹೋಯ್ತು
ಮನೆ ಮನೆಯೂ ಕಾಹಿಲೆ ತೌರಾಯ್ತು

ಲಾರಿ ಮೇಲೆ ಲಾರಿ ಹರಿದೂ ಧೂಳು
ಧೂಳು ಜೊತೆಗೆ ಧೂಳು ಪರಿಸರವೇ ಹಾಳು;
ಜನಗಣದ ಒಳಗೆ ಆತಂಕವಾಯ್ತು
ಧಣಿ ಧಣಿಯ ಮನೆಯು ಧನ ಕಣಜವಾಯ್ತು !

ಬಗೆದಷ್ಟೂ ನೆಲದ ಬಡಲೆಲ್ಲಾ ಅದಿರು
ಅದಿರ ರಾಶಿ ರಾಶಿ ಹಾಕಿದಷ್ಟೂ ಕದಿರು–

ಹಾದಿ ಹಾದಿ ಬಣ್ಣ ಬದಲಾಗಿ ಹೋಗಿ
ರಾಜಕೀಯ ದಾಳ ಶುರುವಾಗಿ ಆಗಿ...

ರಸ್ತೆ ಹೊಂಡವಾಯ್ತು ಬಾಳು ಕೆಂಡವಾಯ್ತು
ಖನಿಜ ಲೂಟಿಯಾಯ್ತು ಹಣವು ಮೇಟಿಯಾಯ್ತು !

ಅವನಿ ಪೇಲವವಾಯ್ತು ಮಾನವ ದಾನವನಾದ
ಮಾನವ ಶಿಖರ ಏರಿದ ಗದ್ದುಗೆ ಮುಕರವಾದ

ಪರಿಸರವು ಬಂಜರಾಯ್ತು
ಬದುಕು ಕಂದರವಾಯ್ತು!

ಒಬ್ಬರ ಆಸೆಗಾಗಿ ಹಲವರ ಬಲಿಯೇ ಆಯ್ತು
ಒಂದು ಕುರ್ಚಿಗಾಗಿ ಅನೇಕರ ಹರಣ ಹೋಯ್ತು

ಧರಣಿ ಖಾಲಿಯಾಯ್ತು
ಪರಿಸರ ಧಾರುಣವಾಯ್ತು
ಕುಬೇರ ಗಾದಿ ಹಿಡಿದು
ಸಂಪದ ಮೇರೆ ಬಿರಿದು

ದುಡ್ಡು ದೊಪ್ಪನಾಯ್ತು
ಚರಿತೆ ಗಾರು ಗಾರಾಯ್ತು
ಮಾನವ ಬಾಳುವೆ ಹೈರಾಣಾಯ್ತು
ವಿಷಾದ ಹೆಪ್ಪು ಗಟ್ಟಿತು!

* * * *

# ಹುತಾತ್ಮ ವೀರನ ಶೌರ್ಯ ಪ್ರಗಾಥ

ತಾಯಿ ಭಾರತ ಮಾತೆ–ಅಂದು
ದಾಸ್ಯ ಶೃಂಖಲೆಯೊಳಗೆ ಬೆಂದು–
ಬಿಡುಗಡೆಯ ದಿನವೇ ಕಾಣದೆ ನೊಂದು
ತೊಳಲುತಿದ್ದಳು ಅಳಲಲ್ಲಿ ಮಿಂದು!
ಅಂಥ ವಿಷಮಯ ಸನ್ನಿವೇಶದಿ
ಹೋರಾಡಿದ ಧೀರನೊಬ್ಬ ವೀರಾವೇಶದಿ!
ಸ್ವಾತಂತ್ರ್ಯಕಾಗಿ ಹಗಲಿರಳು ಕಾದಿ
ಮಡಿದರೆನಿತೋ ಅಗಣಿತ ಮಂದಿ!
ಅಂಥ ಧೀರರ ಪಡೆಯಲ್ಲಿ ಒಬ್ಬ ದೀಪ
ಕೊನೆತನಕ ಹೋರಾಡಿದ ಭಗತ್‌ಸಿಂಗ್ ಶೂರ,
ಸ್ವಾತಂತ್ರ್ಯ ದೇವಿಗೆ ಕೊಟ್ಟ ಕಾಣಿಕೆ ನೇರ
ನಮ್ಮ ಇತಿಹಾಸ ಪುಟಗಳಲಿ ಅವನು ಅಮರ!

ಸಾವಿರದೊಂಬೈನೂರ ಏಳನೇ ಇಸವಿ
ಸೆಪ್ಟೆಂಬರ್ ಎಂಟರ ಶುಭದ ನೆರವಿ–
ಪಂಚ ನದಿಗಳ ನಾಡಿನಲ್ಲಿ
ಲಾಯಲ್ ಪುರದ ಪ್ರಾಂತದಲ್ಲಿ
ವೀರ ಭಗತ್ ಸಿಂಗ್ ಜನಿಸಿದ
ಭರತ ಭೂಮಿಯ ಬೆಳಗಿದ !
ಸರದಾರ್ ಕಿಶನ್ ಸಿಂಗನ ಅಕ್ಕರೆಯಿಂದ
ಸಂಗಾತಿ ವಿದ್ಯಾವತಿಯ ಉದರದಿಂದ
ಸಾಹಸಕ್ಕೆ ಹೆಸರಾದ ಮನೆತನದಿಂದ
ಭಗತ್ ಸಿಂಗ್ ಭಾರದಿ ಕಣ್ತೆರದ!

ಬಾಲಕ ಭಗತ್‌ಸಿಂಗ್ ಹುಟ್ಟಿದ ಸಮಯ
ಪಡೆದರು ಚಿಕ್ಕಪ್ಪಂದಿರು ಬಿಡುಗಡೆಯ
ಹುಟ್ಟಿದ ಮನೆಗಂದು ಬೆಳಕಿನ ಶುಭಾಶಯ

ಮಗು ಕಾಲಿಟ್ಟ ಘಳಿಗೆ ಮನೆಗೆ ಭಾಗ್ಯೋದಯ!
ಆಗೆಲ್ಲ ಸ್ವಾತಂತ್ರ್ಯದ ಸಂಗ್ರಾಮ ನಡೆದು
ತಾಯಿಯ ಕಣ್ಮಣಿ ಭಗತ್‌ಸಿಂಗ್ ಬೆಳೆದು–
ದಿನ ದಿನ ದೊಡ್ಡವನಾದ ಪ್ರೀತಿಯ ಪಡೆದು
ಜನಾನುರಾಗಿಯಾದ ಸ್ನೇಹದ ತಳೆದು...

ಎಳೆತನದಿ ಇರುವಾಗಲೇ ಉಜ್ವಲ ದೇಶಪ್ರೇಮಿ
ಆಂಗ್ಲರ ಶಾಲೆಗೆ ಕಾಲಿಡದ ನಾಡ ಪ್ರೇಮಿ
"ಬಿಡುಗಡೆಯಾಗಬೇಕು ನಮ್ಮ ಭರತ ಭೂಮಿ"
ಹೋರಾಡೋ ಹಠ ತೊಟ್ಟ–ನಾವೇನು ಕಮ್ಮಿ?
ಭಗತ್‌ಸಿಂಗ್ ತಾರುಣ್ಯದ ಇದ್ದಂಥ ಸಮಯ
ಭಾರೀ ದುರಂತ ಕಂಡು ಚೀರಿತ್ತು ಹೃದಯ–
ಜಲಿಯನ್ ವಾಲಾಬಾಗಿನ ಘಟನೆ ಪರಿಯ
ನೋಡಿದ ಭಗತ್‌ಸಿಂಗ್ ಕಂಡನು ತನ್ನ ಧ್ಯೇಯ!

ಓಡಿಸಲೇ ಬೇಕು ಆಂಗ್ಲರ ತುಕುಡಿಯ
ಭಾರತ ಮಾತೆ ಕಾಣಬೇಕು ವಿಜಯ–
ಮಾಡಲೇ ಬೇಕಯ್ಯ ನಾಡ ಸಂಘಟನೆಯ
ಹಚ್ಚಲೇ ಬೇಕು ವಿದೇಶಿ ಬಟ್ಟೆಗೆ ಬೆಂಕಿಯ....
ಪುಟಿಸಲೇಬೇಕೀಗ ಕ್ರಾಂತಿಯ ಕಿಡಿಯ...
ಹಿನ್ನೆಲೆಗಿದ್ದರು ಲಾಲ ಲಜಪತ್ ರಾಯ!
ಆಗ ಭಗತ್‌ಸಿಂಗ್‌ಗೆ ಒಂದೇ ಗುರಿ ಒಂದೇ ಧ್ಯೇಯ
ಕಳಚಬೇಕು ತಾಯಿಗೆ ಬಿದ್ದ ಶೃಂಖಲೆಯ!

ಕಟ್ಟಿದ ಹಗಲಿರುಳು ನೌಜವಾನ್ ಸೇನೆಯ
ಮಾಡಿದ "ಭಾರತ್ ಸಭಾ" ಸಂಘ ಸ್ಥಾಪನೆಯ–
ಆಗಲೇ ಚಂದ್ರಶೇಖರ್ ಅಜಾದ್‌ನ ಪರಿಚಯ
ಶಸ್ತ್ರ ಕ್ರಾಂತಿಯಿಂದ ಮಾಡೋಣ ಗಣರಾಜ್ಯ!
ಕಲ್ಕತ್ತಾ ನೆಲದಲ್ಲಿ, ಒದಗಿದ ಸ್ನೇಹಿತ
ಅವನು ಬೇರ್‍ಯಾರಲ್ಲ ಜತೀಂದ್ರನಾಥ!

ಸೈಮನ್ ಸಮಿತಿ ಪಾಲಿಗೆ ಸಾಕ್ಷಾತ್ ಭೂತ
ಇಂಗ್ರೇಜಿ ಸ್ಯಾಂಡರ್ಸ್‌ನ್ನ ಪ್ರಾಣ ತೆಗೆದ...

ಸಾವಿರದೊಂಬೈನೂರ ಇಪ್ಪತ್ತೊಂಬತ್ತು
ನಡೆದಿತ್ತು ದಿಲ್ಲಿಯಲ್ಲಿ ಶಾಸನ ಸಭೆ!
ವೈಸರಾಯ ಕ್ರಾರ್ಯತೊರಿ ಮಾಡಿದ ಸಂಕ್ಷೋಭೆ
ಭಗತ್‌ಸಿಂಗ್ ಬಾಂಬಿಗೆ ಎಲ್ಲೆಲ್ಲೂ ಬೊಬ್ಬೆ!
ಜೊತೆಗಿದ್ದ ಸ್ನೇಹಿತ ಬಟುಕೇಶ್ವರ ದತ್ತ
ಕ್ರಾಂತಿ ಚಿರಾಯುವಾಗಲಿ ಕೂಗಿದ್ದ ಭಗತ
ಪ್ರಾರಂಭವಾಯಿತಾಗ ಪೋಲೀಸರಾ ಹಿಡಿತ
ನಡುಗಿತ್ತು ಇಂಗ್ರೇಜಿ ಸರ್ಕಾರ ಹೆದರುತ್ತಾ!

ಭಗತ್‌ಸಿಂಗ್ ಸೇರಿದ್ದ ಲಾಹೋರ ಜೈಲು
ಕಾದಿತ್ತು ಅವನಿಗಲ್ಲಿ ನೇಣಿನ ಗಲ್ಲು!
ಇರಬಾರದು ಆಂಗ್ಲರು ಭಾರತದಲ್ಲಿ ಎಲ್ಲೂ...
ಮೊಳಗಿತ್ತು ಕೋಟಿ ಕಂಠ ಮೂಲೆ ಮೂಲೆಯಲೂ !
ಭಾರತದ ಉದ್ದಗಲ ಸ್ವಾತಂತ್ರ್ಯದ ಆಂದೋಲನ
ಭಗತ್‌ಸಿಂಗ್ ಜೊತೆಗೇ ಸುಬದೇವ್ ಬಂಧನ–
ರಾಜ್‌ಗುರುವಿಗೂ ಕೂಡ ಆಗಿತ್ತು ಶಿಕ್ಷೆ ಕಠಿಣ
ದೇಶ ಭಕ್ತರಿಗೆಲ್ಲಾ ಸೆರೆಮನೆಯೇ ಉಗ್ರಾಣ!

ಸಾವಿರದೊಂಬೈನೂರು ಮೂವತ್ತೊಂದು ಇಸವಿ
ಮಾರ್ಚ್ ಇಪ್ಪತ್ನಾಲ್ಕಕ್ಕೆ ತಿರಸ್ಕೃತ ಮನವಿ–
ಗಲ್ಲಿಗೇರಿದ ಭಗತ್ ತಾನೇ ಎದೆಯೊಡ್ಡಿ
ಸುಖದೇವ್ ರಾಜ್‌ಗುರು ಜೊತೆಗೂಡಿ!
ಭಾರತ ಮಾತೆಗೆ ಜಯ ಜಯವಾಗಲಿ
ಬ್ರಿಟಿಷರ ಸರ್ಕಾರ ಇಲ್ಲಿಂದ ತೊಲಗಲಿ–
ತಾಯಿ ಭರತ ಮಾತೆ ಶೃಂಖಲೆ ಕಳಚಲಿ
ಹುತಾತ್ಮರ ನಾಡಲ್ಲಿ ಸ್ವಾತಂತ್ರ್ಯ ಮೊಳಗಲಿ

ನವಭಾರತ ಜನರೇ ಎಚ್ಚರವಿಟ್ಟುಕೇಳಿ...
ಎಂದೆಂದೂ ಗುಲಾಮಗಿರಿ ಅಳಿಯಲಿ
ಭರತ ಭೂಮಿ ಸ್ವಾತಂತ್ರ್ಯದಲ್ಲಿ ನಲಿಯಲಿ
ವೀರರ ಧೀರರ ಚೇತನ ಮೊರೆಯಲಿ!
ಭಗತ್‌ಸಿಂಗ್ ಯುವಜನಕ್ಕೆ ಸ್ಫೂರ್ತಿಯಾಗಲಿ
ಭಾರತ ಸ್ವಾತಂತ್ರ್ಯ ಚಿರಾಯವಾಗಲಿ...
ನಾಡಿನ ಕೇತನ ಎತ್ತರ ಹಾರಲಿ
ಸ್ವಾತಂತ್ರ್ಯ ಸಂದೇಶವ ಎಂದೆಂದೂ ಸಾರಲಿ!

* * * *

# ನೇಹಿಗನಿಗೆ

ಜೀವಕ್ಕೆ ಜೀವ ಕೊಡುವಾ ನೇಹಿಗ
ಬವಣೆ ಕಡಲ ದಾಟಿಸೋ ಅಂಬಿಗ!

ಆಪತ್ತಿನಲೆಗಳು ಅಪ್ಪಳಿಸುತ್ತಿರೆ...
ಸನಿಹ, ಬಂದು ನೀಡುವ ಆಸರೆ!
ನೋವಲ್ಲಿ ಮುಳುಗಿ ಸೋತು ಹೋಗಿರೆ
ಸಾಂತ್ವನ ಹೇಳಿ ಮೇಲೆತ್ತುವಾ ಖರೆ!

ನಲಿವಿನಲ್ಲೂ ಪಾಲ್ಗೊಳ್ಳುವಾ ದನಿ
ಆನಂದ ಸಂಜೀವಿನಿ ನೀಡುವ ಖಣಿ
ಹಂಚಿಕೊಂಡು ಉಣ್ಣುವದಣಿ
ಎಲ್ಲಿರಲಿ ಎಂತಿರಲಿ ವಿಚಾರಿಸೋ ನನ್ನಿ!

ನೇಹಿಗನೆಂದರೆ ನೇಹಿಗ ಆತ್ಮಸಾಥೀ ಅಂಬಿಗ
ವಹ್ನಿ ವಾರಿಧಿಯಲ್ಲೂ ಕೈಹಿಡಿದು ನಡೆಸೋ ಪಯಣಿಗ
ನಿನ್ನೆಗೂ ನಾಳೆಗೂ ಇಂದಿಗೂ ಮುಂದಿಗೂ ಬಂಧವಾಗೋ ಬೆಂಗಲಿಗ।
ವಿಶ್ವಾಸವೆಂಬ ಮೇರುಗಿರಿಯ ಶಿಖರ ಪ್ರಾಯ ಸೋಜಗ
ಪಾಡಿನ ಪ್ರಪಾತದಲ್ಲೂ ಜೊತೆಗೆ ನಿಲ್ಲೋ ಸಾಹಸಿಗ
ನೇಹಿಗನೆಂದರೆ ನೇಹಿಗ ಬದುಕಿನ ಭಾರಹೊರುವ ನಿಜನೊಗ...
ನಂಬಿಕೆಗೆ ಇಂಬಾಗಿ ಹೃದಯದ ಅಯೋರ್ಟಾವಾಗಿ
ಆಸರಾಗುವ ಆಪದ್ಭಂಧು, ನೇಹಿಗ ಬಾಳ ನೇಹಿಗ

* * * *

## ಆಸ್ಪತ್ರೆ ಎಂಬ ಆಶ್ಚರ್ಯ

ಇಲ್ಲಿಹುದು ಸಾವು ಬದುಕಿನ ನಡುವೆ ಹೋರಾಟ
ಕೆಲವರಿಗಿಲ್ಲಿ ಕ್ಷಣಕ್ಷಣವೂ ಜಂಜಾಟ
ಯಮನ ಗೆಲ್ಲಲು ಸೆಣೆಸಾಟ
ಸಾಧ್ಯವಾಗದೆ ಗೋಳಾಟ
ಜೀವನ ದುಗುಡ ದುಮ್ಮಾನದೂಟ
ಕಾಣದ ಕೈ ಮೇಲಾಟ
ಇಲ್ಲಿ ಹಲವರಿಗೆ ಪ್ರಾಣ ಭಿಕ್ಷೆ
ಕೆಲವರಿಗೆ ಬದುಕಿರಕೂಡದೆಂಬ ಶಿಕ್ಷೆ!
ಅನೇಕರಿಗೆ ಆರೋಗ್ಯ ರಕ್ಷೆ;
ವೈದ್ಯರಿಗೆ ಪ್ರಯತ್ನಗಳ ಝಳ
ರೋಗಿಗಳಿಗೆ ಭರವಸೆಗಳ ಫಲ
ನೋಟಕರಿಗೆ ವ್ಯಾಕುಲ– ಕುತೂಹಲ
ಆಸ್ಪತ್ರೆ ಮಾತ್ರ ನಿರಾತಂಕನಿಶ್ಚಲ ಸುಸ್ಥಿರ!

* * * *

## ಮರೆಯಲುಂಟೇ?

ಮರೆಯಲುಂಟೆ ಬಾಳಿನೆಲ್ಲ–
ಗಾಢವಾದ ನೋವುಗಳ?
ಮರೆಯಲುಂಟೆ ನಾವು ಸವಿದ
ಕಹಿ ಕಹಿಮಯ ಬೇವುಗಳ?
ಮರೆಯಲುಂಟೆ ಎಡವಿ ಬಿದ್ದು–
ಗಾಯವಾದ ಜಾಗಗಳ?
ಮರೆಯಲುಂಟೆ ಕೀವು ತುಂಬಿ
ರಸುಕಾಡಿದ ಗಾರುಗಳ?

ಮರೆಯಲುಂಟೆ ಪ್ರೀತಿಸಿ
ಕೈ ಕೊಟ್ಟ ಜೀವಿಗಳ?
ಮರೆಯಲುಂಟೆ ನಂಬಿಸಿ
ಮೋಸ ಮಾಡಿದ ವ್ಯಕ್ತಿಗಳ?

* * * *

## ಅರ್ತಿ ಆಲದಮರವೇ

ನುಡಿಯುತಿದೆ ನನ್ನೆದೆ ತುಡಿತ–
ಪ್ರೀತಿಯೇ ನಿಜ ಬದುಕೆಂದು
ಮಿಡಿಯುತಿದೆ ಅದು ಅನವರತ–
ಮಾಡಿದ ಪ್ರೀತಿ ನೀ ಪಡೆಯೆಂದು!

ಎಲ್ಲಿ ರವಿ ಕಿರಣದ ಬೆಳಕೋ
ಅಲ್ಲಿ ಆರೋಗ್ಯದ ಪಲುಕು,
ಎಂದೂ ಮನದ ಮಣ್ಣಿಗೆ ಬೇಕೋ
ಬಾಳ ಬಾನ ಸಿರಿ ಚೆಂಬೆಳಕು!

ಎಂದು ನಲ್ಮೆ ಬೀಜದ ಮೊಳಕೆ
ಅಂದು ಪ್ರೇಮ ಸಸಿ ಅಂಕುರವೋ–
ಒಮ್ಮೆ ಒಲುಮೆಯ ವೃಕ್ಷ ಬೆಳೆಯ
ಹಗಲಿರುಳಿ ಬೇರಿಳಿದು ಆಲದ ಮರವೋ

ನಲ್ಮೆ ಆಲದ ಮಕರೆ ಸಾವಿರದ ಬೀಳಲು
ಒಂದೊಂದು ಎದೆಯ ನೆಲ ಮುಟ್ಟಿ ಬೇರಿಳಿಯಲು
ಹೃದಯ ಬಾಂದಳ ತುಂಬ ಪ್ರೀತಿಯೇ ತೂಗಿರಲು
ಅರ್ತಿಬಾಳುವೆ ಅಮರ–ಪ್ರೇಮ ಸಸಿ ಒಟ್ಟಿಲು!

* * * *

## ಸಪ್ತ ಮಾತೃಕಾ ಸೌಭಾಗ್ಯ ಪ್ರಗಾಥ

ಯಾವ ಪುಣ್ಯದ ಫಲವೋ ಏನೋ
ತುಮಕೂರು ಜಿಲ್ಲೆಯ ಮಣ್ಣಿನ ಮಗನಾನು–

ಬಾಲ್ಯದಿ ಇಲ್ಲಿ ಆಡಿ ನಲಿದೆನು
ಸಿದ್ಧರ ಬೆಟ್ಟದ ಸೊಬಗನು ಸವಿದೆನು!

ಹುಡುಗನಾಗಿರೆ ಇಲ್ಲಿ ಹತ್ತಿ ಇಳಿದದ್ದೇನು
ಹಿರಿಯರಿಂದ ಕಥೆ ಕೇಳಿ ನಲಿದದ್ದೇನು?
ಸಿದ್ಧರ ಪಾದಕ್ಕೆ ನಿತ್ಯ ಅಡ್ಡ ಬಿದ್ದದ್ದೇನು?
ಶರಣರ ಮಹಿಮೆ ಪೂರಾ ತಿಳಿದದ್ದೇನು!

ನಾನು ನನ್ನ ಬಂಧು ಬಳಗವಿಲ್ಲಿ
ಕಾನನ ಚೆಲುವಿಗೆ ಮನ ಸೋತೆವು,
"ತವನಿಧಿ–ಸಿದ್ಧರಬೆಟ್ಟ" ಎಂದೆವು
ಬೆಟ್ಟದ ತಿಟ್ಟು ತೆವರ ಅರಿತೆವು !

ಅಂತಿಂಥ ಬೆಟ್ಟವಲ್ಲ ಅಸಾಮಾನ್ಯ ಬೆಟ್ಟ
ಶಿಲೆ ಶಿಲೆಯೂ ಇಲ್ಲಿ ಶಿವಶರಣದ ಘಟ್ಟ!
ಸಾವಿರ ತರುಲತೆ ಚಿರಹಸಿರಿನ ಪಟ್ಟ
ಹುಲಿ ಕರಡಿ ಚಿರತೆಗಿಲ್ಲಿ ವಾಸದ ಅಟ್ಟ !

ಸಪ್ತ ಕನ್ನಿಕೆಯರು ನೆಲಸಿಹರಿಲ್ಲಿ....
ಒಂದೆಡೆ ಕನ್ನೇರಮ್ಮ ಮತ್ತೊಂದೆಡೆ ಕಾವಲ್ಲಮ್ಮ–
ಆ ಕಡೆ ಕೊಲ್ಲಾಪುರಿ, ಈ ಕಡೆ ದಂಡಿನ ಮಾರಿ
ಚೌಡಮ್ಮ, ದೊಡ್ಡಮ್ಮ, ಲಚ್ಮಕ್ಕ ಇಲ್ಲಿ ಬೀಡ ಬಿಟ್ಟವರಮ್ಮ!

ಏಳು ಕನ್ನೆಯರಿಗೂ ಏಳು ಕುತೂಹಲ
ದನ–ಕರು ಮೇಯಿಸೋ ಕಾಯಕವಲಾ!
ಬೆಟ್ಟದ ಮೇಲೇನೈತೆ ನೋಡೇ ಬಿಡೋಣೆಂದು

ಏಳು ಕನ್ನಿಕೆಯರೂ ಹತ ಮಾಡಿ ಹೊರಟರೆಲ್ಲಾ!
ಅಂದು ಹುಣ್ಣಿಮೆ ಬಾನ ತುಂಬ ತಿಂಗಳು
ಅಂಬರ ಪೂರಾ ಹಾಲಿನ ಹೊನಲು–
ಬೆಟ್ಟದ ಮೇಗಡೆ ನವ ಸಾಧು–ಸಿದ್ಧರು
ಗೆಡ್ಡೆಗೆಣಸು ತಿಂದುಂಡು ನೆರದಿದ್ದರು !

ಇಲ್ಲಿದೆ ದೊಡ್ಡ ಗವಿ ಕಗ್ಗತ್ತಲ ಕಟ್ಟಡವಿ
ಸಿದ್ಧರ ಸನ್ನಿಧಿ, ಆಧ್ಯಾತ್ಮದ ತಳಹದಿ–
ರುದ್ರ ಪೂಜೆ ಪಟ್ಟ ಇಟ್ಟ ಕಟ್ಟಳೆ ವಿಧಿ
ಇರುಳೆಲ್ಲ ಭಜನೆ ಶರಣರ ಗೋಷ್ಠಿ

ಸಪ್ತ ಕನ್ಯೆಯರಿಗೂ ಶಿವ ಪದದ ಸಾನ್ನಿಧ್ಯ
ಅವರಿಗೆ ರುದ್ರನಾದ ಅನುಪಮ ಆರಾಧ್ಯ !
ಸಿದ್ಧರ ಮಾರ್ಗದಿ ಸಾಧಕರಾದರು...
ಗಿರಿಗಹ್ವರ ಅರಿತು ಪ್ರಾಜ್ಞಾರೇ ಆದರು,
ಗಿಡಮೂಲಿಕೆ ಅರಿತು ವೈದ್ಯರಾದರು
ನಾರುಬೇರುಗಳ ಒಳಗುಟ್ಟು ಕಲಿತರು!
ದಿನ ದಿನ ತಿಳಿದರು ಪುರಾಣೇತಿಹಾಸ
ಮನಗಂಡರು ವನಸಂಪದ ಸೃಷ್ಟಿ ಕೂಲಂಕಷ!

ಮಾನವ ತನುವಿಗೆ ನೂರಾರು ಕಾಹಿಲೆ
ಬಲ್ಲವರೇ ಬಲ್ಲರು ಕೆಳಾಗದ ನಿಜ ನೆಲೆ–
ಸಾವಿರದ ಪತ್ರ ಪುಷ್ಪ ಔಷಧಿಯ ಸೆಲೆ
ಕಂಡುಂಡು ವೈದ್ಯರಾದರು ಬೆಟ್ಟದ ಬುಡದಲ್ಲೇ!

ಮಳೆ ಮಂಜರದಲ್ಲಿ ಕತ್ತಲ ಪಂಜರ
ಒತ್ತಟ್ಟು ಕಾಡಿನಲ್ಲಿ ಪೊದರಿನ ಹಂದರ–
ಹಗಲೇನೋ ನೋಡಲು ಬಲು ಬಲು ಸುಂದರ
ಇರಳಲ್ಲಿ ಕಾನನ ಕ್ರೂರವೋ ಕ್ರೂರ !
ಕಾಡು ಪ್ರಾಣಿಗಳಿಂದ ಘೋರವೋ ಘೋರ!
ಹೀಗಿರಲು ದುಷ್ಟರ ದಾಳಿಯಾಯ್ತು ಒಮ್ಮೆಗೇ
ಏಳು ಕನ್ನಿಕೆಯರೂ ತಿರುಗಿಬಿದ್ದರು ಒಟ್ಟಾಗೇ–

ದುಷ್ಟರ ಕೈಮೇಲಾಗಿ ಹುತಾತ್ಮರಾದವರು
ಸಮಾಧಿಯಾಗಿ ಅವರು ಗ್ರಾಮ ದೇವತೆಗಳಾದರು!
ಇಂದಿಗೂ ನಡೆದಿದೆ ಪೂಜೆ ಪುನಸ್ಕಾರ
ದೇವಾಂಶು ಸಂಭೂತೆಯರಿಗೆ ನಮನ ನಿರಂತರ–
ಜನಪದರ ಪಾಲಿಗವರು ಸಪ್ತ ಮಾತೃಕೆಯರು !
ವಾಗ್ದೇವಿ ವೀಣೆಯಲ್ಲಿ "ಸರಿಗಮಪದನಿಸ"ರು!

ಸಿದ್ಧರ ಬೆಟ್ಟದ ಸುತ್ತ ಏಳು ಕನ್ನಿಕೆಯರ ಕಥೆ
ಜನ ಮನದೊಡಲಲಿ ಬೆರೆತಿದೆ ವೀರಗಾಥೆ!
ಇನಿತೂ ಕಡಿಮೆ ಇರದ ದೇವಾನು ದೇವತೆ
ಸುತ್ತಲ್ಲ ಜನ ಜನಿತ ಈ ಜಾನಪದ ಹಾಡಿನೊರತೆ !

* * *

# ವಿಜ್ಞಾನ ಪ್ರಗಾಥ

ಎಂದು ಕುತೂಹಲ ಮನದಲಿ ಜನಿಸಿತೋ
ಅಂದೇ ವಿಜ್ಞಾನ ಅಂಕುರಿಸಿತು,
ಏಕೆ? ಹೇಗೆ? ಎಂದೆಂಬ ಪ್ರಶ್ನೆಗಳು
ಶೋಧನೆಗೆ ಮಾನವನ ತೊಡಗಿಸಿತು!
ಲ್ಲಿಯ ತನಕವೂ ಕತ್ತಲೆಯು ಮುತ್ತಿತ್ತು
ಪ್ರಶ್ನಿಸುವ ಗುಣದಿಂದ ಚಿದಾಕಾಶ ಬೆಳಗಿತು;
ಯೋಚಿಸುತಾ ಯೋಚಿಸುತಾ ಕುತೂಹಲ ಕೆರಳಿತು,
ಹಗಲು ಸರಿದು ಸರಿದು ರಾತ್ರಿ ಆಗುವುದೆಂತು?
ರಾತ್ರಿ ಕಳೆದು ಕಳೆದು ಹಗಲು ಆಗುವುದೆಂತು?
ಋತು ಮಾನಗಳು ಉರುಳಿ ಬದಲಾಗುವುದೆಂತು?

ಮೇಲೆಸೆದ ಕಲ್ಲೊಂದು ಕೆಳಗೆ ಬೀಳುವುದೆಂತು?
ಚಿಂತಿಸಿದ ಮಾನವಗೆ ಉತ್ತರವು ಬೇಕಿತ್ತು!
ತಲೆ ಮೇಲೆ ಕೈ ಹೊತ್ತು ಕೂರಲಿಲ್ಲ ಮಾನವ
ಕೆದರಿ ಕೆದರಿ ಕಂಡು ಕೊಂಡ ಪ್ರಶ್ನೆಗೆ ಉತ್ತರವ;
ನಿದ್ದೆಯಲಿ ನಮ್ಮ ತನು ನಿಸ್ತೇಜವಾಗುವುದೇಕೆ?
ಎಚ್ಚರದಿ ನಮ್ಮ ತನು ಚುರುಕಾಗುವುದೇಕೆ?

ಬಿದ್ದಲ್ಲೇ ಬಿದ್ದಿರುವ ಜಡವಸ್ತು ಹಾಗೇಕೆ?
ಚೇತನಕೆ ಪಾದರಸ ಚುರುಕೆಂಬುದಿಹುದೇಕೆ?
ಕಲ್ಲು ಕಲ್ಲು ತಿಕ್ಕಿದ ವೇಳೆ ಬೆಂಕಿಬಂತೇಕೆ?
ಬೆಂಕಿ ಬಳಿಗೆ ಪುಳ್ಳೆ ಇಡಲು ಹೊತ್ತಿ ಉರಿಯಿತೇಕೆ?
ಪ್ರಶ್ನೆಗಳ ಮೇಲೆ ಪ್ರಶ್ನೆ, ಉತ್ತರವ ಪಡೆವ ತವಕ
ನಿದ್ರಿಸದೆ ಯೋಚಿಸಿದ ಮಾನವ ಬೆಳಗಿನ ತನಕ–

ಆವಿಯಿಂದ ಹಡಗ ನಡೆಸುವ ಕಲಿಯುತ್ತಾ ಹೋದ
ಭೂಮಿ ಸೂರ್ಯನ ಸುತ್ತ ಸುತ್ತದೆ ಎಂದು ತಿಳಿದ–
ಗಗನದ ಅಳೆದ ಬುದ್ಧಿಯಲಿ ಬೆಳೆದ ತಾರಾದೂರ ಕಂಡುಹಿಡಿದ
ಬಾಳಿನ ಮಾರ್ಪಾಡಿಗೆ ವಿಜ್ಞಾನಿ ಮಾನವ ತಾನೆ ಕಾರಣವಾದ!

ವಿದ್ಯುತ್ತಿನ ಗಮ್ಮತ್ತು ತಿಳಿದ, ಆಯುಧಗಳಿಂದ ಚಕ್ರಕೆ ಜಿಗಿದ
ಬೆಂಕಿಯಿಂದ ಕೃಷಿಗೆ ಹೊರಳಿದ, ಭಾಷೆಯಿಂದ ಬರಹಕ್ಕೆ ಬಂದ...
ಸಿಡಿಸುವುದ ಕಲಿತ ಸ್ಫೋಟಿಸುತಾ ಹೋದ ಮುನ್ನಡೆದ
ಯುದ್ಧಗಳ ಮಾಡಿದ ಗೆದ್ದ, ಸೋತವರ ಕಾಲೆಳೆದ ಸೇನೆಕಟ್ಟಿದ
ಕೈಗಾರಿಕೆಗೆ ತೊಡಗಿದ, ದೇಶದಾಕಾರ ಕಂಡು ಕೊಂಡ!
ರಕ್ಷಣೆಗೆ ಮುಂದಾದ, ಸಿದ್ಧತೆಗೆ ಇಂಬಾದ,
ದಿಕ್ಸೂಚಿ ಮಾಡಿಕೊಂಡ, ಸಾಗರದಲಿ ಪಯಣಿಸಿದ
ತಿಳಿಯುತ್ತಾ ಹೋದ, ತಿಳಿದುಕೊಂಡದ್ದ ಒಂದೇ? ಎರಡೇ?
ಶಾಯಿ ಮಾಡಿಕೊಂಡ ಬಣ್ಣ ಬಳಿದ ಚಿತ್ರಗಳ ಬಿಡಿಸಿದ !
ನಾಗರಿಕತೆ ಬಾಗಿಲು ತೆರೆದು ಹೊಸತಿಗೆ ನಾಂದಿ ಹಾಡಿದ

ಅಲ್ಲೂ ಜ್ಞಾನ, ಇಲ್ಲೂ ಜ್ಞಾನ, ಎಲ್ಲೆಲ್ಲೂ ಜ್ಞಾನ ಪ್ರಸಾದ
ನಾಡು ನಾಡು ಹೊಸತಿನೆಡೆಗೆ ಜಗದೆಲ್ಲೆಡೆ ಜ್ಞಾನ ವಿಸ್ತಾರ

ಗಾಜು ಮಾಡಿದ ನೀರು ತುಂಬಿದ ಬೆಳಕು ಹಾದು ಹೋಯ್ತು
ಕಿರಣ ನೇರವಿರಲಿಲ್ಲ– ಬಾಗಿದ್ದೇಕೆ ಎಂದು ಚಿಂತಿಸಿದ ಹೊತ್ತು...

ಕಣ್ಣಿನ ದೋಷಕ್ಕೆ ಪರಿಹಾರ ಸಿಕ್ಕಿತೆಂದು ಹಿಗ್ಗಿದ !
ಹಿರಿಯರ, ಮುದುಕರ, ತಲ್ಲಣ–ತಪ್ಪಿತೆಂದು ಮೆರೆದಾಡಿದ....

ಅಲ್ಲಿಂದ ಮೊದಲಾಯ್ತು ಕ್ರಾಂತಿ ಚರಿತೆ
ವ್ಯೋಮ ಜಾಲಾಡಿದ–ಹರಿದಿತ್ತು ಜ್ಞಾನ ಸರಿತೆ!
ಉತ್ಪಾದನೆ ಅತಿಯಾಯಿತು, ಮನುಜ ಮತಿ ಹರಿತವಾಯ್ತು
ಬಂಡವಾಳ ಸೃಷ್ಟಿಯಾಯ್ತು, ವಾಹನಗಳ ಅವತಾರವಾಯ್ತು!

ತಂತಿ ಬಂತು ರೇಡಿಯೋ ಬಂತು ದೂರವಾಣಿ ಬಂತು
ಟೆಲಿವಿಷನ್ ಬಂತು! ಏನೆಲ್ಲ ತಂತು ವಿಜಯಧ್ವಜವಿತ್ತು!

ಖಗೋಲ ಅಂಗುಲಂಗುಲ ಅರಿಯುತ್ತ ಸಾಗಿದಂತೆ
ವಿಜ್ಞಾನಿಗಿಂದು ಭರವಸೆ, ಹರಿದಿದೆ ಜ್ಞಾನ ಗಾಥೆ

ಸಂಭ್ರಾಂತನಾದ ದಿಗ್ಭ್ರಾಂತನಾದ ಸವಾಲನೆದುರಿಸಿದ
ವಿಶ್ವ ವಿಶಾಲವಾದ ಸೂಕ್ಷ್ಮಾತಿ ಸೂಕ್ಷ್ಮವಾದ ಜಗವ ಗೆದ್ದ

ಚಂದಿರನಂಗಳ ಮುಟ್ಟಿ ಬಂದ ಅಲ್ಲಿನ ಮಣ್ಣು ಕಲ್ಲು ತಂದ
ಮುಗಿಲ ಮುಟ್ಟಿದ ಬೆರಗಿನ ಸೌಧ ಸೌಧ ಸರಮಾಲೆ ಕಟ್ಟಿದ

ವೈಭವದಿ ಮೆರೆದ ರಾಗರತಿಕಂಡ ಭೋಗಿಯಾದ
ಎಲ್ಲೆ ಎಲ್ಲೆ ಮೀರಿದ ವಿಕೃತಿಯ ಕಂಡ ರೋಗಿಯೂ ಆದ!

ಇಳೆಯ ಮೇಲೆ ಯಂತ್ರ ಹೊಳೆ ತಂತ್ರ ಬೆಳೆ
ವಿಷಾನಿಲದ ಕಳೆ! ಸಂಪನ್ಮೂಲ ನಾಶಾವಾಯಿತಲ್ಲೇ!
ರೇಡಿಯಂ ಬಂತು, ಯುರೇನಿಯಂ ಬಂತು, ಥೋರಿಯಂ ಬಂತು
ಸ್ಪರ್ಧೆ ಹುಟ್ಟಿತು, ಸಮರ ಕಟ್ಟಿತು ಜಗದ ಹದವೇ ಕೆಟ್ಟಿತು!

ಶುದ್ಧಗಾಳಿ ಇಲ್ಲ ಈಗ, ಇರುವ ನೀರು ಕಲುಷಿತ
ಸಮಸ್ಯೆಗಳ ಆಗರವೀಗ, ಸಂಚಾರ ತತ್ತರಿಸಿ ಸ್ಥಗಿತ!
ಅಣು ಅಣು ಬಗೆದುನೋಡಿದ ಪರಮಾಣು ಬಾಂಬು ಪಡೆದ
ಯಾವ ಘಳಿಗೆ ಹೇಗೋ? ಏನೋ! ಆತಂಕದಲ್ಲೇ ಹೆದರಿ ಹೋದಲ್ಲಿ
ಏನಾದೀತೋ ಭೀತ ಮನದಲ್ಲಿ ಮಾನವ ಕುಸಿದ
ವರವಾದ ವಿಜ್ಞಾನ ಶಾಪವಾಗಿ ನರತೀರ ಕಂಗಾಲಾಗಿ ಹೋದ!
ಬಂದೀತೆ ಬುದ್ಧಿ? ಕಂಡೀತೆ ಸಂಯಮ ? ಕಾಯುತ್ತ ಕುಳಿತ!

* * * *